ಪ್ರಚೋದನೆ

ಲಂಕೇಶ್

ಮೇ 22, 2013   ಪುಟ 20   ರೂ. 14/-



ಬಾಲಗಂಗಾಧರ ಸಂಶೋಧನೆಯ ರಾಜಕೀಯ ಏನು?



ಗೆಲ್ಲೋತನಕ ಸಿದ್ದು ಈಗ ಕುತ್ತು

ಬೆಂಗಳೂರು ಬಿಜೆಪಿ ಶಾಸಕರೆಲ್ಲಾ ನೆಲಗಳ್ಳರೇ


ಶೋಭಕ್ಕಂಗೆ ರೇವಣಿ ಮಾತ್ರ ಲಾಭ

ಕರಾವಳಿ ಬಿಜೆಪಿಯ ತೊಟ್ಟಿಲು ಮತ್ತು ಸಮಾಧಿ

ಉತ್ತರಕನ್ನಡ ಕೈ ಅಬ್ಬರದ ಮುಂದೆ ನಲುಗಿದ ವಿರೋಧ ಪಕ್ಷಗಳು

ಅಂಚಿನಿಂದ


ಡಾ.ವಾಸು ಎಚ್.ವಿ.



ಹೊಸ ಸರ್ಕಾರದಿಂದ ಏನನ್ನು ನಿರೀಕ್ಷಿಸಬಹುದು? ಒಂದು 'ಸಿನಿಕ' ಪ್ರತಿಕ್ರಿ

ಕೇಂದ್ರದಲ್ಲಿ ಮೊದಲ ಯುಪಿಎ ಸರ್ಕಾರವು 2009ರಲ್ಲಿ ಚುನಾವಣೆಗೆ ಹೋಗಿ, ಮೊದಲಿಗಿಂತ ಹೆಚ್ಚು ಸ್ಥಾನಗಳನ್ನು ಗೆದ್ದು ಬಂದಿತ್ತು, ಅದರಲ್ಲೂ ಕಾಂಗ್ರೆಸ್ ಪಕ್ಷವು, ಹೆಚ್ಚು ಮಿತ್ರ ಪಕ್ಷಗಳ ಅಗತ್ಯವಿಲ್ಲದೇ ಸರ್ಕಾರ ರಚಿಸಲು ಶಕ್ತವಾಗುವಷ್ಟು ಎಂಪಿಗಳು ಗೆದ್ದು ಬಂದಿದ್ದರು. ಎಲ್ಲಕ್ಕಿಂತ ಹೆಚ್ಚಾಗಿ 'ಹೊರಗಿನಿಂದ ಬೆಂಬಲ' ನೀಡುತ್ತಿದ್ದ ಎಡಪಕ್ಷಗಳ ಅಗತ್ಯ, ಕಾಂಗ್ರೆಸ್ಸಿಗಿರಲಿಲ್ಲ. ಆಗ ಪತ್ರಿಕೆಯೊಂದರ ಅಂಕಣದಲ್ಲಿ 'ಮೊದಲೇ ಹೇಳಲಿಲ್ಲ ಅನ್ನಬೇಡಿ, ಇದು ಬಾಣಲೆಯಿಂದ ಬೆಂಕಿಗೆ ಬೀಳುತ್ತಿರುವ ಸಮಯ' ಎಂದು ನಾನು ಬರೆದಿದ್ದೆ. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಬಂದು ಬಿಡಬಹುದೇನೋ ಎಂಬ ಆತಂಕದಲ್ಲಿದ್ದ ಕೆಲವು ಗೆಳೆಯರು, 'ಇಂತಹ ಒಳ್ಳೆಯ ಸಂದರ್ಭದಲ್ಲಿ ಹೀಗೆ ಬರೆದಿರುವುದು ಸರಿಯೇ?' ಎಂದು ಕೇಳಿದ್ದರು.

ಎರಡನೆಯ ಯುಪಿಎ ಅಧಿಕಾರ ನಡೆಸುತ್ತಿದೆ. ಸಾಲುಸಾಲು ಹಗರಣಗಳು, ಹಿಂದೆಂದೂ ಇಲ್ಲದ ಪ್ರಮಾಣಕ್ಕೆ ಬೆಲೆ ಏರಿಕೆ, ಪೆಟ್ರೋಲ್ ಸೇರಿದಂತೆ ಹಲವು ಕ್ಷೇತ್ರಗಳು ಸಂಪೂರ್ಣ ಖಾಸಗಿಯವರಿಗೆ ತೆರೆದಿಡಲು ಸಾಧ್ಯವಾಗುವಂತೆ ಮುಕ್ತವಾದದ್ದು, ಕೃಷಿ ಕ್ಷೇತ್ರ ಮತ್ತಷ್ಟು ಅಸ್ಥಿರಗೊಂಡದ್ದು, ಇನ್ನೂ ಒಂದಷ್ಟು ಅಸ್ಥಿರಗೊಳ್ಳಲು ದಾರಿಮಾಡಿಕೊಡುವ ಚಿಲ್ಲರೆ ಮಾರಾಟದಲ್ಲಿ ಎಫ್‌ಡಿಐ, ಕಾರ್ಮಿಕ ಕಾನೂನುಗಳು ಇನ್ನಷ್ಟು ಉದಾರಗೊಂಡು ಕಾರ್ಮಿಕರು ಮತ್ತಷ್ಟು ಅಭದ್ರರಾಗಿದ್ದು ಎಲ್ಲವೂ ಇದೇ ಅವಧಿಯಲ್ಲೇ. ನಂತರ ರಾಷ್ಟ್ರಪತಿ ಸ್ಥಾನಕ್ಕೇರಿದ ಪ್ರಣಬ್ ಮುಖರ್ಜಿ ಹಣಕಾಸು ಸಚಿವರಾಗಿದ್ದಾಗಲೇ, ಮುಂದಿನ ದಿನಗಳು ಕಠಿಣವಾಗಿರುತ್ತವೆ ಎಂಬ ಮುನ್ಸೂಚನೆ ಕೊಟ್ಟರು. ಚಿದಂಬರಂ ಅವಧಿಯಲ್ಲಿ ವರದಿ ಸಲ್ಲಿಸಿದ ಕೇಳ್ಕರ್ ಸಮಿತಿಯು ಅದನ್ನು ಇನ್ನೂ ಕಠಿಣವಾಗಿಸಲು ಶಿಫಾರಸ್ಸು ಮಾಡಿದೆ. ಈ ಐದು ವರ್ಷಗಳಲ್ಲಿ ಬಾಣಲೆಯಿಂದ ಬೆಂಕಿಗೆ ಬಿದ್ದದ್ದು ಸ್ಪಷ್ಟವಾಗಿದೆ.



ಇವೆಲ್ಲವೂ, ಕಾಂಗ್ರೆಸ್ಸಿಗೆ ಹೆಚ್ಚಿನ ಸ್ಥಾನಗಳು ಲಭ್ಯವಾದಾಗ ಇಂಗ್ಲಿಷ್ ಚಾನೆಲ್‌ಗಳಲ್ಲಿ ಒಂದೇಸಮನೆ ಸಂಭ್ರಮಿಸಿದ ಕಾರ್ಪೊರೇಟ್ ಪ್ರತಿನಿಧಿಗಳು 'ಇನ್ನೇನು ಭಯ? ಸುಧಾರಣೆಗಳನ್ನು ಶುರು ಹಚ್ಕೊಳ್ಳಿ' ಎಂದು ಆದೇಶಿಸಿದಾಗಲೇ ಸ್ಪಷ್ಟವಾಗಿತ್ತು. ಅಂದರೆ ಸರ್ಕಾರ ಸ್ಥಿರವಾದಷ್ಟೂ, ಕಾರ್ಪೊರೇಟ್ ಕಂಪೆನಿಗಳ ಪರ ನೀತಿಗಳನ್ನು ಜಾರಿಗೆ ತರುವುದು ಸುಲಭ ಎಂಬುದು ಅವರುಗಳ ಅಭಿಪ್ರಾಯವಾಗಿತ್ತು. ಅಂತಹ ಆ ಸಂದರ್ಭದಲ್ಲಿ ಬಾಣಲೆಯಿಂದ ಬೆಂಕಿಗೆ ಬೀಳುತ್ತಿದ್ದೇವೆ ಎಂದು ಎಚ್ಚರಿಸಿದರೆ, ಎಲ್ಲಕ್ಕೂ ತಗಾದೆ ತೆಗೆಯುವ ಸಿನಿಕನ ಪ್ರತಿಕ್ರಿಯೆ ಎಂದು ಗೆಳೆಯರು ಪ್ರತಿಕ್ರಿಯಿಸಿದ್ದರು. ಆದರೆ ಕಾಂಗ್ರೆಸ್ಸಿನವರು ನಿರಾಶೆಗೊಳಿಸಲಿಲ್ಲ. ಹಾಗಾಗಿ ಇನ್ನೊಂದು 'ಸಿನಿಕ' ಅಂಕಣ ಬರೆಯಲು ಧೈರ್ಯ ಮಾಡುತ್ತಿದ್ದೇನೆ.

ನಿಚ್ಚಳ ಬಹುಮತ ಪಡೆದುಕೊಂಡಿರುವ ಕಾಂಗ್ರೆಸ್ ಸರ್ಕಾರದಲ್ಲಿ ಸಿದ್ದರಾಮಯ್ಯನವರೇ ಮುಖ್ಯಮಂತ್ರಿ ಆಗುತ್ತಾರೆಂದುಕೊಳ್ಳೋಣ. ಮೈಸೂರಿನ ಸಿದ್ದರಾಮನಹುಂಡಿಯ ಆಸೆಯನ್ನು ಸಂಪೂರ್ಣ ಬಿಟ್ಟುಕೊಡದ, ಪಂಚೆ ಉಡುವ, ಕರ್ನಾಟಕದ ಹೆಚ್ಚಿನ ಪ್ರಗತಿಪರರು ಇಷ್ಟಪಡುವ, ದಿವಂಗತ ಕೆ.ರಾಮದಾಸ್‌ರ ಅಭಿಮಾನಿ/ಶಿಷ್ಯರೆಂದು ಹಲವರು ಭಾವಿಸಿರುವ ಸಿದ್ದರಾಮಯ್ಯರ ಮೇಲೆ ದೊಡ್ಡ ಭರವಸೆಯನ್ನು ಹೆಚ್ಚಿನವರು ಇಟ್ಟುಕೊಂಡಿಲ್ಲ. ಅದಕ್ಕೆ ಕಾರಣ, ಅವರು ಸೋಮಾರಿಯೆಂತಲೂ, ಹಿಂದೆ ಹಲವಾರು ಬಾರಿ ತಾನು ಏನನ್ನು ಮಾಡಬೇಕಿತ್ತೋ ಅದನ್ನು ಮಾಡಲು ಕ್ರಿಯಾಶೀಲರಾಗಲಿಲ್ಲವೆಂತಲೂ ಹಲವರು ದೂರುತ್ತಾರೆ. ಅಷ್ಟೊಂದು ಡೈನಾಮಿಕ್ ಹಾಗೂ ಕ್ರಿಯಾಶೀಲರಲ್ಲದ ಸಿದ್ದರಾಮಯ್ಯನವರು ಒಂದು ಒಳ್ಳೆಯ ತಂಡವನ್ನು ಆಯ್ದುಕೊಂಡು, ಅವರೆಲ್ಲರಿಗೆ ಒಳ್ಳೆಯ ಕೆಲಸ ಮಾಡಲು ಸ್ವಾತಂತ್ರ್ಯ ಕೊಟ್ಟು, ಇಡೀ ರಾಜ್ಯದ ಸಾಮಾನ್ಯ ಜನರ ಪರಿಸ್ಥಿತಿಯನ್ನು ಮುಂದಕ್ಕೊಯ್ಯುವ ಮುನ್ನೋಟವನ್ನು ತನ್ನ ನಾಯಕತ್ವದ ಮುಖಾಂತರ ನೀಡಿದರೆ ಒಂದಷ್ಟು ಬದಲಾವಣೆ ಸಾಧ್ಯ. ಈ ರೀತಿ 'ಒಳ್ಳೆಯ ತಂಡ'ವನ್ನು ಆಯ್ಕೆ ಮಾಡಿಕೊಂಡು, 'ಒಳ್ಳೆಯ ಕೆಲಸ'ವನ್ನು ಮಾಡಿಸಿದ ಕ್ರೆಡಿಟ್‌ಅನ್ನು ರಾಮಕೃಷ್ಣ ಹೆಗಡೆಯವರ ಮೊದಲ ಅವಧಿಗೆ ಹಲವರು ನೀಡುತ್ತಾರೆ. ಇನ್ನು ಮುನ್ನೋಟದ ವಿಚಾರಕ್ಕೆ ಬಂದರೆ ದೇವರಾಜ ಅರಸರ ಕಾಲದಲ್ಲಿ ಜಾರಿಗೆ ಬಂದ ಭೂಸುಧಾರಣೆಗಳಿಗೆ ಕೆಲವರು ಆರೋಪಿಸುತ್ತಾರೆ.

ಇವೆರಡು ಸಿದ್ದರಾಮಯ್ಯನವರಿಂದ ಸಾಧ್ಯವೇ? ಮೊದಲನೆಯದ್ದು ತಂಡದ್ದು: ಅದು ಸಾಧ್ಯವಿಲ್ಲ, ಅದಕ್ಕೆ ಎರಡು ಕಾರಣಗಳಿವೆ. ಒಂದು, ಕಾಂಗ್ರೆಸ್ಸಿನಂತಹ ಕಾಂಗ್ರೆಸ್ಸಿನಲ್ಲಿ, ದಿಲ್ಲಿಯಲ್ಲಿ ಹತ್ತಾರು ಗಾಡ್‌ಫಾದರ್‌ಗಳನ್ನು ಹೊಂದಿರುವ ಅದೆಷ್ಟೋ ಮಂದಿ ಕ್ಯಾಬಿನೆಟ್‌ನಲ್ಲಿ ಸ್ಥಾನವನ್ನೂ, ತಾವು ಬಯಸಿದ ಖಾತೆಯನ್ನೂ ಪಡೆಯಬಲ್ಲ ತೂಕದ ಆಸಾಮಿಗಳು ಹಲವರಿದ್ದಾರೆ. ಹಾಗಾಗಿ ತಂಡ ಆಯ್ದುಕೊಳ್ಳಲು ಸಿದ್ದರಾಮಯ್ಯನವರು ಸ್ವತಂತ್ರರಲ್ಲ. ಎರಡು, ಸ್ವತಃ ಸಿದ್ದರಾಮಯ್ಯನವರು ಅಂತಹ ತಂಡವನ್ನು ಕಟ್ಟಿಕೊಳ್ಳುವ ವ್ಯಕ್ತಿಯಲ್ಲ, ಇದ್ದುದರಲ್ಲಿ ಪರವಾಗಿಲ್ಲ ಎನ್ನಬಹುದಾದ ಕೋದಂಡರಾಮಯ್ಯ, ಎ.ಕೆ.ಸುಬ್ಬಯ್ಯನವರಂಥವರೇ ಈಗ ಸಿದ್ದು ಜೊತೆಗಿಲ್ಲ.

ಈ ಚುನಾವಣೆಯಲ್ಲಿ ಸಿದ್ದು ಟಿಕೆಟ್‌ಗಾಗಿ ಹೆಚ್ಚು ಬಡಿದಾಡಿದ್ದು ಕೆ.ಆರ್.ಪುರದಲ್ಲಿ ಗೆದ್ದ ಬೈರತಿ ಬಸವರಾಜ್ ಮತ್ತು ಭದ್ರಾವತಿಯಲ್ಲಿ ಸೋತ ಸಿ.ಎಂ.ಇಬ್ರಾಹಿಂ ಥರದವರಿಗೆ. ಇಬ್ರಾಹಿಂ ಬಗ್ಗೆ ಕರ್ನಾಟಕದ ಜನತೆಗೆ ಗೊತ್ತು. ಬೈರತಿ ಬಸವರಾಜ್, ರಿಯಲ್ ಎಸ್ಟೇಟ್‌ನಲ್ಲಿ, ಹಣ ಬಲದಲ್ಲಿ, ತೋಳ್ಬಲದಲ್ಲಿ ಇದುವರೆಗೆ ಆ ಕ್ಷೇತ್ರದಲ್ಲಿ ಎಂಎಲ್‌ಎ ಆಗಿದ್ದ ನಂದೀಶ್ ರೆಡ್ಡಿಯನ್ನು ಮೀರಿಸುವ ಕುಳ. ಜಾತಿಯಿಂದ ಸಿದ್ದರಾಮಯ್ಯನವರ ಕುಲಬಾಂಧವ. ಇಂತಹ ಬೇಕಾದಷ್ಟು ಜನರು ಸಿದ್ದು ಸುತ್ತಮುತ್ತಲಲ್ಲಿ ಇದ್ದಾರೆ. ರಾಜರಾಜೇಶ್ವರಿ ನಗರದ ಮುನಿರತ್ನ, ಮಂಡ್ಯದ ಅಂಬರೀಷ್, ಲಾಡ್‌ಗಳೂ ಸುತ್ತುವರೆಯಲ್ಲ ಅಂತೇನೂ ಗ್ಯಾರಂಟಿಯಿಲ್ಲ. ಇಂತಹ ತಂಡದಿಂದ ಯಾವ ನಿರೀಕ್ಷೆ ಇಟ್ಟುಕೊಳ್ಳಬಹುದು?

ಎರಡನೆಯದ್ದು: ಮುನ್ನೋಟದ್ದು. ಗೆಲುವಿನ ಅಲೆಯಲ್ಲಿ ತೇಲುತ್ತಿದ್ದ ಸಿದ್ದರಾಮಯ್ಯನವರನ್ನು ಟಿವಿಯವರು ಮುಂದಿನ ದಿನಗಳಲ್ಲಿ ಕರ್ನಾಟಕದಲ್ಲಿ ಅನುಸರಿಸಬಹುದಾದ ಆರ್ಥಿಕನೀತಿಯ ಕುರಿತು ಕೇಳಿದಾಗ, 'ಬಂಡವಾಳ ಹೂಡಿಕೆ ಚೆನ್ನಾಗಿ ಬರದಿದ್ದರೆ, ಅಭಿವೃದ್ಧಿ ಸಾಧ್ಯವಿಲ್ಲ' ಎಂದು ಸ್ಪಷ್ಟ ಮಾತುಗಳಲ್ಲಿ ಹೇಳಿದರು. ಇಂದು ಕರ್ನಾಟಕದಲ್ಲಿ ಅತ್ಯಂತ ಹೆಚ್ಚು ಬಜೆಟ್ ಮಂಡಿಸಿರುವ ಹಣಕಾಸು ಮಂತ್ರಿಗಳಲ್ಲಿ ಸಿದ್ದೂ ಸಹ ಒಬ್ಬರು. ಅವರ ಯಾವ ಬಜೆಟ್ ಸಹ, ಮಿಕ್ಕವರಿಗಿಂತ ಭಿನ್ನವಾಗಿರಲಿಲ್ಲ. ಅವರು ಪ್ರತಿನಿಧಿಸುತ್ತಾರೆಂದು ಭಾವಿಸಲಾಗಿರುವ ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರಿಗೆ ಆ ಬಜೆಟ್‌ಗಳು ವಿಶೇಷವಾದ ಯಾವ ಅನುಕೂಲಗಳನ್ನೂ ಮಾಡಿಕೊಟ್ಟಿರಲಿಲ್ಲ.

ಇದು ಯಾಕೆ ಮುಖ್ಯವಾದುದೆಂದರೆ, ದೇವರಾಜ ಅರಸರು ಈ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಭೂಮಿ ಪ್ರಶ್ನೆ ಬಹಳ ಮುಖ್ಯವಾದದ್ದೇ ಆಗಿತ್ತು. ಸ್ವಾತಂತ್ರ್ಯಾನಂತರದ ಮೊದಲ ಭೂಸುಧಾರಣಾ ಕಾಯ್ದೆ (ಅಧಿಕೃತವಾಗಿಯೇ ಕುಟುಂಬವೊಂದಕ್ಕೆ 252 ಎಕರೆಯಷ್ಟು ಭೂಮಿಯನ್ನು ಹೊಂದಲು ಅವಕಾಶ ಕೊಡುತ್ತಿತ್ತು) ಯಾವ ಸುಧಾರಣೆಯನ್ನೂ ಮಾಡಿರಲಿಲ್ಲ. ಹಾಗಾಗಿ ಗ್ರಾಮೀಣ ಭೂಸಂಬಂಧಗಳು ನಮ್ಮ ಆರ್ಥಿಕ ಹಾಗೂ ಸಾಮಾಜಿಕ ರಚನೆಯ ಮೇಲೆ ಬಹು ದೊಡ್ಡ ಪರಿಣಾಮ ಬೀರುತ್ತಿತ್ತು. ಹೀಗಾಗಿ ಭೂ ರಹಿತರಿಗೆ ಭೂಮಿಯನ್ನು ಹಂಚಲಿಲ್ಲವಾದರೂ, ಗೇಣಿದಾರರಿಗೆ (ಎಲ್ಲಾ ಜಾತಿಗಳ, ಅದರಲ್ಲೂ ಮುಖ್ಯವಾಗಿ ಹಿಂದುಳಿದ ಜಾತಿಗಳ) ಭೂಮಿಯನ್ನು ಖಾತ್ರಿಗೊಳಿಸಿತು. ಇದು ಆ ಕಾಲಕ್ಕೆ ಒಂದು ಮಹತ್ವದ ಸಂಗತಿಯಾಗಿತ್ತು. ಇದನ್ನು ಬಿಟ್ಟರೆ ಅವರ ಎರಡನೆ ಕೊಡುಗೆ, ಬೇರೆ ಬೇರೆ ಜನವರ್ಗಗಳ ವ್ಯಕ್ತಿಗಳನ್ನು ರಾಜಕೀಯ ಮುನ್ನೆಲೆಗೆ ತಂದದ್ದು. ಅರಸರು ಗುರುತಿಸಿ ಬೆಳೆಸಿದ ಹಿಂದುಳಿದ ನಾಯಕರುಗಳಲ್ಲಿ ಹೆಚ್ಚಿನವರು, ಮೇಲ್ಜಾತಿ ನಾಯಕರುಗಳಿಗಿಂತ ಭಿನ್ನವಾಗೇನೂ ರೂಪುಗೊಳ್ಳಲಿಲ್ಲ. ಆಳುವ ವ್ಯವಸ್ಥೆಗೆ ಬೇಕಾದ ಏಜೆಂಟರಾಗಿಯೇ ಬೆಳೆದುಕೊಂಡರು ಎಂಬುದನ್ನು ಗಮನಿಸಬೇಕು.

ಆದರೆ ಇಂದು ಭೂಮಿ ಹಂಚಿಕೆಯ ಪ್ರಶ್ನೆಗೆ ಹಿಂದಿನಷ್ಟು ಮಹತ್ವ ಉಳಿದುಕೊಂಡಿಲ್ಲ. ಈಗ ಗ್ರಾಮೀಣ ಕೃಷಿ ಆರ್ಥಿಕತೆಯಲ್ಲಿ ತರಬೇಕಿರುವ ಬದಲಾವಣೆಯೇ ಬೇರೆ ರೀತಿಯದ್ದಾಗಿದೆ. ಅದರ ಜೊತೆಗೆ, ಅಭದ್ರ ಕಾರ್ಮಿಕರ (ಅಸಂಘಟಿತರೆಂದು ಸದ್ಯಕ್ಕೆ ಕರೆಯಲ್ಪಡುತ್ತಿದ್ದಾರೆ) ಶ್ರಮಶಕ್ತಿಯ ಲೂಟಿಯ ಮೇಲೆ ಕಟ್ಟಲ್ಪಡುತ್ತಿರುವ ಕಾರ್ಪೊರೇಟ್ ಆರ್ಥಿಕತೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಮೇಲೆ ಬಂಡವಾಳಿಗರ ಏಕಸ್ವಾಮ್ಯದ ಪ್ರಶ್ನೆಯು ಮುಖ್ಯವಾದುದಾಗಿದೆ. ನಮ್ಮ ಸಾಮಾಜಿಕ, ಆರ್ಥಿಕ, ರಾಜಕೀಯ ಬದುಕಿನಲ್ಲಿ ಬರಬೇಕಿರುವ ಮುಖ್ಯ ಬದಲಾವಣೆಯು ಇವುಗಳೊಂದಿಗೆ ತಳಕು ಹಾಕಿಕೊಂಡಿದೆ. ಮೇಲಿನ ಪ್ರಶ್ನೆಗಳ ಸಂಗತಿ ಬಂದಾಗ ಪ್ರಭುತ್ವವು ಮೂಲಭೂತವಾಗಿ ಜನರ ಪರವಾಗಿ ನಿಲ್ಲುತ್ತದಾ ಇಲ್ಲವಾ ಎಂಬುದನ್ನು ಅದೆಷ್ಟು ಜನಪರ ಎಂದು ನಿರ್ಧರಿಸುತ್ತದೆ. ಅಂದರೆ ಸಾರಾಂಶದಲ್ಲಿ ಜಾಗತೀಕರಣವು ಪ್ರತಿಪಾದಿಸುತ್ತಿರುವ ಆರ್ಥಿಕ ನೀತಿಯ ಕುರಿತು ನಿಲುವೇನು ಎಂಬುದೇ ಆಗಿದೆ. ಅದರ ಜೊತೆಗೆ ಕಾಂಗ್ರೆಸ್ಸಿಗೇ ಅಭ್ಯಾಸವಾಗಿರುವ ಮೃದು ಹಿಂದೂತ್ವ ನೀತಿಯನ್ನು ತೊಡೆದುಕೊಂಡು, ಸ್ಪಷ್ಟವಾದ ಸೆಕ್ಯುಲರ್ ನೀತಿಯ ಅನುಸರಿಸುವ ಮತ್ತು ಆ ನಿಟ್ಟಿನಲ್ಲಿ ಇಡೀ ಸಮಾಜದಲ್ಲಿ ಪ್ರಜಾತಾ ಸಂಸ್ಕೃತಿಯ ಸ್ಥಾಪನೆಗೆ ಪ್ರಯತ್ನಿಸುವ ಅಗತ್ಯವೂ ಮಹತ್ವದ್ದಾಗಿದೆ. ಈ ಎ ಅಂಶಗಳು ಸಿದ್ದರಾಮಯ್ಯನವರ ನೇತೃತ್ವದ ಸರ್ಕಾರವು ಜನಪರ ಆಗಿರುತ್ತ ಇಲ್ಲವೋ ಅನ್ನುವುದಕ್ಕೆ ಲಿಟ್ಮಸ್ ಟೆಸ್ಟ್ ಆಗಿರುತ್ತದೆ.

ಮೇಲೆ ಹೇಳಲಾದ ಕಾರಣಗಳಿಂದಾಗಿ ಮುಂದಿನ ಸರ್ಕಾರದ ಹೆಚ್ಚಿನ ಆಶಾಭಾವನೆ ಇಟ್ಟುಕೊಳ್ಳಲು ಸಾಧ್ಯವಿಲ್ಲ. ಇನ್ನು ಯಾರು ಮುಖ್ಯಮ ಆಗಬಹುದೆನ್ನುವುದೇ ಸ್ಪಷ್ಟವಾಗಿಲ್ಲದಿರುವಾಗ ಸಿದ್ದರಾಮಯ್ಯನವರ ಹೆಸ ಏಕೆ ಇಷ್ಟೊಂದು ಪ್ರಸ್ತಾಪ ಮಾಡಬೇಕಾಗಿ ಬಂದಿದೆಯೆಂದರೆ, ಕರ್ನಾಟ ಪ್ರಜ್ಞಾವಂತರ ಒಂದು ಗಮನಾರ್ಹ ಭಾಗವು ಅವರ ಬಗ್ಗೆ ಅಂ ಆಶಾವಾದವನ್ನು ಇಟ್ಟುಕೊಂಡು ಕಾಯುತ್ತಿದೆಯಾದ್ದರಿಂದ. ಮಿಕ್ಕವ ಭ್ರಷ್ಟರಲ್ಲದ, ಹೈಟೆಕ್ ಅಲ್ಲದ, ಕರ್ನಾಟಕದ ಹಳ್ಳಿಯೊಂದರ ಧಾ ವ್ಯಕ್ತಿಯಂತೆ ಕಂಡು 'ಈತ ನಮ್ಮವನು' ಅನ್ನಿಸುವ ರೀತಿಯ ಸಿದ್ದರಾಮಯ್ಯನವರಾದ್ದರಿಂದ ಅವರ ಬಗ್ಗೆಯೇ ಹೆಚ್ಚಿನ ನಿರೀಕ್ಷೆಯಿದೆ. ಉಳಿ ಇನ್ನು ಯಾರ ಬಗ್ಗೆಯೂ ಅಂತಹ ಆಶೆಗೆ ಕಾರಣಗಳೇನೂ ಇಲ್ಲ. ಮುಖ್ಯ ಕಾಂಗ್ರೆಸ್ ಸರ್ಕಾರದ ಬಗ್ಗೆ.

ಈ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಒಂದು ಜಾಹೀ ಹೀಗೆ ಹೇಳುತ್ತಿತ್ತು: 'ಹೆಚ್ಚು ಬಂಡವಾಳ ತಂದಿದ್ದು ಯಾರ ಸಕಾ ಎಸ್ಸೆಂ ಕೃಷ್ಣರ ನೇತೃತ್ವದ ಕಾಂಗ್ರೆಸ್ ಸರ್ಕಾರ', 'ವಿದೇಶೀ ಹೂಡಿ ಅವಕಾಶ ಮಾಡಿಕೊಡುವ ಕಾನೂನುಗಳನ್ನು ತಂದಿದ್ದು ಯಾರ ಸಕಾ ಯುಪಿಎ ಸರ್ಕಾರ'. ಇಂತಹವರಿಂದ ಏನನ್ನು ನಿರೀಕ್ಷಿಸಲು ಸಾ ಮನಮೋಹನ್ ಸಿಂಗರು ಕಾಂಗ್ರೆಸ್ಸಿನ ನಾಯಕರು ಹೌದೋ ಅಲ್ಲ ಆದರೆ ಅವರು 1991ರಿಂದ ಜಾರಿಗೆ ತಂದ ಆರ್ಥಿಕ ನೀತಿಯ ಕಾಂಗ್ರೆಸ್‌ನ ಅಧಿಕೃತ ಮತ್ತು ಅನಧಿಕೃತ ನೀತಿ ಎಲ್ಲವೂ ಆಗಿದೆ.

ಈ ಎಲ್ಲಾ ಎಚ್ಚರಿಕೆಗಳನ್ನು ಮರೆಯದಿರೋಣ. ಹಾಗೆಂದು ಮೊ ಒಂದು ತೀರ್ಮಾನಕ್ಕೆ ಬಂದು ನಾವೆಲ್ಲಾ ಸುಮ್ಮನಿರಬೇಕೇ? ಇಲ್ಲ, ಕಾಂಗ್ರೆ ಪ್ರಣಾಳಿಕೆಯಲ್ಲಿ ಇರುವ ಅಂಶಗಳಲ್ಲಿ ಜನಪರವಾಗಿರುವ ಎಲ್ಲವ ಜಾರಿ ಮಾಡಲು ಒತ್ತಾಯಿಸಬೇಕು. ಅದರಲ್ಲಿ ಇಲ್ಲದ, ಆದರೆ ರಾ ಜನರ ಹಿತಾಸಕ್ತಿಯ ದೃಷ್ಟಿಯಿಂದ ಅಗತ್ಯವಿರುವ ಎಲ್ಲವನ್ನು ಜಾ ತರಲೂ ಒತ್ತಾಯಿಸಬೇಕು. ಆ ನಿಟ್ಟಿನಲ್ಲಿ ಕೆಲವು ಸಂಗತಿಗಳನ್ನು ಕಾಣಿಸಲಾಗಿದೆ.

ಕಾಂಗ್ರೆಸ್ ಪ್ರಣಾಳಿಕೆಯ ಭರವಸೆಗಳ ಮೊದಲ ಅಂಶವು ಕ್ಷೇತ್ರವನ್ನು ಲಾಭದಾಯಕವಾಗಿಸಲು ಒಳಸುರಿಗಳನ್ನು ಸಕಾಲ ಒದಗಿಸುವುದು, ಬೆಲೆ ನಿಗದಿ ಆಯೋಗಗಳ ಸ್ಥಾಪನೆ' ಇತ್ಯಾದಿ ಅಂಶಗ ಆದರೆ ಬೆಲೆ ಖಾತರಿಗೆ ಅವರು ಘೋಷಿಸಿರುವುದು ಕೇವಲ 1, ಕೋಟಿ ರೂ.ಗಳು. ಈ ಹಣ ಕಬ್ಬಿನ ವಾರ್ಷಿಕ ವಹಿವಾ ಸಾಕಾಗುವುದಿಲ್ಲ. ಇನ್ನು ಉಳಿದದ್ದಕ್ಕೆ ಎಲ್ಲಿಂದ ಹಣ ತರುತ್ತೇವೆ ಬಗ್ಗೆ ಯೋಜನೆ ಕಾಣುವುದಿಲ್ಲ. ಇಡೀ ಪಶು ಸಂಗೋಪನೆಗೆ ಕಾಂ ಪ್ರಣಾಳಿಕೆಯಲ್ಲಿ ಇರುವ ಒಂದೇ ಯೋಜನೆ ಎಂದರೆ ಪಂಚಾಯತಿಯಲ್ಲಿ ಪಶು ವೈದ್ಯಕೀಯ ಕೇಂದ್ರಗಳ ಸ್ಥಾಪನೆ! ಇ ಹೆಚ್ಚಾಗುತ್ತಿರುವ ಹಾಲು ಉತ್ಪಾದನೆಯ ಮಾರುಕಟ್ಟೆ ಸಮಸ್ಯೆ ಮತ್ತು ಖ ಡೈರಿಗಳ ದಾಳಿಯ ವಿಚಾರಕ್ಕೆ ಸೂಕ್ತ ಯೋಜನೆಗಳೇ ಇಲ್ಲ.

ಇನ್ನು ನಂತರದ ಸಂಗತಿ ಕುಡಿಯುವ ನೀರು ಮತ್ತು ನೀರಾವರಿಯ ಕೃಷ್ಣಾ ಕಣಿವೆಯ ಯೋಜನೆಗಳ ಜಾರಿಗೆ ವಾರ್ಷಿಕ 10,000 ಕ ನೀಡಲಾಗುವುದು ಎಂದು ಕಾಂಗ್ರೆಸ್ ಪ್ರಣಾಳಿಕೆಯಲ್ಲಿದೆ. ಅದೇ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ತುಮಕೂರು ಜಿಲ್ಲೆ ಶಾಶ್ವತ ನೀರಾವರಿ ಯೋಜನೆಯ ಭರವಸೆ ನೀಡಲಾಗಿದೆ. ಅವೆಲ್ಲ ಒಟ್ಟುಗೂಡಿಸಿದರೆ 25,000 ಕೋಟಿಗಳೇ ಬೇಕಾಗಬಹುದು. ವಾರ್ಷಿ ಲಕ್ಷ ಕೋಟಿಯಷ್ಟು ಬಜೆಟ್‌ನಲ್ಲಿ ಕಾಲು ಭಾಗವನ್ನು ನೀರಾವರಿ ಯೋ ವೆಚ್ಚವನ್ನು ಮಾಡಲು ಸಾಧ್ಯವೇ? ಅದರ ಮುಂದಿನ ಭಾಗದಲ್ಲಿ 12 ಸ ಮೆ.ವ್ಯಾ ವಿದ್ಯುತ್ ಉತ್ಪಾದನೆ ಮಾಡುವುದಾಗಿಯೂ, ಸೌರಶಕ್ತಿ ದೀಪ 75% ಸಬ್ಸಿಡಿ ಮತ್ತು ಸೌರಶಕ್ತಿ ಕೃಷಿ ಪಂಪ್‌ಸೆಟ್‌ಗಳಿಗೆ 100% ಸ ನೀಡುವುದಾಗಿಯೂ ಹೇಳಿದ್ದಾರೆ. ಇದಕ್ಕೆ ಹಣವೆಲ್ಲಿ?

ಇಂತಹ ಪ್ರಶ್ನೆಗಳನ್ನು ಉದ್ದಕ್ಕೂ ಹಾಕುತ್ತಾ ಹೋಗಬಹುದು. ಅದ ಅವರ ಉತ್ತರ, ಕಾಂಗ್ರೆಸ್ ಪಕ್ಷವು ಬಂಡವಾಳ ಹೂಡಿಕೆದಾರರ ವಿಶ್ವಾಸ ಗಳಿಸಿ ರಾಜ್ಯವು ಬಂಡವಾಳ ಹೂಡಿಕೆಗೆ ಆದ್ಯತೆಯ ರಾಜ್ಯವನ್ನಾಗಿ ಮಾಡು ಎಂದು ಹೇಳಬಹುದು; ಈಗಾಗಲೇ ಪ್ರಣಾಳಿಕೆಯಲ್ಲಿ ಹೇಳಿದ್ದಾರೆ. ಬಂಡ ಹೂಡಿಕೆದಾರರಿಗೆ ಎಷ್ಟು ಸಾಧ್ಯವೋ ಅಷ್ಟು ಸಬ್ಸಿಡಿ, ತೆರಿಗೆ ವಿನಾಯ್ತಿಗ ಕೊಟ್ಟರೆ ಮಾತ್ರ ಅವರು ಬರುತ್ತಾರೆ. ಕಡಿಮೆ ಬೆಲೆಯಲ್ಲಿ ಭೂಮಿ ಸಿಗಬೇಕು. ಆದರೆ ಮೇಲಿನ ವಾಕ್ಯದ ನಂತರ ಭೂಮಿ ಕಳೆದುಕೊ ರೈತರಿಗೆ ಒಳ್ಳೆಯ ಪರಿಹಾರದ ಮಾತು ಬರುತ್ತದೆ. ಈ ವೈರುಧ್ಯದ ಸಂದರ್ಭ ಕಾಂಗ್ರೆಸ್ ಸರ್ಕಾರವು ಹೂಡಿಕೆದಾರರ ಪರವಾಗಿಯೇ ನಿಲ್ಲುತ್ತದೆ. ಅ ಪರಿಹಾರವೂ ಇಲ್ಲ, ತೆರಿಗೆಯೂ ಇಲ್ಲ; ಅದೆಲ್ಲಕ್ಕಿಂತ ಮುಖ್ಯವಾದ ಇನ್ನೊ ಸಂಗತಿಯೆಂದರೆ, ಕಾರ್ಮಿಕರಿಗೆ ಭದ್ರತೆಯಾಗಲೀ, ಜೀವಿಸಲು ವೇತನವಾಗಲೀ ಇರುವುದಿಲ್ಲ. ಬಹುಶಃ ಅಭದ್ರ ಕಾರ್ಮಿಕರದ್ದು ಓಟ್‌ಬ ನಿರ್ಮಾಣವೂ ಆಗದ್ದರಿಂದ ಅವರ ಮೂಲಭೂತ ಸಮಸ್ಯೆಗಳ ಪರಿಹ ಕುರಿತು ಕಾಂಗ್ರೆಸ್ ಪ್ರಣಾಳಿಕೆ ಮಾತೇ ಆಡಿಲ್ಲ.

ಈ ಎಲ್ಲಾ ಪ್ರಶ್ನೆಗಳನ್ನು ಕೇಳುವ ಕಾಲ ಬಂದಿದೆ. ಚುನಾವಣಾ ಕಾ ಪ್ರಶ್ನೆ ಕೇಳುವ ಕಾಲ. ಆದರೆ ಚುನಾವಣೆಯ ಅಬ್ಬರದಲ್ಲಿ ಪ್ರಶ್ನೆಗಳು ಕೇಳುತ್ತಿ ಈಗ ಅಬ್ಬರ ಮುಗಿದಿದೆ. ಇನ್ನು ಕೇಳೋಣ. ಸಿದ್ದರಾಮಯ್ಯನವರನ್ನು ಸು ಬಿಡುವುದು ಬೇಡ.

ಕರಾವಳಿ-ಬಿಜೆಪಿಯ ತೊಟ್ಟಿಲು ಮತ್ತು ಸಮಾಧಿ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಕೋಮುವಾದಿ ಭಾರತೀಯ ಜನತಾ ಪಕ್ಷದ ಅಧಿಕಾರ ರಾಜಕೀಯಕ್ಕೆ ತೊಟ್ಟಿಲಾಗಿದ್ದ ಕರ್ನಾಟಕದ ಕರಾವಳಿ ಪ್ರದೇಶವೇ ಇವತ್ತು ಅದರ ಸಮಾಧಿಯೂ ಆಗಿರುವುದು ಮೊನ್ನಿನ ವಿಧಾನಸಭಾ ಚುನಾವಣೆಗಳಿಂದ ಹೊರಬಿದ್ದ ಅಚ್ಚರಿಗಳಲ್ಲಿ ಒಂದು.

ಬಹಳಷ್ಟು ಜನರಿಗೆ ನೆನಪಿರಲಿಕ್ಕಿಲ್ಲ. ಭಾರತೀಯ ಜನತಾ ಪಕ್ಷ ಈಗ ಹೊಂದಿರುವ ರೂಪವನ್ನು ಪಡೆಯುವ ಮುನ್ನ, ಎಲ್.ಕೆ.ಅಡ್ವಾನಿಯ ಕುಖ್ಯಾತ ರಥಯಾತ್ರೆಗೂ ಮುನ್ನ, ಐತಿಹಾಸಿಕ ಬಾಬ್ರಿ ಮಸೀದಿಯ ಧ್ವಂಸಕ್ಕೂ ಮುನ್ನ, ದೆಹಲಿಯಲ್ಲಾಗಲಿ, ಇತರೆ ರಾಜ್ಯಗಳಲ್ಲಾಗಲಿ ಅಧಿಕಾರವನ್ನು ಹಿಡಿಯುವ ಮುನ್ನ, 1967ರಲ್ಲಿ ಅಂದಿನ ಆರೆಸ್ಸೆಸ್ಸಿನ ರಾಜಕೀಯ ಅಂಗವಾಗಿದ್ದ ಭಾರತೀಯ ಜನ ಸಂಘ ಭಾರತದಲ್ಲೇ ಪ್ರಪ್ರಥಮ ಬಾರಿಗೆ ಉಡುಪಿಯ ನಗರ ಪಾಲಿಕೆಗೆ ನಡೆದ ಚುನಾವಣೆಯಲ್ಲಿ ಗೆದ್ದು ಅಧಿಕಾರದ ಗದ್ದುಗೆಗೆ ಏರಿತ್ತು. ಅವತ್ತಿನಿಂದ ಆ ಸ್ಥಾನವನ್ನು ಯಾರಿಗೂ ಬಿಟ್ಟುಕೊಡದೆ ಕಾಪಾಡಿಕೊಂಡಿತ್ತು. ಅಷ್ಟೇ ಅಲ್ಲ, 1983ರಲ್ಲಿ ಪ್ರಥಮ ಬಾರಿಗೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಸೋತುಹೋಗಿ ಜನತಾ ಪರಿವಾರ ಅಲ್ಪಸಂಖ್ಯಾತ ಸರ್ಕಾರವನ್ನು ಸ್ಥಾಪಿಸಿದಾಗ ಅದಕ್ಕೆ ಸಂಖ್ಯಾಬಲವನ್ನು ನೀಡಿದ್ದು ಆಗ ಹೆಚ್ಚಾಗಿ ಕರಾವಳಿ ಪ್ರದೇಶದಿಂದಲೇ ಗೆದ್ದು ಬಂದಿದ್ದ 18 ಬಿಜೆಪಿ ಶಾಸಕರು.

ಮೊದಲ ಬಾರಿಗೆ ಉಡುಪಿಯಲ್ಲಿ ಗೆದ್ದ ಬಿಜೆಪಿ ಅಂದಿನಿಂದ ತನ್ನ ಸರಾಸರಿ ಮತಗಳನ್ನು ಮತ್ತು ಶಾಸಕರ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳುತ್ತಲೇ ಬಂದಿತ್ತು. ರಥ ಯಾತ್ರೆಗೆ ಮುನ್ನ ಕೇವಲ ಶೇ. ನಾಲ್ಕರಷ್ಟಿದ್ದ ಬಿಜೆಪಿಯ ಸರಾಸರಿ ಮತಗಳು ಶೇ. 16, ಶೇ. 20, ಶೇ. 24 ಏರುತ್ತಾ ಹೋಯಿತಲ್ಲದೆ 2008ರಲ್ಲಿ ಶೇ. 34 ತಲುಪಿ 110 ಶಾಸಕರನ್ನು ಗೆಲ್ಲಿಸಿಕೊಳ್ಳುವ ಮೂಲಕ ಮೊದಲ ಬಾರಿಗೆ ಕರ್ನಾಟಕ ರಾಜ್ಯದಲ್ಲಿ ಸರ್ಕಾರವನ್ನು ಸ್ಥಾಪಿಸಿತ್ತು. ಇದು ದಕ್ಷಿಣದಲ್ಲಿ ತಾನು ತೆರೆದ ಮೊದಲ ಬಾಗಿಲು ಎಂದೂ, ಇಲ್ಲಿಂದ ಇತರೆ ದಕ್ಷಿಣ ರಾಜ್ಯಗಳಲ್ಲೂ ಅಧಿಕಾರವನ್ನು ಹಿಡಿಯುವ ಕನಸು ಕಂಡಿದ್ದ ಬಿಜೆಪಿಯ ಮುಖಕ್ಕೆ ನಿನ್ನೆ ಆ ಬಾಗಿಲು ದಢಾರ್ ಎಂದು ಮುಚ್ಚಿದೆಯಲ್ಲದೆ, ಬಿಜೆಪಿ ಬೆಳೆಯಲು ಎಲ್ಲಾ ರೀತಿಯ ಸೈದ್ಧಾಂತಿಕ ಪ್ರೋತ್ಸಾಹಗಳನ್ನು ನೀಡುತ್ತಾ ಬಂದಿದ್ದ ಕರಾವಳಿ ಪ್ರದೇಶದಲ್ಲೇ ಇವತ್ತು ಬಿಜೆಪಿಯ ಸಮಾಧಿಯೂ ತೆರೆದಿದೆ.

ಕರಾವಳಿಯಲ್ಲಿ ಬಿಜೆಪಿಯ ಅವಸಾನ ಪ್ರಾರಂಭವಾಗಿದ್ದು ಯಾವಾಗಿನಿಂದ? ನನ್ನ ಪ್ರಕಾರ ಅದು ಶುರುವಾಗಿದ್ದು 2012ರ ಜುಲೈ ತಿಂಗಳಲ್ಲಿ. ಅದಕ್ಕೆ ಕಾರಣವಾಗಿದ್ದು ಹಿಂದೂತ್ವ ಗೂಂಡಾಗಳ ಬೆದರಿಕೆಯ ಮುಂದೆ ಹೆದರಿ ಮುದುಡಿಕೊಂಡು ಕೂತಿದ್ದ ಮೂವರು ಅಮಾಯಕ ಯುವತಿಯರ ಚಿತ್ರ.

ಈಗ ಎಲ್ಲರಿಗೂ ಗೊತ್ತಿರುವಂತೆ ಮಂಗಳೂರಿನ ಹೋಮ್ ಸ್ಟೇ ಒಂದರಲ್ಲಿ ಹಲವು ಯುವಕಯುವತಿಯರು ಮಿತ್ರನೊಬ್ಬರ ಹುಟ್ಟುಹಬ್ಬವನ್ನು ಆಚರಿಸುತ್ತಿದ್ದರು. ಮೊದಲೇ ಬರ್ತ್‌ಡೇ, ವಾಲೆಂಟೈನ್ಸ್ ಡೇ, ಪಾರ್ಟಿ ಇತ್ಯಾದಿ ಎಂದರೆ ಸಾಕು ಕಾಲು ಕೆರೆದು 'ಭಾರತೀಯ ಸಂಸ್ಕೃತಿ'ಯನ್ನು ರಕ್ಷಿಸಲು ಹೊರಡುವ ಹಿಂದೂತ್ವವಾದಿ ಕೋಮುವಾದಿಗಳಿಗೆ ಅಪರಿಚಿತ ಹುಡುಗಿಯರ ಮೈಮುಟ್ಟಿ ತಮ್ಮ ತೀಟೆ ತೀರಿಸಿಕೊಳ್ಳುವ, ಅಮಾಯಕರ ಮೇಲೆ ಹಲ್ಲೆ ಮಾಡುವ, ಆ ಪ್ರಕ್ರಿಯೆಯಲ್ಲೇ ಪುಕ್ಕಟೆ ಪ್ರಚಾರ ಪಡೆಯುವ ಗೀಳು. ಅದರಲ್ಲೂ ಹಿಂದೂ ಮತ್ತು ಮುಸಲ್ಮಾನ ಯುವಕರು ಒಟ್ಟಿಗೆ ಇದ್ದಾರೆಂದರೆ ಸಾಕು, ಅಲ್ಲಿ ಸೆಕ್ಸ್, ಡ್ರಗ್ಸ್, ಲವ್ ಜಿಹಾದ್ ಇತ್ಯಾದಿಯೆಲ್ಲ ನಡೆಯುತ್ತಿದೆ ಎಂಬ ಭ್ರಮೆ.

ಅವತ್ತು ಆರೆಸ್ಸೆಸ್ಸಿನ ಮತ್ತೊಂದು ಮುಖವಾದ ಸಂಘಟನೆಯಾದ ಹಿಂದೂ ಜಾಗರಣ ವೇದಿಕೆಯ ಪುಂಡರು ಆ ಅಮಾಯಕ ಯುವಕಯುವತಿಯರ ಮೇಲೆ ಎರಗಿಬಿದ್ದರು. ಯುವತಿಯರನ್ನು ಅರೆನಗ್ನಗೊಳಿಸಿದರು, ಮೈಮೇಲೆ ಬಾಸುಂಡೆ ಬರುವಂತೆ ಬಡಿದರು. ಅಲ್ಲಿದ್ದ ಯುವಕರನ್ನೂ ಬಡಿದು ಚೆಲ್ಲಾಪಿಲ್ಲಿಯಾಗಿಸಿದರು. ಕೊನೆಗೆ ಅವರೆಲ್ಲರನ್ನು ಪೊಲೀಸರಿಗೆ ಒಪ್ಪಿಸಿ ತಾವು ಯುದ್ಧದಲ್ಲಿ ಗೆದ್ದಂತೆ ಪೊಲೀಸರ ಮುಂದೆಯೇ ಸಂಭ್ರಮಾಚರಣೆ ನಡೆಸಿದರು. ಅದೃಷ್ಟವಶಾತ್ ಅವರ ಈ ಹಿಂಸಾ ವಿನೋದವನ್ನು ಪತ್ರಕರ್ತ ನವೀನ್ ಸೂರಿಂಜೆಯ ಮಿತ್ರರೊಬ್ಬರು ತಮ್ಮ ವೀಡಿಯೋ ಕ್ಯಾಮೆರಾದಲ್ಲಿ ಸೆರೆ ಹಿಡಿದಿದ್ದರಿಂದ ಅದು ರಾಜ್ಯದ ಜನರ ಗಮನಕ್ಕೆ ಬಂದಿತು. ನಂತರ ಆ ಯುವಕಯುವತಿಯರ ಬಗ್ಗೆಯಾಗಲಿ, ನವೀನ್ ಕುರಿತಂತೆ ಆಗಲಿ ಬಿಜೆಪಿ ಸರ್ಕಾರ ನಡೆದುಕೊಂಡ ರೀತಿ ಎಲ್ಲರಿಗೂ ಗೊತ್ತು. ಆದರೆ ಆ ಪ್ರಕರಣ ನನ್ನ ಪ್ರಕಾರ ಕರಾವಳಿಯಲ್ಲಿ ಬಿಜೆಪಿಯ ಬುನಾದಿಯನ್ನೇ ಅಲುಗಾಡಿಸಿತು.

ನಿಜ, ಇದಕ್ಕೂ ಮುನ್ನ ಕರಾವಳಿಯಲ್ಲಿ ಇಂತಹ ಹಲವಾರು ಪ್ರಕರಣಗಳು ನಡೆದಿದ್ದವು. ಉದಾಹರಣೆಗೆ ಹಿಂದೂತ್ವ ಗೂಂಡಾಗಳಿಗೆ ಯುವತಿಯೊಬ್ಬಳು ತನ್ನ ಪ್ರಾಣವನ್ನೇ ಕಳೆದುಕೊಂಡಿದ್ದರ ಬಗ್ಗೆ ನಮ್ಮ ರಾಜಶೇಖರ್ ಅವರು ಹಲವು ಬಾರಿ ಈ ಪತ್ರಿಕೆಯಲ್ಲೇ ಬರೆದಿದ್ದಾರೆ. ಪಿಯುಸಿ ಓದುತ್ತಿದ್ದ ಆ ಯುವತಿ ಸಲೀಮ್ ಎಂಬ ಮುಸಲ್ಮಾನ ಸ್ನೇಹಿತನನ್ನು ಮಾತನಾಡಿಸಿದ್ದಕ್ಕೆ ಆಕೆಯ ಮೇಲೆ ಈ ರೌಡಿಗಳು ದಾಳಿ ಮಾಡಿದ್ದರಲ್ಲದೆ ಆಕೆಯನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಅವಮಾನಿಸಿದ್ದರು. ಆಕೆಯ ತಂದೆಯನ್ನೂ ಠಾಣೆಗೆ ಕರೆಸಿ ಆಕೆಯ 'ನಡವಳಿಕೆ'ಯ ವಿರುದ್ಧ ಪೊಲೀಸರು ದೂರುವಂತೆ ನೋಡಿಕೊಂಡಿದ್ದರು. ಇದೆಲ್ಲ ನಡೆಯುತ್ತಿದ್ದಾಗ ಹಿಂದೂತ್ವವಾದಿ ಪುಂಡರು ಠಾಣೆಯ ಮುಂದೆ ಕೇಕೆ ಹಾಕುತ್ತಿದ್ದರು... ಈ ಅವಮಾನದಿಂದ ತತ್ತರಿಸಿಹೋದ ಆ ಯುವತಿ ಆತ್ಮಹತ್ಯೆ ಮಾಡಿಕೊಂಡಿದ್ದಳು. ಆಕೆಯ ಸಾವಿನ ಮೂಲಕ ಈ ಹಿಂದೂ ಗೂಂಡಾಗಳು ತಮ್ಮ ಕೈಗಳಿಗೆ ರಕ್ತವನ್ನೇ ಅಂಟಿಸಿಕೊಂಡಿದ್ದರು.

ಹಾಗೆಯೇ ಶಾಲೆಯಲ್ಲೋ, ಕಾಲೇಜಿನಲ್ಲೋ ತಮ್ಮೊಂದಿಗೆ ಓದುತ್ತಿರುವ ಅನ್ಯಧರ್ಮೀಯ ಮಿತ್ರರನ್ನು ಮಾತನಾಡಿಸಿದ್ದಕ್ಕೆ, ಐಸ್‌ಕ್ರೀಮ್ ತಿಂದದ್ದಕ್ಕೆ ಹಿಂದೂ ಗೂಂಡಾಗಳಿಂದ ಇಂತಹ 'ಅನೈತಿಕ ಪೊಲೀಸ್‌ಗಿರಿ' ದಾಳಿಗೆ ಒಳಗಾದವರಿಗೆ ಲೆಕ್ಕವಿಲ್ಲದಂತಾಗಿತ್ತು. ಆದರೆ ಅವೆಲ್ಲ ಇದ್ದಕ್ಕಿದ್ದಂತೆ ನಡೆದ ಪ್ರಕರಣಗಳಾಗಿದ್ದರಿಂದ ಮತ್ತು ಆ ಗೂಂಡಾಗಳ ವಿರುದ್ಧ ದೂರು ನೀಡಲು ಯುವತಿಯರು ಹೆದರುತ್ತಿದ್ದರಿಂದ ಅವೆಲ್ಲ ಮುಖ್ಯವಾಹಿನಿಯ



ಮಾಧ್ಯಮಗಳಲ್ಲಿ ವರದಿ ಆಗುತ್ತಲೇ ಇರಲಿಲ್ಲ. ಆದರೂ ಅವರ ಉಪಟಳ ನಿಲ್ಲಲಿಲ್ಲ. ಪ್ರಚಾರಕ್ಕೆಂದು ಏನು ಮಾಡಲೂ ಹೇಸದ ಆ ಜನ ಕೊನೆಗೂ ಟಿವಿ ಚಾನೆಲ್‌ಗಳ ಸಮೇತ ಪಬ್‌ವೊಂದರ ಮೇಲೆ ದಾಳಿ ಮಾಡಿ, ಅದರೊಳಗಿದ್ದ ಹುಡುಗಿಯರನ್ನು ಹೊರಗೆಳೆದು ಸಮಾ ತದಕುವ ಮೂಲಕ ದೇಶದಾದ್ಯಂತ ಸುದ್ದಿ ಮಾಡಿದ್ದರು, ಪುಕ್ಕಟೆ ಪ್ರಚಾರ ಪಡೆದರು.

ಇಂತಹ ಪ್ರಕರಣಗಳು ನಡೆದಾಗ ಸ್ವತಃ ಗೂಂಡಾ ಸಂಸ್ಕೃತಿಯ ಪ್ರಾಡಕ್ಟ್‌ನಂತಿರುವ ಚೆಡ್ಡಿಗಳಾದ ಕಲ್ಲಡ್ಕ ಪ್ರಭಾಕರ ಭಟ್ಟ ಹಾಗೂ ಜಗದೀಶ್ ಕಾರಂತ್ ತರಹದ 'ಹಿರಿಯರು' ಧಾವಿಸುತ್ತಿದ್ದರಿಂದ ಮತ್ತು ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ ಕೂಡ ತೆಪ್ಪಗಿರುತ್ತಿದ್ದರಿಂದ ಯಾವ ಗೂಂಡಾ ವಿರುದ್ಧವೂ ಕರಾವಳಿ ಪೊಲೀಸರು ಒಂದೇಒಂದು ದೂರು ದಾಖಲಿಸಿಕೊಳ್ಳುತ್ತಿರಲಿಲ್ಲ. ಪಬ್ ದಾಳಿ ಪ್ರಕರಣದಲ್ಲೂ ಆದದ್ದು ಅದೇ. ಅಷ್ಟೇ ಅಲ್ಲದೆ ಪಬ್ ಮೇಲಿನ ದಾಳಿಯಲ್ಲಿ ಮಧ್ಯಮ ವರ್ಗದವರು ಸುಲಭವಾಗಿ ಒಪ್ಪದಿರುವ ಮದ್ಯಸೇವನೆಯ ವಿಷಯ ಕೂಡ ಇದ್ದಿದ್ದರಿಂದ ಕೆಲವೇ ದಿನಗಳಲ್ಲಿ ಅದು ಮದ್ಯ ಸೇವನೆ ಮತ್ತು ಅದರಿಂದಾಗುವ ದುಷ್ಪರಿಣಾಮಗಳ ಸುತ್ತ ಚರ್ಚೆಯಾಗಿ ಮಾರ್ಪಟ್ಟಿತು. ಆ ಕಾರಣಕ್ಕೆ ಆ ಪ್ರಕರಣದಿಂದ ಹೆಚ್ಚಿನ ಯುವಕಯುವತಿಯರು ವಿಚಲಿತಗೊಳ್ಳಲಿಲ್ಲ.

ಆದರೆ ಹೋಮ್ ಸ್ಟೇ ಮೇಲಾದ ದಾಳಿ ಅಷ್ಟು ಸಂಕೀರ್ಣವಾಗಿರಲಿಲ್ಲ. ಅಲ್ಲಿ ಮಿತ್ರನ ಹುಟ್ಟುಹಬ್ಬವನ್ನು ಆಚರಿಸುತ್ತಿದ್ದ ಯುವಕಯುವತಿಯರು ಕೇಕ್, ಚಿಪ್ಸ್ ಮತ್ತು ಕೂಲ್ ಡ್ರಿಂಕ್ಸ್ ಸೇವಿಸಿದ್ದರೆ ಹೊರತು ಮದ್ಯವನ್ನಾಗಲಿ, ಡ್ರಗ್ಸ್‌ನ್ನಾಗಲಿ ಸೇವಿಸಿರಲಿಲ್ಲ. ಮಾತ್ರವಲ್ಲ ಅವರೆಲ್ಲಾ ತಮ್ಮ ಪೋಷಕರ ಅನುಮತಿ ಪಡೆದೇ ಅಲ್ಲಿ ಸೇರಿದ್ದರು. ನಮ್ಮ ನಗರಗಳಲ್ಲಿ ಇವತ್ತು ಹೆಚ್ಚಿನ ಹುಡುಗಹುಡುಗಿಯರು ಧರಿಸುವಂತಹ ಉಡುಗೆತೊಡುಗೆಗಳನ್ನೇ ಅವರೂ ಅಂದು ತೊಟ್ಟಿದ್ದರು.

ಇಂತಹವರ ಮೇಲೆ ದಾಳಿ ಮಾಡಿದ್ದು, ಮೈಮುಟ್ಟಿ ಹಿಂಸಿಸಿದ್ದು, ಬಡಿದು ಅವಮಾನಿಸಿದ್ದು, ಪೊಲೀಸರಿಗೊಪ್ಪಿಸಿ ಕೇಕೆ ಹಾಕಿದ್ದು, ಮಾಧ್ಯಮದಲ್ಲಿ ಆ ದೃಶ್ಯಗಳು ಬಿತ್ತರಗೊಳ್ಳಲಾರಂಭಿಸಿದಾಗ ಮೆರೆದದ್ದು.... ಇಂತಹ ಅನ್ಯಾಯ, ಅನೈತಿಕತೆ, ಆಕ್ರಮಣಕಾರಿ ರೀತಿ ಎಲ್ಲವೂ ಹಿಂದೂತ್ವವಾದಿಗಳ ವಿರುದ್ಧ ಕರಾವಳಿ ಪ್ರದೇಶದ ಯುವಕಯುವತಿಯರಲ್ಲಿ ಅದೆಂತಹ ಸಿಟ್ಟು ಹೆಪ್ಪುಗಟ್ಟುವಂತೆ ಮಾಡಿತ್ತೆಂದರೆ ಹಲವೇ ದಿನಗಳಲ್ಲಿ ದೂರದೂರದ ಶಾಲೆ ಮತ್ತು ಕಾಲೇಜುಗಳ ವಿದ್ಯಾರ್ಥಿಗಳು ಪ್ರತಿಭಟನೆಗಳನ್ನು ಹಮ್ಮಿಕೊಂಡರು. ಮಂಗಳೂರಿನ ಎಲ್ಲ ಕಾಲೇಜುಗಳಲ್ಲಿ ಸಂಘಪರಿವಾರದ ವಿರುದ್ಧ ಘೋಷಣೆಗಳು ಮೊಳಗಿದವು. ಅಷ್ಟೇ ಅಲ್ಲದೆ, ಹಿಂದೂತ್ವವಾದಿಗಳು ಇಂತಹ ಅನೈತಿಕ ದಾಳಿಗಳನ್ನು ಅದೆಲ್ಲೋ, ಯಾರ ಮೇಲೋ ನಡೆದಿದೆ ಎಂದು ನಿರ್ಲಕ್ಷಿಸುತ್ತಾ ಬಂದಿದ್ದ ಸಾಮಾನ್ಯ ಮಹಿಳೆಯರ, ಪುರುಷರ, ಗೃಹಿಣಿಯರ ಕಣ್ಣುಗಳ ಮುಂದೆಯೇ ಹಿಂದೂತ್ವವಾದಿಗಳ ಹಿಂಸಾ ವಿನೋದ ಪ್ರಥಮ ಬಾರಿಗೆ ಬಹಿರಂಗಗೊಂಡಿತ್ತು. ಅವರೆಲ್ಲರೂ ಈ ಹಿಂದೂತ್ವವಾದಿಗಳ ಆಟಾಟೋಪಗಳಿಗೆ ಕಡಿವಾಣ ಹಾಕುವವರೇ ಇಲ್ಲವೆ ಎಂಬ ಭೀತಿಯಲ್ಲಿ ಬದುಕಲಾರಂಭಿಸಿದ್ದರು.

ಇತ್ತ ಗೋರಕ್ಷಣೆ ಹೆಸರಲ್ಲಿ ಅಮಾಯಕ ಮುಸಲ್ಮಾನರನ್ನು ಬಡಿದು ಅವರಿಂದ ಹಣ, ಮೊಬೈಲು ಇತ್ಯಾದಿಗಳನ್ನು ಕಸಿದುಕೊಳ್ಳುವುದನ್ನೂ ಈ ಹಿಂದೂ ಪುಂಡರು ತಮ್ಮ ನಿತ್ಯ ಕಸುಬಾಗಿಸಿಕೊಂಡಿದ್ದರು. ಅತ್ತ ಕ್ರೈಸ್ತರ ಚರ್ಚ್‌ಗಳ ಮೇಲೆ ದಾಳಿ ಮಾಡಿದ್ದು, ತಮ್ಮನ್ನು ವಿರೋಧಿಸಿದ ಫಾದರ್ ಮತ್ತು ನನ್‌ಗಳನ್ನು ಹೊಡೆದದ್ದು, 'ಬಲವಂತ ಮತಾಂತರ' ಮಾಡುತ್ತಿದ್ದಾರೆಂದು ಆರೋಪಿಸಿ ಖೊಟ್ಟಿ ಕೇಸುಗಳು ದಾಖಲಾಗುವಂತೆ ಮಾಡಿ ಹಿಂಸಿಸಿದ್ದು.... ಇವೆಲ್ಲ ಹಿಂದೂತ್ವವಾದಿಗಳ ವಿರುದ್ಧ ಕ್ರೈಸ್ತರು ಮತ್ತು ಮುಸಲ್ಮಾನರು ನಿಲ್ಲುವಂತೆ ಮಾಡಿತ್ತು.

ಇದೆಲ್ಲ ಬೀದಿಬದಿಯಲ್ಲಿ ಹಿಂದೂತ್ವ ಸಂಘಟನೆಗಳ ಪುಂಡರು ಮಾಡುತ್ತಿದ್ದ ಕೃತ್ಯಗಳಾಗಿದ್ದರೆ ಜನಸಾಮಾನ್ಯರ ಮತಗಳನ್ನು ಪಡೆದು ಶಾಸಕರಾಗಿದ್ದ ಕೆಲವರು ತಮ್ಮ ಜವಾಬ್ದಾರಿಗಳನ್ನು ಮರೆತು ವರ್ತಿಸಿದ ರೀತಿಯೂ ಜನರಲ್ಲಿ ಹೇಸಿಗೆ ಹುಟ್ಟಿಸಿತ್ತು. ಉಡುಪಿಯ ಬಿಜೆಪಿ ಶಾಸಕ ರಘುಪತಿ ಭಟ್ಟನ ಹೆಂಡತಿ ಪದ್ಮಪ್ರಿಯಾ ದೆಹಲಿಯಲ್ಲಿ ನಿಗೂಢವಾಗಿ ಸಾವನ್ನಪ್ಪಿದಾಗ ಅದರ ಸುತ್ತ ಸೂಕ್ತ ತನಿಖೆ ಮಾಡ ಬೇಕಿದ್ದ ಸರ್ಕಾರ ರಘುಪತಿ ಭಟ್ಟನ ರಕ್ಷಣೆಗೆ ನಿಂತಿತು. ಪದ್ಮಪ್ರಿಯಾಳ ನೆರವು ನೀಡಿದ್ದ ಅತುಲ್ ಎಂಬಾತನ ವಿರುದ್ಧ ಹಲವಾರು ಕಲಂಗಳಡಿ ಕೇಸುಗಳನ್ನು ಜಡಿದು ಆತ ನ್ಯಾಯಾಲಯಗಳಿಗೆ ಅಲೆಯುವಂತೆ ಮಾಡಿತು. ಅಷ್ಟೂ ಸಾಲದೆಂಬಂತೆ ಸೇಂಟ್ ಮೆರೀಸ್ ಐಲೆಂಡಿನಲ್ಲಿ ವಿದೇಶಿ ಹಿಪ್ಪಿಗಳಿಗೆ ರೇವ್ ಪಾರ್ಟಿ ಆಯೋಜಿಸಿ ದುಡ್ಡನ್ನು ಕೊಳ್ಳೆಹೊಡೆಯಲು ಭಟ್ಟನಿಗೆ ನೆರವಾಗಿತ್ತು. ಆ ಪಾರ್ಟಿಯಲ್ಲಿ ಆದ ಅವಾಂತರಗಳ ಬಗ್ಗೆ ಇಲ್ಲಿ ಹೇಳುವ ಅಗತ್ಯ ಇಲ್ಲ.

ಇನ್ನು ಕಲ್ಲಡ್ಕ ಪ್ರಭಾಕರ ಭಟ್ಟನಂತಹವರ ಪ್ರೋತ್ಸಾಹದಿಂದಲೇ ವಿಧಾನ ಸೌಧದ ಮೆಟ್ಟಿಲನ್ನೇರಿದ್ದ ಕೃಷ್ಣ ಪಾಲೇಮಾರ್ ಎಂಬಾತ ವಿಧಾನಸಭೆಯಲ್ಲೇ ಅಶ್ಲೀಲ ಸೆಕ್ಸ್ ವೀಡಿಯೋಗಳನ್ನು ನೋಡಿದಾಗಲೂ ಚೆಡ್ಡಿಗಳು ವಿರೋಧಿಸಿರಲಿಲ್ಲ, ಆತನ ವಿರುದ್ಧ ಕ್ರಮ ಕೈಗೊಂಡಿರಲಿಲ್ಲ. ಇದನ್ನೆಲ್ಲ ಕಂಡ ಕರಾವಳಿ ಜನರಿಗೆ ಆರೆಸ್ಸೆಸಿಗರಿಗೆ ದೇಶಭಕ್ತಿ ಸಂಸ್ಕೃತಿ ರಕ್ಷಣೆ ಎಂಬುದೆಲ್ಲ ಅಧಿಕಾರ ಪಡೆಯಲು ಮಾಡುವ ಹುನ್ನಾರವೆಂದು ಅರ್ಥವಾಗಿತ್ತು. ಆ ಕಾರಣಕ್ಕೇ ಈ ಹಿಂದೆ ಕಣ್ಣುಮುಚ್ಚಿ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸುತ್ತಾ ಬಂದಿದ್ದ ಜನ ನಿಧಾನವಾಗಿ ಅವರ ವಿರುದ್ಧ ತಿರುಗಿ ಬಿದ್ದು ಮತಪೆಟ್ಟಿಗೆಯಲ್ಲಿ ತಮ್ಮ ವಿರೋಧವನ್ನು ವ್ಯಕ್ತಪಡಿಸಲಾರಂಭಿಸಿದ್ದರು. ಅಂತಹ ಒಂದು ಪ್ರಕ್ರಿಯೆ ಉಡುಪಿ ಮತ್ತು ಚಿಕ್ಕಮಗಳೂರು ಕ್ಷೇತ್ರದಲ್ಲಿ ಸಂಸತ್ತಿನ ನಡೆದ ಉಪಚುನಾವಣೆ. ಆಗ ಅಲ್ಲಿನ ಜನ ಬಿಜೆಪಿಯ ಧೂಮ ಸುನೀಲ್ ಕುಮಾರನ ವಿರುದ್ಧ ಕಾಂಗ್ರೆಸ್‌ನ ಸಜ್ಜನ ಜಯಪ್ರಕಾಶ್ ಹೆಗ್ಡೆಯವರನ್ನು ಗೆಲ್ಲಿಸಿದ್ದರು. ಹಾಗೆಯೇ ಮಾರ್ಚ್ ತಿಂಗಳಲ್ಲಿ ನಡೆದ ಸ್ಥಳೀಯ ಚುನಾವಣೆಗಳಲ್ಲೂ ಬಿಜೆಪಿಗೆ ಸರಿಯಾದ ಪಾಠವನ್ನು ಕಲಿಸಿದ್ದರು. ಯಾವ ಉಡುಪಿಯಲ್ಲಿ ಮೊದಲ ಬಾರಿಗೆ ಬಿಜೆಪಿಯನ್ನು ಗೆಲ್ಲಿಸಿದ್ದರೋ ಅದೇ ಉಡುಪಿಯ ನಗರಪಾಲಿಕೆಯಿಂದ ಬಿಜೆಪಿಗಳನ್ನು 40 ವರ್ಷಗಳ ನಂತರ ಒದ್ದೋಡಿಸಿದರು.

ಆದರೂ ಭಂಡ ಚೆಡ್ಡಿಗಳು ಕರಾವಳಿಯ 17 ವಿಧಾನಸಭಾ ಕ್ಷೇತ್ರಗಳಿಂದ ತಮ್ಮನ್ನು ಜನ ಹೆಚ್ಚಿನ ಸಂಖ್ಯೆಯಲ್ಲಿ ಈ ಚುನಾವಣೆಯಲ್ಲಿ ಗೆಲ್ಲಿಸುತ್ತಾರೆಂಬ ಭ್ರಮೆಯಲ್ಲಿದ್ದರು. ಗೆಲ್ಲಿಸುವುದಿರಲಿ, ಅವರನ್ನೆಲ್ಲ ಅದೆಷ್ಟು ಹೀನಾಯವಾಗಿ ಸೋಲಿಸಿದ್ದಾರೆಂದರೆ ಅದನ್ನು ಕಂಡು ಹಲವು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳೇ ದಂಗಾಗಿ ಹೋಗಿದ್ದಾರೆ.

ಉದಾಹರಣೆಗೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದದ್ದು ಸುಳ್ಯದಲ್ಲಿ ಮಾತ್ರ. ಅದೂ ಜುಜುಬಿ 1,373 ಮತಗಳ ಅಂತರದಲ್ಲಿ. ಇನ್ನುಳಿದ ಏಳು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಭಾರೀ ಅಂತರದಲ್ಲೇ ಜಯ ಸಾಧಿಸಿದೆ. ಈ ಬಾರಿ ಮಂಗಳೂರು ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಯು.ಟಿ.ಖಾದರ್‌ಗೆ ಪ್ರಬಲ ಪೈಪೋಟಿ ಎದುರಾಗುವ ನಿರೀಕ್ಷೆ ಇತ್ತು. ಆದರೆ ಅಚ್ಚರಿ ಎಂಬಂತೆ ಬರೋಬ್ಬರಿ 29,000 ಮತಗಳ ಅಂತರದಲ್ಲಿ ಅವರು ಗೆಲುವು ಸಾಧಿಸಿದ್ದಾರೆ. ಅಂದಹಾಗೆ 2008ರ ಚುನಾವಣೆಯಲ್ಲಿ ಇದೇ ಖಾದರ್ ಗೆದ್ದದ್ದು ಕೇವಲ 7,500 ಮತಗಳ ಅಂತರದಲ್ಲಿ.

ಹಾಗೆಯೇ ಮಂಗಳೂರು ದಕ್ಷಿಣ ಕ್ಷೇತ್ರದಿಂದ ಕಳೆದ ಮೂರು ಚುನಾವಣೆಗಳಲ್ಲಿ ಸತತವಾಗಿ ಗೆದ್ದು ಬರುತ್ತಿದ್ದದ್ದು ಬಿಜೆಪಿಯ ಯೋಗೀಶ್ ಭಟ್. ಇದೇ ಭಟ್ ಈ ಬಾರಿ ಕಾಂಗ್ರೆಸ್ ಎದುರು 12,200 ಮತಗಳ ಅಂತರದಲ್ಲಿ ಸೋತು ಸುಣ್ಣವಾಗಿದ್ದಾನೆ. ಇನ್ನು ಮಂಗಳೂರು ಉತ್ತರ ಕ್ಷೇತ್ರದಲ್ಲಿ ಬಿಜೆಪಿಯ ಕೃಷ್ಣ ಪಾಲೇಮಾರ್ 5,397 ಮತಗಳ ಅಂತರದಲ್ಲಿ ಸೋಲುಂಡಿದ್ದಾನೆ.

ಉಡುಪಿಯಲ್ಲೂ ಇದೇ ವಾತಾವರಣ. ಅಲ್ಲಿನ ಐದು ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ ಗೆದ್ದಿರುವುದು ಕೇವಲ ಒಂದರಲ್ಲಿ ಮಾತ್ರ! ಉಡುಪಿ ನಗರದಲ್ಲಿ ಕಾಂಗ್ರೆಸ್‌ನ ಪ್ರಮೋದ್ ಮಧ್ವರಾಜ್ ಬಿಜೆಪಿ ಕ್ಯಾಂಡಿಡೇಟನ್ನು ಭರ್ಜರಿ 40,000 ಮತಗಳ ಅಂತರದಲ್ಲಿ ಬಗ್ಗು ಬಡಿದಿದ್ದಾರೆ. ಕಳೆದ 40 ವರ್ಷಗಳಲ್ಲಿ ಆ ಕ್ಷೇತ್ರದ ಅತಿದೊಡ್ಡ ಅಂತರದ ಗೆಲುವು ಇದು!

ಉತ್ತರ ಕನ್ನಡ ಜಿಲ್ಲೆಯಲ್ಲೂ ಇದೇ ಕತೆ. ವಿಶ್ವೇಶ್ವರ ಹೆಗಡೆ ಕಾಗೇರಿ ಇಲ್ಲಿ ಗೆದ್ದ ಏಕಮಾತ್ರ ಬಿಜೆಪಿ ಅಭ್ಯರ್ಥಿ. ಈತ ಶಿರಸಿ ಕ್ಷೇತ್ರದಿಂದ 3,059 ಸಾಧಾರಣ ಅಂತರದಿಂದ ಆಯ್ಕೆಯಾಗಿದ್ದಾನೆ.

ಈ ಬಾರಿ ಹಿಂದೂತ್ವದ ಕರಾಳಮುಖ ಕೇವಲ ಅಲ್ಪಸಂಖ್ಯಾತರ ಮತಗಳನ್ನಷ್ಟೆ ಬಿಜೆಪಿಯಿಂದ ಕಿತ್ತುಕೊಂಡಿಲ್ಲ, ಬದಲಾಗಿ ಈ ಹಿಂದೆ ಬಿಜೆಪಿಗೆ ಮತ ಹಾಕುತ್ತಿದ್ದ ಹಿಂದೂಗಳ ಮತಗಳನ್ನೂ ಬಿಜೆಪಿಯಿಂದ ದೂರ ಮಾಡಿದೆ.

ನಾನು ಇದೇ ಅಂಕಣದಲ್ಲಿ ಕೆಲವು ವಾರಗಳ ಹಿಂದೆ ಬಿಜೆಪಿ ಅಧಿಕಾರದಿಂದ ತೊಲಗಲಿದೆ ಎಂದು 'ಭವಿಷ್ಯ' ನುಡಿದಿದ್ದೆ. ಅದರ ಬಗ್ಗೆ ನಮ್ಮ ಓದುಗರೊಬ್ಬರು ಆಕ್ಷೇಪ ವ್ಯಕ್ತಪಡಿಸಿದ್ದರೂ ನಾನು ಸರಿಯಾಗಿ ಊಹಿಸಿದ್ದೆ! ಈಗ ಬಿಜೆಪಿ ವಿಧಾನ ಸೌಧದಿಂದ ಮಾತ್ರವಲ್ಲ ಅದನ್ನು ಪೋಷಿಸಿ ಬೆಳೆಸಿದ್ದ ಕರಾವಳಿಯಲ್ಲೂ ಹೀನಾಯವಾಗಿ ಮಣ್ಣುಮುಕ್ಕಿರುವುದು ನನ್ನಂತಹ ಕೋಮು ಸೌಹಾರ್ದ ಪ್ರಿಯರಿಗೆ ಸಹಜವಾಗಿ ಸಂತೋಷವನ್ನು ತಂದಿದೆ.

ಚುನಾವಣೆಯ ಬಿಸಿಯಲ್ಲಿ ಕರಾವಳಿಯಲ್ಲಿರುವ ನಮ್ಮ ಕೋಮು ಸೌಹಾರ್ದ ವೇದಿಕೆಯ ಮಿತ್ರರೊಂದಿಗೆ ಮಾತನಾಡಲು, ಈ ಕಂತ್ರಿಗಳ ವಿರುದ್ಧ ಜಯ ಸಾಧಿಸಿದ್ದಕ್ಕೆ ಅಭಿನಂದನೆಗಳನ್ನು ಹೇಳಲು ನನಗಿನ್ನೂ ಆಗಿಲ್ಲ. ಆದರೆ ಅವರೆಲ್ಲ ಮಾತ್ರವಲ್ಲ, ಹಿಂದೂತ್ವವಾದಿಗಳ ಉಪಟಳವನ್ನು ಕಂಡು ರೋಸಿಹೋಗಿದ್ದ ಕರಾವಳಿಯ ಸಾಮಾನ್ಯ ಜನರೂ ಈಗ ನೆಮ್ಮದಿಯ ನಿಟ್ಟುಸಿರು ಬಿಡುತ್ತಿದ್ದಾರೆಂಬ ಬಗ್ಗೆ ನನಗೆ ಕಿಂಚಿತ್ತೂ ಸಂಶಯವಿಲ್ಲ.

ಕೊನೆಗೂ ಹಿಂದೂತ್ವವಾದಿಗಳ ಬಗ್ಗೆ ಎಚ್ಚೆತ್ತುಕೊಂಡು ಅವರ ತಂದಕ್ಕೆ, ಸಿದ್ಧಾಂತಕ್ಕೆ ಕರಾವಳಿಯಲ್ಲೇ ಸ್ಮಶಾನವನ್ನು ಸಿದ್ಧಪಡಿಸಿದ ಕರಾವಳಿಯ ಮತದಾರರಿಗೆ ನನ್ನ ಹೃತ್ಪೂರ್ವಕ ಶುಭಾಶಯಗಳು.

‘ಲಂಕೇಶ್’ ಸಮೀಕ್ಷೆಯ ಫಲಿತಾಂಶ: 82% ನಿಖ

ಚುನಾವಣೆ ಘೋಷಣೆಯಾಗಿ, ಅಭ್ಯರ್ಥಿಗಳು ನಿಕ್ಕಿಯಾದ ಘಳಿಗೆಯಿಂದಲೂ ನಮ್ಮ ‘ಲಂಕೇಶ್’ ಬಳಗ ರಾಜ್ಯದ ಪ್ರತಿ ಕ್ಷೇತ್ರದಲ್ಲೂ ಚುನಾವಣಾ ಪೂರ್ವ ವಾತಾವರಣವನ್ನು ವಸ್ತುನಿಷ್ಠವಾಗಿ ಸಮೀಕರಿಸಿ ನಿಮ್ಮ ಮುಂದಿಡುತ್ತಲೇ ಬಂದಿದೆ. ಇದೀಗ ಫಲಿತಾಂಶ ಪ್ರಕಟವಾಗಿ ಅಭ್ಯರ್ಥಿಗಳ ಹಣೆಬರಹ ಬಯಲಾಗಿದೆ. ನಾವು ನಡೆಸಿದ ಸಮೀಕ್ಷೆಯ ಪ್ರಾಮಾಣಿಕತೆಯ ತಾಕತ್ತು ಎಂಥದ್ದೆನ್ನುವ ಬಗ್ಗೆ ಇಲ್ಲೊಂದು ಸಣ್ಣ ಹೋಲಿಕೆ ಇದೆ. ಎಲ್ಲಾ ಕ್ಷೇತ್ರದಲ್ಲೂ ನಾವು ಸಮೀಕ್ಷೆ ಕೈಗೊಂಡಿದ್ದೆವಾದರು ಕೆಲವೊಂದು ಕ್ಷೇತ್ರಗಳಲ್ಲಿ ನೆಕ್-ಟು-ನೆಕ್ ಸೆಣೆಸಾಟವಿತ್ತಾದ್ದರಿಂದ ಅವುಗಳನ್ನು ಹೊರತುಪಡಿಸಿ ಬಹಳಷ್ಟು ಕ್ಷೇತ್ರಗಳಲ್ಲಿ ಮತ್ತು ಒಟ್ಟಾರೆಯಾಗಿ ಜಿಲ್ಲೆಯ ಫಲಿತಾಂಶವನ್ನು ನಾವು ಲೆಕ್ಕಾಚಾರ ಹಾಕಿದಂತೆಯೇ ಬಂದಿದೆ. ನಮ್ಮ ಸಮೀಕ್ಷೆ ಒಟ್ಟಾರೆಯಾಗಿ 82.14% ಸರಿಯಾಗಿತ್ತೆನ್ನುವುದೇ ಖುಷಿಯ ವಿಷಯ. ಈ ಕ್ಷೇತ್ರಗಳಲ್ಲದೆ ಉಳಿದೆಲ್ಲಾ ಕ್ಷೇತ್ರಗಳನ್ನೂ ನಾವು ಸಮೀಕ್ಷೆ ಮಾಡಿದ್ದರೂ ಸೋಲು ಗೆಲುವಿನ ಸ್ಪಷ್ಟ ಲೆಕ್ಕಾಚಾರ ಸಿಗದಂತಹ ಪೈಪೋಟಿ ಇತ್ತು. ನಮಗೆ Definite ಇದ್ದ ಸೋಲು ಗೆಲುವಿನ ಲೆಕ್ಕಾಚಾರ ಇಷ್ಟು.



ನಮ್ಮ ಸಮೀಕ್ಷಾ ವರದಿಯ ಶೀರ್ಷಿಕೆ	ನಮ್ಮ ತೀರ್ಮಾನ	ನಾವು ಸರಿಯೋ/ತಪ್ಪೋ
ಮೈಸೂರು ಚಾಮರಾಜ: ಬಿಜೆಪಿಗೆ ಗೇಟ್‌ಪಾಸ್	ಬಿಜೆಪಿ ಸೋಲು	ಸರಿಯಾಗಿದೆ
ತೇರದಾಳ: ಉಮಾಶ್ರೀ ನಿರಾಳ	ಕಾಂಗ್ರೆಸ್ ಗೆಲುವು	ಸರಿಯಾಗಿದೆ
ಬಾದಾಮಿ: ಜೆಡಿಎಸ್-ಕಾಂಗ್ರೆಸ್ ಹಣಾಹಣಿ	ಬಿಜೆಪಿ ಸೋಲು	ಸರಿಯಾಗಿದೆ
ಹುನಗುಂದ: ದೊಡ್ಡನಗೌಡ ಪಾಟೀಲ ಸೋಲು	ಬಿಜೆಪಿ ಸೋಲು	ಸರಿಯಾಗಿದೆ
ಮುಧೋಳ: ಆರ್.ಬಿ.ತಿಮ್ಮಾಪುರಗೆ ಗೆಲುವು	ಕಾಂಗ್ರೆಸ್ ಗೆಲುವು	ತಪ್ಪಾಗಿದೆ
ಬಾಗಲಕೋಟೆ: ಬಿಜೆಪಿಗೆ ಕಾಂಗ್ರೆಸ್ ಸೆಡ್ಡು	ಕಾಂಗ್ರೆಸ್ ಗೆಲುವು	ಸರಿಯಾಗಿದೆ
ಕುಂದಗೋಳ: ಚಿಕ್ಕನಗೌಡರಿಗೆ ಸೋಲು	ಕೆಜೆಪಿ ಸೋಲು	ಸರಿಯಾಗಿದೆ
ಕಲಘಟಗಿ: ಲಾಡ್‌ನ ಪಾರುಪತ್ಯ	ಕಾಂಗ್ರೆಸ್ ಗೆಲುವು	ಸರಿಯಾಗಿದೆ
ಕೊಪ್ಪಳ: ಪಕ್ಷಾಂತರಿ ಕರಡಿ ಮೇಲುಗೈ	ಬಿಜೆಪಿ ಗೆಲುವು	ತಪ್ಪಾಗಿದೆ
ಜಮಖಂಡಿ: ಶ್ರೀಕಾಂತ ಕುಲಕರ್ಣಿ ಸೋಲು	ಬಿಜೆಪಿ ಸೋಲು	ಸರಿಯಾಗಿದೆ
ನವಲಗುಂದ: ಮುನೆನಕೊಪ್ಪನಿಗೆ ಗೆಲುವು	ಬಿಜೆಪಿ ಗೆಲುವು	ತಪ್ಪಾಗಿದೆ
ಧಾರವಾಡ ಗ್ರಾಮೀಣ: ಸೀಮಾ ಮಸೂತಿ ಮನೆಗೆ	ಬಿಜೆಪಿ ಸೋಲು	ಸರಿಯಾಗಿದೆ
ಶಿಗ್ಗಾಂವಿ: ಬಸು ಬೊಮ್ಮಾಯಿಯ ಮೇಲುಗೈ	ಬಿಜೆಪಿ ಗೆಲುವು	ಸರಿಯಾಗಿದೆ
ಮಾಯಕೊಂಡ: ಬಸವರಾಜ ನಾಯ್ಕನಿಗೆ ಕಾದಿದೆ ಸೋಲು	ಬಿಜೆಪಿ ಸೋಲು	ಸರಿಯಾಗಿದೆ
ಹುಬ್ಬಳ್ಳಿ-ಧಾರವಾಡ ಮೀಸಲು: ಅಬ್ಬಯ್ಯ ಗೆಲ್ಲುವ ಕುದುರೆ	ಕಾಂಗ್ರೆಸ್ ಗೆಲುವು	ಸರಿಯಾಗಿದೆ
ವರುಣಾ: ಕಷ್ಟವಾದರೂ ಸಿದ್ದು ಗೆಲುವು ನಿಶ್ಚಿತ	ಕಾಂಗ್ರೆಸ್ ಗೆಲುವು	ಸರಿಯಾಗಿದೆ
ಧಾರವಾಡ: ಶೆಟ್ಟರ್‌ಗೆ ಶೆಟ್ಟರೆ ಮುಳುವು	ಬಿಜೆಪಿ ಗೆಲುವು	ಸರಿಯಾಗಿದೆ
ಶಿವಮೊಗ್ಗ: ಬಿಜೆಪಿ ಧೂಳೀಪಟ (ಒಟ್ಟಾರೆ ಜಿಲ್ಲಾ ಸಮೀಕ್ಷೆ)	ಬಿಜೆಪಿ ಸೋಲು	ಸರಿಯಾಗಿದೆ
ಕೊಳ್ಳೇಗಾಲ: ಬಿಜೆಪಿ ಸೋಲು	ಬಿಜೆಪಿ ಸೋಲು	ಸರಿಯಾಗಿದೆ
ಶ್ರೀರಂಗಪಟ್ಟಣ: ಸೋಲಿನ ಖಾತೆ ತೆರೆದ ಕಾಂಗ್ರೆಸ್	ಕಾಂಗ್ರೆಸ್ ಸೋಲು	ಸರಿಯಾಗಿದೆ
ಮಳವಳ್ಳಿ: ನರೇಂದ್ರಸ್ವಾಮಿ ಮೆಲುಗೈ	ಕಾಂಗ್ರೆಸ್ ಗೆಲುವು	.ಸರಿಯಾಗಿದೆ
ಮಂಡ್ಯ: ಅಂಬಿಗೆ ಬಂಡಾಯದ ಲಾಭ	ಕಾಂಗ್ರೆಸ್ ಗೆಲುವು	ಸರಿಯಾಗಿದೆ
ಗದಗ: ಶುದ್ಧ ನೀರು V/s ಕೊಳಚೆ ನೀರು	ಕಾಂಗ್ರೆಸ್ ಗೆಲುವು	ಸರಿಯಾಗಿದೆ
ದಾವಣಗೆರೆ ದಕ್ಷಿಣ: ಸೌಹಾರ್ದತೆಗಾಗಿ ಶಾಮನೂರು ಗೆಲುವು	ಕಾಂಗ್ರೆಸ್ ಗೆಲುವು	ಸರಿಯಾಗಿದೆ
ಹರಿಹರ: ಜೆಡಿಎಸ್ V/s ಕಾಂಗ್ರೆಸ್, ಬಿ.ಪಿ.ಹರೀಶ್ ಲೆಕ್ಕಕ್ಕಿಲ್ಲ	ಕೆಜೆಪಿ ಸೋಲು	ಸರಿಯಾಗಿದೆ
ಹರಪನಹಳ್ಳಿ: ಎಂ.ಪಿ. ರವೀಂದ್ರನಿಗೆ ಗೆಲುವು ಸುಲಭ	ಕಾಂಗ್ರೆಸ್ ಗೆಲುವು	ಸರಿಯಾಗಿದೆ
ಹೊನ್ನಾಳಿಯಲ್ಲಿ ಮದ್ಯದ ಹೊಳೆ	ಕೆಜೆಪಿ ಸೋಲು	ಸರಿಯಾಗಿದೆ
ಭಟ್ಕಳ: ಕೆಜೆಪಿಗೆ ಛಾನ್ಸ್ ಜಾಸ್ತಿ	ಕೆಜೆಪಿ ಗೆಲುವು	ತಪ್ಪಾಗಿದೆ.
ಯಲ್ಲಾಪುರ-ಮುಂಡಗೋಡ: ಹೆಬ್ಬಾರ್ ಗೆಲ್ಲುವ ಕುದುರೆ	ಕಾಂಗ್ರೆಸ್ ಗೆಲುವು	ಸರಿಯಾಗಿದೆ
ಹುನಗುಂದ: ವಿಜಯಾನಂದ ವಿಧಾನ ಸಭೆಗೆ	ಕಾಂಗ್ರೆಸ್ ಗೆಲುವು	ಸರಿಯಾಗಿದೆ
ಬೀಳಗಿ: ನಿರಾಣಿ ಗೆಲುವಿಗೆ ಕಷ್ಟ	ಬಿಜೆಪಿ ಸೋಲು	ಸರಿಯಾಗಿದೆ
ಮುಧೋಳ: ಕಾರಜೋಳ ಗೋವಿಂದಾ, ಗೋವಿಂದಾ	ಕಾಂಗ್ರೆಸ್ ಗೆಲುವು	ತಪ್ಪಾಗಿದೆ
ಬಾದಾಮಿ: ಪಟ್ಟಣಶೆಟ್ಟಿ ಗಂಟುಮೂಟೆ ರೆಡಿ	ಜೆಡಿಎಸ್ ಗೆಲುವು	ತಪ್ಪಾಗಿದೆ
ಕುಂದಗೋಳ: ಜೆಡಿಎಸ್ ಆಕ್ಕಿ ಮುಂದೆ ಕೈ ಕಮಲ ಠುಸ್	ಜೆಡಿಎಸ್ ಗೆಲುವು	ತಪ್ಪಾಗಿದೆ
ಗದಗ: ಪಾಟೀಲ್ ವಿರುದ್ಧ ಶ್ರೀರಾಮುಲು ಶಿಷ್ಯ ಮಕಾಡೆ	ಕಾಂಗ್ರೆಸ್ ಗೆಲುವು	ಸರಿಯಾಗಿದೆ
ಧಾರವಾಡ ಜಿಲ್ಲಾ ಸಮೀಕ್ಷೆ: ಕೈ ಮುಂದೆ	ಕಾಂಗ್ರೆಸ್ ಹೆಚ್ಚು	ಸರಿಯಾಗಿದೆ
ಹಾನಗಲ್: ತರಗುಟ್ಟದ ಉದಾಸಿ	ಕೆಜೆಪಿ ಸೋಲು	ಸರಿಯಾಗಿದೆ
ಬಿಜಾಪುರ ಜಿಲ್ಲಾ ಸಮೀಕ್ಷೆ: ಕಮರುತ್ತಿರುವ ಕಮಲ	ಬಿಜೆಪಿ ಕಡಿಮೆ	ಸರಿಯಾಗಿದೆ
ಚಳ್ಳಕೆರೆ: ರಘುಮೂರ್ತಿ ಎಂಬ ಸಜ್ಜನನಿಗೆ ಗೆಲುವು	ಕಾಂಗ್ರೆಸ್ ಗೆಲುವು	ಸರಿಯಾಗಿದೆ

ಮೈಸೂರು: ರಾಮದಾಸನ ಸೋಲು ಗ್ಯಾರಂಟಿ	ಬಿಜೆಪಿ ಸೋಲು	ಸರಿಯಾಗಿ
ಚಿತ್ರದುರ್ಗ ಜಿಲ್ಲಾ ಸಮೀಕ್ಷೆ: ಕಾಂಗ್ರೆಸ್ ಪರವಾದ ಅಲೆ	ಕಾಂಗ್ರೆಸ್ ಹೆಚ್ಚು	ಸರಿಯಾಗಿ
ಹಿರಿಯೂರು: ಸುಧಾಕರ್-ಕೃಷ್ಣಪ್ಪ ಪೈಪೋಟಿ	ಕಾಂಗ್ರೆಸ್ ಗೆಲುವು	ಸರಿಯಾಗಿ
ಮೊಳಕಾಲ್ಮೂರು: ಮತ್ತೆ ಎಸ್‌ವೈಜಿ	ಕಾಂಗ್ರೆಸ್ ಗೆಲುವು	ತಪ್ಪಾಗಿದೆ
ಹೊಸದುರ್ಗ: ಬಿ.ಜಿ.ಗೋ/ಗೂಳಿ		50:50
ಹೊಳಲ್ಕೆರೆ: ಆಂಜನೇಯ/ಚಂದ್ರಪ್ಪ	ಕಾಂಗ್ರೆಸ್ ಗೆಲುವು	ಸರಿಯಾಗಿ
ಮೇಲುಕೋಟೆ ಗೆಲ್ಲಲು ಸಿಎಸ್ಪಿ-ಕೆಎಸ್ಪಿ ಹರಸಾಹಸ		50:50
ಶಿವಮೊಗ್ಗ ಜಿಲ್ಲೆ: ದುಷ್ಟ ಯಡ್ಡಿ ವಿರುದ್ಧ ಅಸಹಾಯಕ .ಈಶ್ವರಿ	ಬಿಜೆಪಿ ಸೋಲು	ಸರಿಯಾಗಿ
ಭದ್ರಾವತಿ: ಅಪ್ಪಾಜಿಗೌಡನ ದಾರಿ ಸುಗಮ	ಜೆಡಿಎಸ್ ಗೆಲುವು	ಸರಿಯಾಗಿ
ಶಿವಮೊಗ್ಗ ಗ್ರಾಮಾಂತರ: ಕೆಜೆಪಿ V/s ಜೆಡಿಎಸ್	ಜೆಡಿಎಸ್ ಗೆಲುವು	ಸರಿಯಾಗಿ
ಸಾಗರ: ಕಾಗೋಡು ಬಗ್ಗೆ ಅನುಕಂಪ	ಕಾಂಗ್ರೆಸ್ ಗೆಲುವು	ಸರಿಯಾಗಿ
ಚಾಮುಂಡೇಶ್ವರಿ: ಜೆಡಿಎಸ್ V/s ಕಾಂಗ್ರೆಸ್	ಕಾಂಗ್ರೆಸ್ ಗೆಲುವು	ಸರಿಯಾಗಿ
ಚಾಮರಾಜ ಕ್ಷೇತ್ರ: ಶಂಕರಲಿಂಗೇಗೌಡ ಗೆಲ್ಲುವ ಕುದುರೆ	ಜೆಡಿಎಸ್ ಗೆಲುವು	ಸರಿಯಾಗಿ
ನರಸಿಂಹರಾಜ ಕ್ಷೇತ್ರ: ತನ್ವೀರ್ ಸೇಠ್ ಮನೆಗೆ	ಜೆಡಿಎಸ್ ಗೆಲುವು	ಸರಿಯಾಗಿ
ಹೊಳೆ ನರಸೀಪುರ: ರೇವಣ್ಣನಿಗೆ ಸ್ವಲ್ಪವಷ್ಟೇ ಖಾರ	ಜೆಡಿಎಸ್ ಗೆಲುವು	ಸರಿಯಾಗಿ
ಹಾಸನ ನಗರ: ಬಂಡಾಯವೆ ಅಸ್ತ್ರ	ಕಾಂಗ್ರೆಸ್ ಗೆಲುವು	ಸರಿಯಾಗಿ
ಅರಸೀಕೆರೆ: ಶಿವಲಿಂಗೇಗೌಡನ ಮೇಲೆ ಅಕ್ಕರೆ	ಜೆಡಿಎಸ್ ಗೆಲುವು	ಸರಿಯಾಗಿ
ಬೇಲೂರು: ಕಾಂಗ್ರೆಸ್‌ನ ರುದ್ರಾವತಾರ	ಕಾಂಗ್ರೆಸ್ ಗೆಲುವು	ಸರಿಯಾಗಿ
ಶ್ರವಣಬೆಳಗೊಳ: ಜೆಡಿಎಸ್-ಕಾಂಗ್ರೆಸ್ ಬಾಹುಬಲ		50:50
ಬೊಮ್ಮನಹಳ್ಳಿ: ಸತೀಶ್ ರೆಡ್ಡಿಯ ಅಟ್ಟಹಾಸ ಅಂತ್ಯ	ಬಿಜೆಪಿ ಸೋಲು	ತಪ್ಪಾಗಿದೆ
ಯಲಹಂಕ: ಅನುಕಂಪದ ಅಲೆಯಲ್ಲಿ ಚಂದ್ರಪ್ಪ	ಜೆಡಿಎಸ್ ಗೆಲುವು	ತಪ್ಪಾಗಿದೆ
ಕೊರಟಗೆರೆ: ಪರಮೇಶ್ವರ್‌ಗೆ ತುತ್ತು ಸುಲಭವಲ್ಲ		50:50
ಮಧುಗಿರಿ: ರಾಜಣ್ಣ ಅಸೆಂಬ್ಲಿ ಪ್ರವೇಶಿಸುವ ಸಾಧ್ಯತೆ	ಕಾಂಗ್ರೆಸ್ ಗೆಲುವು	ಸರಿಯಾಗಿ
ತುಮಕೂರು ನಗರ: ಸೊಗಡು ಶಿವಣ್ಣನಿಗೆ ಸೋಲಿನ ಭೀತಿ	ಬಿಜೆಪಿ ಸೋಲು	ಸರಿಯಾಗಿ
ಶಿರಾ: ಕಾಂಗ್ರೆಸ್ ಗೆಲುವು ಬಹುತೇಕ ಖಚಿತ	ಕಾಂಗ್ರೆಸ್ ಗೆಲುವು	ಸರಿಯಾಗಿ
ವಿಜಯನಗರ: ಗುರು ಶಿಷ್ಯರ ವಿರುದ್ಧ ತಂದೆ ಮಗನ ಮೋಡಿ	ಕಾಂಗ್ರೆಸ್ ಗೆಲುವು	ಸರಿಯಾಗಿ
ಗೋವಿಂದರಾಜ ನಗರ: ಗುರು ಶಿಷ್ಯರ ವಿರುದ್ಧ ತಂದೆ ಮಗನ ಮೋಡಿ	ಕಾಂಗ್ರೆಸ್ ಗೆಲುವು	ಸರಿಯಾಗಿ
ಕರಾವಳಿ ಜಿಲ್ಲಾ ಸಮೀಕ್ಷೆ: ಕಳೆಗಟ್ಟಿದೆ ಕಾಂಗ್ರೆಸ್ ಬಳಲುತ್ತಿದೆ ಬಿಜೆಪಿ	ಕಾಂಗ್ರೆಸ್ ಹೆಚ್ಚು	ಸರಿಯಾಗಿ
ಮಂಗಳೂರು: ಖಾದರ್ ಶ್ಯೂರ್	ಕಾಂಗ್ರೆಸ್ ಗೆಲುವು	ಸರಿಯಾಗಿ
ಭಂಟ್ವಾಳ: ರೈ ಗುತ್ತಿನ ಗತ್ತು	ಕಾಂಗ್ರೆಸ್ ಗೆಲುವು	ಸರಿಯಾ
ಪುತ್ತೂರು: ಶಕುಗೆ ಶುಭ	ಕಾಂಗ್ರೆಸ್ ಗೆಲುವು	ಸರಿಯಾ
ಬೆಳ್ತಂಗಡಿ: ಬಂಗೇರಾಗೆ ಭಾಗ್ಯ	ಕಾಂಗ್ರೆಸ್ ಗೆಲುವು	ಸರಿಯಾ
ಮೂಡಬಿದಿರೆ: ‘ಅಭಯ’ ಜೈನ್	ಕಾಂಗ್ರೆಸ್ ಗೆಲುವು	ಸರಿಯಾ
ಕಾಪು: ಸೊರಕೆಗೆ ಛಾನ್ಸ್	ಕಾಂಗ್ರೆಸ್ ಗೆಲುವು	ಸರಿಯಾ
ಉಡುಪಿ: ಗೆಲ್ಲುವ ಪ್ರಮೋದ್ ಮಧ್ವರಾಜ್	ಕಾಂಗ್ರೆಸ್ ಗೆಲುವು	ಸರಿಯಾ
ಬೈಂದೂರು: ಕತ್ತುಕತ್ತಿನ ಹಣಾಹಣಿ	ಕಾಂಗ್ರೆಸ್ ಗೆಲುವು	ಸರಿಯಾ
ಮದ್ದೂರು: ಡಿ.ಸಿ. ತಮ್ಮಣ್ಣನ ದುಡ್ಡಿನ ದರ್ಬಾರ್	ಜೆಡಿಎಸ್ ಗೆಲುವು	ಸರಿಯಾ
ಮೂಡಿಗೆರೆ: ಕುಮಾರಸ್ವಾಮಿಗೆ ಸ್ವಪಕ್ಷದವರೇ ಕಂಟಕ	ಬಿಜೆಪಿ ಸೋಲು	ಸರಿಯಾ
ಶೃಂಗೇರಿ: ಜೀವರಾಜ್ ಸೋಲಿಗೆ ಮುನ್ನುಡಿ	ಬಿಜೆಪಿ ಸೋಲು	ತಪ್ಪಾಗಿದ
ಯಶವಂತಪುರ: ಜವರಾಯಿಗೌಡ ಗೆದ್ದರೆ ಕಾಪಾಡುವವರು ಯಾರು	ಕಾಂಗ್ರೆಸ್ ಗೆಲುವು	ಸರಿಯಾ
ಚಿಕ್ಕಪೇಟೆಗೆ ದೇವಿಯೇ ದಿಕ್ಕಾ	ಕಾಂಗ್ರೆಸ್ ಗೆಲುವು	ಸರಿಯಾ
ಬಿಟಿಎಂ: ರಾಮಲಿಂಗಾರೆಡ್ಡಿಗೆ ಎದುರಾಳಿ ದಿಕ್ಕಿಲ್ಲ	ಕಾಂಗ್ರೆಸ್ ಗೆಲುವು	ಸರಿಯಾ

ಮೈಸೂರು: ಫಲಿತಾಂಶ ಹೇಳುವ ಪಾಠಗಳು

ಮೈಸೂರಿನಿಂದ ಹೊರಬಿದ್ದಿರುವ ಫಲಿತಾಂಶ ...ಲವಾರು ಪಾಠಗಳನ್ನು ನಮ್ಮ ಮುಂದಿಟ್ಟಿದೆ. ...ರಾವಣಿತದಲ್ಲಿ ಭ್ರಷ್ಟಾಚಾರದಲ್ಲಿ ತೊಡಗುವವರಿಗೆ ಹಾಗೂ ...ತ್ತಗಳನ್ನು ನಿರ್ಲಕ್ಷ್ಯ ಮಾಡುವ ಮೈಗಳ್ಳರಿಗೆ ಪಾಠ ಹೇಳಿದೆ; ...ಷ್ಟು ಮಾತ್ರವಲ್ಲ, ಹಣ ಮತ್ತು ಹೆಂಡಕ್ಕೆ, ಜಾತಿ ...ದಕಾರಣಕ್ಕೆ ಚುನಾವಣೆಯಲ್ಲಿ ಎಂಥಾ ಮಾನ್ಯತೆ ...ದೆಯೆಂಬ ಸತ್ಯವನ್ನು ಮತ್ತೊಮ್ಮೆ ರುಜುವಾತುಪಡಿಸಿದೆ.

ಅದೆಷ್ಟೇ ಗಿಮಿಕ್ ಮಾಡಿದರೂ ಕೂಡ ಬಿಜೆಪಿ ಪಕ್ಷ ...ಟ್ಟಾರೆ ಜಿಲ್ಲೆಯಿಂದಲೇ ಜಾಗ ಖಾಲಿ ಮಾಡಿ ಕಾಂಗ್ರೆಸ್, ...ಡಿಎಸ್‌ಗಳಿಗೆ ಜಾಗ ಮಾಡಿಕೊಟ್ಟಿದೆ.

ಮೈಸೂರಿನ ವಿವಿಧ ಕ್ಷೇತ್ರಗಳ ಸೋಲು-ಗೆಲುವಿನ ...ಜಕೀಯವನ್ನು ವಿಶ್ಲೇಷಿಸಿದಾಗ ಒಂದೊಂದು ಕ್ಷೇತ್ರದಲ್ಲೂ ...ಂದೊಂದು ರೀತಿಯ ವಿಭಿನ್ನ ಸನ್ನಿವೇಶ ಕಂಡುಬರುತ್ತದೆ.

ಮೊದಲನೆಯದಾಗಿ ರಾಜ್ಯದಲ್ಲೇ ಅತ್ಯಂತ ಪ್ರತಿಷ್ಠಿತ ...ಮಣಾದ ರಾಜಕೀಯವನ್ನೇ ನೋಡಿ. ಇಲ್ಲಿನ ರಾಜಕೀಯ ...ಳೆದ ಕೆಲವು ತಿಂಗಳಲ್ಲಿ ನಾನಾ ನಾಟಕೀಯ ...ಳವಣಿಗೆಗಳನ್ನು ಕಂಡಿದೆ. ಅಂತಿಮವಾಗಿ ರಾಜ್ಯದ ...ಮುಖ್ಯಮಂತ್ರಿ ಅಭ್ಯರ್ಥಿ ಗೆದ್ದು ವಿಧಾನಸಭೆಗೆ ಹೋಗಿದ್ದರೂ ...ಲ್ಲಿ ಸೃಷ್ಟಿಯಾಗಿದ್ದ ಆತಂಕ, ಊಹಾಪೋಹ ಒಂದೆರಡಲ್ಲ. ...ಜೆಪಿಯ ಅಭ್ಯರ್ಥಿ ಕಾಪು ಸಿದ್ದಲಿಂಗಸ್ವಾಮಿಯಿಂದ ತೀರ್ಥ ...ಪ್ರಸಾದಗಳನ್ನು ಸ್ವೀಕರಿಸಿದ್ದ ಕೆಲವು ಪತ್ರಕರ್ತರು ಈ ...ಬುಃಕಶ್ಚಿತ್ ಮನುಷ್ಯನಿಗೆ ಇಲ್ಲದ ಪ್ರಚಾರ ಕೊಟ್ಟರು. ...ಯಾವುದೇ ಅನುಭವವಿಲ್ಲದಿದ್ದರೂ ಕೇವಲ ಹರಾಮಿ ...ಟನ್ನು ಹೊಂದಿದ್ದ ಕಾರಣಕ್ಕೆ ಈತ ಮಾಧ್ಯಮಗಳಲ್ಲಿ ...ರೀ ಅಬ್ಬರವನ್ನುಂಟುಮಾಡಿದ್ದ.

ಮಾಧ್ಯಮಗಳಲ್ಲಿ ಮಿಂಚಿದ್ದರ ಜೊತೆಗೆ ಈ ಯಡ್ಡಿ ...ಷ್ಯ ತನ್ನ ಗುರು ಹಾಕಿಕೊಟ್ಟಿದ್ದ ಸ್ಕೆಚ್ ಪ್ರಕಾರ ಜಾತಿಗಳನ್ನು ...ತ್ತಿಕಟ್ಟುವ ಕೆಲಸವನ್ನು ಯಶಸ್ವಿಯಾಗಿ ಮಾಡಿ ದಲಿತ ...ಸಮುದಾಯದ ಒಂದು ವಿಭಾಗಕ್ಕೆ ಮಂಕುಬೂದಿ ಎರಚಿದ್ದ. ...ಸಿದ್ದು ಗೆದ್ದರೆ ದಲಿತರು ಸಿಎಂ ಆಗುವುದನ್ನು ...ತಪ್ಪಿಸಿಬಿಡುತ್ತಾರೆ, ಆದ್ದರಿಂದ ಸಿದ್ದುವನ್ನು ಸೋಲಿಸಿ" ಎಂಬ ...ಅಪಪ್ರಚಾರ ಕೈಗೊಂಡಿದ್ದ.

ಸಿದ್ದುವನ್ನು ಸೋಲಿಸಲು ಕೆಜೆಪಿಯೊಂದಿಗೆ ಜಂಟಿ ...ಕಾರ್ಯಾಚರಣೆ ಮಾಡುವ ರೀತಿಯಲ್ಲಿ ದೇವೇಗೌಡರ ...ಕ್ಷವೂ ಕೆಲಸ ಮಾಡಿತ್ತು. ಸಿದ್ದುವನ್ನು ಅನಾದಿಯಿಂದಲೂ ...ಬೆಂಬಲಿಸುತ್ತಾ ಬಂದಿದ್ದ ಹಿಂದುಳಿದ 'ನಾಯಕ' ಜಾತಿಯ ...ಅಭ್ಯರ್ಥಿಯನ್ನು ಕಣಕ್ಕಿಳಿಸಿ ಸಿದ್ದುರ ಓಟ್‌ಬ್ಯಾಂಕನ್ನು ...ಒಡೆದು ಗೆಲುವು ಪಡೆಯುವ ಹುನ್ನಾರ ನಡೆಸಿದ್ದರು. ಯಾಕೆಂದರೆ ...ದೇವೇಗೌಡರಿಂದ ಸಿಎಂ ಸ್ಥಾನ ವಂಚಿಸಲ್ಪಟ್ಟ ಅಭ್ಯರ್ಥಿ ...ಗೆದ್ದು ಸಿಎಂ ಗಾದಿಯತ್ತ ನಡೆಯುವುದನ್ನು ...ತಡೆಯಬೇಕೆಂಬುದು ಅದರ ಒಳಹೂರಣವಾಗಿತ್ತು.

ಆದರೆ ನಾಯಕ ಹಾಗೂ ಇತರ ಹಿಂದುಳಿದ ಜಾತಿಯ ...ಮತದಾರರು ಜೆಡಿಎಸ್‌ನ ಈ ಒಳಮರ್ಮವನ್ನು ಅರಿತು ...ಒಟ್ಟಾಗಿ ಸಿದ್ದು ಬೆನ್ನ ಹಿಂದೆ ನಿಂತುಬಿಟ್ಟರು. 'ಕಾಪುಸಿ ...ಅಥವಾ ಬೇರೆಯವರು ಗೆದ್ದರೆ ಕೇವಲ ಎಂಎಲ್‌ಎ ...ಗಲಿಕ್ಕಷ್ಟೆ ಸಾಧ್ಯ; ಆದರೆ ಸಿದ್ದರಾಮಯ್ಯ ಗೆದ್ದರೆ ...ಮುಖ್ಯಮಂತ್ರಿ ಆಗುತ್ತಾರೆ, ಕ್ಷೇತ್ರ ಮತ್ತಷ್ಟು ...ಅಭಿವೃದ್ಧಿಯಾಗುತ್ತದೆ' ಎಂಬ ಮಾತು ಕ್ಷೇತ್ರದೆಲ್ಲೆಡೆ ಕೇಳಿ...ಬರಲಾರಂಭಿಸಿತು.


ಸಿದ್ದು ಪರವಾಗಿ ಮತದಾರರ ಅಭಿಪ್ರಾಯ ...ಗಟ್ಟಿಗೊಳ್ಳುತ್ತಿದ್ದಂತೆ ಕಾಪುಸಿ ಬೆಂಬಲಿಗರು ಹತಾಶಗೊಂಡು ...ನಾಯಕ ಜಾತಿಯ ಕೆಲವು ಹಳ್ಳಿಗಳಲ್ಲಿ ದಾಂಧಲೆಯೆಬ್ಬಿಸಿ, ...ಅವರ ಮೇಲೆ ಹಲ್ಲೆ ಮಾಡಿದರು. ಇದು ತುಳಿತಕ್ಕೊಳಗಾದ ...ಜಾತಿಗಳು ಮತ್ತಷ್ಟು ಧ್ರುವೀಕರಣವಾಗಲು ...ಸಹಾಯಕವಾಯಿತು. ಹೀಗಾಗಿ ದಶಕಗಳ ಕಾಲ ಜನಪರ ...ರಾಜಕಾರಣ ಮಾಡುತ್ತಾ ಬಂದಿರುವ ಸಿದ್ದು 29,641 ...ಅಧಿಕ ಮತಗಳಿಂದ ಜಯಶಾಲಿಯಾಗಿದ್ದಾರೆ.

ಕಾಪುಸಿ ಮತ್ತು ಯಡ್ಡಿಯ ಕೆಜೆಪಿ ನಡೆಸಿದ ...ಜಾತಿರಾಜಕೀಯ ಅವರಿಗೇ ತಿರುಗುಬಾಣವಾಗಿ ಸರಿಯಾದ ...ಪಾಠ ಕಲಿಸಿದೆ. ಆದರೆ ಈ ಪ್ರಕ್ರಿಯೆಯಲ್ಲಿ ಈ ಕೂಟ ...ಹಂಚಿದ್ದ ಅಕ್ರಮ ಹಣವನ್ನು ಬಡಮತದಾರರ ಕಡೆಗೆ ...ಹರಿಸುಂತೆ ಹರಿಸಿದ್ದೇ ಇವರ ಸಾಧನೆ.

ಇನ್ನು ಚಾಮರಾಜ ಕ್ಷೇತ್ರದ ಫಲಿತಾಂಶ ಹಲವರಲ್ಲಿ ...ಅಚ್ಚರಿ ಮೂಡಿಸಿದೆ. ಇಲ್ಲಿ ಸತತವಾಗಿ ಬಿಜೆಪಿ ಶಾಸಕನಾಗಿ ...ಆರಿಸಿಬರುತ್ತಿದ್ದ ಶಂಕರಲಿಂಗೇಗೌಡ ಮಹಾಂತ ...ಜನಪರವಾದಿಯಲ್ಲ, ಬದಲಿಗೆ ಜನರ ಕಷ್ಟಕಾರ್ಪಣ್ಯಗಳಿಗೆ ...ಸ್ಪಂದಿಸುತ್ತಾ ತನ್ನ ವೈಯುಕ್ತಿಕ ವರ್ಚಸ್ಸಿನ ಮೇಲಷ್ಟೇ ...ಗೆದ್ದು ಬರುತ್ತಿದ್ದ ಅರ್ಹ ವ್ಯಕ್ತಿ, ಸ್ವಲ್ಪ ಹೆಚ್ಚು ಮಾತಾಡುವ ...ಸ್ವಭಾವದವರಾದರೂ ನೇರ ನಡೆನುಡಿಯ ಮನುಷ್ಯ. ಇಂಥಾ ...ಶಂಕರಲಿಂಗೇಗೌಡರಿಗೆ ಮಂತ್ರಿ ಪದವಿ ತಪ್ಪಿಸಿದ ಬಿಜೆಪಿ ...ಯಿಂದಾಗಿ ಸಹಜವಾಗಿಯೇ ಬ್ರಾಹ್ಮಣ ಅಭ್ಯರ್ಥಿ ...ಮತದಾರರಿಗೆ ಮಣೆ ಹಾಕಿದ್ದರು. ಈ ಕಾರಣವಾಗಿದ್ದ ...ವಿರುದ್ಧ ಬಹಿರಂಗವಾಗಿ ಸಿಡಿದ್ದೆದ್ದಿದ್ದ ಗೌಡರು ಈ ...ಬಿಜೆಪಿ ಟಿಕೆಟ್‌ನಿಂದ ಸ್ಪರ್ಧಿಸಿದ್ದರು. ಕ್ಷೇತ್ರಾದ್ಯಂತ

ಅಪಾರ ಅಭಿಮಾನಿಗಳನ್ನು ಹೊಂದಿದ್ದ ಗೌಡರು ಗೆದ್ದೇ ಗೆಲ್ಲುತ್ತಾರೆ ಎಂದು ಎಲ್ಲರೂ ಭಾವಿಸಿದ್ದರು. ಇಂಥಾ ನಿರೀಕ್ಷೆಗೆ ಮತ್ತೊಂದು ಪ್ರಬಲ ಕಾರಣವೂ ಇತ್ತು, ಇತ್ತೀಚೆಗೆ ನಡೆದ ನಗರಸಭಾ ಚುನಾವಣೆಯಲ್ಲಿ ಜೆಡಿಎಸ್‌ನಿಂದ ಅತ್ಯಧಿಕ ಸಂಖ್ಯೆಯ ಕಾರ್ಪೊರೇಟರ್‌ಗಳನ್ನು ಗೆಲ್ಲಿಸಿದ್ದ ಗೌಡರು ಕೂಡ ತಾನು ಗೆದ್ದೇಬಿಟ್ಟಿದ್ದೇನೆ ಎಂಬ ಹುಂಬ ವಿಶ್ವಾಸದತ್ತ ಜಾರಿದ್ದರು.

ಆದರೆ ಇಲ್ಲಿ ಸಾಕಷ್ಟು ಒಳಸುಳಿಗಳು ಕೆಲಸ ಮಾಡಿದವು. ಜೆಡಿಎಸ್‌ನಿಂದ ಕಾರ್ಪೊರೇಟರ್ ಆಗಿದ್ದ ಲಿಂಗಪ್ಪ ವಾಸ್ತವದಲ್ಲಿ ಕಾಂಗ್ರೆಸ್‌ನ ವಾಸು ಬೆಂಬಲಿಗ. ಹಣ ಚೆಲ್ಲಬಲ್ಲ ಸಾಮರ್ಥ್ಯವಿರುವ ವಾಸು ಸಾಕಷ್ಟು ಕಾರ್ಪೊರೇಟರ್‌ಗಳನ್ನು ತನ್ನತ್ತ ಸೆಳೆದುಕೊಂಡಿದ್ದ. ಜೊತೆಗೆ ಕಾಂಗ್ರೆಸ್ ಅಲೆ ಹಾಗೂ ಜಿಲ್ಲೆಯ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗುತ್ತಾರೆ ಎಂಬ ನಿರೀಕ್ಷೆ ಕುರುಬ ಮತ್ತು ಇತರೆ ಹಿಂದುಳಿದ ಮತದಾರರನ್ನು ಕಾಂಗ್ರೆಸ್ ಕಡೆ ಸೆಳೆದಿತ್ತು, ಇದೂ ಅಲ್ಲದೆ ತಮ್ಮ ವಿರುದ್ಧ ಸೆಡ್ಡು ಹೊಡೆದಿರುವ ಗೌಡರನ್ನು ಸೋಲಿಸಲು ಬಿಜೆಪಿ ಧುರೀಣರು ಒಕ್ಕಲಿಗ ಜಾತಿಯ ಮತ್ತೊಬ್ಬ ಪ್ರಬಲ ಅಭ್ಯರ್ಥಿಯನ್ನೇ ಕಣಕ್ಕಿಳಿಸಿದರು. ಮೂಡಾ ಅಧ್ಯಕ್ಷನಾಗಿರುವ ನಾಗೇಂದ್ರ ಎಂಬ ಒಕ್ಕಲಿಗ ಅಭ್ಯರ್ಥಿ ಶಂಕರಲಿಂಗೇಗೌಡರ



ಸಿದ್ದರಾಮಯ್ಯ | ಜಿ.ಟಿ.ದೇವೇಗೌಡ | ವಾಸು | ಸಾ.ರಾ. ಮಹೇಶ್ | ಎಂ.ಕೆ.ಸೋಮಶೇಖರ್

ಪಾಲಿನ ಓಟುಗಳ ಒಂದು ಪಾಲನ್ನು ಕಸಿದುಕೊಂಡ. ಹೀಗೆ ಶಂಕರಲಿಂಗೇಗೌಡರ ಮತಬ್ಯಾಂಕ್ ಛಿದ್ರವಾಯಿತು. ಕಾಂಗ್ರೆಸ್‌ನ ವಾಸು 41,930 ಮತಗಳಿಸಿದ್ದರೆ, ಜೆಡಿಎಸ್‌ನ ಶಂಕರಲಿಂಗೇಗೌಡ 29,015, ಬಿಜೆಪಿಯ ನಾಗೇಂದ್ರ 26,168 ಮತಗಳನ್ನು ಗಳಿಸಿ 2 ಮತ್ತು 3 ನೇ ಸ್ಥಾನದಲ್ಲಿದ್ದಾರೆ.

ಶಂಕರಲಿಂಗೇಗೌಡರ ಅತಿಯಾದ ಆತ್ಮವಿಶ್ವಾಸ, ಜೆಡಿಎಸ್ ಕಾರ್ಯಕರ್ತರ ದ್ರೋಹ ಮತ್ತು ಕಾಂಗ್ರೆಸ್ ಪಕ್ಷದ ಅಲೆಯಿಂದಾಗಿ ಅನಿರೀಕ್ಷಿತವಾಗಿ ಭಾರೀ ಅಂತರದಿಂದ ಸೋಲುಣ್ಣಬೇಕಾಯಿತು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಜೆಡಿಎಸ್ ಟಿಕೆಟ್‌ನಿಂದ ಸ್ಪರ್ಧಿಸಿದ್ದ ಜಿ.ಟಿ.ದೇವೇಗೌಡ ಹೇಗೋ ಗೆದ್ದುಬಿಟ್ಟಿದ್ದಾರೆ. ತಮ್ಮ ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಸತ್ಯನಾರಾಯಣ ವಿರುದ್ಧ 7,103 ಮತಗಳನ್ನು ಹೆಚ್ಚಿಗೆ ಪಡೆದುಕೊಂಡಿದ್ದಾರೆ. ಹೇಳಿಕೇಳಿ ಈ ಆಸಾಮಿ ಗಾಳಿ ಬಂದ ಕಡೆ ತೂರಿಕೊಳ್ಳುವುದರಲ್ಲಿ ನಿಸ್ಸೀಮ. ಬಿಜೆಪಿ ಅಧಿಕಾರವನ್ನು ಅನುಭವಿಸಲು ಬಿಜೆಪಿಗೆ ಹಾರಿ, ಹೌಸಿಂಗ್ ಬೋರ್ಡ್ ಪ್ರೆಸಿಡೆಂಟ್ ಆಗಿ ನಾನಾ ಹಗರಣಗಳಲ್ಲಿ ಭಾಗಿಯಾಗಿ, ಕೇಸುಗಳಲ್ಲಿ ಸಿಲುಕಿ, ಸದ್ಯ ಜೈಲಿಗೆ ಹೋಗೋದರಿಂದ ತಪ್ಪಿಸಿಕೊಂಡಿದ್ದಾರೆ.

ಈ ಬಾರಿ ಕಾಂಗ್ರೆಸ್‌ನ ಅಲೆಯ ವಾಸನೆ ಹಿಡಿದ ಈತ ಕಾಂಗ್ರೆಸ್ ಬಾಗಿಲು ಬಡಿದ; ಆದರೆ ಮೈಸೂರಿನ ಕಾಂಗ್ರೆಸ್ ಮುಖಂಡರು ಈತನ ಪಂಚರಂಗಿ ಆಟವನ್ನು ತಿಳಿದಿದ್ದರಿಂದ ಬಾಗಿಲು ತೆರೆಯುವುದು ಹಾಗಿರಲಿ, ಮಾತುಕತೆಗೆ ಕನಿಷ್ಠ ಕಿಟಕಿಯನ್ನೂ ತೆರೆಯಲಿಲ್ಲ. ಹೀಗಾಗಿ ಮತ್ತೆ ಹಳೆ ಗಂಡನ ಪಾದವೇ ಗತಿ ಅಂತಾ ಜೆಡಿಎಸ್ ಟಿಕೆಟ್ ಗಿಟ್ಟಿಸಿ ಗೆದ್ದಿದ್ದಾನೆ.

ಜಿ.ಟಿ. ಗೆಲ್ಲಲಿಕ್ಕೆ ಆತ ಹರಿಸಿದ ಹಣದ ಹೊಳೆ ಮಾತ್ರವೇ ಕಾರಣ ಎಂದು ಕಾಂಗ್ರೆಸ್ಸಿಗರು ತಮ್ಮನ್ನು ತಾವು ಸಮಾಧಾನಪಡಿಸಿಕೊಳ್ಳಲು ಪ್ರಯತ್ನಿಸುತ್ತಿದ್ದಾರೆ. ಆದರೆ ಇದು ಅರ್ಧ ಸತ್ಯ ಮಾತ್ರ; ಉಳಿದ ಅರ್ಧ ಸತ್ಯಾಂಶವೇನೆಂದರೆ ಇಲ್ಲಿನ ಕಾಂಗ್ರೆಸ್ ಶಾಸಕರ ವೈಫಲ್ಯ ಎಂಬುದನ್ನು ಹೇಳಲೇಬೇಕು. ಕಳೆದ ಬಾರಿ ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಸತ್ಯನಾರಾಯಣ ಎಂಬುವರು ಸಜ್ಜನ, ಶುದ್ಧಹಸ್ತ ಎಂಬುದರಲ್ಲಿ ಯಾರಿಗೂ ಅನುಮಾನವಿಲ್ಲ, ಒಂದಷ್ಟು ಕೆಲಸಗಳನ್ನು ಮಾಡಿದರೂ ಕೊನೆ ದಿನಗಳಲ್ಲಿ ಶುದ್ಧ ಸೋಮಾರಿತನವನ್ನು ಮೈಗೂಡಿಸಿಕೊಂಡಿದ್ದರು. ಕ್ಷೇತ್ರದ ಹಳ್ಳಿಗಳನ್ನು ಬಾಧಿಸುತ್ತಿರುವ ಕುಡಿಯುವ ನೀರಿನಂತಹ ಜ್ವಲಂತ ಸಮಸ್ಯೆಗಳಿಗೆ ಸರಿಯಾಗಿ ಸ್ಪಂದಿಸಲಿಲ್ಲ ಎಂಬ ಆರೋಪವನ್ನು ಎದುರಿಸುತ್ತಿದ್ದಾರೆ.

ಈ ಕ್ಷೇತ್ರದ ವ್ಯಾಪ್ತಿಗೆ ಮೈಸೂರು ನಗರದ ಒಂದು ಭಾಗವೂ ಸೇರುತ್ತದೆ. ತನ್ನ ರಾಜಕೀಯ ಭವಿಷ್ಯದ ದೃಷ್ಟಿಯಿಂದಲಾದರೂ ನಗರದ ಮತದಾರರ ಜೊತೆ ಉತ್ತಮ ಸಂಪರ್ಕ ಇಟ್ಟುಕೊಳ್ಳಬೇಕಾಗಿತ್ತು, ಸಿದ್ದರಾಮಯ್ಯನವರ ಬೆಂಬಲ ಹಾಗೂ ಅಲೆಯಿಂದಲೇ ಗೆದ್ದುಬಿಡುತ್ತೇನೆಂಬ ಹುಂಬ ವಿಶ್ವಾಸದಲ್ಲೆ ಕಾಲ ಕಳೆದರು. ಹೀಗೆ ಸಜ್ಜನಿಕೆಯ ಜೊತೆಗೆ ಸೋಮಾರಿತನವೂ ಮೈಗೂಡಿರುವ ಸತ್ಯಪ್ಪನ ನಿರ್ಲಕ್ಷ್ಯದಿಂದಾಗಿ ಗೆಲ್ಲಬೇಕಾಗಿದ್ದ ಸ್ಥಾನವನ್ನು ಕಳೆದುಕೊಂಡಂತಾಗಿದೆ.

ಕೃಷ್ಣರಾಜ ಕ್ಷೇತ್ರದಲ್ಲಿ ನಿರೀಕ್ಷೆಯಂತೆ ರಾಮದಾಸ್‌ನ ಮುಖಕ್ಕೆ ಮಂಗಳಾರತಿಯಾಗಿದೆ. ಇವರ ಎಲ್ಲಾ ತಂತ್ರ ಕುತಂತ್ರಗಳೂ ಇಲ್ಲಿ ಮಣ್ಣುಮುಕ್ಕಿವೆ. ಮಂತ್ರಿಯಾಗಿ ಮೆರೆದ ಈತನ ಅಟ್ಟಹಾಸಕ್ಕೆ ಸದ್ಯಕ್ಕೆ ಕಡಿವಾಣ ಬಿದ್ದಿದೆ. ಈ ಗಿಲೀಟು ರಾಮದಾಸನ ವಿರುದ್ಧ ಮೃದು ಸ್ವಭಾವದ ಎಂ.ಕೆ.ಸೋಮಶೇಖರ್ ಎಂಬ ಕಾಂಗ್ರೆಸ್ ಅಭ್ಯರ್ಥಿ ಗೆದ್ದು ಮಂದಹಾಸ ಬೀರಿದ್ದಾರೆ. ಇಲ್ಲಿ ಗೆದ್ದಿದ್ದೇನೋ ಸೋಮಶೇಖರ್ ಆದರೂ ರಾಮದಾಸನನ್ನು ಸೋಲಿಸಿದ್ದು ಮಾತ್ರ ಕೆಜೆಪಿಯ ಪ್ರಬಲ ಅಭ್ಯರ್ಥಿಯಾಗಿದ್ದ ರಾಜೀವ್ ಎಂಬುದರಲ್ಲಿ ಎರಡು ಮಾತಿಲ್ಲ.

ಎಷ್ಟೇ ಹೆಸರು ಕೆಡಿಸಿಕೊಂಡಿದ್ದರೂ ರಾಮದಾಸ್ 46,546 ಮತಗಳನ್ನು ಪಡೆದು ಎರಡನೇ ಸ್ಥಾನ ಉಳಿಸಿಕೊಳ್ಳಲು ಯಶಸ್ವಿಯಾಗಿದ್ದಾನೆ. ಇದಕ್ಕೆ ಒಂದು ಪ್ರಮುಖ ಕಾರಣ ಬ್ರಾಹ್ಮಣರ ಮತಬ್ಯಾಂಕ್. ಇದು ಜಿಲ್ಲೆಯಲ್ಲೆ ಅತಿ ಹೆಚ್ಚಿನ ಬ್ರಾಹ್ಮಣ ಮತದಾರರಿರುವ ಕ್ಷೇತ್ರ. ಈತನ ಮೂರನೇ ದರ್ಜೆ ಗಿಲೀಟುಗಳನ್ನು ಕಂಡು ಬ್ರಾಹ್ಮಣ ಮತದಾರರು ರೋಸಿಹೋಗಿ ಮತ್ತೊಬ್ಬ ಬ್ರಾಹ್ಮಣ ಅಭ್ಯರ್ಥಿ ಕೆಜೆಪಿಯ ರಾಜೀವ್‌ರತ್ತ ವಾಲಿದ್ದರೆಂಬುದೇನೋ ನಿಜ. ಜೊತೆಗೆ ಆರೆಸ್ಸೆಸ್‌ನ ಕಿಂಗ್‌ಪಿನ್ ಹಾಗೂ ಬ್ರಾಹ್ಮಣ ಮುಖಂಡ ಗೋ.ಮಧುಸೂದನ್ ಕೂಡ ರಾಮದಾಸ್ ವಿರುದ್ಧ ನಿಂತಿದ್ದರು. ಆದರೆ ಕೊನೆ ಗಳಿಗೆಯ ಲೆಕ್ಕಾಚಾರದಲ್ಲಿ ತಮ್ಮ ಜಾತಿಯ ಎಂಎಲ್‌ಎಯನ್ನು ಕಳೆದುಕೊಳ್ಳುವ ಆತಂಕದಲ್ಲಿ ಹೆಚ್ಚಿನ ಮತದಾರರು ರಾಮದಾಸ್ ಕಡೆ ಮರಳಿದರು. ಜೊತೆಗೆ ಈತ ನಡೆಸಿದ್ದ ನಾನಾ ನಾಟಕಗಳಿಗೆ ಮರುಳಾಗಿದ್ದ ಅಮಾಯಕರು, ಹಣ-ವಸ್ತುಗಳಿಗೆ ಮಾರುಹೋದವರೂ ಎಲ್ಲಾ ಸೇರಿ ರಾಮದಾಸ್‌ಗೆ ಎರಡನೇ ಸ್ಥಾನ ಕೊಟ್ಟಿದ್ದಾರೆ.

ಕೆಜೆಪಿಯ ರಾಜೀವ್ ಜೊತೆಗಿದ್ದ ಸ್ವಜಾತಿ ಮತದಾರರು ಕೊನೆಯಲ್ಲಿ ರಾಮದಾಸ್ ಕಡೆ ವಾಲಿದಂತೆ ಕಂಡುಬರುತ್ತಿದೆ, ಜೊತೆಗೆ ಯಡ್ಡಿಯ ಕಾರಣಕ್ಕಾಗಿ ಲಿಂಗಾಯತ ಮತಗಳೂ ಬಿದ್ದು 3ನೇ ಸ್ಥಾನಕ್ಕೆ ಇಳಿದಿದ್ದಾರೆ.

ಹುಣಸೂರಿನಲ್ಲಿ ನಾನಾ ನಾಟಕಗಳು ನಡೆದಿವೆ. ಕಾಂಗ್ರೆಸ್‌ನ ಮಂಜುನಾಥ್ 83,930 ಮತಗಳ ಭಾರೀ ಅಂತರದಿಂದ ಗೆದ್ದು ಬಂದಿದ್ದಾರೆ. ಇವರು ತಮ್ಮ ಸಮೀಪದ ಪ್ರತಿಸ್ಪರ್ಧಿ ಜನತಾದಳದ ಕುಮಾರಸ್ವಾಮಿಯಿಂದ 40,207 ಅಂತರದ ಗೆಲುವು ಸಾಧಿಸಿದ್ದಾರೆ. ಇದು ಜಿಲ್ಲೆಯಲ್ಲೇ ಭಾರೀ ಅಂತರದ ಗೆಲುವು. ಹಾಗೆ ನೋಡಿದರೆ ಜಾತಿಯಲ್ಲಿ ಕೋಮಟಿ ಶೆಟ್ಟರಾದ ಇವರಿಗೆ ಇಲ್ಲಿ ಜಾತಿ ಬೆಂಬಲವಿಲ್ಲ, ವಾಸ್ತವದಲ್ಲಿ ಈ ಜಾತಿಯ 500 ಮತಗಳೂ ಇಲ್ಲ, ದೇವರಾಜು ಅರಸುಗೆ ಆತ್ಮೀಯವಾಗಿದ್ದ ಪ್ರೇಮ್‌ಕುಮಾರ್ ಕುಟುಂಬದಿಂದ ಬಂದ ಮಂಜುನಾಥ್ ಜನಪ್ರಿಯ ರಾಜಕಾರಣದ ಮಸಲತ್ತುಗಳನ್ನು ಚೆನ್ನಾಗಿ ಅರಿತಿದ್ದಾರೆ. ಈ ಕಾರಣದಿಂದಲೇ ಈತ ಗೆಲುವು ಸಾಧಿಸಿದ್ದಾರೆ.

ಸ್ವಂತ ಒಂದು ಬೋರ್‌ವೆಲ್ ಮಿಷನ್ ಕೊಂಡುಕೊಂಡಿದ್ದರು. ಡೀಸೆಲ್ ಕಾಸು ಕೊಟ್ಟರೆ ಸಾಕು, ಬೋರ್‌ವೆಲ್ ಕೊರೆಸುತ್ತಿದ್ದರು. ಹೀಗೆ ಆಗರ್ಭ ಶ್ರೀಮಂತಿಕೆ ಇದ್ದರೂ ಬಡಬಗ್ಗರ ಮಧ್ಯದಲ್ಲಿ ಸಲೀಸಾಗಿ ಗುರುತಿಸಿಕೊಳ್ಳುವ ಕಾರಣಕ್ಕೆ ಜನ ಇವರಿಗೆ ತುಂಬು ಹೃದಯದ ಆಶೀರ್ವಾದ ನೀಡಿದ್ದಾರೆ.

ನರಸಿಂಹರಾಜ ಕ್ಷೇತ್ರ ಹೆಚ್ಚಾಗಿ ಬಡ ಮತದಾರರನ್ನು ಒಳಗೊಂಡಿರುವ ಕ್ಷೇತ್ರ. ಅದರಲ್ಲೂ ಇಲ್ಲಿ ನಿರ್ಣಾಯಕ ಮತಗಳು ಬಡ ಮುಸ್ಲಿಮರದ್ದು, ಆದರೆ ಈ ಕ್ಷೇತ್ರವನ್ನು ಪ್ರತಿನಿಧಿಸುತ್ತಾ ಬಂದಿರುವ ತನ್ವೀರ್ ಸೇಠ್ ವೈಟ್‌ಕಾಲರ್ ರಾಜಕಾರಣಿ. ಬಿಸಿಲಿನಲ್ಲಿ ಸುತ್ತುವುದಾಗಲಿ, ಬಡಬಗ್ಗರ ಮನೆಬಾಗಿಲಿಗೆ ಹೋಗುವುದಾಗಲಿ ಇವರಿಗೆ ಸುತರಾಂ ಇಷ್ಟವಿಲ್ಲ. ಅಮಾಯಕ ಮುಸ್ಲಿಮರು ಕಣ್ಣುಮುಚ್ಚಿ ಮತಹಾಕುತ್ತಾ ಬಂದ ಪರಿಣಾಮ ಹಾಗೂ ಕಾಂಗ್ರೆಸ್‌ನ ಟಿಕೆಟ್‌ನಿಂದಾಗಿ ಈತ ಸತತವಾಗಿ ಗೆದ್ದು ಬರುತ್ತಿದ್ದಾರೆ.

ಈ ಬಾರಿ ಕ್ಷೇತ್ರದ ಮತದಾರರಲ್ಲಿ ತನ್ವೀರ್ ವಿರುದ್ಧ ಭಾರೀ ಅಲೆಯೇ ಎದ್ದಿತ್ತು, ಅದೃಷ್ಟವಶಾತ್ ತನ್ವೀರ್ ಸೇಠ್ ಮತ್ತೆ ಗೆದ್ದು ಬಂದಿದ್ದಾರೆ. ಈ ಹಿಂದೆ ಶಾಸಕನಾಗಿದ್ದ ಅವಧಿಯಲ್ಲಿ ಕನಿಷ್ಠ ಪಕ್ಷ ಆಶ್ರಯ ಮನೆಗಳನ್ನಾದರೂ ಮಾಡಿಸಿ ಪಾಪ ಕಟ್ಟಿಕೊಂಡಿಲ್ಲ, ರಸ್ತೆ ಕುಡಿಯುವ ನೀರು, ಒಳ ಚರಂಡಿ ವ್ಯವಸ್ಥೆ ಮುಂತಾದ ನಾನಾ ಸಮಸ್ಯೆಗಳು ಕ್ಷೇತ್ರದ ಉದ್ದಕ್ಕೂ ಕಣ್ಣಿಗೆ ರಾಚುತ್ತಿವೆ. ಆದರೆ ಯಾವಾಗಲೂ ಭಾರೀ ಬೆಲೆಬಾಳುವ ಕಪ್ಪು ಕನ್ನಡಕ ಧರಿಸುವ ಸೇಠ್‌ಜಿ ಕಣ್ಣಿಗೆ ಇವ್ಯಾವೂ ಬಿದ್ದೇ ಇಲ್ಲ.

ಇದರ ಪರಿಣಾಮವಾಗಿಯೇ ಎಸ್‌ಡಿಪಿಐ ಎಂಬ ಇನ್ನೂ ರಾಜಕೀಯವಾಗಿ ಕಣ್ಣೇಬಿಡದ ಪಕ್ಷದ ಅಭ್ಯರ್ಥಿ ಅಬ್ದುಲ್ ಮಜೀದ್‌ರಿಂದ ತೀವ್ರ ಪ್ರತಿಸ್ಪರ್ಧೆ ಎದುರಿಸಿ, ಮೊದಲ ಬಾರಿಗೆ ಎಸಿ ಕೊಠಡಿಯಿಂದ ಹೊರಬಂದು ಬೆವರಿಳಿಸಿದ್ದಾರೆ. ಯಾರೂ ಹೆಸರೇ ಕೇಳಿರದ ಅಭ್ಯರ್ಥಿ ಸೇಠ್ ವಿರುದ್ಧ 29,667 ಮತಗಳನ್ನು ಗಳಿಸುತ್ತಾರೆಂದರೆ, ಮತದಾರರ ಆಕ್ರೋಶ ಎಷ್ಟರಮಟ್ಟಿಗಿದೆ ಎಂಬುದು ಎದ್ದುಕಾಣುತ್ತದೆ. ಕೊನೇ ಘಳಿಗೆಯಲ್ಲಿ ಇಬ್ಬರು ಮುಸ್ಲಿಮರ ಜಗಳದಲ್ಲಿ ಜೆಡಿಎಸ್‌ನ ಸಂದೇಶ್‌ಸ್ವಾಮಿ ಗೆದ್ದುಬಿಡಬಹುದು ಎಂಬ ಅಲ್ಪಸಂಖ್ಯಾತರ ಆತಂಕವನ್ನು ಬಳಸಿಕೊಂಡ ಪರಿಣಾಮ ಹಾಗೂ ಯಥೇಚ್ಛ ಹಣ ಹರಿಸಿದ ಪರಿಣಾಮ ತನ್ವೀರ್ 'ಮತ್ತೆ ಗೆದ್ದು ಬಂದಿದ್ದಾರೆ. ಗೆಲುವಿನ ಅಂತರ ಕೂಡ 8,370 ಮಾತ್ರವೇ ಆಗಿದೆ. ಎಸ್‌ಡಿಪಿಐಗೆ ಒಂದಷ್ಟು ಹಣ ಖರ್ಚು ಮಾಡುವ ತಾಕತ್ತು ಇದ್ದಿದ್ದರೆ, ನರಸಿಂಹರಾಜದಲ್ಲಿ ಪ್ರಪ್ರಥಮ ಖಾತೆ ತೆರೆದುಬಿಡುತ್ತಿತ್ತು ಎಂಬುದನ್ನು ಘಂಟಾಘೋಷವಾಗಿ ಹೇಳಬಹುದು.

ಮೂರನೇ ಸ್ಥಾನಗಳಿಸಿದ ಜೆಡಿಎಸ್ ಅಭ್ಯರ್ಥಿ 29,180 ಮತಗಳನ್ನು ಗಳಿಸಿದ್ದಾರೆ ಎಂಬುದನ್ನು ಇಲ್ಲಿ ಕಡೆಗಣಿಸುವಂತಿಲ್ಲ. ಇನ್ನು ಮುಂದಾದರೂ ಈ ಸೇಠ್‌ಜಿ ಜನರ ಬಳಿ ಸುಳಿಯುವುದನ್ನು ಅಭ್ಯಾಸ ಮಾಡಿಕೊಂಡರೆ ಅವರಿಗೇ ಒಳ್ಳೆಯದು.

ನಂಜನಗೂಡನ್ನು ಪ್ರತಿನಿಧಿಸುತ್ತಿರುವ ಹಿರಿಯ ರಾಜಕಾರಣಿ ಶ್ರೀನಿವಾಸ ಪ್ರಸಾದ್ ಇನ್ನೇನು ಸೋತೇ ಬಿಡುತ್ತಾರೆ ಎಂಬ ವಾತಾವರಣ ನಿರ್ಮಾಣವಾಗಿತ್ತು, ಜೆಡಿಎಸ್‌ನ ಕಳಲೆ ಕೇಶವಮೂರ್ತಿ ಹಣವನ್ನು ನೀರಿನಂತೆ ಚೆಲ್ಲುತ್ತಾ ದಿನೇದಿನೇ ತನ್ನ ಪರವಾದ ಅಲೆಯನ್ನು ಎಬ್ಬಿಸುವಲ್ಲಿ ಯಶಸ್ವಿಯಾಗಿದ್ದರು. ಕೊನೇ ಘಳಿಗೆಯಲ್ಲಿ ಅಪಾಯವನ್ನು ಅರಿತ ಪ್ರಸಾದ್ ಅವರಿವರ ಬೆಂಬಲ ಪಡೆದರು. ಪ್ರಸಾದ್ ಬೆಂಬಲಿಗರೂ ಹಣ ಹಂಚುವ ತಂತ್ರದ ಮೊರೆ ಹೋದರೆಂದು ತಿಳಿದುಬಂದಿದೆ. ಇಂದಿನ ರಾಜಕಾರಣದ ಅಧಃಪತನಕ್ಕೆ ಇದೊಂದು ನಿದರ್ಶನ.

ಕಳೆದ ಬಾರಿ ಪ್ರಸಾದ್ ಅವರಿಗೆ ತೀವ್ರ ಸ್ಪರ್ಧೆ ಒಡ್ಡಿದ್ದ ಬಿಜೆಪಿ ಅಭ್ಯರ್ಥಿ ಎಸ್.ಮಹದೇವಯ್ಯ ಕೇವಲ 700 ಮತಗಳಿಂದಷ್ಟೇ ಸೋತಿದ್ದರು. ರಾಜ್ಯ ಬಿಜೆಪಿಯಲ್ಲಿ ಒಡಕು ಮೂಡದೇ ಹೋಗಿದ್ದರೆ ಈ ಬಾರಿ ಪ್ರಸಾದ್ ಅವರಿಗೆ ಮತ್ತಷ್ಟು ಕಷ್ಟವಾಗುತ್ತಿತ್ತು, ಮಹದೇವಯ್ಯ ಈ ಬಾರಿ ಕೆಜೆಪಿ ಅಭ್ಯರ್ಥಿಯಾಗಿ 28,312 ಮತಗಳನ್ನು ಗಳಿಸಿದ್ದಾರೆ. ಈ ಅನುಕೂಲಕರ ಪರಿಸ್ಥಿತಿಯಲ್ಲಿ ಶ್ರೀನಿವಾಸ್ ಪ್ರಸಾದ್ ಅವರು 50,784 ಮತಗಳನ್ನು ಪಡೆದು, ತಮ್ಮ ಸಮೀಪದ ಜೆಡಿಎಸ್ ಪ್ರತಿಸ್ಪರ್ಧಿಯಿಂದ 8,941 ಮತಗಳ ಅಂತರವನ್ನು ಕಾಯ್ದುಕೊಂಡಿದ್ದಾರೆ.

ಟಿ.ನರಸೀಪುರದಿಂದ ವಿಧಾನಸಭೆಗೆ ಆಯ್ಕೆಯಾಗಿರುವ ಡಾ.ಎಚ್.ಸಿ.ಮಹದೇವಪ್ಪ ಹಿರಿಯ ರಾಜಕಾರಣಿ. ಈ ಹಿಂದೆ ಮಂತ್ರಿಯಾಗಿದ್ದವರು. ಒಂದು ಕಾಲದಲ್ಲಿ ದಲಿತ

>>>13

ದಾವಣಗೆರೆ ಜಿಲ್ಲೆ: ಮತ್ತೆ ಕಾಂಗ್ರೆಸ್ ತೆಕ್ಕೆಗ



ಶಾಮಣ್ಣ | ಎಂ.ಪಿ.ರವೀಂದ್ರ | ಮಲ್ಲಿಕಾರ್ಜುನ | ವಡ್ನಾಳ್ ರಾಜಣ್ಣ | ಶಿವಮೂರ್ತಿ ನಾಯ್ಕ | ಶಾಂತನಗೌಡ | ರಾಜೇಶ್ ಎಚ್.ಸಿ. | ಎಚ್.ಎಸ್.ಶಿವಶಂಕ

ದಾವಣಗೆರೆ ಜಿಲ್ಲಾ ರಾಜಕಾರಣದ ದಿಕ್ಕು ಬದಲಾಗಿದೆ. ಐದು ವರ್ಷಗಳಿಂದ ಜಿಲ್ಲಾ ರಾಜಕಾರಣವನ್ನು ಕಪಿಮುಷ್ಟಿಯಲ್ಲಿಟ್ಟುಕೊಂಡೇ ಅಧಿಕಾರದ ಚದುರಂಗದಾಟ ಆಡಿದ ಬಿಜೆಪಿ ಈಗ ತರಗೆಲೆಯಂತೆ ನೆಲಕಚ್ಚಿದೆ. ಅಪರೂಪಕ್ಕೆ ಸಿಕ್ಕ ಜನಾದೇಶವನ್ನೇ ಬ್ರಹ್ಮಲಿಖಿತವೆಂದೇ ಭ್ರಮಿಸಿ ಆಡಳಿತದ ಉರುವಣಿಗೆ ಉರಿದ ಬಿಜೆಪಿ ನಾಯಕರು, ಶಾಸಕರು, ಮಂತ್ರಿಗಳು ಅಖಂಡ ಭ್ರಷ್ಟಾಚಾರದ ಶನಿಸಂತಾನದ ಪರಂಪರೆಯನ್ನೇ ಹುಟ್ಟುಹಾಕುವ ಮೂಲಕ ಮತದಾರನ ಸಿಟ್ಟಿಗೆ ಗುರಿಯಾದರು. 2008ರ ವಿಜಯವನ್ನು ದಿಗ್ವಿಜಯ ಎಂದು ಸ್ವಯಂಘೋಷಿಸಿದ ರವೀಂದ್ರನಾಥ ನಂತಹ ದುರಹಂಕಾರಿಗಳಿಗೆ 2013 ರ ಚುನಾವಣೆಯಲ್ಲಿ ಮತದಾರ ಸರಿಯಾದ ಪಾಠ ಕಲಿಸಿದ್ದಾನೆ.

ದಾವಣಗೆರೆ ಜಿಲ್ಲೆಯ ಎಂಟು ವಿಧಾನ ಸಭಾಕ್ಷೇತ್ರಗಳಲ್ಲಿ ಏಳು ಕ್ಷೇತ್ರ ಮತ್ತು ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ಬಿಜೆಪಿ ಆಡಳಿತ ನಡೆಸಿದ ರೀತಿಗೆ ಮತದಾರ ರೋಸಿ ಹೋಗಿದ್ದ. ಸ್ವಜನಪಕ್ಷಪಾತ, ಭ್ರಷ್ಟಾಚಾರ, ಕೋಮು ವಾದವೇ ಉಸಿರಾಗಿಸಿಕೊಂಡಿದ್ದ ಬಿಜೆಪಿ ಎಂಬ ನಕಲಿ ದೇಶಭಕ್ತರಿಗೆ ಮತದಾರ ಛೀಮಾರಿ ಹಾಕಿದ. ಬಿಜೆಪಿಯ ದಿಗ್ಗಜರೆನಿಸಿ ಕೊಂಡವರೆಲ್ಲ ಈಗ ದಿಕ್ಕುತೋಚದವರಂತೆ ಕಂಗಾಲಾಗಿ ಹೋಗಿದ್ದಾರೆ. ರವೀಂದ್ರನಾಥನಂಥ ದುರಹಂಕಾರಿಗೆ ಈ ಚುನಾವಣೆ ಎಚ್ಚರಿಕೆ ಗಂಟೆ ಬಾರಿಸಿದೆ.

ಹಾಗೆ ನೋಡಿದರೆ ಈ ಚುನಾವಣೆ ಬಿಜೆಪಿಗೆ ದಾವಣಗೆರೆ ಜಿಲ್ಲಾದ್ಯಂತ ಕಾಯಂ ಆದ ನೆಲೆಯಿಲ್ಲ ಎಂಬುದನ್ನು ಸಾಬೀತುಪಡಿಸಿದೆ. ಯಾಕೆಂದರೆ ಕಾಂಗ್ರೆಸ್ ಗೆದ್ದಿದೆಯಲ್ಲದೆ ಬಿಜೆಪಿ ಮೂರನೆ ಸ್ಥಾನಕ್ಕೆ ನೂಕಲ್ಪಟ್ಟಿದೆ. ಅಷ್ಟೇಅಲ್ಲ, ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನ ಕೆಜೆಪಿಯಂತೂ ಬೆರಳೆಣಿಕೆಯ ಮತಗಳನ್ನು ಪಡೆಯುವ ಮೂಲಕ ಇಲ್ಲಿ ನೆಲಕಚ್ಚಿದೆ.

ದಾವಣಗೆರೆ ಉತ್ತರ: ಮೆಲ್ಲಗೆ ಗೆಲುವು

ತರಕಾರಿ ಮಂತ್ರಿ ರವೀಂದ್ರನಾಥನೆದುರು ಮಲ್ಲಿಕಾರ್ಜುನ 57,137 ಮತಗಳ ಅಂತರದಿಂದ ವಿಜಯ ಸಾಧಿಸಿದ್ದಾರೆ. ಇಲ್ಲಿ ಕೆಜೆಪಿ ಅಭ್ಯರ್ಥಿ ಜಗದೀಶನಿಗೆ ಬಿದ್ದ ಮತಗಳು ಮೂರಂಕಿಯನ್ನೂ ದಾಟದಿದ್ದದ್ದು ಯಡ್ಡಿಗಾದ ಬಹುದೊಡ್ಡ ಅವಮಾನ.

ದಾವಣಗೆರೆ ದಕ್ಷಿಣ: ಶಾಮನೂರರ ಹಿಂದೆ ಅಲ್ಪಸಂಖ್ಯಾತರು

ದಾವಣಗೆರೆ ದಕ್ಷಿಣದಲ್ಲಿ ಶಾಮನೂರು ಶಿವಶಂಕರಪ್ಪ ಮತ್ತು ಜೆಡಿಎಸ್‌ನ ಸೈಯದ್ ಸೈಫುಲ್ಲಾ ನಡುವೆ ಪೈಪೋಟಿ ಇತ್ತು. ಕಾಂಗ್ರೆಸ್‌ನಿಂದ ಟಿಕೆಟು ಸಿಗದೆ ಹತಾಶರಾದ ಸೈಫುಲ್ಲಾ ಜೆಡಿಎಸ್‌ಗೆ ವಲಸೆ ಹೋಗಿ ತಮ್ಮ ಮುಸ್ಲಿಂ ಸಮುದಾಯದ 59,000 ಮತಗಳನ್ನೇ ನಂಬಿದ್ದರು. ತಾವು ಚುನಾವಣಾ ಕಣದಲ್ಲಿರುವುದರಿಂದ ತಮ್ಮ ಮುಸ್ಲಿಂ ಸಮುದಾಯದವರು ಕಾಂಗ್ರೆಸ್ ವಿರುದ್ಧ ತಿರುಗಿಬೀಳುತ್ತಾರೆಂಬ ಭ್ರಮೆಯಲ್ಲಿ ಸೈಫುಲ್ಲಾ ಇದ್ದರು. ಆದರೆ ಚುನಾವಣೆಯ ಫಲಿತಾಂಶ ಸೈಫುಲ್ಲಾರನ್ನೇ ದಂಗುಬಡಿಸಿದೆ. ಈತ ಕೊನೆಗೂ ಗಳಿಸಿದ ಮತಗಳು ಕೇವಲ 26,162 ಮಾತ್ರವಾಗಿದೆ. ಅಂದರೆ ಮುಸ್ಲಿಮ್ ಸಮುದಾಯ ಸುಮಾರುನ್ 43,000 ಮತದಾರರು ಕಾಂಗ್ರೆಸ್‌ನ ಶಾಮನೂರರ ಕೈಹಿಡಿದು ಗೆಲ್ಲಿಸಿದ್ದಾರೆ ಎಂದಾಯಿತು. ಈ ಕ್ಷೇತ್ರದಿಂದ ಬಿಜೆಪಿಯ ಲೋಕೇಶಿ ಗೆದ್ದು ಸೋತವರ ಯಾದಿಯಲ್ಲಿ ಕೊನೆಯಲ್ಲಿ ವಿಶ್ರಾಂತಿ ಪಡೆಯುವಂತಾಗಿದೆ.

ಹೊನ್ನಾಳಿ: ನರ್ಸ್ ರೇಣುಕನಿಗೆ ಚಿಕಿತ್ಸೆ

ಹೊನ್ನಾಳಿ ವಿಧಾನಸಭಾ ಮತಕ್ಷೇತ್ರದಿಂದ ಅಚ್ಚರಿಯ ಫಲಿತಾಂಶ ಬಂದಿದೆ. ಚುನಾವಣೆಗೆ ಮುನ್ನಾ 'ರೇಣುಕಾಚಾರ್ಯನನ್ನು ಮಣಿಸಲು ಯಾರಿಂದ ಸಾಧ್ಯ?' ಎಂಬ ಪ್ರಶ್ನೆ ಜಿಲ್ಲಾದ್ಯಂತ ಹರಿದಾಡಿತ್ತು. ರೇಣುಕನೆದುರು ಕಾಂಗ್ರೆಸ್‌ನ ಅಭ್ಯರ್ಥಿ ಸೌಮ್ಯ ಸ್ವಭಾವದ ಶಾಂತನಗೌಡರು ವೀಕಾಗಿ ಕಾಣಿಸುತ್ತಿದ್ದರು. ಜೊತೆಗೆ ದುಡ್ಡು ಕಾಸಿನ ವಿಷಯದಲ್ಲಿ ರೇಣುಕನೇ ಮೇಲುಗೈ ಸಾಧಿಸಿದ್ದ. ಆದರೆ ರೇಣುಕಾಚಾರ್ಯನ ದುರಾಡಳಿದತ ಬಗ್ಗೆ ಜನರಲ್ಲಿ ಎಷ್ಟು ರೇಜಿಗೆ ಇತ್ತೆಂದರೆ ಅದೆಲ್ಲ ಶಾಂತನ ಗೌಡರಿಗೆ ಪ್ಲಸ್ ಪಾಯಿಂಟ್ ಆಯಿತು. ಚುನಾವಣೆ ಮತ್ತು ಅದಕ್ಕೂ ಮುನ್ನ ರೇಣುಕ ಹಂಚಿದ ಸೀರೆ, ನತ್ತು, ಹೆಂಡ, ದುಡ್ಡುಗಳೆಲ್ಲವನ್ನು ಮತದಾರ ಮೀರಿ ಗೌಡರ ಕೈಹಿಡಿದಿದ್ದಾನೆ. ಒಂದು ರೀತಿಯಲ್ಲಿ ಇದು ರೇಣುಕನೇ ತಂದುಕೊಂಡ ಸೋಲು. ಮಂತ್ರಿಗಿರಿಯ ಧಿಮಾಕು, ವರ್ತನೆ, ಆತನ ಸಹೋದರರ ಉಪಟಳಗಳೇ ಅವನ ಸೋಲಿಗೆ ಕಾರಣವಾಗಿವೆ.

ಚನ್ನಗಿರಿ: ಇಬ್ಬರ ಜಗಳದಲ್ಲಿ 3ನೆಯವನಿಗೆ ಲಾಭ ಇಲ್ಲ

ಚನ್ನಗಿರಿಯಲ್ಲಿ ಮಾಡಾಳು ವಿರೂಪಾಕ್ಷಪ್ಪ ಮಣ್ಣುಮುಕ್ಕಿದ್ದಾರೆ. ಐದು ವರ್ಷಗಳಿಂದ ಕ್ಷೇತ್ರದ ತುಂಬಾ ತನ್ನ ಮಕ್ಕಳನ್ನು ಅಂಡಲೆಯಲು ಬಿಟ್ಟು ಮತದಾರನ ಸಿಟ್ಟಿಗೆ ಗುರಿಯಾಗಿದ್ದಾರೆ. ಜಾತಿರಾಜಕಾರಣ, ಕಳಪೆ ಕಾಮಗಾರಿ, ಮಕ್ಕಳ ಉಪಟಳ, ಹಿಂಬಾಲಕರ ವರ್ತನೆ ಎಲ್ಲವೂ ಇಲ್ಲಿನ ಮತದಾರರಲ್ಲಿ ಅಸಹ್ಯ ಹುಟ್ಟಿಸಿದ್ದವು. "ನನ್ನ ಅಧಿಕಾರದ ಅವಧಿಯಲ್ಲಿ ಕ್ಷೇತ್ರಕ್ಕೆ ಸಾವಿರಾರು ಕೋಟಿ ರೂಪಾಯಿಗಳು ಹರಿದುಬಂದಿದೆ" ಎಂದು ವಿರೂಪಾಕ್ಷಪ್ಪ ಪದೇಪದೇ ಹೇಳುತ್ತಿದ್ದರೂ ಕ್ಷೇತ್ರ ಮಾತ್ರ ಉದ್ಧಾರವಾಗಲೇ ಇಲ್ಲ, ಬದಲಾಗಿ ಅವರ ಮಕ್ಕಳು ಉದ್ಧಾರವಾದರು.

ಬಿಜೆಪಿಯಲ್ಲಿ ಜಾತಿ ಜಾಸ್ತಿ ಎಂದು ತನ್ನ ಸ್ವಜಾತಿಯ ಯಡಿಯೂರಪ್ಪನ ಹಿಂದೆ ಹೋದ ವಿರೂಪಾಕ್ಷಪ್ಪರಿಗೆ ಮತದಾರ ಮನೆಯ ದಾರಿ ತೋರಿಸಿದ್ದಾನೆ. ವಿರೂಪಾಕ್ಷಪ್ಪನವರ ವಿರುದ್ಧ ಸ್ಪರ್ಧಿಸಿದ್ದ ಕಾಂಗ್ರೆಸ್‌ನ ವಡ್ನಾಳು ರಾಜಣ್ಣ ಕಣಕ್ಕಿಳಿದರು. ಇವರಿಬ್ಬರೂ ಒಂದೇ ಕೋಮಿನವರಾಗಿದ್ದರಿಂದ ಯಾರು ಗೆಲ್ಲುತ್ತಾರೆ ಎಂಬ ಹಗ್ಗಜಗ್ಗಾಟವಿತ್ತು. ಇವರಿಬ್ಬರ ನಡುವೆ ಜೆಡಿಎಸ್‌ನ ಹೊದಿಗೆರೆ ರಮೇಶ ಗೆಲ್ಲುವ ಸೂಚನೆಗಳಿದ್ದವು. ಆದರೆ ಅಂತಿಮವಾಗಿ ವಿರೂಪಾಕ್ಷಪ್ಪನವರನ್ನು ಮನೆಗೆ ಕಳುಹಿಸಲು ನಿರ್ಧರಿಸಿದ ಮತದಾರ ಕಾಂಗ್ರೆಸ್‌ನ ಕೈಹಿಡಿದರು.

ಹರಿಹರ: ಸಜ್ಜನನಿಗೆ ಗೆಲುವು

ಹರಿಹರದಲ್ಲಿ ಜೆಡಿಎಸ್‌ನ ಶಿವಶಂಕರ ವಿಜಯ ಸಾಧಿಸಿದ್ದಾರೆ. ಬಿಜೆಪಿಯ ಶಾಸಕ ಹರೀಶ್ ಈ ಕ್ಷೇತ್ರಕ್ಕೆ ಕಡಿದು ಹಾಕಿದ್ದು ಅಷ್ಟರಲ್ಲೆ ಇದೆ. ಬಿಜೆಪಿಗೆ ಬಾಯ್ ಹೇಳಿ ಕೆಜೆಪಿ ಸೇರಿ ಚುನಾವಣೆಗೆ ನಿಂತಿದ್ದ ಹರೀಶ್ ನಾಮಪತ್ರ ಸಲ್ಲಿಸಿದ ದಿನವೇ ಅವನ ಸೋಲು ಖಚಿತವಾಗಿತ್ತು. ಹರೀಶನ ರಾಜಕೀಯ ನಡೆ ಮತ್ತು ಆತನ ಮರಳು ಮಾಫಿಯಾಗಳೇ ಅವನ ಸೋಲಿಗೆ ಮೂಲವಾದವು. ಜೊತೆಗೆ ಹರೀಶನ ವಿರುದ್ಧ ಬಿಜೆಪಿ ಕಾರ್ಯಕರ್ತ ಕೆಲಸ ಮಾಡಿದರು.

ಜೆಡಿಎಸ್‌ನ ಶಿವಶಂಕರ ಹರಿಹರ ಮತಕ್ಷೇತ್ರ ಮತದಾರನ ನಡುವಿದ್ದವರು. ಇವರ ತಂದೆ ಮಾಜಿ ಮ ಶಿವಪ್ಪನವರ ರಾಜಕಾರಣದ ವರಸೆ ಶಿವಶಂಕರನಿಗೆ ಲ ತಂದಿದೆ. ಕಾಂಗ್ರೆಸ್ ಅಭ್ಯರ್ಥಿ ರಾಮಪ್ಪನವರ ಪರ ಮಾಜಿ ಮಂತ್ರಿ ಡಾ.ವೈ.ನಾಗಪ್ಪ ಪ್ರಚಾರ ಮಾಡಲ ಅವರ ಹಿಂಬಾಲಕರೂ ರಾಮಪ್ಪನವರ ಗೆಲು ಸಹಕರಿಸಲಿಲ್ಲ. ಇಲ್ಲಿ ಹರೀಶನ ಚಂಗೂಲಿ ರಾಜಕಾ ಮತ್ತು ರಾಮಪ್ಪನವರು ಕುರುಬ ಸಮುದಾಯದವರಾದ ಕುರುಬ ಮತಗಳು ಶಿವಶಂಕರರ ಕೈಹಿಡಿದು ಜೆಡಿ ಅಭ್ಯರ್ಥಿಯನ್ನು ಗೆಲ್ಲಿಸಿವೆ.

ಹರಪ್ಪನಹಳ್ಳಿ: ಕರುಣಾಕರನಿಗೆ ಪಾಠ

ಹರಪ್ಪನಹಳ್ಳಿಯಿಂದ ಕಾಂಗ್ರೆಸ್‌ನ ಎಂ.ಪಿ.ರವೀ ಗೆದ್ದು ಬಂದಿದ್ದಾರೆ. ದಿವಂಗತ ಎಂ.ಪಿ.ಪ್ರಕಾಶರ ರಾಜಕೀ ವರ್ಚಸ್ಸು ಮತ್ತು 2008ರ ಚುನಾವಣೆಯಲ್ಲಿ ಇ ಕ್ಷೇತ್ರದ ಮತದಾರರು ಪ್ರಕಾಶರನ್ನು ಸೋಲಿಸಿದ್ದರ ಪಶ್ಚಾತ ರವೀಂದ್ರನ ಗೆಲುವಿಗೆ ವರ್ಕೌಟಾಗಿವೆ. ಬಿಜೆಪಿ ಮ ಮತ್ತು ಗಣಿ ಕಳ್ಳ ಜನಾರ್ದನ ರೆಡ್ಡಿಯ ಅಣ್ಣ ಕರುಣಾ ರೆಡ್ಡಿಯೆದುರು ರವೀಂದ್ರ ವೀಕ್ ಕ್ಯಾಂಡಿಡೇಟ್ ಆಗಿದ್ದ ಮತದಾರ ಕರುಣಾಕರನನ್ನು ಸೋಲಿಸಿ ರವೀಂದ್ರ ಗೆಲ್ಲಿಸಿದ್ದಾರೆ.

ಕರುಣಾಕರ ಮಂತ್ರಿಯಾದ ನಂತರ ಹರಪ್ಪನ ಕ್ಷೇತ್ರದ ನೂರಾರು ಸಮಸ್ಯೆಗಳು ಬಗೆಹರಿಯಬಹು ಎಂದು ಆಶಿಸಿದ್ದ ಜನರಿಗೆ ನಿರಾಶೆಯಾಗಿತ್ತು. ಕರುಣಾಕರ ಕಳೆದ ಬಾರಿ ಇಲ್ಲಿಂದ ಗೆದ್ದ ಮೇಲೆ ಕ್ಷೇತ್ರದ ಕಡೆ ಮ ಹಾಕಿರಲಿಲ್ಲ. ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗ ಮಾಯವಾಗಿದ್ದವು. ಹಾಗಾಗಿ ಕರುಣಾಕರನನ್ನು ಮತದಾ ಕರುಣಾಜನಕ ಸ್ಥಿತಿಗೆ ತಂದು ನಿಲ್ಲಿಸಿದ್ದಾರೆ.

ಇನ್ನು ಯಡ್ಡಿ ಇಲ್ಲಿರುವ ಪಂಚಮ ಸಾಲಿ ಲಿಂಗಾ ಮತದಾರರ ಲೆಕ್ಕ ಹಾಕಿ ಇಲ್ಲಿ ಕೆಜೆಪಿಯಿ ಕೋಟ್ರೇಶಿಯನ್ನು ಕಣಕ್ಕಿಳಿಸಿದ್ದರು. ಆದರೆ ಅದು ವರ್ಕೌ ಆಗಲಿಲ್ಲ. ಈ ಬಾರಿ ಪಂಚಮಸಾಲಿ ಲಿಂಗಾಯತ


ಹಾವೇರಿ: ಕೈ ಹೊಡೆತಕ್ಕೆ ಯಡ್ಡಿಯ ತೆಂಗಿನಕಾಯಿ ಹುಳುಕಾಯಿತ

ಹಾವೇರಿಯಲ್ಲಿ ಕೆಜೆಪಿಯ ಅದ್ದೂರಿ ಸಮಾವೇಶ ಮಾಡುವ ಮೂಲಕ ಜಿಲ್ಲೆಯ ಆರೂ ವಿಧಾನಸಭೆ ಕ್ಷೇತ್ರಗಳನ್ನು ಗೆದ್ದು ಬಿಟ್ಟಂತೆ ಅರಚಾಡಿದ್ದ ತೆಂಗಿನಕಾಯಿ ಯಡಿಯೂರಪ್ಪನ ಆಟ ಇಲ್ಲಿ ಉಲ್ಟಾ ಆಗಿದೆ. ಬಿಜೆಪಿಗೆ ರಾಜೀನಾಮೆ ಬಿಸಾಕಿ ಹಾವೇರಿ ಜಿಲ್ಲೆ - ಅದರಲ್ಲೂ ಹಾನಗಲ್ ಕ್ಷೇತ್ರವನ್ನು - ತಾನು ಖರೀದಿಸಿದ ಸ್ವಂತ ಆಸ್ತಿ ಎಂಬಂತೆ ಬೀಗುತ್ತಿದ್ದ ಮಾಜಿ ಮಂತ್ರಿ ಮುದಿ ಸಿ.ಎಂ.ಉದಾಸಿ ಲಾಗ ಹೊಡೆದಿದ್ದಾನೆ. ಆರರಲ್ಲಿ ನಾಲ್ಕು ಸ್ಥಾನದಲ್ಲಿ ಕೈ ತನ್ನ ಕರಾಮತ್ತು ತೋರಿಸುವ ಮೂಲಕ ಪ್ರಾಬಲ್ಯ ಮೆರೆದಿದೆ.

ಬಿಜೆಪಿ ಅನ್ನುವುದಕ್ಕಿಂತ ತನ್ನ ಸ್ವಂತ ಬಲದಲ್ಲಿ ಗೆದ್ದು ಬಂದಿರುವ ಬಸವರಾಜ ಬೊಮ್ಮಾಯಿ ಶಿಗ್ಗಾಂವಿಯಲ್ಲಿ ಕಾಂಗ್ರೆಸ್ ಖೇಲ್ ಖತಂ ಮಾಡಿದ್ದಾರೆ. ಯಡ್ಡಿಯ ತೆಂಗಿನಕಾಯಿಗೆ ಫಲ ದೊರೆತಿದ್ದು ಹಿರೆಕೆರೂರಿನಲ್ಲಿ ಮಾತ್ರ. ಅದೂ ಕಾಂಗ್ರೆಸಿನ ನಟಭಯಂಕರ ಬಿ.ಸಿ.ಪಾಟೀಲನ ಖಳನಾಯಕ ಪಾತ್ರದಿಂದ ರೋಸಿಹೋಗಿದ್ದ ಜನ ಅನಿವಾರ್ಯವಾಗಿ ಕೆಜೆಪಿಯ ಯು.ಬಿ.ಬಣಕಾರನನ್ನು ಗೆಲ್ಲಿಸಿದ್ದಾರೆ.

ಹಾವೇರಿ ಜಿಲ್ಲೆ ಮೊದಲಿನಿಂದಲೂ ಕಾಂಗ್ರೆಸ್ ಪ್ರಾಬಲ್ಯವನ್ನು ಹೊಂದಿದ ಜಿಲ್ಲೆಯಾಗಿತ್ತು. ಆದರೆ ಕಳೆದ ಹತ್ತು ವರ್ಷಗಳಿಂದೀಚೆಗೆ ಪಕ್ಷಾಂತರದ ಪ್ರಭಾವ ಹಾಗೂ ಜಿಲ್ಲೆಯ ಕಾಂಗ್ರೆಸ್ ಮುಖಂಡರ ನಿರ್ಲಕ್ಷ್ಯ ರಾಜಕಾರಣದಿಂದ ರೋಸಿ ಹೋಗಿದ್ದ ಜನತೆ ಅನಿವಾರ್ಯವಾಗಿ ಬಿಜೆಪಿಯತ್ತ ವಾಲುವಂತಾಗಿತ್ತು. ಬಿಜೆಪಿಯಲ್ಲಿದ್ದವರೂ ಕೂಡ ಯಾರೊಬ್ಬರೂ ಮೂಲ ಬಿಜೆಪಿಗರಾಗಿರಲಿಲ್ಲ. ಹಿಂದಿನ ಎರಡು ಅವಧಿಯಲ್ಲಿ ಗೆದ್ದು ಬಂದು ಇಡೀ ಜಿಲ್ಲೆಯನ್ನು ಹರಿದು ಮುಕ್ಕಿದ, ಅಧಿಕಾರಕ್ಕಾಗಿ ಚಡ್ಡಿ ತೊಟ್ಟ ರಾಣೆಬೆನ್ನೂರಿನ ಜಿ.ಶಿವಣ್ಣ, ಹಾವೇರಿಯ ನೆಹರೂ ಓಲೇಕಾರ, ಬ್ಯಾಡಗಿಯ ಸುರೇಶಗೌಡ ಪಾಟೀಲ ಹಾಗೂ ಈಗಿನ ಶಿವರಾಜ ಸಜ್ಜನರಂತಹ ನಾಲ್ಕೂ ಜನ ಉದಾಸಿಯ ಹಿಂಬಾಲಕರು ಈಗ ತಮ್ಮ ರಾಜಕೀಯ ಗುರುವಿನೊಂದಿಗೆ ಸಮಾಧಿಯಾಗಿದ್ದಾರೆ ಎಂಬುದೂ ಚುನಾವಣೆಯ ಫಲಿತಾಂಶದಿಂದ ಸ್ಪಷ್ಟವಾಗಿದೆ.

ಐದು ವರ್ಷಗಳ ಹಿಂದೆ ಅಧಿಕಾರಕ್ಕೆ ಬಂದು ಒಂದೇ ತಿಂಗಳಲ್ಲಿ ಬೀಜ-ಗೊಬ್ಬರ ಕೇಳಿದ ರೈತರ ಮೇಲೆ



ಬಿ.ಶಿವಣ್ಣನವರ್ | ಕೆ.ಬಿ.ಕೋಳಿವಾಡ | ಮನೋಹರ್ ತಹಶೀಲ್ದಾರ್ | ಆರ್.ಲಮಾನಿ | ಯು.ಬಿ.ಬಣಕಾರ್ | ಬಸುಬೊಮ್ಮಾಯಿ

ಗೋಲಿಬಾರ್ ಮಾಡಿಸಿ ಅನ್ನದಾತನ ಹೆಣದ ಮೇಲೆ ಅಧಿಕಾರ ನಡೆಸಿದ ಉದಾಸಿ ಮತ್ತವನ ಹಿಂಬಾಲಕ ಶಾಸಕರಿಗೆ ಈ ಬಾರಿ ಅಮಾಯಕರಾಗಿ ಪ್ರಾಣಬಿಟ್ಟ ಹುತಾತ್ಮ ರೈತರ ಶಾಪ ತಟ್ಟಿದ್ದಂತೂ ನಿಜ. ಕಬ್ಬು ಬೆಳೆದು ಕಾರ್ಖಾನೆಗೆ ಮಾರಲಾಗದೆ ಹೊಲದಲ್ಲೆ ಬೆಳೆಯನ್ನ ಸುಟ್ಟು ಹಾಕುವಂತಹ ಸ್ಥಿತಿಯನ್ನು ತಂದಿದ್ದ ಚೆಡ್ಡಿಗಳು ಜಿಲ್ಲೆಯ ಏಕೈಕ ಸಕ್ಕರೆ ಕಾರ್ಖಾನೆ ಸಂಗೂರ ಶುಗರ್ಸನ್ನು ಸಂಪೂರ್ಣ ದಿವಾಳಿಗೆ ದೂಡಿ, ಅದನ್ನು ಖಾಸಗಿಯವರಿಗೆ ಗುತ್ತಿಗೆ ಆಧಾರದ ಮೇಲೆ ಕೊಟ್ಟು, ಅದರಲ್ಲೂ ಪರ್ಸೆಂಟೇಜ್ ತಿಂದಿದ್ದ ಈ ಖದೀಮರು ಅಲ್ಲಿಯ ಕಾರ್ಮಿಕರ ಸಾವಿಗೂ ಕಾರಣರಾಗಿದ್ದರು. ಇಷ್ಟೆಲ್ಲ ಕರ್ಮ ಮಾಡಿದ ಕ್ರೂರಿಗಳನ್ನು ಬೆನ್ನಿಗಿಟ್ಟುಕೊಂಡಿದ್ದರೂ ಗೆದ್ದೇಗೆಲ್ಲುತ್ತೇನೆ ಎಂದು ಬೀಗುತ್ತಿದ್ದ ಯಡ್ಡಿಗೆ ತಕ್ಕ ಉತ್ತರ ಇಲ್ಲಿಂದ ಸಿಕ್ಕಿದೆ.

ಹಾನಗಲ್ಲ- ಉದಾಸಿ ಉರದಾಟಕ್ಕೆ ಸೋಲು

ಊರಿಗೆ ಒಬ್ಬನೆ ಗೌಡ ಎಂಬಂತೆ ಒದರಾಡಾಡುತ್ತಿದ್ದ ಮಾಜಿ ಮಂತ್ರಿ ಸಿ.ಎಂ.ಉದಾಸಿಯನ್ನು ಹಾನಗಲ್ಲ ಜನ ಅಕ್ಷರಶಃ ಮೂಲೆಗುಂಪಾಗಿಸಿದ್ದಾರೆ. "ಇದು ನನ್ನ ರಾಜಕೀಯದ ಕೊನೆ ಚುನಾವಣೆ" ಎನ್ನುತ್ತಲೇ ಹಿಂದಿನ ಅವಧಿಯಲ್ಲಿ ಗೆದ್ದು ಬಂದಿದ್ದ ಈತ, ಈ ಬಾರಿಯೂ ಅದೇ ಡೈಲಾಗ್ ಹೊಡೆದು ಗೆಲ್ಲುವ ಕನಸು ಕಂಡಿದ್ದ. ಈ ಹಿಂದೆ ಇಲ್ಲಿಯ ಜನ ಒಂದು ಬಾರಿ ಕಾಂಗ್ರೆಸ್ಸಿನ ಮನೋಹರ ತಹಶೀಲ್ದಾರನಿಗೆ, ಇನ್ನೊಂದು ಬಾರಿ ಉದಾಸಿಗೆ ಅಧಿಕಾರ ಕೊಟ್ಟು ನೋಡಿದ್ದರು. ಆದರೆ ಕಳೆದ ಎರಡು ಚುನಾವಣೆಗಳಲ್ಲಿ ಉದಾಸಿ ಸತತವಾಗಿ ಆಯ್ಕೆ ಆಗಿದ್ದೊಂದೇ ಆತನ ಸಾಧನೆಯಾಗಿತ್ತು. ಎರಡೂ ಅವಧಿಯಲ್ಲೂ ಮಂತ್ರಿಯಾಗಿದ್ದುಕೊಂಡು ಕ್ಷೇತ್ರದ ಅಭಿವೃದ್ಧಿ ಮಾಡಿದ್ದ ತನ್ನ ಆಸ್ತಿಯನ್ನು ಮಾತ್ರ ಕೋಟಿ ಲೆಕ್ಕದಲ್ಲಿ ಹೆಚ್ಚಿಸಿಕೊಂಡ ಈತನ ಇನ್ನೊಂದು ಸಾಧನೆ.

ಉದಾಸಿ ಮಗ ಸಂಸದ ಶಿವಕುಮಾರ ಉದಾಸಿ ಪುಂಡಾಟಿಕೆಯಿಂದ ರೋಸಿಹೋಗಿದ್ದ ಜನ ಈ ಬ ಕಾಂಗ್ರೆಸಿನಿಂದ ಯಾರೇ ನಿಂತರೂ ಗೆಲ್ಲಿಸುವ ತೀರ್ಮಾ ಬಂದಿದ್ದರು. ಅದರಂತೆ ಕಾಂಗ್ರೆಸ್ಸಿನ ಮನೋಹರ ತಹಶೀ ಉದಾಸಿಯನ್ನು ಇಲ್ಲಿ ಅಕ್ಷರಶಃ ಮಣ್ಣು ಮುಕ್ಕಿಸಿದಾ

ಉದಾಸಿಯಿಂದಾಗಿ ಕ್ಷೇತ್ರದಲ್ಲಿ ಉಸಿರು ಕಳೆದುಕೊ ಕಾಂಗ್ರೆಸ್ ಪಕ್ಷವನ್ನು ಮತ್ತೆ ಬೇರುಮಟ್ಟದಿಂದ ಸಂಘಟ ಬಿ.ಕೆ.ಮೋಹನಕುಮಾರ್. ಆದರೆ ಅವರಿಗೆ ಟಿಕೆಟ್ ಬಂಡಾಯ ಕಾಂಗ್ರೆಸ್ ಅಭ್ಯರ್ಥಿಯಾಗದೇ ಜೆಡಿಎಸ್ ಸ್ಪರ್ಧಿಸಿದರು. ಆಗಲೇ ಉದಾಸಿಯ ಸೋ ನಿಶ್ಚಿತಗೊಂಡಿತ್ತು. ಕಾಂಗ್ರೆಸ್‌ನ ಮೂಲ ಮತಗಳು ತ ಉದಾಸಿ ವಿರೋಧಿ ಮತಗಳು ಕಾಂಗ್ರೆಸ್ಸಿನ ಮನೋ ತಹಶೀಲ್ದಾರನನ್ನ ಗೆಲ್ಲಿಸಿವೆ. 5686 ಮತಗಳಿಂದ ಉ

ಗತ ಪ್ರಹಾರದ ಮೇಲಿನ ಸಿಟ್ಟು ಬದಿಗಿಟ್ಟು ರವೀಂದ್ರನ
ಡಿಸಿದ್ದಾರೆ.

ಮಾಯಕೊಂಡ: ಬಸವರಾಜ ನಾಯ್ಕನಿಗೆ ಶೋಚನೀಯ ಸೋಲು

ಮಾಯಕೊಂಡ ಮತಕ್ಷೇತ್ರದಲ್ಲಿ ಬಿಜೆಪಿ ಶಾಸಕ
ವರಾಜನಾಯ್ಕನ ಸೋಲು ಶೋಚನೀಯವಾಗಿದೆ.
ಾವಣೆಯಲ್ಲಿ ಸೋತವರ ಪಟ್ಟಿಯಲ್ಲಿ ಈತನ ಹೆಸರು
ನೆಯ ಸ್ಥಾನದಲ್ಲಿದೆ ಎಂಬುದೇ ಇದಕ್ಕೆ ಸಾಕ್ಷಿ. ಈತ
ಕನಾದ ನಂತರ ಮಾಡಿದ ಭಾನಗಡಿ, ಗಳಿಸಿದ ಬೇನಾಮಿ
ಅಷ್ಟಿಷ್ಟಲ್ಲ. ಹೀಗೆ ಈತ ಬಾಚಿದ ದುಡ್ಡೇ ಅವನ
ಲಿಗೆ ನೆರವಾದವು.

ಬಸವರಾಜನಾಯ್ಕ ವಿದುಸಿರು ಬಿಡುತ್ತಲೇ ಪ್ರಚಾರ
ಡಿದನಾದರೂ ಅವನು ಕಾಲಿಟ್ಟ ಕಡೆಯೆಲ್ಲ
ದಾರರು ಕೊರಳಪಟ್ಟಿ ಹಿಡಿದು "ನೀನು ಏನು ಕಿಸಿದು
ಹಾಕಿದೆ" ಎಂದು ಪ್ರಶ್ನಿಸುತ್ತಿದ್ದರು.

ಕಾಂಗ್ರೆಸ್‌ನ ಶಿವಮೂರ್ತಿನಾಯ್ಕ ಗೆಲುವು ಸಾಧಿಸಿದ್ದು
ಲ 694 ಮತಗಳ ಅಂತರದಲ್ಲಿ. ಕೆಜೆಪಿಯ ಅಭ್ಯರ್ಥಿ
ಟೇಷನ್ ಕುಳ ಪ್ರೊ.ಎನ್.ಲಿಂಗಪ್ಪ ವಿಜಯ ಸಾಧಿಸುವ
ೀಪಕ್ಕೆ ಬಂದನಾದರೂ ಮತದಾರರು ಅಂತಿಮವಾಗಿ
ನನ್ನು ಜಗ್ಗಿ ನಿಲ್ಲಿಸಿಬಿಟ್ಟರು. ಶಿವಮೂರ್ತಿಗೆ ಕಾಂಗ್ರೆಸ್‌ನ
ಡಾಯ ಅಭ್ಯರ್ಥಿ ರಾಮಪ್ಪ ತೊಡರುಗಾಲಾಕಿದ್ದರು.
ವಮೂರ್ತಿಯ ಮೇಲಿನ ಸಿಟ್ಟಿಗೆ ಸಿರಿಗೆರೆಯ
ದ್ದುರುಗಳು ರಾಮಪ್ಪನನ್ನು ಬೆಂಬಲಿಸಿದ್ದರು. ಆದರೂ
ಪ್ಪ ಸೋತದ್ದು ಅದನ್ನು ಮಠದ ಸೋಲು ಎಂದು
ತರ್ಕಿಸುತ್ತಿದ್ದಾರೆ.

ಜಗಳೂರು: ರಾಮಚಂದ್ರ ಪಕ್ಷ ಬದಲಾಯಿಸಿದ್ದೇ ಎಡವಟ್ಟಾಯಿತು

ಜಗಳೂರಿನಲ್ಲಿ ಬಿಜೆಪಿ ಶಾಸಕ ರಾಮಚಂದ್ರ ಸೋತಿದ್ದಾರೆ.
ಕಾಂಗ್ರೆಸ್‌ನ ಅಭ್ಯರ್ಥಿ ರಾಜೇಶನ ದುಡ್ಡು ವರ್ಕೌಟ್
ದೆ. ಜೈಲಿನಲ್ಲಿರುವ ಮಾವ ಮುತ್ತಯ್ಯನ ಹಣಬೆಗಂಟನ್ನು
ಕೇಶ್ ಜಗಳೂರಿನಲ್ಲಿ ಹರಿಸಿದ್ದ. ಶಾಸಕ ರಾಮಚಂದ್ರನ
ತ್ಸದ್ದಿತನವಾಗಲಿ, ಆತ ಮಾಡಿದ್ದ ಅಭಿವೃದ್ಧಿ
ಮಗಾರಿಗಳಾಗಲಿ ಕೆಲಸ ಮಾಡಲಿಲ್ಲ. ಜೊತೆಗೆ ಈ
ಮಚಂದ್ರ ಕಳೆದ ಐದು ವರ್ಷಗಳಲ್ಲಿ ಮೂರು ಪಕ್ಷಗಳನ್ನು
ದಲಾಯಿಸಿದ್ದೂ ಎಡವಟ್ಟಾಯಿತು.

ಒಟ್ಟಾರೆ ದಾವಣಗೆರೆ ಜಿಲ್ಲಾ ರಾಜಕಾರಣವೀಗ
ಂಗ್ರೆಸ್‌ಗೆ ಮುಕ್ತವಾಗಿದೆ. ಧಣಿ ಶಾಮನೂರು
ಶಂಕರಪ್ಪನವರು ಕಳೆದ ಬಾರಿ ಕಳೆದುಕೊಂಡಿದ್ದ
ಸಕೀಯ ಅಸ್ತಿತ್ವವನ್ನು ಮತ್ತೆ ಪಡಕೊಂಡಿದ್ದಾರೆ. ಏಳು
ಕಾಂಗ್ರೆ ಶಾಸಕರು ಗೆದ್ದಿದ್ದಾರೆ. ದಾವಣಗೆರೆ ಮಹಾನಗರ
ಲಿಕೆಯಲ್ಲಿ ಕಾಂಗ್ರೆಸ್‌ನದೇ ಅಧಿಪತ್ಯವಿದೆ.

ಇವೆಲ್ಲಾ ಇಟ್ಟುಕೊಂಡು ಶಾಮನೂರು, ಅವರ ಪುತ್ರ
ಲ್ಲಿಕಾರ್ಜುನ ಮತ್ತು ಇತರೆ ಕಾಂಗ್ರೆಸ್ ಅಭ್ಯರ್ಥಿಗಳು
ಲ್ಲೆಯ ಅಭಿವೃದ್ಧಿಗೆ ಆದ್ಯತೆ ನೀಡಿದರೆ ಮತದಾರ
ನ್ನಿಸಬಹುದು. ಇಲ್ಲಾ ಅಂದರೆ ಬಿಜೆಪಿಯವರಿಗಾದ
ಯೇ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಗ್ಯಾರಂಟಿ.

● ಟಿ.ಎನ್.ಷಣ್ಮುಖ

ಧಾರವಾಡ: ಚಿಗುರಿದ ಕೈ, ಮುದುಡಿದ ತಾವರೆ

ಬಿಜೆಪಿಗಳ ದುರಾಚಾರ, ಭ್ರಷ್ಟಾಚಾರಗಳಿಗೆ ತಕ್ಕ ಶಾಸ್ತಿಯೇ ಆಗಿದೆ. ಇಂತಹದ್ದೊಂದು ಫಲಿತಾಂಶ ಬರಲೇಬೇಕಿತ್ತು ಬಂದಿದೆ! ಆದರೆ ಸಿಎಂ ಗದ್ದುಗೆಯಲ್ಲಿದ್ದುಕೊಂಡು, ಮುಂದಿನ ಸಿಎಂ ಅಭ್ಯರ್ಥಿ ಎಂದೇ ಬಿಂಬಿತವಾಗಿದ್ದ ಜಗದೀಶ್ ಶೆಟ್ಟರ್‌ರ ತವರು ಜಿಲ್ಲೆ ಧಾರವಾಡದಲ್ಲಿ ಹೀನಾಯಸ್ಥಿತಿಗೆ ತಲುಪಿರುವುದು ಮಾತ್ರ ಬಿಜೆಪಿಗಾದ ಭರ್ಜರಿ ಮುಖಭಂಗವೇ ಸರಿ. ಒಟ್ಟು 7 ವಿಧಾನಸಭಾ ಕ್ಷೇತ್ರಗಳಲ್ಲಿ ನಾಲ್ಕರಲ್ಲಿ ಕೈ ಬಾವುಟ ಹಾರಾಡಿದ್ದರೆ ಒಂದು ಕ್ಷೇತ್ರ ಜೆಡಿಎಸ್ ಪಾಲಾಗಿದೆ. ಕೇವಲ ಎರಡರಲ್ಲಿ ಮಾತ್ರ ಗೆದ್ದಿರುವ ಬಿಜೆಪಿ, ಜಗದೀಶ್ ಶೆಟ್ಟರ್ ಗೆದ್ದಿರುವುದಕ್ಕೆ ನಿಟ್ಟುಸಿರು ಬಿಡಬೇಕಷ್ಟೆ. ಅಧಿಕಾರವನ್ನು ದುರುಪಯೋಗ ಮಾಡಿಕೊಂಡು ಹಣ ಆಮಿಷದ ಮೂಲಕ ಜನರನ್ನೂ 'ಮತ'ಭ್ರಷ್ಟರನ್ನಾಗಿಸಲು ಹವಣಿಸಿದ್ದವರಿಗೆಲ್ಲ ಈ ಬಾರಿ ಧಾರವಾಡದ ಮತದಾರರು ತಕ್ಕ ಪಾಠವನ್ನೇ ಕಲಿಸಿದ್ದಾರೆ. ಅಧಿಕಾರ ದುರುಪಯೋಗಪಡಿಸಿಕೊಂಡು ಅಲ್ಪಸಂಖ್ಯಾತರ ಹೆಸರುಗಳನ್ನೇ ಮತಪಟ್ಟಿಯಿಂದ ಕಿತ್ತೊಗೆಯುವ ನೀಚ ಕೆಲಸಕ್ಕೆ ಕೈಹಾಕಿದ್ದ ಬಿಜೆಪಿ ಜಿಲ್ಲೆಯಲ್ಲಿ ನೆಲಕಚ್ಚಿದ್ದರೆ, ಕೆಜೆಪಿ ಖಾತೆ ತೆರೆಯಲೂ ಸಾಧ್ಯವಾಗದೆ ಕನಲಿದೆ. ಅಂತೂ ಧಾರವಾಡ ಜಿಲ್ಲೆಯ ಕುರಿತಂತೆ ಪತ್ರಿಕೆಯ ಚುನಾವಣಾ ಪೂರ್ವ ಸಮೀಕ್ಷೆ ನಿಜವಾಗಿದೆ.


ಹುಬ್ಬಳ್ಳಿ-ಧಾರವಾಡ ಪೂರ್ವ ಮೀಸಲು ಕ್ಷೇತ್ರ

ಹುಬ್ಬಳ್ಳಿ-ಧಾರವಾಡ ಪೂರ್ವ ಮೀಸಲು ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವಿಗೆ ಕೈ ಪರ ಅಲೆಯಲ್ಲದೆ ಅಭ್ಯರ್ಥಿ ಪ್ರಸಾದ್ ಅಬ್ಬಯ್ಯನ ಸಜ್ಜನಿಕೆಯೂ ಕೌಂಟ್ ಆಗಿರುವುದು ಸತ್ಯ. ಬಿಜೆಪಿಯ ಹಾಲಿ ಶಾಸಕನಾಗಿದ್ದ ವೀರಭದ್ರಪ್ಪ ಹಾಲಹರವಿಗೆ ಸ್ವಂತ ಪಕ್ಷದವರೇ ಕೈಕೊಟ್ಟದ್ದು ಸೋಲಾಗಿ ಪರಿಣಮಿಸಿದೆ. ಬಿಜೆಪಿ ಕಾರ್ಪೊರೇಟರ್‌ಗಳು ಹಾಲಹರವಿಯ ಮೇಲಿದ್ದ ಮುನಿಸಿಗೆ ಅವನ ವಿರುದ್ಧವೇ ಕೆಲಸ ಮಾಡಿದ್ದರು. ಇನ್ನು ಕೆಜೆಪಿಯ ಬಿಜವಾಡ ಹಣದಿಂದಲೆ ಗೆದ್ದು ಬರುವ ಹುಂಬತನದಲ್ಲಿ ಮಣ್ಣುಮುಕ್ಕಿದ್ದಾನೆ. ಈತ ಕ್ಷೇತ್ರದ ತುಂಬ ಹಣದ ಹೊಳೆಯನ್ನೇ ಹರಿಸಿದ್ದ. ಜೊತೆಗೆ ಒಂದೆರಡು ಕಡೆ ರೌಡಿ ಪಟಾಲಂನೊಂದಿಗೆ ಜನರಿಗೆ ಧಮಕಿಯನ್ನೂ ಹಾಕಿದ್ದು ಈಗ ಅವನಿಗೆ ಮುಳುವಾಗಿದೆ. ಹೊರಗಿನ ಅಭ್ಯರ್ಥಿಯನ್ನು ತಂದು ಇಲ್ಲಿ ಕಣಕ್ಕಿಳಿಸಿದ್ದು ಜೆಡಿಎಸ್‌ಗೆ ಮುಳುವಾಯಿತು. ಜೆಡಿಎಸ್‌ನ ಹನುಮಂತಪ್ಪ ಅಲ್ಕೋಡ ಡಿಪಾಸಿಟ್ ಜಪ್ತಿ ಪರಿಸ್ಥಿತಿಗೆ ಬಂದು ತಲುಪಿರೋದೆ ಇದಕ್ಕೆ ಸಾಕ್ಷಿ.

ಅಷ್ಟಕ್ಕೂ ಕಾಂಗ್ರೆಸ್‌ನ ಪ್ರಸಾದ್ ಅಬ್ಬಯ್ಯನ ಗೆಲುವು ಅಷ್ಟು ಸುಲಭಕ್ಕೆ ದಕ್ಕಿದುದೇನಲ್ಲ. ಇಲ್ಲೂ ಸಹ ಆಂತರಿಕ ಕಚ್ಚಾಟಗಳು ಅವರ ಕಾಲೆಳೆಯಲು ಮುಂದಾಗಿದ್ದವು. ಪಕ್ಷದ ಅಭ್ಯರ್ಥಿಯ ಪರ ಕೆಲಸ ಮಾಡಬೇಕಿದ್ದ ನಗರ ಜಿಲ್ಲಾ ಕಾಂಗ್ರೆ ಅಧ್ಯಕ್ಷ ಮಾಜಿ ಸಚಿವ ಹಿಂಡಸಗೇರಿ ಜೊತೆಗೂಡಿದ ಜಕ್ಕಪ್ಪನವರ, ಆರೀಫಾ ಭದ್ರಾಪೂರ, ಕಾರ್ಪೊರೇಟರ್ ಬಶೀರ್ ಗೂಡಮಾಲ, ರಾಬಿಯಾ ಅವುಟೂರ ಮೊದಲಾದವರ ಟೀಮು ಒಳಗಿಂದೊಳಗೇ ಪ್ರಸಾದ್ ಅಬ್ಬಯ್ಯನ ಗೆಲುವಿಗೆ ಅಡ್ಡಿಯಾಗುವ ಸೂಚನೆ ನೀಡಿದ್ದರು. ಆದರೆ ಇಡೀ ರಾಜ್ಯದಲ್ಲಿ ಎದ್ದಿದ್ದ ಕಾಂಗ್ರೆಸ್ ಅಲೆ ಮತ್ತು ಸಜ್ಜನಿಕೆಯ ವೈಯಕ್ತಿಕ ವರ್ಚಸ್ಸಿನಿಂದಾಗಿ ಅಬ್ಬಯ್ಯ ಗೆಲುವಿನ ದಡ ಸೇರುವಲ್ಲಿ ಯಶಸ್ವಿಯಾಗಿದ್ದಾರೆ.

ಹುಬ್ಬಳ್ಳಿ ಧಾರವಾಡ ಕೇಂದ್ರ ಕ್ಷೇತ್ರ

ಹುಬ್ಬಳ್ಳಿ ಧಾರವಾಡ ಕೇಂದ್ರ ಕ್ಷೇತ್ರದಲ್ಲಿ ಜಗದೀಶ್ ಶೆಟ್ಟರ್ ನಿರೀಕ್ಷೆಯಂತೆ ಗೆದ್ದಿದ್ದಾರಾದರು ಆ ಗೆಲುವಿಗೆ ಅಂತಹ ಮಹತ್ವವೇನೂ ಇಲ್ಲ. ಯಾಕೆಂದರೆ ಶೆಟ್ಟರ್ ಯಾವತ್ತಿಗೂ ಚುನಾವಣೆಯನ್ನು ನೇರವಾಗಿ ಎದುರಿಸಿದ ಆಸಾಮಿಯೇ ಅಲ್ಲ. ಒಳಒಪ್ಪಂದವೇ ಅವರ ಗೆಲುವಿನ ಗುಟ್ಟು. ಈ ಬಾರಿಯೂ ಅದನ್ನು ಬಾಚೂತಪ್ಪದೆ


ಪ್ರಸಾದ್ ಅಬ್ಬಯ್ಯ | ಕೋನರೆಡ್ಡಿ | ವಿನಯ್ ಕುಲಕರ್ಣಿ | ಸಿ.ಎಸ್. ಶಿವಳ್ಳಿ | ಅರವಿಂದ್ ಬೆಲ್ಲದ್

ಪಾಲಿಸಿದ್ದಾರೆ. ಕಾಂಗ್ರೆಸ್‌ನಿಂದ ಪ್ರಬಲ ಪೈಪೋಟಿ ನೀಡಲು ಅಭ್ಯರ್ಥಿಯಾಗಿದ್ದ ಡಾ. ಮಹೇಶ್ ನಾಲವಾಡ ಇದ್ದ ಆಸ್ತಿಯನ್ನೂ ಮಾರಿಕೊಂಡು ಅಖಾಡಕ್ಕಿಳಿದಿದ್ದು ವ್ಯರ್ಥವಾಗಿದೆ. ಕಾಂಗ್ರೆಸ್‌ನ ಬಹುತೇಕ ಕಾರ್ಪೊರೇಟರ್‌ಗಳು ಜಗದೀಶ್ ಶೆಟ್ಟರ್‌ರೊಂದಿಗೆ ಕೂಡಾವಳಿ ಮಾಡಿಕೊಂಡ ಅನೈತಿಕ ರಾಜಕಾರಣದಿಂದಾಗಿ ಮಹೇಶ್ ನಾಲವಾಡ ಬೀದಿಗೆ ಬರುವಂತಾಗಿರುವುದು ಮಾತ್ರ ವಿಪರ್ಯಾಸ.

ಇನ್ನು ಜೆಡಿಎಸ್‌ನಿಂದ ಎದುರಾಳಿಯಾಗಿದ್ದ ತಬ್ರೇಜ್ ಸಂಶಿಯ ಮಿಡ್‌ಮ್ಯಾಕ್ ರಿಯಲ್ ಎಸ್ಟೇಟ್ ಸಂಸ್ಥೆಯಲ್ಲಿ ಶೆಟ್ಟರ್‌ರ ಖಾಸಾ ತಮ್ಮ ಪ್ರದೀಪ್ ಶೆಟ್ಟರ್‌ನ ಪಾಲುದಾರಿಕೆ ಇದ್ದದ್ದೂ ಮಾಜಿ ಸಿ.ಎಂ. ಗೆಲುವಿಗೆ ಪರೋಕ್ಷವಾಗಿ ಕಾರಣವಾಗಿದೆ. ಅಲ್ಲದೆ ಶೆಟ್ಟರ್‌ರ ಮತಗಳನ್ನು ಕೀಳುವ ಸಾಮರ್ಥ್ಯವಿದ್ದ ವಾದಿರಾಜ ಕುಲಕರ್ಣಿ ಎಂಬಾತ ಸ್ಪರ್ಧೆಗೆ ಇಳಿಯುತ್ತಿದ್ದಂತೆಯೇ ವಿಶ್ವೇಶರತೀರ್ಥ ಸ್ವಾಮಿಯಿಂದ ಮಂತ್ರೋಪದೇಶ ಮಾಡಿಸಿ ನಾಮಪತ್ರ ವಾಪಾಸ್ ಪಡೆಯುವಂತೆ ಮಾಡಿಕೊಂಡ ಶೆಟ್ಟರ್ ಸಾಹೇಬರು ಗೆಲುವಿನ ಹಾದಿಯ ಮುಳ್ಳನ್ನು ಉಪಾಯವಾಗಿಯೇ ನಿವಾರಿಸಿಕೊಂಡಿದ್ದರು. ಈ ಎಲ್ಲಾ ತೆರೆಮರೆಯ ಆಟಗಳೆ ಶೆಟ್ಟರ್ ಗೆಲುವಿನ ಪ್ರಮುಖ ಪಾತ್ರಧಾರಿಗಳು. ಹಾಗಾಗಿ ಅವರ ಗೆಲುವಿಗೆ ಅಂತಹ ಮಹತ್ವವೇನೂ ಇಲ್ಲ. ಬಿಜೆಪಿ ಸರ್ವ ಪತನವಾಗಿರೋದರಿಂದ ರಾಜ್ಯ ರಾಜಕಾರಣದಲ್ಲೂ ಅವರ ಗೆಲುವು ಲೆಕ್ಕಕ್ಕುಂಟು ಆದರೆ ಆಟಕ್ಕಿಲ್ಲ

ಎನ್ನುವಂತೆಯೇ ಇದೆ.

ಹುಬ್ಬಳ್ಳಿ-ಧಾರವಾಡ ಪಶ್ಚಿಮ ಕ್ಷೇತ್ರ

ಹಾಲಿ ಶಾಸಕನಾಗಿದ್ದ ಚಂದ್ರಕಾಂತ್ ಬೆಲ್ಲದ್ ರಾಜಕೀಯ ಸನ್ಯಾಸತ್ವ ಸ್ವೀಕರಿಸಿ ಮಗನಿಗೆ ಟಿಕೆಟ್ ಕೊಡಿಸಿದ್ದು ವರ್ಕೌಟ್ ಆಗಿದೆ. ಹುಬ್ಬಳ್ಳಿ-ಧಾರವಾಡ ಪಶ್ಚಿಮ ಕ್ಷೇತ್ರದಿಂದ ಬಿಜೆಪಿಯ ಅರವಿಂದ್ ಬೆಲ್ಲದ್ ಗೆಲ್ಲುವ ಮೂಲಕ ಕುಟುಂಬ ರಾಜಕಾರಣ ಮುಂದುವರೆದಿದೆ. ಪಕ್ಕಾ ವ್ಯವಹಾರಸ್ಥನಾದ ಅರವಿಂದ್ ಬೆಲ್ಲದ್ ಈಗಾಗಲೆ ಹುಬ್ಬಳ್ಳಿ-ಧಾರವಾಡ ಹೆದ್ದಾರಿಯುದ್ದಕ್ಕೂ ಮೋಟಾರ್ ವಾಹನ ಶೋ ರೂಮ್‌ಗಳ ಸಂತೆಯನ್ನೇ ತೆರೆದಿದ್ದಾನೆ. ಆ ಹೆಸರಿನಲ್ಲಿ ಸರ್ಕಾರಿ ಜಾಗವನ್ನು ಲಪಟಾಯಿಸಿರುವ ಈತನಿಗೆ ಅದರ ರಕ್ಷಣೆಗೆ ಶಾಸಕಗಿರಿಯ ಜರೂರತ್ತು ಇತ್ತು. ಹಣ ಚೆಲ್ಲಿ ಅದನ್ನು ಖರೀದಿಸಿಕೊಂಡಿದ್ದಾನೆ.

ಇನ್ನು ಜೆಡಿಎಸ್, ಕಾಂಗ್ರೆಸ್‌ಗಳಿಗೆ 'ನಾನೂ ಗೆಲ್ಲಲಿಲ್ಲ ನೀನೂ ಗೆಲ್ಲಲಿಲ್ಲ' ಎನ್ನುವಂತ ಪರಿಸ್ಥಿತಿ. ಇಲ್ಲಿ ಗೆಲ್ಲುವ ಭರವಸೆ ಮೂಡಿಸಿದ್ದ ಜೆಡಿಎಸ್‌ನ ಇಸ್ಮಾಯಿಲ್ ತಮಾಟಗಾರನಿಗೆ ಕಾಂಗ್ರೆಸ್‌ನ ಎಸ್.ಆರ್. ಮೋರೆಯ ಸ್ಪರ್ಧೆಯೇ ಸೋಲಾಗಿ ವಕ್ಕರಿಸಿದೆ. ಗೆಲ್ಲುವ ಯಾವ ಭರವಸೆಯೂ ಇಲ್ಲದಿದ್ದರೂ ದೆಹಲಿ ಮಟ್ಟದಲ್ಲಿ ಲಾಬಿ ಮಾಡಿ ಟಿಕೆಟ್ ಗಿಟ್ಟಿಸಿಕೊಂಡ ಮೋರೆ ನಿರ್ಣಾಯಕ ಅಲ್ಪಸಂಖ್ಯಾತರ ಮತಗಳು ಹರಿದು ಹಂಚಿಹೋಗುವಂತೆ ಮಾಡಿದ್ದಷ್ಟೇ ಬಂತು. ತಾನೂ ಗೆಲ್ಲದೆ, ಗೆಲ್ಲಬೇಕಾದ ಇಸ್ಮಾಯಿಲ್‌ನನ್ನೂ ಸೋಲಿಸಿದ ಮೋರೆ ಬೆಲ್ಲದ್ ಫ್ಯಾಮಿಲಿಗೆ ಭಾರಿ ಉಡುಗೊರೆಯನ್ನೇ ನೀಡಿದಂತಾಗಿದೆ. ಈ ಎಲ್ಲಾ ಬೆಳವಣಿಗೆಗಳ ಮಧ್ಯೆ ಧಾರವಾಡದ ಸುಶಿಕ್ಷಿತ ಮತದಾರರು ಬೆಲ್ಲದ್ ಕುಟುಂಬಕ್ಕೆ ಮತ ನೀಡಿ ಅವರ ಬಿಜಿನೆಸ್ ಬೆಳವಣಿಗೆಗೆ ಸಹಾಯ ಮಾಡಿದ್ದಾರೆ.

ಧಾರವಾಡ ಗ್ರಾಮೀಣ ಕ್ಷೇತ್ರ

ಧಾರವಾಡ ಗ್ರಾಮೀಣ ಕ್ಷೇತ್ರದ ಜನತೆ ಬಿಜೆಪಿ ಶಾಸಕಿ ಸೀಮಾ ಮಸೂತಿಯನ್ನು ಮುಲಾಜಿಲ್ಲದೆ ಮನೆಗಟ್ಟಿದ್ದಾರೆ. ಆ ಸ್ಥಾನಕ್ಕೆ ಕಾಂಗ್ರೆಸ್‌ನ ವಿನಯ್ ಕುಲಕರ್ಣಿಯನ್ನು ಆಯ್ಕೆ ಮಾಡುವ ಮೂಲಕ ಪ್ರಬುದ್ಧತೆ ಮೆರೆದಿದ್ದಾರೆ ಎಂದರೂ ತಪ್ಪಾಗಲಾರದು. ಕ್ಷೇತ್ರದ ಪ್ರತಿ ಕಾಮಗಾರಿಗಳನ್ನೂ ತಮ್ಮ ಸಂಬಂಧಿಕರಿಗೇ ದಕ್ಕುವಂತೆ ನೋಡಿಕೊಳ್ಳುತ್ತಿದ್ದ ಮತ್ತು ತನ್ನ ಗಂಡನನ್ನೇ ಮುಂದಿಟ್ಟುಕೊಂಡು ಕಮೀಷನ್ ಸುಲಿಗೆ ನಡೆಸುತ್ತಿದ್ದ ಐನಾತಿ ಹೆಂಗಸು ಮಸೂತಿಗೆ ಸಮಾ ಹೊಡೆತ ನೀಡಿದ್ದಾರೆ. ಪತ್ರಿಕೆ ತನ್ನ ಸಮೀಕ್ಷೆಯಲ್ಲೆ ಹೀಗಾಗುತ್ತದೆನ್ನುವ ಭವಿಷ್ಯ ನುಡಿದದ್ದು ಸುಳ್ಳಾಗಲಿಲ್ಲ.

ಕಲಘಟಗಿ ಕ್ಷೇತದಲ್ಲಿ ಎರಡನೇ ಬಾರಿಗೆ ಆಯ್ಕೆಯಾಗುವ ಮುಖಾಂತರ ಕಾಂಗ್ರೆಸ್‌ನ ಸಂತೋಷ್ ಲಾಡ್ ಕೆಜೆಪಿ, ಬಿಜೆಪಿ ದಾಯಾದಿ ಪಕ್ಷಗಳಿಗೆ ಮರ್ಮಾಘಾತ ನೀಡಿದ್ದಾರೆ. ಮಾಜಿ ಸಚಿವ ಜೆಡಿಎಸ್‌ನ ಕ್ಯಾಂಡಿಡೇಟ್ ಪಿ.ಸಿ.ಸಿದ್ದನಗೌಡನಿಗೆ ಜುಜುಬಿ 5456 ಮತ ನೀಡಿರುವ ಮತದಾರರು ಈ ಕ್ಷೇತ್ರಕ್ಕೆ ಮತ್ತೆ ಮುಖ ಮಾಡಬೇಡೆಂಬ ಖಾರದ ಸಂದೇಶ ರವಾನಿಸಿದ್ದಾರೆ. ಲಾಡ್‌ನ ಹಾರುಪತ್ಯದ ಮುಂದೆ ಕೆಜೆಪಿಯ ನಿಂಬಣ್ಣವರ ಮತ್ತು ಬಿಜೆಪಿಯ ಸಂಗಾರ ಮಕಾಡೆ ಮಲಗಿದ್ದಾರೆ.

ಕುಂದಗೋಳ

ಕುಂದಗೋಳದಲ್ಲಿ ಕಾಂಗ್ರೆಸ್‌ನ ಸಿ.ಎಸ್.ಶಿವಳ್ಳಿ ವಿಜಯಪತಾಕೆ ಹಾರಿಸಿದ್ದಾರೆ. ಸಿದ್ದರಾಮಯ್ಯನ ಪಕ್ಕಾ ಬೆಂಬಲಿಗರಾದ ಶಿವಳ್ಳಿ ಆ ಮೂಲಕ ಸಿದ್ದು ಸಿಎಂ ಹಾದಿಯನ್ನು ಭದ್ರಪಡಿಸಿದ್ದಾರೆ. ನಿರೀಕ್ಷೆ ಮೂಡಿಸಿದ್ದ ಯಡ್ಡಿಯ ಬೀಗ, ಕೆಜೆಪಿಯ ಎಸ್.ಐ.ಚಿಕ್ಕನಗೌಡನಿಗೆ ಮತದಾರ ಮೆಣಸಿನಕಾಯಿ ರುಚಿ ತೋರಿಸಿದ್ದಾನೆ. ಬಿಜೆಪಿ, ಜೆಡಿಎಸ್ ಅಭ್ಯರ್ಥಿಗಳಿಗಂತೂ ಮನೆ ಬಿಟ್ಟು ಹೊರ ಬರಲೇಬೇಡಿ ಎನ್ನುವ ಮತಸಂದೇಶ ರವಾನೆಯಾದಂತಿದೆ.

ನವಲಗುಂದ

ಇನ್ನು ನವಲಗುಂದದಲ್ಲಿ ಖಾತೆ ತೆರೆಯುವ ಮೂಲಕ ಜಿಲ್ಲೆಯಲ್ಲಿ ಜೆಡಿಎಸ್ ತನ್ನ ಉಸಿರು ಉಳಿಸಿಕೊಂಡಿದೆ. ಹೊರಟ್ಟಿಯ ಬಲಗೈ ಭಂಟನಾಗಿರುವ ಜೆಡಿಎಸ್‌ನ ಎನ್.ಎಚ್.ಕೋನರೆಡ್ಡಿ ಕ್ಷೇತ್ರದ ತುಂಬಾ ಹರಿಸಿದ ಕಣ್ಣೀರು ಕೊನೆಗೂ ವರ್ಕೌಟ್ ಆಗಿದೆ. ಆ ಕಣ್ಣೀರಿನ ಸುನಾಮಿಯಲ್ಲಿ ಬಿಜೆಪಿಯ ಮಾಜಿ ಶಾಸಕ, ಶೆಟ್ಟರ್ ಆಪ್ತ ಶಂಕರ್ ಪಾಟೀಲ, ಕಾಂಗ್ರೆಸ್‌ನ ಗಡ್ಡಿ, ಕೆಜೆಪಿಯ ಡಾ. ಗಿರಿಯಣ್ಣವರ್ ಕೊಚ್ಚಿ ಹೋಗಿದ್ದಾರೆ.

● ಹುಬ್ಬಳ್ಳಿಯಾಂವ

ಲಾಗಿದೆ.

ಗ್ಗಾಂವ್: ಅಲೆ ವಿರುದ್ಧವೂ ಗೆದ್ದ ಬೊಮ್ಮಾಯಿ

ಬಸವರಾಜು ಬೊಮ್ಮಾಯಿ ಇಲ್ಲಿ ಮಾಡಿರುವ
ವೃದ್ಧಿ ವಿರುದ್ಧ ವಿಚಿತ್ರ ಡ್ರಾಮಾ ಮಾಡಲು ನೋಡಿದ
ಗ್ರೆಸ್‌ನ ಅಜ್ಜಂಪೀರ ಎಸ್ ಖಾದ್ರಿಯ ಖೇಲ್ ಖತಂ
ದೆ. ಇಲ್ಲಿಯ ಜನ ಕ್ಷೇತ್ರಕಾಗಿ ದುಡಿದಿರುವ ಮಾಜಿ
ವ ಬೊಮ್ಮಾಯಿಯನ್ನು ಎರಡನೇ ಬಾರಿ ಗೆಲ್ಲಿಸಿದ್ದಾರೆ.
ಗೆಲುವು ಜಿಲ್ಲೆಯಲ್ಲಿ ಬಿಜೆಪಿ ಸಾಧಿಸಿರುವ ಏಕೈಕ
ುವು ಕೂಡಾ ಹೌದು.

ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಿದ್ದ ಕೆಜೆಪಿಯನ್ನು
ವಾಗಿಸಿಕೊಂಡು ಪ್ರಮುಖರಾಗಿರುವ ಲಿಂಗಾಯತರನ್ನ
ಮ್ಮಾಯಿ ವಿರುದ್ಧ ಎತ್ತಿಕಟ್ಟಲು ಹವಣಿಸಿದ್ದ ಕಾಂಗ್ರೆಸ್
ರ್ಯಾಚಾರ ಅಕ್ಷರಶಃ ಇಲ್ಲಿ ಉಲ್ಟಾ ಹೊಡೆದಿದೆ.
ಗ್ರೆಸ್‌ಅನ್ನು ಗೆಲ್ಲಿಸುವ ಮೂಲಕ ಬೊಮ್ಮಾಯಿಗೆ ಪಾಠ
ಲು ಯಡ್ಡಿ ಮಾಡಿದ ಭಾಷಣ ಕೂಡಾ ಇಲ್ಲಿ ಠುಸ್ಸಾಗಿದೆ.
03 ಮತಗಳ ಅಂತರದಲ್ಲಿ ಬೊಮ್ಮಾಯಿ ಗೆದ್ದಿದ್ದಾರೆ.

ಾಣೇಬೆನ್ನೂರ- ಕೋಳಿವಾಡರ ಕಮಾಲ್

ಎರಡು ಅವಧಿ ಸತತವಾಗಿ ಸೋಲುಂಡಿದ್ದ ಮಾಜಿ
ಪೀ ಕೆ.ಬಿ.ಕೋಳಿವಾಡರ ಕೈಯನ್ನು ಈ ಬಾರಿ ಜನ
ತ್ತೆ ಹಿಡಿದಿದ್ದಾರೆ. ಟಿಕೆಟ್‌ಗಾಗಿ ಪೈಪೋಟಿ ನಡೆಸಿದ್ದ
ಹುತೇಕ ಎಲ್ಲ ಕಾಂಗ್ರೆಸ್ ಮುಖಂಡರು ಕೋಳಿವಾಡರಿಗೆ
ಥ್ ನೀಡಿದ್ದು ಅವರ ಗೆಲುವಿಗೆ ಸಹಕಾರಿಯಾಗಿದೆ.
ರಡು ಬಾರಿ ಶಾಸಕನಾಗಿದ್ದ ಉದಾಸಿಯ ಬೀಗ ಜಿ.ಶಿವಣ್ಣ
ಪಿಯಿಂದ ಸ್ಪರ್ಧಿಸಿ ಹೀನಾಯ ಸೋಲುಂಡಿದ್ದಾರೆ.

ಬೆಂಗಳೂರಿನಿಂದ ಕಳೆದ ವರ್ಷ ಇಲ್ಲಿಗೆ ಬಂದು
ಬಂಧದ ಮೇಲೆ ಗೆಲ್ಲುವ ಇರಾದೆ ಹೊಂದಿದ್ದ
ಸಂಕರ ಪಕ್ಷೇತರನಾಗಿ ಸ್ಪರ್ಧಿಸಿದ್ದರು. ಈತ ಹಂಚಿದ್ದ
, ಹಣಕ್ಕೆ ಇಡೀ ಜಿಲ್ಲೆ ದಂಗಾಗಿತ್ತು, ಅಷ್ಟರಮಟ್ಟಿಗೆ
ಬೆನ್ನೂರ ಈತನಿಗೆ ಜನ ಸರಿಯಾಗೇ ಉತ್ತರ ನೀಡಿದ್ದಾರೆ.

6,788 ಮತಗಳ ಅಂತರದಿಂದ ಕೋಳಿವಾಡರನ್ನ ಗೆಲ್ಲಿಸಿದ್ದಾರೆ.

ಬ್ಯಾಡಗಿ- ಶಿವಣ್ಣನವರೇ ಬಾಸ್

ಮೆಣಸಿನಕಾಯಿ ಘಾಟಿದ ಬ್ಯಾಡಗಿಯಲ್ಲಿ ಕೆಜೆಪಿಗೆ ಇಲ್ಲಿಯ ಜನ ಪಕ್ಕ ಖಾರ ಇಟ್ಟಿದ್ದಾರೆ. ಸರಳ ರಾಜಕಾರಣಿ ಎಂದು ಹೆಸರು ಮಾಡಿದ್ದ ಕಾಂಗ್ರೆಸ್ಸಿನ ಬಸವರಾಜ ಶಿವಣ್ಣನವರ, ಕೆಜೆಪಿಯ ಶಿವರಾಜ ಸಜ್ಜನರ ಅವರನ್ನು 13,359 ಮತಗಳ ಅಂತರದಲ್ಲಿ ಸೋಲುಣಿಸಿದ್ದಾರೆ. ಇಂತಹ ಸೋಲಿನ ಭಯದಲ್ಲೆ ಸ್ಪರ್ಧೆಯಿಂದ ಚುನಾವಣಾ ಪೂರ್ವದಲ್ಲೇ ಹಿಂದೆ ಸರಿದಿದ್ದ ಸುರೇಶಗೌಡ ಪಾಟೀಲ ಈಗ 'ಬದುಕುಳಿದೆ ಬಡಜೀವ' ಎಂದು ನಿಟ್ಟುಸಿರು ಬಿಡುತ್ತಿದ್ದಾರೆ.

ಒಟ್ಟನಲ್ಲಿ ಬ್ಯಾಡಗಿಗೆ ಅಂಟಿದ್ದ ಶಾಪ ವಿಮೋಚನೆಯಾಗಿ ಕನಕದಾಸರ ಆಶೀರ್ವಾದದಿಂದ ಕಾಂಗ್ರೆಸ್‌ನ ಕೈಗೆ ಅಧಿಕಾರ ಸಿಕ್ಕಿದೆ.

ಹಿರೇಕೆರೂರ- ತೆಂಗಿನಕಾಯಿಗೆ ಬಣಕಾರ್‌ನೇ ವಾರಸುದಾರ

ಪ್ರತಿ ಚುನಾವಣೆಯಲ್ಲೂ ವಿಭಿನ್ನ ನಿರ್ಣಯ ನೀಡುವ ಇಲ್ಲಿಯ ಜನತೆ ಈ ಬಾರಿಯೂ ಅದನ್ನೇ ಮಾಡಿ ತೋರಿಸಿದ್ದಾರೆ. ಜಿಲ್ಲೆಯ ಇತರೆ ಕಡೆ ಕೆಜೆಪಿ ಸಂಪೂರ್ಣವಾಗಿ ನೆಲೆ ಕಚ್ಚಿದ್ದರೆ, ಇಲ್ಲಿ ತೆಂಗಿನಕಾಯಿ ಒಡೆದಿದ್ದಾರೆ. ಇದಕ್ಕೆ ಮೂಲ ಕಾರಣ ಬಿ.ಸಿ.ಪಾಟೀಲ ಅಧಿಕಾರದಲ್ಲಿದ್ದಾಗ ಖಳನಾಯಕನಂತೆ ನಡೆದುಕೊಂಡಿದ್ದು.

ಹಿಂದಿನ ಅವಧಿಯಲ್ಲೂ ಪಕ್ಷೇತರನಾಗಿ ಸ್ಪರ್ಧಿಸಿದ್ದ ಯು.ಬಿ.ಬಣಕಾರ ವಿರುದ್ಧ ಪ್ರಯಾಸದ ಗೆಲುವು ಕಂಡಿದ್ದ ಬಿಸಿಪಿ ಈ ಬಾರಿ ನಿರಾಯಾಸವಾಗಿ ಸೋಲುಂಡಿದ್ದಾರೆ. 2606 ಮತಗಳ ಅಂತರದಿಂದ ಯು.ಬಿ.ಬಣಕಾರ್ ಗೆಲುವು ಸಾಧಿಸಿ ಜಿಲ್ಲೆಯ ಏಕೈಕ ತೆಂಗಿನಕಾಯಿ ಶಾಸಕನಾಗಿದ್ದಾನೆ. ಕಳೆದ ಎರಡು ಬಾರಿ ಸೋಲು ಕಂಡಿದ್ದ ಬಣಕಾರನ ಮೇಲೆ ಅನುಕಂಪದ ಜೊತೆಗೆ ಕಾಂಗ್ರೆಸ್ ವಿರೋಧಿ ಮತಗಳು ಗೆಲುವಿಗೆ ಕೊಂಡೊಯ್ದಿದೆ.

ಹಾವೇರಿ- ರುದ್ರಪ್ಪನ ರೌದ್ರಾವತಾರಕ್ಕೆ ನರಂ ಆದ ಓಲೇಕಾರ

ಕೆಜೆಪಿ ಪಕ್ಷ ಉದಯವಾಗುವುದಕ್ಕೂ ಮುನ್ನ ತಾನೊಬ್ಬ ರಾಜ್ಯದ ಮುಖಂಡ ಎಂಬಂತೆ ಮೀಡಿಯಾದ ಮುಂದೆ ಅರಚಾಡುತ್ತಿದ್ದ ಯಡ್ಡಿ ತುಣುಕು ನೆಹರು ಓಲೇಕಾರ ಹೇಳಹೆಸರಿಲ್ಲದಂತೆ ಹೀನಾಯ ಸೋಲು ಕಂಡಿದ್ದಾರೆ. ಎರಡು ಅವಧಿ ಶಾಸಕನಾಗಿ ಕ್ಷೇತ್ರದ ಅಭಿವೃದ್ಧಿ ಮಾಡಿದ್ದಕ್ಕಿಂತ ಲೂಟಿ ಮಾಡಿದ್ದೇ ಹೆಚ್ಚು ಎಂದು ದಾಖಲೆ ಸಹಿತ ನಮ್ಮ ಪತ್ರಿಕೆ ವರದಿ ಮಾಡಿತ್ತಲ್ಲದೆ ಓಲೇಕಾರನ ಸೋಲು ನಿಶ್ಚಿತ ಎಂಬ ಸಮೀಕ್ಷೆಯನ್ನೂ ಪ್ರಕಟಿಸಿತ್ತು. ಅದೀಗ ನಿಜವಾಗಿದೆ.

ಎರಡು ಬಾರಿ ಸೋತರೂ ಧೃತಿಗೆಡದೆ, ಪಕ್ಷಾಂತರ ಮಾಡದೆ ನಿಷ್ಠಾವಂತ ಕಾಂಗ್ರೆಸ್ಸಿಗ ಎಂದು ಗುರುತಿಸಿಕೊಂಡಿದ್ದ ರುದ್ರಪ್ಪ ಲಮಾಣಿ ಹೇಳಿಕೊಳ್ಳುವಂತಹ ಹಣವಂತನೇನೂ ಅಲ್ಲ. ಹೀಗಾಗಿಯೇ ಈ ಚುನಾವಣೆಯಲ್ಲಿ 'ಓಲೇಕಾರನ ಹಣ, ರುದ್ರಪ್ಪನ ಗುಣ' ಎಂಬ ಸ್ಲೋಗನ್ ಕೂಡ ಚಾಲ್ತಿ ಪಡೆದಿತ್ತು.

ಓಲೇಕಾರನ ಉರುವಣಿಗೆಗೆ ಬೇಸತ್ತ ಜನ ರುದ್ರಪ್ಪ ಲಮಾಣಿಯನ್ನು 30,208 ಮತಗಳ ಅಂತರದಿಂದ ಗೆಲ್ಲಿಸಿದ್ದಾರೆ. ಜಿಲ್ಲೆಯಲ್ಲೇ ಅತಿಹೆಚ್ಚು ಮತಗಳ ಅಂತರದಿಂದ ಗೆದ್ದ ಅಭ್ಯರ್ಥಿ ಕೂಡ ರುದ್ರಪ್ಪ ಆಗಿದ್ದಾರೆ.

ಒಟ್ಟನಲ್ಲಿ ಹಾವೇರಿ ಜಿಲ್ಲೆಗೆ ಅಂಟಿದ್ದ ಚಡ್ಡಿಗಳ ಕಾಟ ಈ ಚುನಾವಣೆಯಲ್ಲಿ ಅಂತ್ಯಕಂಡಿದೆ. ಮಾಜಿ ಮಂತ್ರಿ ಸಿ.ಎಂ.ಉದಾಸಿಯ ಹಿಡಿತದಿಂದ ಸಂಪೂರ್ಣ ಹೊರಬಂದಿದೆ. ಜನರ ವಿಶ್ವಾಸ ಗಳಿಸಿಕೊಂಡಿರುವ ಕಾಂಗ್ರೆಸ್ ಅದನ್ನು ಉಳಿಸಿಕೊಂಡು ಹೋಗುವುದೇ ಎನ್ನುವುದನ್ನು ಕಾಯ್ದು ನೋಡಬೇಕಷ್ಟೆ.

● ಹುರುಳಿಕುಪ್ಪಿ ವಿನಯ್

ಮಂಡ್ಯ: ಜೆಡಿಎಸ್ ಅಬ್ಬರದ ನಡುವೆ ತೂರಿ ಬಂದ ಅಂಬಿ





ಮಂಡ್ಯ ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಜಾತ್ಯತೀತ ಜನತಾ ದಳ - 4, ಕಾಂಗ್ರೆಸ್ - 2 ಹಾಗೂ ರೈತ ನಾಯಕ ಪುಟ್ಟಣ್ಣಯ್ಯನವರ ಮೂಲಕ ಸರ್ವೋದಯ ಕರ್ನಾಟಕ ಪಕ್ಷ ಖಾತೆ ತೆರೆದಿದೆ.

'ಅಂಬಿ' ಕೈ ಹಿಡಿದ ಮಂಡ್ಯ

ಕಳೆದ ಎರಡು ಚುನಾವಣೆಗಳಲ್ಲಿ ಹೀನಾಯವಾಗಿ ಸೋತ ಅಂಬರೀಶ್‌ರನ್ನು 42,000ಕ್ಕೂ ಅಧಿಕ ಮತಗಳಿಂದ ಗೆಲ್ಲಿಸುವ ಮೂಲಕ ಮಂಡ್ಯ ಮತದಾರ ಅವರ ಕೈಹಿಡಿದಿದ್ದಾರೆ. ಅಂಬರೀಶ್ 89,240 ಮತಗಳನ್ನು ಪಡೆದರೆ, ಜೆಡಿಎಸ್‌ನ ಎಂ.ಶ್ರೀನಿವಾಸ್ 47,060 ಮತಗಳನ್ನು ಪಡೆಯಲಷ್ಟೇ ಶಕ್ತರಾಗಿದ್ದಾರೆ.

ಮಂಡ್ಯದಲ್ಲಿ ಈ ಬಾರಿ ಅಂಬಿಯೇ 'ರೆಬಲ್' ಸ್ಟಾರ್ ಆಗಿ ಹೊರಹೊಮ್ಮಲಿದ್ದಾರೆಂಬುದು ಬಹಿರಂಗವಾಗಿತ್ತು. ಜೆಡಿಎಸ್ ಟಿಕೆಟ್ ಶ್ರೀನಿವಾಸ್‌ಗೆ ನೀಡುವಲ್ಲಿ ವಿಳಂಬವಾಗಿದ್ದು, ಅಶೋಕ್ ಜಯರಾಂ ಬಂಡಾಯ ಎದ್ದಿದ್ದು, ಅಂಬಿ ಪರ ಕ್ಷೇತ್ರದಲ್ಲಿ ಸಿಂಪಥಿ ಅಲೆ ಇದ್ದದ್ದು, ಇವೆಲ್ಲವೂ ಅಂಬಿಯ ಭರ್ಜರಿ ಗೆಲುವಿಗೆ ಕಾರಣವಾಗಿವೆ. ಜೆಡಿಎಸ್‌ನ ಬಂಡಾಯ ಅಭ್ಯರ್ಥಿಯಾಗಿದ್ದ ಅಶೋಕ್ ಜಯರಾಂ ಕೊನೆಗಳಿಗೆಯಲ್ಲಿ ಕಣದಿಂದ ನಿವೃತ್ತಿಯಾದರೂ ಶ್ರೀನಿವಾಸ್ ಪರ ಪ್ರಚಾರಕ್ಕೆ ಬರಲಿಲ್ಲ, ಮಾತ್ರವಲ್ಲ ಅಶೋಕ್ ಬೆಂಬಲಿಗರು ಅಂಬಿ ಪರವಾಗಿ ಕೆಲಸ ಮಾಡಿದರು. ಕಾಂಗ್ರೆಸ್ ಪಕ್ಷದ ಆತ್ಮಾನಂದ ಅಂಬಿಯನ್ನು ವಿರೋಧಿಸಿದ್ದರೂ ಅವರ ಬೆಂಬಲಿಗರು ಮತ್ತು ಕಾಂಗ್ರೆಸ್‌ನ ನಗರಸಭಾ ಸದಸ್ಯರು ಅಂಬಿ ಪರ ಒಗ್ಗಟ್ಟಿನಿಂದ ಕೆಲಸ ಮಾಡಿದ್ದೂ ಅಂಬಿ ಗೆಲುವಿಗೆ ಕಾರಣವಾಗಿದೆ.

ಅತಿಯಾದ ಆತ್ಮವಿಶ್ವಾಸ ಮತ್ತು ಅಂಬಿ ವಿರೋಧಿ ಮತಗಳನ್ನು ನೆಚ್ಚಿಕೊಂಡಿದ್ದರಿಂದ ಜೆಡಿಎಸ್ ಅಭ್ಯರ್ಥಿ ಶ್ರೀನಿವಾಸ್ ಅವರು ಸೋತಿದ್ದಾರೆ.

ಮಳವಳ್ಳಿ : ನರೇಂದ್ರನೇ ನಾಯಕ

ಜಿಲ್ಲೆಯ ಹಿಂದುಳಿದ ಕ್ಷೇತ್ರವೆಂಬ ಹಣೆಪಟ್ಟಿ ಹೊತ್ತಿರುವ ಮಳವಳ್ಳಿ ಹಲವು ವರ್ಷಗಳ ಬಳಿಕ ಕಾಂಗ್ರೆಸ್ ಮಡಿಲಿಗೆ ಒಲಿದಿದೆ. ಕ್ಷೇತ್ರದ ಕುರುಬ, ಹಿಂದುಳಿದ ಹಾಗೂ ದಲಿತ ಮತದಾರರು ಕಾಂಗ್ರೆಸ್ ಅಭ್ಯರ್ಥಿ ಪಿ.ಎಂ.ನರೇಂದ್ರಸ್ವಾಮಿಯ ಕೈಹಿಡಿದಿದ್ದಾರೆ. ಸಿದ್ದರಾಮಯ್ಯನವರ ಆಶೀರ್ವಾದದಿಂದ ಪ್ರತಿಸ್ಪರ್ಧಿಗಳ ತೀವ್ರ ವಿರೋಧದ ನಡುವೆಯೂ ನರೇಂದ್ರಸ್ವಾಮಿ 538 ಮತಗಳ 'ವಿರೋಚಿತ' ಗೆಲುವು ಸಾಧಿಸಿದ್ದಾರೆ.

ಕಾಂಗ್ರೆಸ್‌ನ ನರೇಂದ್ರಸ್ವಾಮಿ 61869 ಮತಗಳು, ಜೆಡಿಎಸ್‌ನ ಅನ್ನದಾನಿ 61331, ಕೆ.ಜೆ.ಪಿ.ಯ ಮುನಿರಾಜು 26,397 ಮತಗಳನ್ನು ಪಡೆದಿದ್ದರೆ ಮಾಜಿ ಸಚಿವ ಬಿ.ಸೋಮಶೇಖರ್ ಕೇವಲ 3914 ಮತಗಳನ್ನು ಪಡೆದು ಠೇವಣಿ ಕಳೆದುಕೊಂಡಿದ್ದಾರೆ.

ಕೆ.ಆರ್.ಪೇಟೆ: ನಾರಾಯಣಗೌಡರ ಅಚ್ಚರಿ ಗೆಲುವು

ಮಾಜಿ ಪ್ರಧಾನಿ ದೇವೇಗೌಡರ ಬಲಾಢ್ಯ ಪ್ರಾಬಲ್ಯವಿರುವ ಕೆ.ಆರ್.ಪೇಟೆ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿ ಕೆ.ಸಿ.ನಾರಾಯಣಗೌಡ ಗೆಲುವು ಸಾಧಿಸುವ ಮೂಲಕ ರಾಜಕೀಯ ಚಿಂತಕರಲ್ಲಿ ಅಚ್ಚರಿ ಮೂಡಿಸಿದ್ದಾರೆ.

ಜೆಡಿಎಸ್ ಪಿತಾಮಹ ಹೆಚ್.ಡಿ.ದೇವೇಗೌಡರ ನೆರಳಿನಲ್ಲಿ ರಾಜಕೀಯ ನೆಲೆ ಅರಸಿ ಬಂದ ಕೆ.ಸಿ.ನಾರಾಯಣಗೌಡರಿಗೆ ಬಿ ಫಾರಂ ಕೊಟ್ಟಿದ್ದೂ ಅಲ್ಲದೆ ದೇವೇಗೌಡರ ಕುಟುಂಬದ ಸದಸ್ಯರು ಎಡೆಬಿಡದ ಪ್ರಚಾರ ಮಾಡಿದ್ದು ಮತ್ತು ಮಾಜಿ ಶಾಸಕ ಬಿ.ಪ್ರಕಾಶ್ ಹಾಗೂ ವಕೀಲ ಬಿ.ಎಲ್.ದೇವರಾಜು ಅವರ ಸಮಯೋಚಿತ ರಾಜಕೀಯ ತೀರ್ಮಾನ ನಾರಾಯಣಗೌಡರು ಮತದಾನ ಪ್ರಭುಗಳ ಮನಗೆಲ್ಲಲು ಸಹಾಯವಾಗಿದೆ.

ಸೋಲಿನಿಂದ ಮಾಜಿಯಾದ ಕೆ.ಬಿ.ಚಂದ್ರಶೇಖರ್ ಕುಟುಂಬದ ದಬ್ಬಾಳಿಕೆ ರಾಜಕಾರಣ, ನುಂಗಾಟ, ಕೆಳವರ್ಗಗಳ ಜನತೆಯನ್ನು ನಿಂದಿಸಿದ ಫಲದಿಂದ ಪರಾಭವಗೊಂಡಿದ್ದಾರೆ. ಇದಕ್ಕೆ ಕಿಕ್ಕೇರಿ ಸುರೇಶ್‌ರ ಅಸಮಾಧಾನವು ಕೆಲಸ ಮಾಡಿದೆ.

ಹಿಂದಿನ ಎರಡು ಚುನಾವಣೆಗಳ ಸಂದರ್ಭದಲ್ಲೇ ರಾಜಕೀಯದಿಂದ ನಿವೃತ್ತಿ ಘೋಷಿಸಿದ್ದ ಗಾಂಧಿವಾದಿ ಕೃಷ್ಣ ಅತ್ತ ದೇವೇಗೌಡರಿಗೆ ಸೆಡ್ಡು ಹೊಡೆದಿದ್ದು ಇತ್ತ ಸಿದ್ದು ಮುನಿಸಿಗೆ ಗುರಿಯಾಗಿದ್ದು ಅವರ ಸೋಲಿಗೆ ಪ್ರಮುಖ ಕಾರಣಗಳು ಎಂದು ತರ್ಕಿಸಲಾಗುತ್ತಿದೆ.

ಮದ್ದೂರು: ಡಿ.ಸಿ.ತಮ್ಮಣ್ಣನ ದರ್ಬಾರು

ಮದ್ದೂರು ಕ್ಷೇತ್ರದಲ್ಲಿ ಜೆಡಿಎಸ್‌ನ ಡಿ.ಸಿ.ತಮ್ಮಣ್ಣನ ದುಡ್ಡಿನ ದರ್ಬಾರ್‌ಗೆ ಮತದಾರ ಕಣ್ಮುಚ್ಚಿ ಶರಣಾಗಿದ್ದಾನೆ. ತಮ್ಮಣ್ಣ 80,926 ಮತಗಳನ್ನು ಪಡೆದರೆ, ಕಾಂಗ್ರೆಸ್‌ನ ಮಧು ಮಾದೇಗೌಡ 48,968 ಮತಗಳನ್ನು ಪಡೆದಿದ್ದಾರೆ. ಕಾಂಗ್ರೆಸ್ ಟಿಕೆಟ್ ಸಿಕ್ಕಿದ್ದರೆ ನಿಜಕ್ಕೂ ಫೈಟ್ ನೀಡುತ್ತಿದ್ದ ಕಲ್ಪನಾ ಸಿದ್ದರಾಜು ತಮ್ಮಣ್ಣನ ದುಡ್ಡಿನ ಆರ್ಭಟ ಎದುರಿಸಲಾಗದೆ 15,797 ಮತಗಳನ್ನಷ್ಟೇ ಗಳಿಸಲು ಶಕ್ತರಾಗಿದ್ದಾರೆ.

ದೇವೇಗೌಡರ ಬೀಗತನ, ಕ್ಷೇತ್ರದಲ್ಲಿ ಯಥೇಚ್ಛವಾಗಿ ಹರಿಸಿದ ಹಣದ ಹೊಳೆ, ಕಲ್ಪನಾ ಸಿದ್ದರಾಜು ಹಿಂದಿದ್ದ ಜೆಡಿಎಸ್‌ನ ಮುಖಂಡರು ಒಳಗೊಳಗೆ ತಮ್ಮಣ್ಣರಿಗೆ ಶರಣಾಗಿದ್ದು ಅವರ ಗೆಲುವಿಗೆ ಕಾರಣವಾಗಿದೆ.

ತಮ್ಮಣ್ಣ ಹಾಗೂ ಕಲ್ಪನಾ ಸಿದ್ದರಾಜು ನಡುವಿನ ಚುನಾವಣೆ ಯುದ್ಧದ ಮಧ್ಯೆ ತನ್ನ ಮಗ ಗೆದ್ದು ಬರಬಹುದು ಎಂದು ದುರಾಲೋಚನೆ ಮಾಡಿದ್ದ ಹಿರಿಯ ಕಾಂಗ್ರೆಸ್ ನಾಯಕ ಕಡೇಗಳಿಗೆಯಲ್ಲಿ ತಮ್ಮ ಮಗ ಮಧುಗೆ ಕಾಂಗ್ರೆಸ್ ಟಿಕೆಟ್ ಕೊಟ್ಟು ಕಣಕ್ಕಿಳಿಸಿಬಿಟ್ಟರು. ಒಂದು ವೇಳೆ ಕಲ್ಪನಾ ಸಿದ್ದರಾಜುಗೆ ಕಾಂಗ್ರೆಸ್ ಟಿಕೆಟ್ ದಕ್ಕಿ, ಆರ್ಥಿಕ ಸಹಾಯ ದೊರಕಿದ್ದರೆ ತಮ್ಮಣ್ಣರಿಗೆ ಕಷ್ಟವಾಗುತ್ತಿತ್ತು, ಯಾವಾಗ ಕಲ್ಪನಾಗೆ ಕಾಂಗ್ರೆಸ್ ಟಿಕೆಟ್ ಕೈತಪ್ಪಿತೋ ಆಗಲೇ ತಮ್ಮಣ್ಣ ಅರ್ಧ ಚುನಾವಣೆಯನ್ನು ಗೆದ್ದಾಗಿತ್ತು. ಎಸ್.ಎಂ.ಕೃಷ್ಣ ಬೆಂಬಲಿಗರ ನಿರಾಸಕ್ತಿ, ಮಾದೇಗೌಡರ ಅವಕಾಶವಾದಿ ರಾಜಕಾರಣಕ್ಕೆ ಮದ್ದೂರಿನ ಮತದಾರ ಮಣೆ ಹಾಕದೆ ತಮ್ಮಣ್ಣರಿಗೆ 32000ಕ್ಕೂ ಅಧಿಕ ಮತಗಳ ಮನ್ನಣೆ ನೀಡಿದ್ದಾರೆ.

ಪಾಂಡವಪುರ: ಪುಟ್ಟಣ್ಣಯ್ಯನೇ ಅಧಿಪತಿ

ಹ್ಯಾಟ್ರಿಕ್ ಗೆಲುವಿಗೆ ಹಂಬಲಿಸುತ್ತಿದ್ದ ಕ್ರಿಯಾಶೀಲ ಶಾಸಕ ಸಿ.ಎಸ್.ಪುಟ್ಟರಾಜುಗೆ ಸೋಲಿನ ರುಚಿ ಉಣಿಸಿರುವ ರೈತ ನಾಯಕ ಕೆ.ಎಸ್.ಪುಟ್ಟಣ್ಣಯ್ಯ ಎರಡನೇ ಬಾರಿಗೆ ವಿಧಾನಸಭೆ ಪ್ರವೇಶಿಸಿದ್ದಾರೆ. ಆ ಮೂಲಕ ಪಾಂಡವಪುರದಲ್ಲಿ ಪುಟ್ಟಣ್ಣಯ್ಯನ ಆಧಿಪತ್ಯ ಆರಂಭಗೊಂಡಿದೆ.

ಪುಟ್ಟಣ್ಣಯ್ಯನವರ ರೈತಪರ ಹೋರಾಟ, ಯು.ಪಿ.ನಾಲೆಯಲ್ಲಿ ... ಬಿಡಿಸಲು ಪಟ್ಟ ಶ್ರಮ, ನಿರ್ಣಾಯಕವಾಗಿರುವ ಲಿಂಗಾಯತ ಮತ... ಪಡೆಯಲು ಬಿ.ಎಸ್.ಯಡಿಯೂರಪ್ಪನಿಗೆ ಶರಣಾಗಿದ್ದು, ತತ್ವ-ಸಿದ್ಧಾಂತ... ಬದಿಗೆ ಸರಿಸಿಯಾದರೂ ಶಾಸಕರಾಗಬೇಕೆಂಬ ಛಲಕ್ಕೆ ಬಿದ್ದಿದ್ದ ಪುಟ್ಟಣ್ಣಯ್... ಅಧಿಕಾರ ಪ್ರೇಮಕ್ಕೆ ಮತದಾರ ಬೆರಗಾದರೂ ಅವರನ್ನು ಗೆಲ್ಲಿಸಿ ನೋಡ... ಎಂಬಂತೆ ಅವರನ್ನು ಬೆಂಬಲಿಸಿದ್ದಾರೆ.

ಪುಟ್ಟರಾಜು ಅವರ ಅತಿಯಾದ ವಿಶ್ವಾಸ, ದುಡುಕುತನ, ಬೆಂಬ... ಸೋಮಾರಿತನ, ಮಾತಿಗಷ್ಟೇ ಮೀಸಲಾದ ಕಾಂಗ್ರೆಸ್ ಪಕ್ಷ ಮತ್ತು ಬ... ಸೇರಿದಂತೆ ಎಲ್ಲಾ ಇತರೆ ಪಕ್ಷಗಳ ಮುಖಂಡರು ನಡೆಸಿದ ಕುತಂತ್ರದಿ... ಪುಟ್ಟರಾಜು ಅವರ ಹ್ಯಾಟ್ರಿಕ್ ಗೆಲುವಿಗೆ ಭಂಗತಂದಿವೆ.

ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಅಭ್ಯರ್ಥಿಗಳು ಇಲ್ಲಿ ಠೇ... ಕಳೆದುಕೊಂಡಿದ್ದಾರೆ.

ನಾಗಮಂಗಲ: ಚಲುವರಾಯಸ್ವಾಮಿಗೆ 'ಪಟ್ಟ...

ನಾಗಮಂಗಲದ ಮತದಾರ ಸಂಸದ ಚಲುವರಾಯಸ್ವಾಮಿಗೆ ಶಾಸಕ... ನೀಡಿದ್ದಾರೆ. ಜನಸಾಮಾನ್ಯರಿಂದ 'ಸ್ವಿಚ್ ಆಫ್ ಶಾಸಕ' ಎಂದು ಕರೆಸಿಕೊ... ಕಾಂಗ್ರೆಸ್‌ನ ಸುರೇಶ್‌ಗೌಡರಿಗೆ ಮತದಾರ ಗರ್ವಭಂಗ ಮಾಡಿದ್ದಾನೆ.


ಚಲುವರಾಯಸ್ವಾಮಿ 89,203 ಮತಗಳನ್ನು ಪಡೆದು ಕಾಂಗ್ರೆಸ್‌ನ ಸು... ಗೌಡರನ್ನು 20,363 ಮತಗಳ ಭಾರೀ ಅಂತರದಿಂದ ಸೋಲಿಸಿದ್ದಾರೆ. ಚ... ರಾಯಸ್ವಾಮಿ ತನ್ನ ಅಹಂ, ಒಣಪ್ರತಿಷ್ಠೆ ಬಿಟ್ಟು ಎಲ್ಲರನ್ನೂ ಜೊತೆಯ... ಕೊಂಡು ಚುನಾವಣೆ ಎದುರಿಸಿದ್ದು ಅವರಿಗೆ ಪ್ಲಸ್‌ಪಾಯಿಂಟ್ ಆಗಿದ...

ಶ್ರೀರಂಗಪಟ್ಟಣ: ಕಾಂಗ್ರೆಸ್ ಕಚ್ಚಾಟದ ಲಾಭ ಪಡೆದ ರಮೇಶ್‌ಬಾಬು


ಶ್ರೀರಂಗಪಟ್ಟಣ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ ಹಂಚಿಕೆಯಲ್ಲಿ ಅಂಬ... ಮಾಡಿದ ಗೊಂದಲದ ಸಂಪೂರ್ಣ ಲಾಭ ಪಡೆದ ಜೆಡಿಎಸ್‌ನ ರಮೇಶ್‌ಬ... ಎರಡನೆ ಬಾರಿಗೆ ಅನಾಯಾಸವಾಗಿ ಗೆದ್ದು ಬಂದಿದ್ದಾರೆ. ಯಾವಾಗ ಅಂಬ... ಕಾಂಗ್ರೆಸ್ ಟಿಕೆಟ್ ರವೀಂದ್ರರ ಕೈ ತಪ್ಪಿಸಿ ತಮ್ಮ ಶಿಷ್ಯ ಸಚ್ಚಿದಾನ... ಮಾವ ಎಸ್.ಎಲ್.ಲಿಂಗರಾಜುಗೆ ನೀಡಿದರೋ ಆಗಲೇ ಕಾಂ... ಶ್ರೀರಂಗಪಟ್ಟಣದಲ್ಲಿ ಸೋಲಿನ ಖಾತೆ ತೆರೆದಿತ್ತು.

ರಮೇಶ್‌ಬಾಬು 55,050 ಮತಗಳನ್ನು ಪಡೆದರೆ, ಎಸ್.ಎಲ್.ಲಿಂಗ... 27,144 ಮತಗಳನ್ನು ಪಡೆಯುವ ಮೂಲಕ ಪಕ್ಷೇತರರಾಗಿ ಸ್ಪರ್ಧಿ... ರವೀಂದ್ರ ಶ್ರೀಕಂಠಯ್ಯ ಅವರ ಸೋಲಿಗೆ ಕಾರಣರಾಗಿದ್ದಾರೆ.


ಈ ಬಾರಿ ರಮೇಶ್‌ಬಾಬುರನ್ನು ಸೋಲಿನ ಭಯ ಕಾಡುತ್ತಿತ್ತು. ... ಕಾಮಗಾರಿ, ಅಕ್ರಮ ಗಣಿಗಾರಿಕೆ, ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿರು... ರಮೇಶ್‌ಬಾಬು ವಿರುದ್ಧ ಜನ ಸಿಟ್ಟಿಗೇಳುವಂತೆ ಮಾಡಿತ್ತು. ಈ ... ಕಾರಣಗಳಿಗೆ ಕಾಂಗ್ರೆಸ್ ಟಿಕೆಟ್ ರವೀಂದ್ರರಿಗೆ ಸಿಕ್ಕಿದ್ದರೆ ಬಾಬು ಹೀನಾಯ... ಸೋಲುತ್ತಿದ್ದರು. ಆದರೆ ಅಂಬಿ ಹಠ ಹಿಡಿದು ರವೀಂದ್ರರಿಗೆ ... ತಪ್ಪಿಸಿಬಿಟ್ಟರು. ಇದು ರಮೇಶ್‌ಬಾಬು ಸುಲಭವಾಗಿ ಗೆಲ್ಲಲು ಕಾರಣವಾ...




ನರೇಂದ್ರ ಬಾಬು




ನಾರಾಯಣ ಗೌಡ




ಡಿ.ಸಿ. ತಮ್ಮಣ್ಣ.



ಕೆ.ಎಸ್. ಪುಟ್ಟಣ್ಣಯ್ಯ




ಚಲುವರಾಯಸ್ವಾಮಿ



ರಮೇಶ್ ಬಾಬು

ಕಾಂಗ್ರೆ ಅಲೆ ನಡುವೆ ಖದೀಮನ ಗೆಲುವು



ಗುತ್ತೇದಾರರ ನಾಡಾದ ಯಾದಗಿರಿ ಜಿಲ್ಲೆಯಲ್ಲಿ ಎಲ್ಲವೂ ಅಯೋಮಯ ಅನ್ನುವ ಸ್ಥಿತಿಗೆ ಮತದಾರ, ರಾಜಕಾರಣಿಗಳನ್ನು ತಂದು ನಿಲ್ಲಿಸಿದ್ದಾನೆ. ನಾನು ಏನು ಬೇಕಾದರೂ ಮಾಡಿ ದಕ್ಕಿಸಿಕೊಳ್ಳಬಲ್ಲೆ ಎಂದು ಅಹಂ ಹೊಂದಿದ ರಾಜಕಾರಣಿಗಳನ್ನು ತನ್ನ ಮತಗಳ ಆಕ್ಟೋಪಸ್ ಹಿಡಿತದಲ್ಲಿ ಉಸಿರುಗಟ್ಟಿಸಿದ್ದಾನೆ. ಈಗ ಉಸಿರಾಡಲಾಗದೆ ಇದ್ದ ಸ್ಥಿತಿಯಲ್ಲಿಯೆ ಕೈ ಹೊಸೆಯುತ್ತ ನಿಸ್ತೇಜವಾಗಿ ಕುಳಿತು ಕಣ್ಣು ಬಿಡುವುದೊಂದೆ ಸೋತ ಅಭ್ಯರ್ಥಿಗಳ ಕೆಲಸವಾಗಿದೆ.

ನಾಲ್ಕು ವಿಧಾನಸಭಾ ಕ್ಷೇತ್ರಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡ ಯಾದಗಿರಿ ಜಿಲ್ಲೆಯ ಶಹಾಪುರ ಹಾಗೂ ಸುರಪುರ ಜಿದ್ದಾಜಿದ್ದಿಯ ಕ್ಷೇತ್ರಗಳಾಗಿದ್ದವು. ಶಹಾಪುರದಲ್ಲಿ ಮಾಜಿ ಮಂತ್ರಿ ಶರಣಬಸ್ಸಪ್ಪಗೌಡ ದರ್ಶನಾಪುರ ಎರಡು ಬಾರಿ ಆಯ್ಕೆಯಾಗಿ ಬಂದು ತನ್ನನ್ನು ಹಿಡಿದು ನಿಲ್ಲಿಸುವವರು ಯಾರೂ ಇಲ್ಲ ಎಂದು ಬೀಗುತ್ತಿದ್ದ. ಕಳೆದ ಚುನಾವಣೆಯಲ್ಲಿ ಮೂಲ ಕಾಂಗ್ರೆ ಪಕ್ಷದವರಾಗಿದ್ದ ಲಿಂ.ಶಿವಶೇಖರಪ್ಪ ಪಾಟೀಲ ಶಿರವಾಳರನ್ನು ಹೊರದಬ್ಬಿ ಕಾಂಗ್ರೆ ಪಕ್ಷಕ್ಕೆ ಅಮರಿಕೊಂಡು ಗೆಲುವು ಸಾಧಿಸಿದ್ದ. ಆಕಸ್ಮಿಕವಾಗಿ ಶಿವಶೇಖರಪ್ಪ ಶಿರವಾಳ ಎಂಬ ರಾಜಕೀಯ ಪ್ರತಿಸ್ಪರ್ಧಿ ಇಲ್ಲದೆ ಶರಣಬಸ್ಸಪ್ಪಗೌಡ ಚುನಾವಣೆಯ ಅಖಾಡಕ್ಕೆ ಎಂದೋ ತೊಡೆತಟ್ಟಿ ನಿಂತು ಬಿಟ್ಟಿದ್ದ. ನನ್ನ ಎದುರಾಳಿ ಯಾರಿದ್ದೀರಿ ಬನ್ನಿ ಎಂದು ಆಹ್ವಾನ ನೀಡುತ್ತಿದ್ದ.

ಅಂದಂತೆ ಶರಣಬಸ್ಸಪ್ಪ ದರ್ಶನಾಪುರರ ವಿರುದ್ಧ ಚುನಾವಣೆಯ ಅಖಾಡಕ್ಕೆ ಧುಮುಕಿ ಕುಸ್ತಿ ಆಡುವ ಕುಸ್ತಿಪಟು ಯಾರೂ ಇದ್ದಿರಲಿಲ್ಲ, ಆದರೆ ದರ್ಶನಾಪುರ ತಾನೊಂದು ಬಗೆದರೆ ದೈವವೊಂದು ಬಗೆಯಿತು ಎಂಬಂತೆ ಶಿವಶೇಖರಪ್ಪನವರ ಪುತ್ರ ಗುರುಪಾಟೀಲ ಕೊನೆಯ ಘಳಿಗೆಯಲ್ಲಿ ಚುನಾವಣೆಯ ಅಖಾಡಕ್ಕೆ ಧುಮುಕಿ ಕೆ.ಜೆ.ಪಿ.ಯಿಂದ ಸ್ಪರ್ಧಿಸಿ ಗೆಲುವು ತನ್ನದಾಗಿಸಿಕೊಂಡಿದ್ದಾನೆ. ಗುರುಪಾಟೀಲಗೆ ರಾಜಕೀಯ ಅನುಭವ ಇಲ್ಲವೆಂಬುದು ಇಲ್ಲಿನ ಮತದಾರನಿಗೆ ಖಚಿತವಾಗಿ ಗೊತ್ತಿದೆ. ಆದರೆ ದರ್ಶನಾಪುರ ಬಂಧುಬಳಗ ಹಾಗೂ ಅವರ ಚಿಕ್ಕಪ್ಪನ ಸೊಕ್ಕಡಗಿಸಬೇಕಾಗಿದ್ದುದು ಅಷ್ಟೇ ಪ್ರಮುಖವಾಗಿತ್ತಾದ್ದರಿಂದ ಗುರುಪಾಟೀಲ ಅನಿವಾರ್ಯ ಅಭ್ಯರ್ಥಿಯಾಗಿ ಗೆದ್ದು ಬಂದಿದ್ದಾನೆ.

ಚಿಂಚನಸೂರ ಕಳೆದ ಬಾರಿಯಂತೆ ಈ ಸಲವೂ ಕೂಡ ಗುರುಮಿಠಕಲ್ ಕ್ಷೇತ್ರದಿಂದ ಗೆದ್ದು ಬಂದು ಸಂತೋಷದಿಂದ ಇದ್ದಾನೆ. ಸ್ಥಳೀಯ ರಾಜಕೀಯ ನಾಯಕರ ಪ್ರಬಲ ಪ್ರತಿರೋಧದ ನಡುವೆಯೂ ಕುರುಡು ಕಾಂಚಾಣವನ್ನು ಮತದಾರರ ಮನೆಗಳಿಗೆ ಮುಟ್ಟಿಸಿ ಗೆದ್ದು ಬಂದ ಕುಖ್ಯಾತಿ ಈತನಿಗಿದೆ. ಇದರೊಂದಿಗೆ ವೆಂಕಟರಡ್ಡಿ ಮುದ್ನಾಳ ಹಾಗೂ ನಾಗಣ್ಣಗೌಡ ಕಂದಕೂರ ಎಂಬ ರೆಡ್ಡಿ ಸಮುದಾಯದ ಇಬ್ಬರು ಕ್ಯಾಂಡಿಡೇಟ್‌ಗಳ ನಡುವೆ ಆದ ಮತಗಳ ಬಟಾವಣೆ ಕೂಡ ಚಿಂಚನಸೂರ ಗೆಲುವಿಗೆ ಕಾರಣವಾಗಿದೆ.

ಒಟ್ಟಿನಲ್ಲಿ ನಾಲ್ಕು ಮತಕ್ಷೇತ್ರಗಳಲ್ಲಿ ಮೂರು ಕಾಂಗ್ರೆ ಪಾಲಾಗಿದ್ದು ಒಂದರಲ್ಲಿ ಮಾತ್ರ ಕೆ.ಜೆ.ಪಿ ಅಭ್ಯರ್ಥಿ ಗೆದ್ದಿದ್ದಾರೆ.

ಕಾಂಗ್ರೆಗಳ ಕೈ ಹಿಡಿದ ಗುಲ್ಬರ್ಗಾ ಜಿಲ್ಲೆ

ಘಟಾನುಘಟಿ ರಾಜಕೀಯ ಮುಖಂಡರ ಮಕ್ಕಳನ್ನು ಹೆಡಮುರಗಿ ಕಟ್ಟಿ ಬಿಸಾಕಿದ ಜಿಲ್ಲೆ ಎಂದು ಹೆಸರುವಾಸಿಯಾಗಿದ್ದ ಗುಲ್ಬರ್ಗಾ ಈ ಬಾರಿ ಮಾತ್ರ ಕಾಂಗ್ರೆಗಳ ಕೈ ಹಿಡಿಯುವ ಮೂಲಕ ಬದಲಾವಣೆಗೆ ನಾಂದಿ ಹಾಡಿದೆ. ಮಾಜಿ ಮುಖ್ಯ ಮಂತ್ರಿ ಧರ್ಮಸಿಂಗ್

ಯಾದಗಿರಿ ಗುಲ್ಬರ್ಗಾ ಬೀದರ್

ಸಿದ್ಧಪಡಿಸಿದ್ದರು. ಆದ್ದರಿಂದ ವಾಲ್ಮೀಕಿ ನಾಯಕನನ್ನು ಹಿಂದಿಕ್ಕಿ ಪ್ರಿಯಾಂಕ ಗೆಲುವು ಸಾಧಿಸಿದ್ದಾರೆ.

371 ಕಲಂ ಜಾರಿಗೆಗಾಗಿ ಅಹರ್ನಿಶಿ ದುಡಿದ ವೈಜನಾಥ ಪಾಟೀಲ ಟ್ರಂಪ್ ಕಾರ್ಡಾಗಲಿ, ಚೆಡ್ಡಿ ತೊಟ್ಟು ಜಂಗಿ ಕುಸ್ತಿಗೆ ನಿಲ್ಲುತ್ತಿದ್ದ ಡಾ.ರಾಜಕುಮಾರ ಪಾಟೀಲ ತೇಲ್ಕೂರರ ಪಟ್ಟುಗಳಾಗಲಿ ಸೇಡಂನಲ್ಲಿ ಫಲಿಸಲಿಲ್ಲ. ಎಂದಿನಂತೆ ಶರಣಪ್ರಕಾಶ ಪಾಟೀಲ ಗೆಲ್ಲುವ ಮೂಲಕ ಅಚ್ಚರಿ ಉಂಟುಮಾಡಿದ್ದಾರೆ.

ನಾನು ಹುಂಬ, ಮುಗ್ಧ ಎಂದು ಹೇಳುತ್ತ ಎಲ್ಲವನ್ನೂ ಅಲೆ ಹಾಗೂ ಯದ್ದಿಯ ಎಡಬಿಟ್ಟು ರಾಜಕೀಯ ಎಂ.ವೈ. ಪಾಟೀಲರಿಗೆ ಮುಳುವಾಗಿದೆ. ಹೀಗಾಗಿ ಇದರ ಲಾಭವನ್ನು ಮಾಲೀಕಯ್ಯ ಗುತ್ತೇದಾರ ಎಂಬ ಫ್ಯೂಡಲ್ ಮನುಷ್ಯ ಹೊಡಕೊಂಡು ಕುಂತಿದ್ದಾನೆ.


ಮಾಜಿ ಮಂತ್ರಿ ಸುನೀಲ ವೆಲ್ಲಾಪುರೆಯನ್ನು ಈ ಬಾರಿ ಧೂಳೀಪಟ ಮಾಡಿದವರು ಡಾ. ಉಮೇಶ ಜಾಧವ ಎಂಬ ವೈದ್ಯರು. ಬಿಜೆಪಿಗಳ ದುರಾಡಳಿತ, ಹಗರಣಗಳು, ಅವಿವೇಕ ವರ್ತನೆಗಳು ಈ ಕ್ಷೇತ್ರದ ಜನರಿಗೆ ಬೇಸರ ಮೂಡಿಸಿ ಡಾ. ಉಮೇಶ ಜಾಧವರ ಗೆಲುವಿಗೆ ಕಾರಣವಾಗಿವೆ.

ಗುಲಾಮಗಿರಿ ಮನೋಭಾವ ಕಳೆದಕೊಳ್ಳದ ಬೀದರ್


ಕರ್ನಾಟಕದ ಭೂಪಟದಲ್ಲಿ ಮಹತ್ವದ ಸ್ಥಾನ ಪಡೆದ ಬೀದರ ಜಿಲ್ಲೆಯ ರಾಜಕೀಯವೇ ವಿಚಿತ್ರ. ಇಲ್ಲಿ ಗೆದ್ದು ಬಂದ ಅಭ್ಯರ್ಥಿಗಳು ಮತಕ್ಷೇತ್ರದತ್ತ ಮುಖಮಾಡದೆ ಐದು ವರ್ಷಗಳ ತರುವಾಯ ಮತ್ತೆ ಬಂದರೂ ಅವರಿಗೆ ಮಣೆಹಾಕಿ ಕೂಡಿಸುವುದು ಇಲ್ಲಿನ ಜನಗಳ ಮನೋಭಾವ. ಸ್ವಾತಂತ್ರ್ಯದ ಇಷ್ಟು ವರ್ಷಗಳ ನಂತರವೂ ಸಾರ್ವಜನಿಕರಲ್ಲಿ ಗುಲಾಮಗಿರಿ ಮನೋಭಾವ ಹೋಗಿಲ್ಲ.

ಗುರುಪಾದಪ್ಪ ನಾಗಮಾರಪಳ್ಳಿ ಎಂಬ ಫ್ಯೂಡಲ್ ರಾಜಕೀಯದ ಮನುಷ್ಯನ ತರಹೇವಾರಿ ನಡಾವಳಿಗಳನ್ನು ಕಂಡು ರೋಸಿ ಮೂಲೆಗುಂಪು ಮಾಡಬೇಕಾದ ಜನ ಅದೇನು ಕಾರಣವೋ ಮತ್ತೆ ಮತ್ತೆ ಪುರಸ್ಕರಿಸುತ್ತ ನಡೆದಿದ್ದಾರೆ. ಅಥವಾ ಬೇರೆ ಪಕ್ಷಗಳಿಂದಲೂ ತನಗೆ ಹಾನಿ ಆಗದೇ ಇರುವ ವ್ಯಕ್ತಿಯನ್ನು ತಂದು ನಿಲ್ಲಿಸಿ ಜಾತಿರಾಜಕೀಯದ ಮೂಲಕವಾದರೂ ತಾನು ಗೆಲ್ಲಬೇಕೆಂದು ಹವಣಿಸಿದಂತಿದೆ. ರಹೀಂಖಾನ್ ವಿರುದ್ಧ ಕೆ.ಜೆ.ಪಿಯಿಂದ ಗೆದ್ದು ನಾಗಮಾರಪಳ್ಳಿ ತನ್ನ ಬಲ ಪ್ರದರ್ಶಿಸಿದ್ದಾನೆ.

ಬೀದರ ದಕ್ಷಿಣದಿಂದ ಸ್ಪರ್ಧಿಸಿದ್ದ ನೈಸ್ ಖದೀಮ ಅಶೋಕ್ ಖೇಣಿ ಬಂಡೆಪ್ಪ ಖಾಶೆಂಪುರ ಎಂಬ ಕುಮಾರಸ್ವಾಮಿಯ ಬಲಗೈ ಬಂಟನ ಕೈ ಮುರಿದು ಹೋಗುವಂತೆ ಮಾಡಿದ್ದಾನೆ. ಖೇಣಿಯ ಕರಾಮತ್ತಿನ ಮುಂದೆ ಬಂಡೆಪ್ಪನ



ಡಾ. ಅಜೇಯ್ ಸಿಂಗ್




ಗುರು ಪಾಟೀಲ್




.ಮಾಲಕ ರೆಡ್ಡಿ



ಪ್ರಿಯಾಂಕ ಖರ್ಗೆ



ವೆಂಕಟಪ್ಪ ನಾಯ್ಕ್



ಬಾಬುರಾವ್ ಚವ್ಹಾಣ್

ಸುರಪುರ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದ ಮಾಜಿ ಮಂತ್ರಿ ರಾಜೂಗೌಡ (ನರಸಿಂಹನಾಯಕ) ತನ್ನ ತರಹೇವಾರಿ ರಾಜಕೀಯಗಳಿಂದ ಜನರಿಗೆ ರೇಜಿಗೆ ಹುಟ್ಟಿಸಿದ್ದ. ಪಕ್ಷದಿಂದ ಪಕ್ಷಕ್ಕೆ ಹಾರುವ ಮೂಲಕ ತನಗೆ ಬದ್ಧತೆ ಎಂಬುದು ಇಲ್ಲವೆಂದು ಪುಟುರಪಡಿಸಿದ್ದ. ಮತದಾರನನ್ನಂತೂ ಗಮನಿಸದೆ ತಾನು ಯಾವ ಪಕ್ಷದಿಂದ ಬೇಕಾದರೂ ನಿಂತು ಗೆದ್ದು ಬರಬಲ್ಲೆನೆಂಬ ಅಹಂ ನಡಾವಳಿಗಳು ಈತನನ್ನು ಮಣ್ಣು ಮುಕ್ಕಿಸಿದವು. ಇದರ ಲಾಭವನ್ನು ಸಹಜವಾಗಿ ಎದುರಾಳಿ ಅಭ್ಯರ್ಥಿಯಾದ ವೆಂಕಟಪ್ಪ ನಾಯಕ ಕಾಂಗ್ರೆನಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ್ದಾರೆ.

ಯಾದಗಿರಿ ಮತಕ್ಷೇತ್ರದ ಡಾ. ಎ.ಬಿ.ಮಾಲಕರೆಡ್ಡಿ ಕಳೆದ ಬಾರಿಯೂ ಆಯ್ಕೆಯಾಗಿದ್ದರು. ತನ್ನ ಎದುರಾಳಿ ಬಿಜೆಪಿಯ ವೀರಬಸವಂತರೆಡ್ಡಿಯನ್ನು ಕೆಡವಿ ಹಾಕಿದ್ದರು. ಈ ಬಾರಿಯೂ ತಮ್ಮ ಸಭ್ಯ ಹಾಗೂ ಸವ್ಯಸಾಚಿ ನಡಾವಳಿಗಳ ಮೂಲಕವೇ ಡಾ.ವೀರಬಸವಂತರೆಡ್ಡಿಯೆಂಬ ಕೆ.ಜೆ.ಪಿ. ಪಕ್ಷದ ನಾಯಕನನ್ನು ಸೋಲಿಸಿದ್ದಾರೆ. ಹೈಕಮಾಂಡನಲ್ಲಿ ತನ್ನದೇ ಛಾಪು ಮೂಡಿಸಿಕೊಂಡಿರುವ ಡಾ.ಮಾಲಕರೆಡ್ಡಿ ಹೆಚ್ಚು ಕೆಲಸಗಳನ್ನು ಮಾಡುವ ಮೂಲಕ ಮತದಾರ ಪ್ರಭುವಿನ ಆಸೆ ತೀರಿಸಬೇಕಿದೆ. ಹೆಂಡತಿ ಮಹಾದೇವಿ ಮಾಲಕರೆಡ್ಡಿ ಹಾಗೂ ಅಳಿಯ ಅಗಳಿಯ ಮಾತಿಗೆ ರಾಗ ಹೊಡೆಯುತ್ತ ಹೋದರೆ ತನ್ನ ಅಸ್ತಿತ್ವಕ್ಕೆ ಕೊಡಲಿಪೆಟ್ಟು ಬೀಳುತ್ತದೆ ಎಂಬುದು ಮನಗಾಣಬೇಕಾಗಿದೆ.

ಗಿಯಾಶ್ ರಾಜಕೀಯದಿಂದ ಹೆಸರುವಾಸಿಯಾದ ಬಾಬುರಾವ್ ಮತ್ತು ಹಾಲಿ ಕೇಂದ್ರದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಮಕ್ಕಳಾದ ಡಾ. ಅಜಯ ಸಿಂಗ್ ಮತ್ತು ಪ್ರಿಯಾಂಕ ಖರ್ಗೆ ಗೆಲುವಿನ ನೋಟ ಬೀರಿದ್ದಾರೆ.

ಕಳೆದ ಚುನಾವಣೆಯಲ್ಲಿ ಅಜಯ ಸಿಂಗ್ ಗುಲ್ಬರ್ಗಾ ಉತ್ತರದಲ್ಲಿ ಸ್ಪರ್ಧಿಸಿ ಪರಾಭವಗೊಂಡಿದ್ದ. ತನ್ನದಲ್ಲದ ಮತಕ್ಷೇತ್ರದಲ್ಲಿ ಸ್ಪರ್ಧಿಸಿದ್ದು ಬಹುಶಃ ಅಜಯ ಸಿಂಗ್‌ಗೆ ಮುಳುವಾಗಿತ್ತು. ಏಳು ಬಾರಿ ಜೇವರ್ಗಿ ಮತಕ್ಷೇತ್ರದಿಂದಲೆ ಗೆದ್ದು ತನ್ನ ವಿಜಯವನ್ನು ಸಾರುತ್ತಿದ್ದ ಧರ್ಮ ಸಿಂಗ್ ತನ್ನ ಜಿಡ್ಡುಗಟ್ಟಿದ ರಾಜಕೀಯದಿಂದ ಜನರ ತಿರಸ್ಕಾರಕ್ಕೆ ಗುರಿಯಾಗಿದ್ದರು. ಇದರ ಲಾಭ ಸಹಜವಾಗಿ ಬಿಜೆಪಿಯ ದೊಡ್ಡಪ್ಪಗೌಡ ಪಾಟೀಲ ನರಬೋಳಿಗೆ ದಕ್ಕಿತ್ತು. ಹಸಿವಿನಿಂದ ಕಬರುಗೆಟ್ಟು ಕುಂತವರಿಗೆ ಕಣ್ಣೆದುರು ಸಾಕಷ್ಟು ಅನ್ನ ಬಡಿಸಿಟ್ಟ ತಟ್ಟೆ ಕಂಡಾಗ ಹೇಗೆ ಗಡಬಡಿಸಿ ತಿನ್ನಲು ಶುರುಮಾಡುತ್ತಾರೋ ಹಾಗೆ ದೊಡ್ಡಪ್ಪಗೌಡ ಪಾಟೀಲ ನಡಕೊಂಡ. ತಾನು ಮಾತ್ರವಲ್ಲದೆ ತನ್ನ ತಮ್ಮ-ಬಂಧು ಬಾಂಧವರನ್ನು ಈ ಕೆಲಸಕ್ಕೆ ಹಚ್ಚಿ ಧರ್ಮಸಿಂಗ್‌ರೆ ವಾಸಿ ಎನ್ನುವ ಪ್ರತೀತಿ ಮೂಡುವಂತೆ ನೋಡಿಕೊಂಡ.

ಜಾತಿ ರಾಜಕೀಯ ಹಾಗೂ ಖರ್ಗೆಯ ಪುತ್ರ ಪ್ರಿಯಾಂಕ ಖರ್ಗೆಯನ್ನು ಹಣಿಯದೆ ಹೋದರೆ ತಮ್ಮ ಬದುಕು ಕರಾಳವಾಗಬಹುದೆಂಬ ಶಂಕೆಯಿಂದ ಕಾಂಗ್ರೆಗಳೆ ಹೂಡಿದ ತಂತ್ರಕ್ಕೆ ಪ್ರಿಯಾಂಕ ಖರ್ಗೆ ಕಳೆದ ಬಾರಿ ಸೋಲೊಪ್ಪಬೇಕಾಯಿತು. ಇದನ್ನು ಚೆನ್ನಾಗಿ ಮನಗಂಡ ಖರ್ಗೆ ಈ ಬಾರಿ ಚುನಾವಣೆಯ ಕಣವನ್ನು ಮೊದಲೇ

ಕಬಳಿಸಿದ ರೇವೂನಾಯಕ ಬೆಳಮಗಿಯನ್ನು ಚುನಾವಣಾ ಕುಸ್ತಿ ಕಣದಲ್ಲಿ ಸೋಲಿಸುವವ ಯಾರೂ ಇರಲಿಕ್ಕಿಲ್ಲ ಎಂದೇ ಭಾವಿಸಲಾಗಿತ್ತು. ಆದರೆ ಜಿ.ರಾಮಕೃಷ್ಣ ಎಂಬ ಸಭ್ಯ ಹಾಗೂ ಜನಾನುರಾಗಿ ವ್ಯಕ್ತಿ ಗೆಲ್ಲುವ ಮೂಲಕ ರೇವೂ ನಾಯಕಗೆ ವಿಶ್ರಾಂತಿ ನೀಡಿದ್ದಾನೆ.

ಗುಲ್ಬರ್ಗಾ ದಕ್ಷಿಣ ಕ್ಷೇತ್ರದ ರಂಗು ಈ ಬಾರಿ ಮುಗಿಲು ಮುಟ್ಟಿತ್ತು. ಇದಕ್ಕೆ ಕಾರಣ ಹುಟ್ಟಾ ಚೆಡ್ಡಿ ತೊಟ್ಟು ನಿಲ್ಲುತ್ತಿದ್ದ ಶಶಿಲನಮೋಶಿ ಈ ಬಾರಿ ಟಿಕೆಟ್ ವಂಚಿತನಾಗಿ ಜೆ.ಡಿ.ಎಸ್.ದಿಂದ ಸ್ಪರ್ಧಿಸಿದ್ದ. ಎಸ್.ಕೆ.ಕಾಂತಾ ಎಂಬ ಮಾಜಿ ಮಂತ್ರಿ ಕೆ.ಜೆ.ಪಿಯಿಂದ ಸ್ಪರ್ಧಿಸಿದ್ದರು. ಕಳೆದ ಬಾರಿ ಜೆ.ಡಿ.ಎಸ್.ದಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ್ದ ರೇವೂರ ಕುಟುಂಬ ಈ ಬಾರಿ ಕಮಲವನ್ನು ಅಪ್ಪಿಕೊಂಡು ಗೆಲುವು ಸಾಧಿಸಿದೆ.

ಗುಲ್ಬರ್ಗಾ ಉತ್ತರ ಕ್ಷೇತ್ರದಲ್ಲಿ ಖಮರುಲ್ ಇಸ್ಲಾಂ ಎಂದಿನ ತನ್ನ ಆಕ್ರಮಣಕಾರಿ ಚುನಾವಣೆಯ ಟ್ರಂಪ್ ಕಾರ್ಡಗಳನ್ನು ಬಳಸಿ ಗೆದ್ದು ಬಂದಿರುವ ಆಸಾಮಿ. ತನ್ನ ಶೀರಾ ಸಮೀಪದ ಪ್ರತಿಸ್ಪರ್ಧಿ ನಾಸಿರ ಹುಸೇನ್‌ನನ್ನು ಹಿಂದಿಕ್ಕಿ ತಾನು ಗೆಲ್ಲುವ ಮೂಲಕ ಜಯದ ಮಾಲೆಯನ್ನು ತನ್ನ ಕೊರಳಿಗೆ ಹಾಕಿಕೊಂಡಿದ್ದಾನೆ.

ಕೆ.ಜೆ.ಪಿಯಿಂದ ಸ್ಪರ್ಧಿಸಿ ತನ್ನ ಹಾಗೂ ಯದ್ದಿ ಅಭಿಮಾನಿಗಳ ಓಟಿನ ಮೇಲೆ ಗೆಲ್ಲಬಹುದೆಂಬ ಲೆಕ್ಕ ಹಾಕಿದ್ದ ಎಂ.ವೈ. ಪಾಟೀಲ ಎಂಬ ಟೋಪಿ ಆಸಾಮಿಗೆ ಜನ ಈ ಬಾರಿ ಟಾಂಗ್ ಕೊಟ್ಟಿದ್ದಾರೆ. ಬಿ.ಜೆ.ಪಿ ವಿರೋಧಿ

ಆಟವಾಗಲಿ, ಆಟಾಟೋಪವಾಗಲಿ ನಡೆಯಲಿಲ್ಲ. ಬಹುಶಃ ಖೇಣಿಯ ಗೆಲುವು ಬಂಡೆಪ್ಪನ ವಿರುದ್ಧದ ಗೆಲುವಲ್ಲ ಬದಲಾಗಿ ದೇವೇಗೌಡ ವಿರುದ್ಧದ ಗೆಲುವು ಎಂದು ಜನ ಮಾತಾಡುತ್ತಿದ್ದಾರೆ.

ಕಾಂಗ್ರೆಗಳ ಭದ್ರಕೋಟೆಯನ್ನು ಭೇದಿಸುವ ಮೂಲಕ ವಿಕ್ರಮ ಸಾಧಿಸಿದ್ದ ಪ್ರಕಾಶ ಖಂಡ್ರೆ ಈ ಬಾರಿ ಭಾಲ್ಕಿ ಮತಕ್ಷೇತ್ರದಲ್ಲಿ ಮೂರನೆಯ ಸ್ಥಾನ ಪಡಕೊಂಡಿದ್ದಾರೆ. ಆಶ್ಚರ್ಯವೆನ್ನುವಂತೆ ಡಿ.ಕೆ.ಸಿದ್ರಾಮ ಎಂಬ ನಾಗಮಾರಪಳ್ಳಿಯ ಕೃಪಾಪೋಷಿತ ನಾಟಕ ಮಂಡಳಿಯ ಸದಸ್ಯ 2ನೆ ಸ್ಥಾನ ಪಡೆದಿದ್ದಾನೆ. ಸಾಕಷ್ಟು ಶಿಕ್ಷಣ ಸಂಸ್ಥೆಗಳ ಮೂಲಕ ಮತದಾರರ ಪ್ರಭುವನ್ನು ಇಂಬಿಟ್ಟುಕೊಂಡ ಖಂಡ್ರೆ ಗೆದ್ದು ಬಂದಿದ್ದಾನೆ. ಕಳೆದ ಬಾರಿ ಕ್ಷೇತ್ರದಲ್ಲಿ ಯಾವ ಕೆಲಸವನ್ನೂ ಮಾಡದ ಖಂಡ್ರೆಗೆ ಮತದಾರ ಗೆಲುವಿನ ಮಾಲೆ ಹಾಕಿದ್ದು ಸೋಜಿಗ ಅನ್ನುವಂತೆ ಇದೆ.

ಔರಾದ ಮತಕ್ಷೇತ್ರದಲ್ಲಿ ದಲಾಜಿ ಜಾದವ್ ಎಂಬ ಅಷ್ಟೇನು ಪರಿಚಿತನಲ್ಲದ ವ್ಯಕ್ತಿಯ ಎದುರುಗಡೆ ಪ್ರಭು ಚೌವ್ಹಾಣ ಎಂಬ ಕಮಲದ ವ್ಯಕ್ತಿ ಅನಿವಾರ್ಯವೆಂಬಂತೆ ಆಯ್ಕೆಗೊಂಡಿದ್ದಾನೆ. ಬಸವಕಲ್ಯಾಣದಲ್ಲಿ ಎಂದಿನಂತೆ ಅಳಿದವರ ಊರಿನಲ್ಲಿ ಉಳಿದವರೆ ಗೌಡರು ಎಂಬಂತೆ ಮಲ್ಲಿಕಾರ್ಜುನ ಖೂಬಾ ಜೆ.ಡಿ.ಎಸ್‌ನಿಂದ ಗೆಲುವು ಸಾಧಿಸಿದ್ದಾರೆ. ಹುಮ್ನಾಬಾದ ಮತಕ್ಷೇತ್ರವೂ ಕೂಡ ಎಂದಿನಂತೆ ಕಾಂಗ್ರೆಗಳ ಪಾಲಾಗಿದೆ.

• ವಿಶ್ವಾರಾಧ್ಯ ಸತ್ಯಂಪೇಟೆ

ಗೆದ್ದ ಬಿಜೆಪಿ ಶಾಸಕರೆಲ್ಲ ನೆಲಗಳ್ಳರೇ!

ರಾಜಧಾನಿಗೆ ತಪ್ಪದ ರಿಯಲ್ ಎಸ್ಟೇಟ್ ಕಂಟಕ

ರಾಜಧಾನಿಯ 28 ಕ್ಷೇತ್ರಗಳಲ್ಲಿ ಬಿಜೆಪಿಗೆ ಸಿಕ್ಕಿದ್ದು ಕೇವಲ ಹನ್ನೆರಡು ಮಾತ್ರ. ಬೊಮ್ಮನಹಳ್ಳಿಯ ಸತೀಶ್‌ರೆಡ್ಡಿ, ದಾಸರಹಳ್ಳಿಯ ಮುನಿರಾಜು, ಯಲಹಂಕದ ವಿಶ್ವನಾಥ್, ಮಲ್ಲೇಶ್ವರದ ಅಶ್ವತ್ಥನಾರಾಯಣ, ಬೆಂಗಳೂರು ದಕ್ಷಿಣದಲ್ಲಿ ಕೃಷ್ಣಪ್ಪ, ಹೆಬ್ಬಾಳದ ಜಗದೀಶ್‌ಕುಮಾರ್, ಮಹದೇವಪುರದ ಲಿಂಬಾವಳಿ ಮತ್ತು ಪದ್ಮನಾಭನಗರದ ಅಶೋಕ್‌ರಂಥ ರಿಯಲ್ ಎಸ್ಟೇಟ್ ದೈತ್ಯರನ್ನು ಹೊರತುಪಡಿಸಿದರೆ ಪಕ್ಷ ರಾಜಕಾರಣ ಮಾತ್ರದಿಂದಲೇ ಗೆದ್ದವರು ರಾಜಾಜಿನಗರದ ಸುರೇಶ್‌ಕುಮಾರ್, ಬಸವನಗುಡಿಯ ರವಿಸುಬ್ರಹ್ಮಣ್ಯಂ, ಸಿ.ವಿ. ರಾಮನ್‌ನಗರದ ರಘು ಮತ್ತು ಜಯನಗರದ ವಿಜಯ್‌ಕುಮಾರ್ ಮಾತ್ರ!

ಇದರರ್ಥ ನಾಲ್ಕು ಅಥವಾ ಐದು ಸ್ಥಾನಗಳ ಹೊರತಾಗಿ ಬಿಜೆಪಿ ಗೆದ್ದ ಉಳಿದ ಏಳೂ ಸ್ಥಾನಗಳ ಹಿಂದಿರುವುದು ರಿಯಲ್ ಎಸ್ಟೇಟ್ ದುಡ್ಡು ಮತ್ತು ರೌಡಿ ತಾಕತ್ತು.

ಇದೆಲ್ಲದರ ಹೊರತಾಗಿಯೂ ಬೆಂಗಳೂರಿನ ಮತದಾರ ಬಿಜೆಪಿಗೆ ತಕ್ಕ ಪಾಠ ಕಲಿಸಿದ್ದಾನೆ. ಕಳೆದ ಬಾರಿ ಕೇವಲ 10 ಸ್ಥಾನಗಳನ್ನಷ್ಟೇ ಹಿಡಿದಿದ್ದ ಕಾಂಗ್ರೆಸ್ ಈ ಬಾರಿ ರಾಜಾಜಿನಗರದ ನರೇಂದ್ರಬಾಬು ಮತ್ತು ಪುಲಕೇಶಿ ನಗರದ ಪ್ರಸನ್ನಕುಮಾರ್‌ರ ಸ್ಥಾನಗಳನ್ನು ಕಳಕೊಂಡೂ 13 ಸ್ಥಾನಗಳನ್ನು ಗೆದ್ದಿದೆಯೆಂದರೆ ಅದು ನಗರದ ಮತದಾರನಿಗೆ ಬಿಜೆಪಿ ದುರಾಡಳಿತದ ವಿರುದ್ಧ ಎಂಥಾ ಆಕ್ರೋಶವಿತ್ತೆಂಬುದಕ್ಕೆ ಸಣ್ಣ ನಿದರ್ಶನವಷ್ಟೆ.

ಇಲ್ಲದಿದ್ದರೆ ಕೇವಲ ಒಂದು ಸ್ಥಾನಕ್ಕಷ್ಟೇ ಸೀಮಿತಗೊಂಡಿದ್ದ ಜೆಡಿಎಸ್ ಮೂರಕ್ಕೇರುತ್ತಿರಲಿಲ್ಲ ಮತ್ತು ಐದಕ್ಕೂ ಅಧಿಕ ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ಗಳೆರಡನ್ನೂ ಹಿಂದಿಕ್ಕಿ ಮುನ್ನುಗ್ಗುತ್ತಿರಲಿಲ್ಲ!

ಬಿಜೆಪಿ ರಿಯಲ್ ಎಸ್ಟೇಟ್

ಯಾವ ನೆಲ ಕಂಟಕರು, ರಿಯಲ್ ಎಸ್ಟೇಟ್ ಖದೀಮರನ್ನು ರಾಜಕೀಯದಿಂದ ಹೊರಗಿಟ್ಟು ಬೆಂಗಳೂರನ್ನು ಕಾಪಾಡಬೇಕಿತ್ತೋ ಅಂಥ ಭೂಕಂಟಕರನ್ನು ಮುಂದಿಟ್ಟುಕೊಂಡೇ ಬೆಂಗಳೂರಿನಲ್ಲಿ ಅಧಿಕಾರ ಹಿಡಿದದ್ದು ಬಿಜೆಪಿ. ಅದು ಶುರುವಾಗಿದ್ದು ಅಶೋಕ್ ಮತ್ತು ಕಟ್ಟಾ ಸುಬ್ರಹ್ಮಣ್ಯನಾಯ್ಡುಗೆ ಬಿಜೆಪಿ ಟಿಕೆಟ್ ನೀಡುವ ಮೂಲಕ. ಕ್ರಮೇಣ ಅದು ಬಿಜೆಪಿಯ ಸಿದ್ಧಾಂತ, ಆದರ್ಶ ಬೆಂಗಳೂರಿನ ಭವಿಷ್ಯವನ್ನೂ ಮೀರಿ ವ್ಯಾಪಿಸಿತು. ಕಳೆದ ಬಾರಿ ದಾಸರಹಳ್ಳಿ ಅಭ್ಯರ್ಥಿಯಾಗಿದ್ದ ಮುನಿರಾಜುವಿನಿಂದ ಹಿಡಿದು ಯಲಹಂಕದ ವಿಶ್ವನಾಥ್, ಕೆಆರ್. ಪುರದ ನಂದೀಶ್ ರೆಡ್ಡಿ, ಬೊಮ್ಮನಹಳ್ಳಿಯ ಸತೀಶ್ ರೆಡ್ಡಿ, ಬಿಟಿಎಂ ಲೇಔಟ್ ಅಭ್ಯರ್ಥಿಯಾದ ಪ್ರಸಾದ್ ರೆಡ್ಡಿ, ಬ್ಯಾಟರಾಯನಪುರಕ್ಕೆ ಕೃಷ್ಣ ಭೈರೇಗೌಡರ ವಿರುದ್ಧ ಬಿಜೆಪಿ ಅಭ್ಯರ್ಥಿಯಾದ ಅಶೋಕ್‌ರ ಖಾಸಾ


ಸತೀಶ್‌ರೆಡ್ಡಿ


ವಿಶ್ವನಾಥ್


ಮುನಿರಾಜು


ನಂದೀಶ್‌ರೆಡ್ಡಿ


ಭೈರತಿ ಬಸವರಾಜ್


ಗೋಪಾಲಯ್ಯ

ತಮ್ಮ ರವಿ, ಬೆಂಗಳೂರು ದಕ್ಷಿಣಕ್ಕೆ ಎಂ. ಕೃಷ್ಣಪ್ಪ, ಚಿಕ್ಕಪೇಟೆಯ ಹೇಮಚಂದ್ರ ಸಾಗರ್ ಇತ್ಯಾದಿಗಳೆಲ್ಲ ರಿಯಲ್ ಎಸ್ಟೇಟ್ ಅಭ್ಯರ್ಥಿಗಳಾಗಿಯೇ ಬಿಜೆಪಿ ಬಾವುಟ ಹಿಡಿದವರು.

ಪರಿಣಾಮ ಏನಾಯಿತೆಂಬುದು ರಾಜಧಾನಿಯ ಜನಕ್ಕೇ ಚೆನ್ನಾಗಿ ಗೊತ್ತು. ಕಟ್ಟಾ ಜೈಲು ಪಾಲಾದ. ಅಶೋಕ್ ಜೈಲು ಪಾಲಾಗುವುದರಿಂದ ಬಚಾವಾದರೆ ಯಲಹಂಕದ ವಿಶ್ವನಾಥ್, ನಂದೀಶ್ ರೆಡ್ಡಿ ಸತೀಶ್ ರೆಡ್ಡಿ ದಾಸರಹಳ್ಳಿ ಮುನಿರಾಜು, ಎಂ. ಕೃಷ್ಣಪ್ಪ ಮುಂತಾದವರೆಲ್ಲ ಬೆಂಗಳೂರಿನ ಭವಿಷ್ಯಕ್ಕೆಂದು ಮೀಸಲಿಟ್ಟಿದ್ದ ಚೂರುಪಾರು ಭೂಮಿಯನ್ನೂ ಬಿಡದೆ ಕೊಳ್ಳೇ ಹೊಡೆದರು. ಅವತ್ತು ಗೆದ್ದ ಅರ್ಧಕ್ಕೂ ಅಧಿಕ ಮಂದಿ ಬಿಜೆಪಿ ಶಾಸಕರೆಲ್ಲ ಇದೇ ಪಾಪದ ದುಡ್ಡೇ ಸುರಿದು ಮತ್ತೆ ಗೆದ್ದು ಬಂದಿದ್ದಾರೆ.

ದುರಂತವೆಂದರೆ ಇಂಥ ರಿಯಲ್ ಎಸ್ಟೇಟ್ ಅಭ್ಯರ್ಥಿಗಳನ್ನು ಸೋಲಿಸಲು ಕಾಂಗ್ರೆಸ್ ಮತ್ತು ಜೆಡಿಎಸ್‌ಗಳೂ ಮತ್ತದೇ ರಿಯಲ್ ಎಸ್ಟೇಟ್ ಅಭ್ಯರ್ಥಿಗಳ ಮೊರೆ ಹೋಗಬೇಕಾಗಿ ಬಂದದ್ದು!

ನಂದೀಶ್ ರೆಡ್ಡಿಯನ್ನು ಸೋಲಿಸಲು ಕಾಂಗ್ರೆಸ್ಸಿಗೆ ಸಿಕ್ಕ ಭೈರತಿ ಬಸವರಾಜ್ ಓರ್ವ ಖತರ್‌ನಾಕ್ ರಿಯಲ್ ಎಸ್ಟೇಟ್ ಆಸಾಮಿಯೆಂಬ ಬಗ್ಗೆ ಯಾರಿಗೂ ಅನುಮಾನಗಳಿಲ್ಲ. ಲಿಂಬಾವಳಿ ವಿರುದ್ಧ ಕಾಂಗ್ರೆಸ್ಸಿನ ಶ್ರೀನಿವಾಸ್, ಯಲಹಂಕದ ವಿಶ್ವನಾಥ್ ವಿರುದ್ಧ ಕಾಂಗ್ರೆಸ್ಸಿನ ಗೋಪಾಲಕೃಷ್ಣ ಸತೀಶ್ ರೆಡ್ಡಿ ವಿರುದ್ಧ ನಾಗಭೂಷಣ ರೆಡ್ಡಿ, ಬೆಂಗಳೂರು ದಕ್ಷಿಣದಲ್ಲಿ ಬಿಜೆಪಿ ಶಾಸಕ ಕೃಷ್ಣಪ್ಪ ವಿರುದ್ಧ ಜೆಡಿಎಸ್‌ನ ಪ್ರಭಾಕರ್ ರೆಡ್ಡಿ ಮುಂತಾದವರೆಲ್ಲ ರಿಯಲ್ ಎಸ್ಟೇಟ್ ಆಸಾಮಿಗಳೇ.

ಯಲಹಂಕದ ನೆಲಕಂಟಕ!

ಈ ಪೈಕಿ ಕೆ.ಆರ್. ಪುರದಲ್ಲಿ ಭೈರತಿ ಬಸವರಾಜ್ ಗೆದ್ದಿದ್ದಾನೆ. ಅದಕ್ಕಿಂತಲೂ ಮಿಗಿಲಾಗಿ ಬಿಜೆಪಿಯ ಅಷ್ಟೂ ಮಂದಿ ರಿಯಲ್ ಎಸ್ಟೇಟ್ ಕಿರಾತಕರೆಲ್ಲ ಮತ್ತೆ ಗೆದ್ದು ಶಾಸಕರಾಗಿದ್ದಾರೆ. ಯಾವುದೇ ಕಾರಣಕ್ಕೂ ಈ ಬಾರಿ ಯಲಹಂಕ ಶಾಸಕ ವಿಶ್ವನಾಥ್ ಗೆಲ್ಲುವ ಸಾಧ್ಯತೆಯಿರಲಿಲ್ಲ. ಕಳೆದ ಬಾರಿ ವಿಶ್ವನಾಥ್ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ಚಂದ್ರಪ್ಪ ಈ ಬಾರಿ ಜೆಡಿಎಸ್ ಅಭ್ಯರ್ಥಿಯಾಗಿ ಗೆಲ್ಲುವ ಎಲ್ಲಾ ಲಕ್ಷಣಗಳಿದ್ದವು. ಕಳೆದ ಬಾರಿ ಜೆಡಿಎಸ್ ಅಭ್ಯರ್ಥಿಯಾಗಿದ್ದ ಅಡಕಮಾರನಹಳ್ಳಿ ಕೃಷ್ಣಪ್ಪ ಮತ್ತು ಚಂದ್ರಪ್ಪರ ಮತಗಳು ಸೇರಿಬಿಟ್ಟಿದ್ದರೆ ವಿಶ್ವನಾಥ್ ಸೋಲಲೇಬೇಕಿತ್ತು.

ಇದಕ್ಕೆ ಅಡ್ಡ ಬಂದಿದ್ದು ಕಾಂಗ್ರೆಸ್ ಅಭ್ಯರ್ಥಿ ಗೋಪಾಲಕೃಷ್ಣ ಸರಿಸುಮಾರು 52 ಸಾವಿರ ಮತಗಳನ್ನು ಕಾಂಗ್ರೆಸ್ ಕಿತ್ತಿದ್ದರಿಂದಾಗಿ ಗೆಲ್ಲಬೇಕಿದ್ದ ಚಂದ್ರಪ್ಪನಿಗೆ ಬರಬೇಕಿದ್ದ ಓಟುಗಳು ಕಮ್ಮಿಯಾದವು. ಕೋಟಿಗಟ್ಟಲೆ ದುಡ್ಡು, ನಕಲಿ ಮತದಾರರು, ಗೂಂಡಾಪಡೆಗಳೆಲ್ಲವನ್ನೂ ಬಳಸಿದ ವಿಶ್ವನಾಥ್‌ಗೆ ತಾನು ಜೈಲು ಪಾಲಾಗುವುದರಿಂದ ಬಚಾವಾಗಬೇಕೆಂದರೆ ಗೆಲ್ಲುವುದು ಅನಿವಾರ್ಯವಾಗಿತ್ತು.

ಇದೇ ಪರಿಸ್ಥಿತಿಯಲ್ಲಿದ್ದ ಮತ್ತೊಬ್ಬ ನೆಲಕಂಟಕ ಬಿಜೆಪಿ ಶಾಸಕನೆಂದರೆ ಅದು ಬೊಮ್ಮನಹಳ್ಳಿಯ ಸತೀಶ್ ರೆಡ್ಡಿ!

ಇವತ್ತು ಜನನಿಬಿಡ ಹೊಸೂರು ರಸ್ತೆ ಎಲೆಕ್ಟ್ರಾನಿಕ್ ಸಿಟಿ ಮತ್ತು ಬೊಮ್ಮನಹಳ್ಳಿ ಸುತ್ತಮುತ್ತ ಹೆಣ ಹೂಳುವುದಕ್ಕಿರಲಿ, ಜನಕ್ಕೆ ಮೂತ್ರ ವಿಸರ್ಜನೆಗೂ ಅಡಿ ಜಾಗ ಉಳಿದಿಲ್ಲ. ಒಂದೆಡೆ ನೆಲ ದೋಚಿದ್ದೂ ಅಲ್ಲದೆ ಸತೀಶ್ ರೆಡ್ಡಿ ಪುಡಿಪುಡಿ ರೌಡಿಗಳನ್ನೂ ಬೆಳೆಸಿದ. ಏಳಕ್ಕೆ ಏಳೂ ಬಿಬಿಎಂಪಿ ವಾರ್ಡುಗಳಲ್ಲಿ ತನ್ನ ಛೇಲಾಗಳನ್ನೇ ಗೆಲ್ಲಿಸಿದ. ಅಧಿಕಾರ, ರಿಯಲ್ ಎಸ್ಟೇಟ್ ರೊಕ್ಕ ಮತ್ತು ಗೂಂಡಾಗಿರಿಯಿಂದಲೇ ಕ್ಷೇತ್ರದುದ್ದಕ್ಕೂ ಕಾಂಗ್ರೆಸ್ಸಿಗೆ ಕಾರ್ಯಕರ್ತರೇ ಸಿಗದಂತೆ ಮಾಡಿದ್ದರ ಫಲವಾಗಿ ಸತೀಶ್ ರೆಡ್ಡಿ ಗೆದ್ದಿದ್ದಾನೆ. ಪಾಲಿಕೆಯ ಬೋಗಸ್ ಬಿಲ್ ಕಾಮಗಾರಿಯೊಂದನ್ನೇ ತನಿಖೆಗೈದರೂ ಸತೀಶ್ ರೆಡ್ಡಿ ಜೈಲು ಪಾಲಾಗುತ್ತಾನೆ.

ಯಲಹಂಕದ ವಿಶ್ವನಾಥ್ ಮತ್ತು ಬೊಮ್ಮನಹಳ್ಳಿಯ ಸತೀಶ್ ರೆಡ್ಡಿಗಿಂತಲೂ ಹೆಚ್ಚು ಖತರ್‌ನಾಕ್ ಮತ್ತು ದೊಡ್ಡ ಹಸಿವಿನ ಆಸಾಮಿ ಬೆಂಗಳೂರು ದಕ್ಷಿಣದ ಶಾಸಕ ಎಂ. ಕೃಷ್ಣಪ್ಪ. ಎಲ್ಲೂ ನೇರವಾಗಿ ನೆಲ ಕಬಳಿಸದೇ ತನ್ನ ಬೇನಾಮಿಗಳನ್ನು ಬಿಟ್ಟು ದೊಡ್ಡ ದೊಡ್ಡ ಅಪಾರ್ಟ್‌ಮೆಂಟ್‌ಗಳನ್ನೆಬ್ಬಿಸುವುದು ಈತನ ಚಾಳಿ. ಉತ್ತರಹಳ್ಳಿ ಸುತ್ತಮುತ್ತ ಬಿಡಿಎ ಭೂಮಿ ಕಬಳಿಸಿ ತಲೆ ಎತ್ತಿದ 80ಕ್ಕೂ ಅಧಿಕ ಅಕ್ರಮ ಅಪಾರ್ಟ್‌ಮೆಂಟುಗಳ ಕಾರಣಕರ್ತರಾದ ಕಿಶೋರ್ ಕುಮಾರ್, ಬಿಲ್ ಕಲೆಕ್ಟರ್ ನಂಜುಂಡಯ್ಯ, ಡೆವಲಪರ್‌ಗಳಾದ ಹನುಮಂತಯ್ಯ, ವರಪ್ರಸಾದ್ ರೆಡ್ಡಿ, ರಜನಿಕುಮಾರ್, ವಿಜಯ್‌ಕುಮಾರ್, ಗುಂಡಪ್ಪ ಶೆಟ್ಟಿ ಮುಂತಾದವರೆಲ್ಲರೂ ಶಾಸಕ ಕೃಷ್ಣಪ್ಪನ ಬೇನಾಮಿಗಳೇ.

ರೌಡಿಗಳಾದ ಪೊಲೀಸರು!

ಸ್ಥಳೀಯರ ಪ್ರತಿಭಟನೆಯನ್ನೂ ಲೆಕ್ಕಿಸದೆ ಹೈಕಮಾಂಡ್ ತೇಜಸ್ವಿನಿಗೆ ಟಿಕೆಟ್ ಕೊಟ್ಟದ್ದು ಕಾಂಗ್ರೆಸ್ ಸೋಲಿಗೆ ಕಾರಣವಾದಂತೆಯೇ ಬಿಜೆಪಿ ಗೆಲುವಿಗೂ ಕಾರಣವಾಗಿದೆ. ವಿಶೇಷವೆಂದರೆ ತೇಜಸ್ವಿನಿಯನ್ನೂ ಮೀರಿಸಿ ಜೆಡಿಎಸ್‌ನ ಪ್ರಭಾಕರ್ ರೆಡ್ಡಿ ಸರಿಸುಮಾರು ಎಪ್ಪತ್ತು ಸಾವಿರದಷ್ಟು ಮತಗಳನ್ನು ಪಡೆದದ್ದು.

ಹೆಬ್ಬಾಳದಿಂದ ಗೆದ್ದ ಬಿಜೆಪಿಯ ಜಗದೀಶ್‌ಕುಮಾರ್ ಹೇಳಿಕೇಳಿ ಕಟ್ಟಾ ನಾಯ್ಡುವಿನ ಮನೆಯಾಳು.


ನರೇಂದ್ರಬಾಬು


ಜಮೀರ್ ಅಹ್ಮದ್


ಪ್ರಸನ್ನಕುಮಾರ್


ಅಶ್ವತ್ಥನಾರಾಯಣ


ಎಂ.ಕೃಷ್ಣಪ್ಪ (ಬೆಂ.ದ)


ತೇಜಸ್ವಿನಿ

ಕಟ್ಟಾ ಮತ್ತು ಮಗ ಜಗ್ಗನ ಎಲ್ಲಾ ನೆಲಗಳ್ಳತನಕ್ಕೆ ಬೇಕಾದ ವ್ಯವಸ್ಥೆ ಕಲ್ಪಿಸುವುದನ್ನೇ ಕಾಯಕ ಮಾಡಿಕೊಂಡಿದ್ದ ಜಗದೀಶ್‌ಕುಮಾರ್ ಗೆದ್ದದ್ದು ಕಟ್ಟಾ ಗೆದ್ದಂತೆಯೇ ಲೆಕ್ಕ. ಮಲ್ಲೇಶ್ವರದ ಶಾಸಕ ಅಶ್ವತ್ಥನಾರಾಯಣ ಈ ಬಾರಿ ಎಷ್ಟು ಕೋಟಿ ಸುರಿದಾದರೂ ಗೆಲ್ಲಲೇಬೇಕಿದ್ದ ಹರಕತ್ತಿಗೆ ಬಿದ್ದೇ ಸರಿಸುಮಾರು ಮೂವತ್ತು ಸಾವಿರದಷ್ಟು ಚಿನ್ನದ ಉಂಗುರಗಳನ್ನು ಹಂಚಿದ್ದ. ಈತನ ತಮ್ಮ ಸತೀಶ್ ತನ್ನ ಕಾರಿನಲ್ಲಿ ಸಾಗಿಸುತ್ತಿದ್ದ ಒಂದೂವರೆ ಕೋಟಿ ಮೊತ್ತದ ನೋಟಿನ ಕಂತೆಗಳನ್ನು ಕಾಂಗ್ರೆಸ್ ಕಾರ್ಯಕರ್ತರೇ ಅಡ್ಡಗಟ್ಟಿ ಹಿಡಿದು ಸಂಜಯ್‌ನಗರ ಪೊಲೀಸ್ ಠಾಣೆಗೆ ಒಪ್ಪಿಸಿದರೆ ಖುದ್ದು ಡಿಸಿಪಿ ರವಿಕಾಂತೇಗೌಡ ಧಾವಿಸಿ ಬಂದು ಬಿಜೆಪಿಯವರ ಪರವಹಿಸಿ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಲಾಠಿ ಚಾರ್ಜ್ ಮಾಡಿಸುತ್ತಾರೆ. ಜಪ್ತಾದ ಒಂದೂವರೆ ಕೋಟಿಯ ದುಡ್ಡಿನ ಮೂಟೆಯನ್ನು ಎಮ್ಮೆಲ್ಲೇ ತಮ್ಮನಿಗೇ ವಾಪಸ್ಸು ಕೊಡಿಸಿದ್ದೂ ಅಲ್ಲದೆ ಅದನ್ನು ತಮ್ಮ ಮೊಬೈಲ್ ಕ್ಯಾಮೆರಾಗಳ ಮೂಲಕ ಚಿತ್ರೀಕರಿಸಿದ್ದ ಕಾಂಗ್ರೆಸ್ ಕಾರ್ಯಕರ್ತರನ್ನೆಲ್ಲ ಲಾಕಪ್ಪಿಗೆ ದಬ್ಬಿ ತಾವೇ ನಿಂತು ಸೆರೆಹಿಡಿದಿದ್ದ ವೀಡಿಯೋಗಳನ್ನು ಡಿಲೀಟ್ ಮಾಡಿಸುತ್ತಾರೆ!

ಇದು ಕೇವಲ ಮಲ್ಲೇಶ್ವರದ ದುರಾಚಾರವಷ್ಟೇ ಅಲ್ಲ. ಪದ್ಮನಾಭನಗರದಲ್ಲಿ ಅಶೋಕ್ ಪರ ಮತದಾರರಿಗೆ ಹಂಚಲೆಂದು ಗಣೇಶ್‌ಮಂದಿರದ ವಾರ್ಡಿನ ಕೌನ್ಸಿಲರ್ ಗೋವಿಂದರಾಜು ತನ್ನ ಬಾಲಾಜಿ ಕಲ್ಯಾಣ ಮಂಟಪದಲ್ಲಿ ಅಡಗಿಸಿಟ್ಟಿದ್ದ 50 ಲಕ್ಷಕ್ಕೂ ಅಧಿಕ ದುಡ್ಡಿನ ಮೂಟೆಯನ್ನು ಕಾಂಗ್ರೆಸ್ ಕಾರ್ಯಕರ್ತರು ನುಗ್ಗಿ ಪೊಲೀಸರಿಗೆ ಹಿಡಿದುಕೊಟ್ಟಿದ್ದಾರೆ. ಅದನ್ನು ಚೆನ್ನಮ್ಮಕೆರೆ ಅಚ್ಚುಕಟ್ಟು ಪೊಲೀಸರಿಗೆ ಒಪ್ಪಿಸಿದ್ದಾರೆ. ಆದರೆ ಪೊಲೀಸರು ದುಡ್ಡು ಹಿಡಕೊಟ್ಟ ಕಾಂಗ್ರೆಸ್ ಕಾರ್ಯಕರ್ತರನ್ನೇ ಹಿಡಿದು ಬಡಿಯುತ್ತಾರೆ, ಓಡಿಸುತ್ತಾರೆ.


ಜೆಡಿಎಸ್ ಪ್ರಾಬಲ್ಯ

ಇದು ರಿಯಲ್ ಎಸ್ಟೇಟ್ ದುಡ್ಡು ಮತ್ತು ಪೊಲೀಸರನ್ನು ಬಳಸಿಕೊಂಡು ಬಿಜೆಪಿ ಗೆದ್ದ ಕೆಲ ಸ್ಯಾಂಪಲ್ಲುಗಳಷ್ಟೆ. ಮಿಕ್ಕಂತೆ ಟಿಕೆಟ್ ಹಂಚಿಕೆಯಲ್ಲಿ ಕಾಂಗ್ರೆಸ್ ನಾಯಕರು ಮಾಡಿದ ಭ್ರಷ್ಟಾಚಾರ ಮತ್ತು ಸ್ವಾರ್ಥದಿಂದಾಗಿ ಐದಾರು ಕ್ಷೇತ್ರಗಳನ್ನು ಬಿಜೆಪಿ ಕಬಳಿಸಿತು. ದಾಸರಹಳ್ಳಿಗೆ ಸೌಂದರ್ಯ ಮಂಜಪ್ಪ ಅಥವಾ ಕೆ.ಸಿ. ಅಶೋಕ್ ಪೈಕಿ ಯಾರಿಗೆ ಟಿಕೆಟ್ ಕೊಟ್ಟಿದ್ದರೂ ಬಿಜೆಪಿಯ ಮುನಿರಾಜು ಗೆಲ್ಲುತ್ತಿರಲಿಲ್ಲ. ಜಯನಗರಕ್ಕೆ ವೇಣುಗೋಪಾಲ್ ಎಂಬ ಪರಮೇಶ್ವರ್ ಛೇಲಾ ಟಿಕೆಟ್ ಖರೀದಿಸಿ ಬಂದಿದ್ದರಿಂದಾಗಿ ಸ್ಥಳೀಯ

>>>12

...ೆಲ್ಲುವತನಕ ಸಿದ್ದು: ಈಗ ಕುತ್ತು

...ಶ್ವರ್ ಆಟ ಆರಂಭವಾಗಿರುವಂತಿದೆ!
...ರಟಗೆರೆಯ ಸೋಲಿನ ಮೂಲಕ ಇನ್ನೇನು ಪರಮೇಶ್ವರ್ ಪೈಪೋಟಿಯೂ ...ಯಿಗೊಂಡು ಸಿದ್ದು ಮುಖ್ಯಮಂತ್ರಿಯಾಗುವುದು ಪಕ್ಕಾ ಎನ್ನುವಾಗಲೇ ...ರ್ಜುನ ಖರ್ಗೆ ಎಂಬ ಧೂಮಕೇತು ಕಾಣಿಸಿಕೊಂಡಿದೆ.
...ದಿಷ್ಟೇ ಆಗಿದ್ದರೆ ಸಮಸ್ಯೆಯಿರುತ್ತಿರಲಿಲ್ಲ, ಇದಕ್ಕಿದ್ದಂತೆ ಮಾಯಾ ಬಜಾರಿನ ...ಧ್ವವನಂತೆ ದೀಕೆ ತಾನೂ ಮುಖ್ಯಮಂತ್ರಿ ಅಭ್ಯರ್ಥಿಯೆಂದರೆ; ಯುದ್ಧ ...ಯುವ ತನಕ ಅವಿತುಕೊಂಡಿದ್ದು ಪಟ್ಟಾಭಿಷೇಕದ ಹೊತ್ತಿಗೆ ಪ್ರತ್ಯಕ್ಷನಾದಂತೆ ...ಾಂಡೆ. ಆರನೇ ಬಾರಿ ಗೆದ್ದ ಒಂದೇ ಕಾರಣಕ್ಕೆ ತಾನೂ ಆಕಾಂಕ್ಷಿಯೆನ್ನುವ ...ಚಂದ್ರ, ಲಿಂಗಾಯತರ ಪಾಲಿಗಾಗಿ ಶಾಮನೂರು, ನಾನೂ ಒಂದು ಕೈ ...ನಿ ಎನ್ನುವ ಪರಿಷತ್ ಪ್ರತಿಪಕ್ಷ ನಾಯಕ ಎಸ್.ಆರ್. ಪಾಟೀಲ್- ... ಮುಖ್ಯಮಂತ್ರಿ ಪಟ್ಟದ ಮೇಲೆ ಕಣ್ಣಿಟ್ಟು ಅರ್ಧ ಡಜನ್ ಕಾಂಗ್ರೆಸ್ ...ಟಗಳು ಅಖಾಡಕ್ಕಿಳಿದಿದ್ದಾರೆ.
...ರ್ಗೆ ಹಿರಿಯ ಕಾಂಗ್ರೆಸ್ ನಾಯಕರೆಂಬ ಬಗ್ಗೆ ಯಾರಿಗೂ ಅನುಮಾನವಿಲ್ಲ, ...ಂದ್ರ ಸಂಭಾವಿತರು ನಿಜ. ಹಾಗೇ ದೀಕೆ, ದೇಶಪಾಂಡೆಗಳೆಲ್ಲ ಗೆದ್ದಿರಬಹುದು, ... ಇರಬಹುದು. ಆದರೆ ಈ ಬಾರಿ ಕಾಂಗ್ರೆಸ್ಸಿಗೆ ದಕ್ಕಿದ ಬಹುಮತದಲ್ಲಿದ್ದದ್ದು ... ಬೆವರು ಮತ್ತು ಪರಕತ್ತು? ಜನ ಕಾಂಗ್ರೆಸ್ಸಿಗೆ ಓಟು ಕೊಟ್ಟದ್ದು ದೀಕೆ- ...ಪಾಂಡೆಯಂಥವರ ಮುಖ ನೋಡಿಯೆ ಅಥವಾ ಖರ್ಗೆ ...ಮಂತ್ರಿಯಾಗುತ್ತಾರೆಂದೆ?
...ಾರೇನೇ ಅಂದರೂ ಎತ್ತಿಂದೆತ್ತ ಲೆಕ್ಕವಿಟ್ಟರೂ ಕಾಂಗ್ರೆಸ್ಸಿಗೆ ಸಿಕ್ಕ ಬಹುಮತದಲ್ಲಿ ...ಕಾಣುವುದು ಸಿದ್ದು ಪರಿಶ್ರಮವೆ. ಚುನಾವಣೆಗೂ ಮೊದಲೇ ಕಾಂಗ್ರೆಸ್ಸಿಗೆ ...ದ್ಧಪಟ್ಟಂತೆ ಪ್ರತಿಯೊಬ್ಬರಲ್ಲೂ ಸಾಮಾನ್ಯವಾಗಿದ್ದದ್ದು ಸಿದ್ದು ವರ್ಚಸ್ಸು. ...ೇಕ ಮಾಧ್ಯಮಗಳಿಂದ ಹಿಡಿದು ನಡೆದ ಚರ್ಚೆಗಳೆಲ್ಲವೂ ಕೇಂದ್ರೀಕೃತವಾಗಿ ...ಸಿದ್ದರಾಮಯ್ಯಗೆ ಮುಖ್ಯಮಂತ್ರಿಗಿರಿಯ ಅವಕಾಶದ ಬಗ್ಗೆಯೆ.
...ಹುಶಃ ಪರಮೇಶ್ವರ್ ಸೋಲದೆ ಹೋಗಿದ್ದರೆ ಖರ್ಗೆ ಹೆಸರು ...ವಾಗುತ್ತಿತ್ತೆ? ಪರಮೇಶ್ವರ್ ಸೋಲುವ ತನಕ ಇಲ್ಲದ ಖರ್ಗೆ ಹೆಸರು, ...ವಣೆ ಉದ್ದಕ್ಕೂ ಕಾಣದ ಖರ್ಗೆ ಹೆಸರು ಈಗೇಕೆ ಇದ್ದಕ್ಕಿದ್ದಂತೆ ...ವಾಯಿತು?
...ರ್ಗೆ ಸದ್ಯ ಕೇಂದ್ರ ಮಂತ್ರಿ. ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದವರಲ್ಲ. ...ಸ್ ಸಂಪ್ರದಾಯದಂತೆ ಒಂದೋ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರು ...ಮಂತ್ರಿ ಅಭ್ಯರ್ಥಿಯಾಗಬೇಕು ಅಥವಾ ಶಾಸಕಾಂಗ ಪಕ್ಷದ ನಾಯಕ ...ಮಂತ್ರಿಯಾಗಬೇಕು. ಈ ಪೈಕಿ ಯಾವುದೂ ಅಲ್ಲದ, ಶಾಸಕ ಸ್ಥಾನಕ್ಕೂ ...ದ, ಕಳೆದ ಕೆಲದಿನಗಳಿಂದ ರಾಜ್ಯ ರಾಜಕೀಯದಿಂದಲೇ ದೂರವಿದ್ದ, ...ವಣೆಯಲ್ಲಿ ಅಂಥಾ ಪಾತ್ರವನ್ನೇ ವಹಿಸದ ಖರ್ಗೆ ಹೆಸರನ್ನು ಸಿದ್ದುಗೆ ...ಗಿ ಏಕೆ ತೇಲಿ ಬಿಡಲಾಗುತ್ತಿದೆ? ತೇಲಿ ಬಿಡುತ್ತಿರುವವರು ಯಾರು? ...ತಃ ಖರ್ಗೆಯೇ ತಾನು ಮುಖ್ಯಮಂತ್ರಿ ಆಕಾಂಕ್ಷಿಯಲ್ಲ ಮತ್ತು ಹೈಕಮಾಂಡ್ ...ರಕ್ಕೆ ಬದ್ಧ ಎನ್ನುತ್ತಿರುವಾಗಲೂ ಅದೆಲ್ಲಿಂದಲೋ ಮತ್ತೆ ಮತ್ತೆ ಖರ್ಗೆಯ ... ಕೇಳಿಬರಲು ಕಾರಣವೇನು?
...ತ್ತಿ ಬಳಸಿ ಎತ್ತಿಂದೆತ್ತ ನೋಡಿದರೂ ಖರ್ಗೆ ಎಂಬ ಹೆಸರನ್ನು ಮಾಧ್ಯಮಗಳ ...ಕ ಹರಿಯಬಿಡುತ್ತಿರುವುದು ಆಸ್ಕರ್ ಫರ್ನಾಂಡಿಸ್!
...ಂಗ್ರೆಸ್ ವಲಯದಲ್ಲಿ ಆಸ್ಕರ್ ಬಾಯಿಂದ ಹೊರಬಿದ್ದ ಮಾತೆಂದರೆ ... ಅಮ್ಮನ ಗರ್ಭಗುಡಿಯಿಂದ ಹೊರಬಿದ್ದ ಪೂಜಾರಿಯ ಮಾತೆಂದೇ



ಇದ್ದಕ್ಕಿದ್ದಂತೆ ಪ್ರತ್ಯಕ್ಷರಾದ ಆಸ್ಕರ್ ಮುಖ್ಯಮಂತ್ರಿ ಪದವಿಗೆ ಐವರು ಆಕಾಂಕ್ಷಿಗಳಿದ್ದಾರೆ ಎನ್ನುತ್ತಾರೆ. ಮತ್ತೊಮ್ಮೆ ಯಾರಾಗಬೇಕೆಂಬುದನ್ನು ಹೈಕಮಾಂಡ್ ನಿರ್ಧರಿಸುತ್ತದೆ ಎನ್ನುತ್ತಾರೆ. ಮತ್ತೊಮ್ಮೆ ಶಾಸಕಾಂಗ ಪಕ್ಷದ ಅಭಿಪ್ರಾಯ ಪಡೆದೇ ತೀರ್ಮಾನಿಸಲಾಗುತ್ತದೆ ಎಂದೂ ಹೇಳಿಕೆ ಕೊಡುತ್ತಾರೆ.

ಸಂಪ್ರದಾಯದಂತೆ ಶಾಸಕಾಂಗ ಪಕ್ಷದ ನಾಯಕ ಅಥವಾ ಕೆಪಿಸಿಸಿ ಅಧ್ಯಕ್ಷರು ಮುಖ್ಯಮಂತ್ರಿಯಾಗುತ್ತಾರೆಂದು ಗೊತ್ತಿದ್ದೂ ಆಸ್ಕರ್ ಐವರು ಆಕಾಂಕ್ಷಿಗಳಿದ್ದಾರೆಂದು ಹೇಳಲು ಕಾರಣವೇನು?

ಅದು ಸಿದ್ದು ವಿರುದ್ಧದ ಕೇಂದ್ರ ಕಾಂಗ್ರೆಸ್ ನೇತಾರರ ವ್ಯೂಹ ತಂತ್ರ. ಸಿದ್ದು ಅವರ ರೆಬಲ್ ಸ್ವಭಾವ ಮತ್ತು ಹಠಮಾರಿತನಕ್ಕೆ ಕಾಂಗ್ರೆಸ್ ಸುಲಭಕ್ಕೆ ಜಗ್ಗುವುದಿಲ್ಲ ಮತ್ತು ಕಾಂಗ್ರೆಸ್ ಜಾಯಮಾನಕ್ಕನ್ನೂ ಸಿದ್ದು ಒಗ್ಗಿಕೊಂಡಿಲ್ಲ, ಯಾವುದೇ ಸ್ವಾಭಿಮಾನಿ ನಾಯಕನೊಬ್ಬನಿಗೆ ಇರಬಹುದಾದ ಸಾಮಾನ್ಯ ಲಕ್ಷಣಗಳೆಲ್ಲವೂ ಸಿದ್ದು ವ್ಯಕ್ತಿತ್ವದಲ್ಲಿದೆ. ಹಾಗೆಂದು ಆರು ವರ್ಷಗಳ ಕಾಲ ಪಕ್ಷಕ್ಕಾಗಿ ದುಡಿದ ನಂತರವೂ ಕಾಂಗ್ರೆಸ್ಸಿಗೆ ಪರಕೀಯ, ಹೊರಗಿನ ವ್ಯಕ್ತಿ, ತಾವಷ್ಟೇ ಹಿರಿಯರು, ಹಿರಿಯರೆಂಬ ಕಾರಣಕ್ಕೆ ಸಿದ್ದು ತಮ್ಮೆದುರು ಕೈಕಟ್ಟಿ ನಿಲ್ಲಬೇಕು ಎಂಬ ಕೇಂದ್ರ ನಾಯಕರ ಸೀನಿಯಾರಿಟಿ ಗತ್ತಿಗೊಂದು ನ್ಯಾಯಬದ್ಧ ಕಾರಣಬೇಕಲ್ಲವೇ?



ಈಗ ತಾನೂ ಮುಖ್ಯಮಂತ್ರಿ ಆಕಾಂಕ್ಷಿಯೆಂದು ದೀಕೆ ಏನೇ ಅಟ್ಟಹಾಸಗೈದರೂ ಸಿದ್ದರಾಮಯ್ಯನವರೆದುರು ಅದು ನಿರರ್ಥಕ ಕುಚೇಷ್ಟೆಯಾಗಷ್ಟೇ ಕಾಣಿಸುತ್ತದೆ. ಬಿಜೆಪಿ ಅಧಿಕಾರದಲ್ಲಿದ್ದಷ್ಟೂ ಕಾಲ ದೀಕೆ ವರ್ತಿಸಿದ್ದು ಮುಖ್ಯಮಂತ್ರಿ ಯಡ್ಡಿಯ ಅನಧಿಕೃತ ವಕ್ತಾರನಂತೆಯೆ. ಬಿಜೆಪಿ ಅನಾಚಾರದ ವಿರುದ್ಧ ಕಾಟಾಚಾರಕ್ಕೂ ದನಿಯೆತ್ತದ ತನ್ನ ಗ್ರಾನೈಟ್ ಲೂಟಿ ಮತ್ತು ಗಣಿಗಾರಿಕೆಗೆ ಏನೆಲ್ಲ ಅನುಕೂಲಗಳು ಬೇಕೋ ಅದೆಲ್ಲವನ್ನೂ ಇಷ್ಟಬಂದಂತೆ ಗಿಟ್ಟಿಸಿಕೊಂಡ ದೀಕೆಗೆ ತಾನು ಮುಖ್ಯಮಂತ್ರಿ ಅಭ್ಯರ್ಥಿಯೆಂದು ಹೇಳಿಕೊಳ್ಳಲು ಯಾವ ಅಧಿಕಾರವಿದೆ? ಕನಿಷ್ಠ ಕಾಂಗ್ರೆಸ್ ಸಂಘಟನೆಗಾಗಿ ಸಾಸುಮಾತ್ರದ ಶ್ರಮವಾದರೂ ದೀಕೆ ಹಾಕಿದ ಒಂದು ಉದಾಹರಣೆ ಇದೆಯೇ? ದುಡ್ಡೊಂದೇ ಮುಖ್ಯಮಂತ್ರಿ ಗಿರಿಗೆ ಮಾನದಂಡವಾಗುವುದಾದರೆ ಯಾವ ದಾಯಿತ ಬೇಕಾದರೂ ದೀಕೆಯಷ್ಟೇ ದುಡ್ಡು ಹಾಕಬಹುದಲ್ಲವೇ?

ದೇಶಪಾಂಡೆಯ ವಿಷಯದಲ್ಲೂ ಇದೇ ಪ್ರಶ್ನೆ ಎದುರಾಗುತ್ತದೆ. ಯಡ್ಡಿ ಮುಖ್ಯಮಂತ್ರಿಯಾಗಿದ್ದಾಗ ಕೆಪಿಸಿಸಿ ಅಧ್ಯಕ್ಷರಾಗಿದ್ದ ದೇಶಪಾಂಡೆ ಕೆಲವೇ ತಿಂಗಳು ಗಳ ಹಿಂದಷ್ಟೇ ಬಿಜೆಪಿ ಸೇರಿಕೊಳ್ಳುವ ಯತ್ನದಲ್ಲಿದ್ದದ್ದು ರಹಸ್ಯವೇನಲ್ಲ, ಅಧಿಕಾರ ವಿಲ್ಲದಿದ್ದಾಗ ಕಾಂಗ್ರೆಸ್ ಸಂಘಟನೆಗಾಗಲಿ, ಬಿಜೆಪಿ ದುರಾಚಾರದ ವಿರುದ್ಧವಾಗಲಿ ಒಮ್ಮೆಯೂ ಬೀದಿಗಿಳಿದವರಲ್ಲ, ದನಿ ಎತ್ತಿದ್ದಂತೂ ಇಲ್ಲವೇ ಇಲ್ಲ.

ಇನ್ನು ಆಸ್ಕರ್, ಮೊಯ್ಲಿ, ಖರ್ಗೆ, ಮುನಿಯಪ್ಪರಂಥವರ ಕಾಂಗ್ರೆಸ್ ಪ್ರೇಮ ಅಧಿಕಾರವಿಲ್ಲದಿದ್ದರೆ ಕಾಣಿಸುವುದೇ ಇಲ್ಲ, ಜನಾರ್ದನ ಪೂಜಾರಿಯಂಥವರು ಕರಾವಳಿ ಭಾಗದಲ್ಲಿ ಪಟ್ಟಾಗಿ ಕೂತು ಕಾಂಗ್ರೆಸ್ ಕಟ್ಟಿದ್ದು ಬಿಟ್ಟರೆ ಮೊಯ್ಲಿ ಕರಾವಳಿಯನ್ನೇ ಮರೆತು ಚಿಕ್ಕಬಳ್ಳಾಪುರಕ್ಕೆ ವಲಸೆ ಬಂದರು. ಆಸ್ಕರ್ ಕರ್ನಾಟಕವನ್ನೇ ಮರೆತು ದೆಹಲಿಯಲ್ಲಿ ಪಾರುಪತ್ಯಕ್ಕಿಳಿದರು. ಕೆ.ಹೆಚ್. ಮುನಿಯಪ್ಪ ತಮ್ಮ ಸ್ವಂತ ಜಿಲ್ಲೆಯಲ್ಲೇ ಕಾಂಗ್ರೆಸ್ ನೆಲೆಯನ್ನು ಉಳಿಸಿಕೊಳ್ಳಲಾಗಲಿಲ್ಲ. ಬಹುಶಃ ಸಿದ್ದರಾಮಯ್ಯ ಏನಾದರೂ ಕಾಂಗ್ರೆಸ್ಸಿಗೆ ಬರದಿದ್ದರೆ ಇವತ್ತು ಕಾಂಗ್ರೆಸ್ಸಿಗಿರುತ್ತಿದ್ದ 'ಕಳೆ' ಕಟ್ಟಿಕೊಡುವ ಶಕ್ತಿಯಾದರೂ ಯಾರಿಗಿತ್ತು?

ಈಗ ಮುಖ್ಯಮಂತ್ರಿ ರೇಸಿಗಿಳಿದ ಖರ್ಗೆ ಮುತ್ಸದ್ದಿ ನಿಜ. ಆದರೆ ಸಿದ್ದು ವ್ಯಕ್ತಿತ್ವ ಮತ್ತು ಹೋರಾಟಕ್ಕೆ ಹೋಲಿಸಿದರೆ ಖರ್ಗೆ ಓರ್ವ ಕಾಂಗ್ರೆಸ್ ನಾಯಕರಾಗಷ್ಟೇ ಕಾಣಿಸುತ್ತಾರೆಯೇ ಹೊರತು ಅದನ್ನು ಮೀರಿದ ವ್ಯಕ್ತಿತ್ವವನ್ನು ರೂಢಿಸಿಕೊಂಡವರಲ್ಲ, ಬಹುಶಃ ಅದು ಅವರ ವ್ಯಕ್ತಿತ್ವದ ಮಿತಿಯೂ ಇರಬಹುದು. ದಲಿತರಲ್ಲೂ ಎಡಗೈಗೆ ಖರ್ಗೆ ಕಂಡರೆ ಅಷ್ಟಕ್ಕಷ್ಟೆ. ನಿಷ್ಕಳಂಕ ಹಿನ್ನೆಲೆ, ಬೇರೆಲ್ಲ ಹಿಂದುಳಿದ ವರ್ಗಗಳ ಮೇಲಿರುವ ಹಿಡಿತ, ಸಮಾಜದ ಬೇರೆಲ್ಲ ಸಮೂಹಗಳ ವಿಶ್ವಾಸ ಮತ್ತು ಸಾಹಿತಿ, ಚಿಂತಕರ ವಲಯದಲ್ಲಿರುವ ಸಂಬಂಧಗಳ ವಿಷಯಕ್ಕೆ ಬಂದರೆ ಖರ್ಗೆ ಓರ್ವ ಕಾಂಗ್ರೆಸ್ ನಾಯಕರಾಗಷ್ಟೇ ಕಾಣಿಸಬಹುದು.

ಆದರೆ ಸಿದ್ದು ಹಾಗಲ್ಲ, ಒಂದಲ್ಲ ಬರೋಬ್ಬರಿ ಏಳು ಬಜೆಟ್ಟುಗಳನ್ನು ಮಂಡಿಸುವ ಮೂಲಕ ಸಮಾಜದ ಕೆಳಸ್ತರದ ಹಿತೈಷಿ ಎನ್ನಿಸಿಕೊಂಡಿದ್ದು; ಪಕ್ಷ, ಸರ್ಕಾರ, ಅಧಿಕಾರಗಳನ್ನೂ ಮೀರಿ ಜನಸಾಮಾನ್ಯರ ಜೊತೆ ಜನಪದ ಚಳವಳಿಗಳ ಜೊತೆ ಸಂಬಂಧವೇರ್ಪಡಿಸಿಕೊಂಡದ್ದು; ರಾಜ್ಯದಲ್ಲಿ ಸೊರಗುತ್ತಿದ್ದ ಕಾಂಗ್ರೆಸ್ಸಿಗೆ ಅಹಿಂದ ಹಿನ್ನೆಲೆಯಿಂದ ಹೊಸ ವರ್ಚಸ್ಸು ಕಲ್ಪಿಸಿದ್ದು ಮತ್ತು ತನ್ನ ಶುದ್ಧ ವ್ಯಕ್ತಿತ್ವದಿಂದಾಗಿಯೇ ಕಾಂಗ್ರೆಸ್ಸಿನತ್ತ ಜನ ಹೊಸ ನಿರೀಕ್ಷೆಯಿಂದ ನೋಡುವಂತೆ ಮಾಡಿದ್ದು ಸಿದ್ದುವೆ.

ಗಣಿ ಲೂಟಿಯ ವಿರುದ್ಧ ಸಿದ್ದು ನಡೆಸಿದ ಐತಿಹಾಸಿಕ ಪಾದಯಾತ್ರೆ ಮತ್ತು ದಾವಣಗೆರೆಯಲ್ಲಿ ಕುರುಬರ ಸಮಾವೇಶದ ಮೂಲಕ ಎಲ್ಲ ಹಿಂದುಳಿದ ಜಾತಿಗಳನ್ನೂ ಒಗ್ಗೂಡಿಸಿದ್ದು ಸಿದ್ದು ಕಾಂಗ್ರೆಸ್ ಪಾಲಿಗೆ ಎಂಥಾ ವಿಶಿಷ್ಟ ವ್ಯಕ್ತಿತ್ವದ ನಾಯಕನೆಂಬುದನ್ನು ಸಾಬೀತು ಮಾಡಿತ್ತು, ವಿರೋಧಪಕ್ಷದ ನಾಯಕನಾಗಿ ಸಿದ್ದು ಶ್ರಮ ವಹಿಸದಿದ್ದರೆ ಬಹುಶಃ ಕಾಂಗ್ರೆಸ್‌ಗೆ ಇವತ್ತಿನ ಜನಪ್ರಿಯತೆ ಸಾಧ್ಯವಾಗುತ್ತಿರಲಿಲ್ಲವೇನೊ.

ಖರ್ಗೆ, ಮೊಯ್ಲಿ ಮುನಿಯಪ್ಪರಂಥ ಕೇಂದ್ರ ಮಂತ್ರಿಗಳಿದ್ದಾಗ್ಯೂ ಕಾಂಗ್ರೆಸ್‌ಗೆ ಜೀವಕಳೆ ಅಂತ ಒದಗಿದ್ದು ಸಿದ್ದು ಮೂಲಕವೇ ಎಂಬುದನ್ನು ಯಾರು ತಾನೇ ನಿರಾಕರಿಸಲು ಸಾಧ್ಯ?

ಇಷ್ಟೆಲ್ಲ ಪ್ರಸ್ತಾಪ ಏಕೆಂದರೆ ಈಗ ಏಕಾಏಕಿ ತಾನೂ ಮುಖ್ಯಮಂತ್ರಿ ಅಭ್ಯರ್ಥಿಯೆಂದು ಎದ್ದು ನಿಂತ ಕಾಂಗ್ರೆಸ್ ನಾಯಕರಿಗೆ ಕನಿಷ್ಠ ನಾಚಿಕೆಯಾದರೂ ಬೇಕಲ್ಲವೆ? ಕೇಂದ್ರ ಮಂತ್ರಿ ಪದವಿಯಿದ್ದೂ ಪಕ್ಷಕ್ಕಾಗಲಿ, ರಾಜ್ಯಕ್ಕಾಗಲಿ ಏನೇನೂ ಮಾಡದವರಿಗೆ ತಮ್ಮಿಂದಾಗಿ ಮತ್ತೆ ಬಿಜೆಪಿಯತ್ತ ಜನ ನೋಡುವಂತಾಗಬಾರದೆಂಬ ವಿವೇಕವಾದರೂ ಬೇಕಲ್ಲವೇ?

ಬಹುಶಃ ಸಿದ್ದು ಮುಖ್ಯಮಂತ್ರಿಗಿರಿಗೆ ವ್ಯತಿರಿಕ್ತವಾಗಿ ನಡೆಯುತ್ತಿರುವ ಈ ಎಲ್ಲಾ ಬೆಳವಣಿಗೆಗಳಿಗೆ ಬೇರೆಯದೇ ಒಂದು ಕಾರಣವಿರಬಹುದೆ?

ಮುಂಬರುವ ಲೋಕಸಭಾ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ದಲಿತನೊಬ್ಬನನ್ನು ಕರ್ನಾಟಕದಲ್ಲಿ ಮುಖ್ಯಮಂತ್ರಿ ಮಾಡಿದ್ದೇವೆಂದು ರಾಷ್ಟ್ರಮಟ್ಟದ ದಲಿತ ಓಟ್‌ಬ್ಯಾಂಕ್ ಭದ್ರಪಡಿಸಿಕೊಳ್ಳುವುದು ಕಾಂಗ್ರೆಸ್ ಕಾರ್ಯತಂತ್ರವೆ? ಆ ಮೂಲಕ ಬಹುಜನ ಸಮಾಜ ಪಕ್ಷದ ನಾಯಕಿ ಮಾಯಾವತಿಯ ಪ್ರಭಾವಕ್ಕೆ ಬ್ರೇಕ್ ಹಾಕಲು ಸೋನಿಯಾ ಮುಂದಾಗಿದ್ದಾರಾ? ರಾಷ್ಟ್ರಮಟ್ಟದಲ್ಲಿ ಕೈಜಾರುತ್ತಿರುವ ಕಾಂಗ್ರೆಸ್ ಪರವಿದ್ದ ದಲಿತ ಓಟ್‌ಬ್ಯಾಂಕ್ ಮತ್ತಷ್ಟು ಗಟ್ಟಿಯಾಗುವುದಾದರೆ ಅದಕ್ಕೆ ಸಿದ್ದು ತ್ಯಾಗ ಮಾಡಲೇಬೇಕೆಂದು ಸೋನಿಯಾ ಬಯಸುತ್ತಿರಬಹುದೆ? ಖರ್ಗೆ ಅಥವಾ ಪರಮೇಶ್ವರ್ ಪೈಕಿ ಒಬ್ಬರನ್ನು ಲೋಕಸಭಾ ಚುನಾವಣೆಯವರೆಗಾದರೂ ಮುಖ್ಯಮಂತ್ರಿ ಮಾಡಿ ಅಲ್ಲೀತನಕ ಸಿದ್ದುವನ್ನು ಕೇಂದ್ರದ ಪ್ರಭಾವಿ ಖಾತೆಯ ಮಂತ್ರಿಯಾಗಿಸುವ ಸಾಧ್ಯತೆಯಿದೆಯಾ? ಅಥವಾ ಮೊದಲ ಎರಡೂವರೆ ವರ್ಷ ಖರ್ಗೆಯನ್ನು ಸಿಎಂ ಮಾಡಿ ಉಳಿಕೆ ಎರಡೂವರೆ ವರ್ಷಕ್ಕೆ ಸಿದ್ದುವನ್ನು ಮುಖ್ಯಮಂತ್ರಿ ಮಾಡುವ ಮೂಲಕ ದಲಿತ, ಕುರುಬ ಮತ್ತು ಇತರೇ ಹಿಂದುಳಿದ ವರ್ಗಗಳೆಲ್ಲವನ್ನೂ ತನ್ನ ತೆಕ್ಕೆಗೆ ಸೆಳೆದುಕೊಳ್ಳುವ ತಂತ್ರವೂ ಸೋನಿಯಾ ತಲೆ ಹೊಕ್ಕಿರಬಹುದೆ?

ಸದ್ಯ ದೆಹಲಿ ಮೂಲಗಳೇ ಹೇಳುವಂತೆ ಈ ತರಹದ ಸಾಧ್ಯತೆಗಳೇ ಹೆಚ್ಚು, ಆದರೆ ಸಿದ್ದು ತ್ಯಾಗಕ್ಕೆ ಅಣಿಯಾಗಬೇಕಲ್ಲ? ಕಾಂಗ್ರೆಸ್ಸಿಗಾಗಿ ತ್ಯಾಗ ಮಾಡುವುದೇ ಅದಲ್ಲಿ ಸಿದ್ದು ಮನವೊಲಿಸುವ ತಾಕತ್ತಿರುವುದು ಯಾರಿಗೆ? ಆಸ್ಕರ್, ಮೊಯ್ಲಿ, ಖರ್ಗೆಯಂಥವರ ಮಾತನ್ನು ನಂಬಿ ಸಿದ್ದು ತ್ಯಾಗಕ್ಕೆ ಅಣಿಯಾಗಲು ಸಾಧ್ಯವೇ?

ಮೇಡಂ ಸೋನಿಯಾ ಅಥವಾ ರಾಹುಲ್ ಗಾಂಧಿಯಂಥವರ ಮಾತನ್ನಲ್ಲದೆ ಬೇರೆ ಯಾರ ಮಾತನ್ನು ಸಿದ್ದು ನಂಬಲು ಸಾಧ್ಯ? ಅಷ್ಟಕ್ಕೂ ಸಿದ್ದು ಏಕೆ ತ್ಯಾಗಕ್ಕೆ ನಿಲ್ಲಬೇಕು ಮತ್ತು ಮಾಡಿದ ತ್ಯಾಗಕ್ಕೆ ಸೂಕ್ತ [illegible] ಏನು? [illegible] ಕೊಡುವವರು ಯಾರು?

● ದ್ಯಾ. ಸೋಮನಾಥ್

...ಪರಮೇಶ್ವರ್ ತ್ಯಾಗ: ಕೊರಟಗೆರೆಯಲ್ಲಿ ತಿಪ್ಪರಲಾಗ!

... ತನ್ನ ಸ್ವಕ್ಷೇತ್ರ ಕೊರಟಗೆರೆಯಲ್ಲಿ ಸೋತಿದ್ದು ಪಕ್ಷಕ್ಕಾಗಿ ತಾನು ಮಾಡಿದ ...ಗ, ಪಕ್ಷವನ್ನು ಅಧಿಕಾರಕ್ಕೆ ತರಲು ತಾನು ರಾಜ್ಯಾದ್ಯಂತ ಸುತ್ತಾಡಿದ ...ವಾಗೇ ತನಗೆ ಸೋಲಾಯಿತು ಎಂದು ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ...ರಾಗ್ರಹಣೆಯಂತೆ ರೈಲು ಬಿಡುತ್ತಿರುವುದಕ್ಕೆ ಅರ್ಥವಿದೆಯೇ?

... ಹಾಗಾದರೆ ಕಳೆದ ಐದು ವರ್ಷದಿಂದ ಪರಮೇಶ್ವರ್ ...ಏ ಮಾಡುತ್ತಿದ್ದರು? ಏಕೆ ಕೊರಟಗೆರೆಯ ಜನ ಸುಧಾಕರ್ ...ರ್ ಎಂಬ ಯಃಕಶ್ಚಿತ್ ಜೆಡಿಎಸ್ ಅಭ್ಯರ್ಥಿಯನ್ನು ...ಮುಖ್ಯಮಂತ್ರಿ ಅಭ್ಯರ್ಥಿ ಪರಮೇಶ್ವರ್ ವಿರುದ್ಧ ಗೆಲ್ಲಿಸಿದರು? ... ಪರಮೇಶ್ವರ್ ಏನೇ ಹುತಾತ್ಮನ ಪೋಜು ಕೊಟ್ಟರೂ ...ರಟಗೆರೆಯ ವಾಸ್ತವವೇ ಬೇರೆಯಿದೆ. ಮಧುಗಿರಿ ಸಾಮಾನ್ಯ ...ವಾಗಿ ಪರಮೇಶ್ವರ್ ಕೊರಟಗೆರೆಗೆ ವಲಸೆ ಬಂದಿದ್ದು ...08ರಲ್ಲಿ, ಗೆದ್ದಿದ್ದೇ ಕೊನೆ ಮತ್ತೆ ಕೊರಟಗೆರೆಯತ್ತ ...ಮೇಶ್ವರ್ ತಲೆ ಹಾಕಲಿಲ್ಲ, ಇದರ ಪ್ರತಿಫಲವೆಂಬಂತೆ ...09ರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ಸಿಗಿಂತ ...ಎಸ್ 18 ಸಾವಿರ ಮತಗಳ ಲೀಡು ಪಡೆದಿತ್ತು. ...ದನಂತರ ತಾಲ್ಲೂಕು ಪಂಚಾಯತಿ ಚುನಾವಣೆ ಬಂತಲ್ಲ; ...ಟಗೆರೆ ತಾಲ್ಲೂಕಿನ ಒಟ್ಟು 17 ಸೀಟುಗಳ ಪೈಕಿ ಕಾಂಗ್ರೆಸ್ ...ಸಿದ್ದು ಕೇವಲ ಐದು ಮಾತ್ರ!



... ಅಷ್ಟೇ ಏಕೆ, ಆ ನಂತರ ನಡೆದ ಜಿಲ್ಲಾ ಪಂಚಾಯತಿ ಚುನಾವಣೆಯಲ್ಲಿ ...ಎಸ್ ನಾಲ್ಕು ಗೆದ್ದರೆ ಪರಮೇಶ್ವರ್ ಸಾಹೇಬರ ಶ್ರಮಕ್ಕೆ ಸಿಕ್ಕಿದ್ದು 1 ...ತು. ಮೊನ್ನೆಯಷ್ಟೇ ಪೌರಸಂಸ್ಥೆಗಳ ಚುನಾವಣೆ ನಡೆದು ಅದರಲ್ಲೂ ...ಎಸ್‌ಗಿಂತ ಒಂದೇ ಒಂದು ಅಧಿಕ ಸ್ಥಾನ ಪಡೆಯಲು ಕಾಂಗ್ರೆಸ್ಸಿನಿಂದಾಗಲಿಲ್ಲ. ... ಕೊರಟಗೆರೆಯಲ್ಲಿ ಪರಮೇಶ್ವರ್ ಸಾಧನೆಯ ಗತೇತಿಹಾಸವಿದು.

...ವಾಗಲೂ, ಈ ಸಲದ ಚುನಾವಣೆಯಲ್ಲಿ ಪರಮೇಶ್ವರ್ ರಾಹುಲ್ ...ಜೊತೆ ಮೂರು ದಿನ, ಸೋನಿಯಾ ಮೇಡಂ ಜೊತೆ 3 ... ಮತ್ತು ಪ್ರಧಾನಿ ಮನಮೋಹನ್ ಸಿಂಗ್ ಸಭೆಗೆಂದು ಒಂದು ದಿನ ...ದ್ದು ಬಿಟ್ಟರೆ ಬೇರೆ ಯಾವ ಅಭ್ಯರ್ಥಿ ಪರವಾಗಿ ರಾಜ್ಯದ ಯಾವ್ಯಾವ ... ಸುತ್ತಿದ್ದಾರೆ?

... [illegible], ಕೊನೆಯ ಎರಡು ದಿನ ಮಾತ್ರ ತಮ್ಮ ಪರ [illegible] ... ಬಿಟ್ಟರೆ [illegible] ಚುನಾವಣೆ [illegible] ರಾಜ್ಯ ಸುತ್ತಿ ಬಂದರು. ... ಭಾರೀ ಅಂತರದಿಂದ ಗೆದ್ದರು. ಈ ಸಲದ ಕಾಂಗ್ರೆಸ್ ಇತಿಹಾಸದಲ್ಲಿ ಯಾವೊಬ್ಬ ಮುಖ್ಯಮಂತ್ರಿ ಅಭ್ಯರ್ಥಿಯನ್ನೂ ಅವರ ಸ್ವಕ್ಷೇತ್ರದ ಜನ ಸೋಲಿಸಿದ್ದಿಲ್ಲ. ವೀರೇಂದ್ರ ಪಾಟೀಲ್ ತಮ್ಮ ಕ್ಷೇತ್ರಕ್ಕೇ ಕಾಲಿಡದೆ ಪಕ್ಷವನ್ನು ಅಧಿಕಾರಕ್ಕೆ ತಂದರು. ಎಸ್.ಎಂ. ಕೃಷ್ಣ ಕೊನೆಯ ದಿನವಷ್ಟೇ ತನ್ನೂರಿಗೆ ಕಾಲಿಟ್ಟು ಕಾಂಗ್ರೆಸ್ ಪರ ಪ್ರಚಾರಗೈದಿದ್ದರು. ಆದರೆ ಪರಮೇಶ್ವರ್ ಈ ಬಾರಿ ಕೊರಟಗೆರೆಯಷ್ಟೇ ಅಲ್ಲದೆ ಮಹದೇವಪುರಕ್ಕೂ ನಿಲ್ಲಲು ಹವಣಿಸಿದ್ದರು. ಆದರೆ ಹೈಕಮಾಂಡ್ ಒಪ್ಪಲಿಲ್ಲ, ತಪ್ಪು ಸಂದೇಶ ರವಾನೆಯಾಗುತ್ತದೆಯೆಂದು ಒಂದು ಕ್ಷೇತ್ರಕ್ಕಷ್ಟೇ ಪರಮೇಶ್ವರ್‌ರನ್ನು ನಿಬಂಧಿಸಿತ್ತು.

ಇದರರ್ಥ ತಾನು ಕೊರಟಗೆರೆಯಲ್ಲಿ ಸೋಲುತ್ತೇನೆಂಬುದು ಪರಮೇಶ್ವರ್‌ಗೆ ಮೊದಲೇ ಗೊತ್ತಿತ್ತು. ಐದು ವರ್ಷಗಳ ಕಾಲ ಕೊರಟಗೆರೆಯಲ್ಲಿ ಏನಾದರೂ ಹೆಣಗಾಡಿದ್ದರೆ ಪರಮೇಶ್ವರ್‌ಗೆ ಈ ಗತಿ ಬರುತ್ತಿರಲಿಲ್ಲ, ಹೋಗಲಿ ಪಕ್ಷಕ್ಕಾಗಿ ಪರಮೇಶ್ವರ್ ಮಾಡಿದ ತ್ಯಾಗವಾದರೂ ಎಂಥಾದ್ದು?

ಹೇಳಹೆಸರಿಲ್ಲದ ಪುಡಿ ಲೀಡರುಗಳು, ಛೇಲಾಗಳನ್ನೆಲ್ಲ ಕರೆತಂದು ರಾಜ್ಯ ಮಟ್ಟದ ಕೆಪಿಸಿಸಿ ಪದಾಧಿಕಾರಿಗಳನ್ನು ಮಾಡಿದ್ದು ತ್ಯಾಗವೇ ಸರಿ. ಯಾರೇ ಜವಾಬ್ದಾರಿಯುತ ಅಧ್ಯಕ್ಷರಿಗೆ ಇಂಥ ಹುಡುಗಾಟಿಕೆ ಹೇಗೆ ಸಾಧ್ಯ? ಕನಿಷ್ಠ ಟಿಕೆಟ್ ಹಂಚಿಕೆಯಲ್ಲಾದರೂ ಹೊಣೆಯರಿತು ವರ್ತಿಸಬೇಕಿತ್ತು, ಛೇಲಾ ಎಂಬ ಒಂದೇ ಕಾರಣಕ್ಕೆ ವೇಣುಗೋಪಾಲನಿಗೆ ಜಯನಗರದ ಕಾಂಗ್ರೆಸ್ ಟಿಕೆಟ್ ಕೊಟ್ಟರು. ಜಯನಗರಕ್ಕೆ ಸೂಕ್ತ ಅಭ್ಯರ್ಥಿಯಂತಿದ್ದ ಬಿ.ಎಲ್. ಶಂಕರ್‌ರನ್ನು ತಲೆಬುಡಗೊತ್ತಿಲ್ಲದ ದಾಸರಹಳ್ಳಿಗೆ ಅಂಟಿಸಿದರು. ಮಹದೇವಪುರಕ್ಕೆ ಶ್ರೀನಿವಾಸ್‌ನಂಥ ಅರೆಬರೆ ಆಸಾಮಿಗೆ ಟಿಕೆಟ್ ಕೊಟ್ಟರು.

ಬಹುಶಃ ಪರಮೇಶ್ವರ್ ಟಿಕೆಟ್ ಹಂಚಿಕೆಯಲ್ಲಿ ಇನ್ನಷ್ಟು ಹೊಣೆಯರಿತು, ಜವಾಬ್ದಾರಿಯುತವಾಗಿ ವರ್ತಿಸಿದ್ದರೆ ಕಾಂಗ್ರೆಸ್ ಇನ್ನೂ 20 ಸೀಟುಗಳನ್ನು ಗೆಲ್ಲುತ್ತಿತ್ತೇನೊ. ಯಾವುದೇ ಶ್ರಮವಿಲ್ಲದೆ ಅರ್ಹತೆಯೂ ಇಲ್ಲದೆ ಕೇವಲ ಗೊಡ್ಡು ಭಟ್ಟಂಗಿತನ ಮಾತ್ರದಿಂದಲೇ ಅಧ್ಯಕ್ಷನಾದವನಿಗೆ ಪಕ್ಷವನ್ನು ಅಧಿಕಾರಕ್ಕೆ ತರುವ ಕಷ್ಟ ಹೇಗೆ ಅರ್ಥವಾಗಲು ಸಾಧ್ಯ?

ಕನಿಷ್ಠ ಕೊಟ್ಟ ಬಟ್ಟೆಯ ಇಸ್ತ್ರಿ ಮತ್ತು ಬೂಟುಗಂಟದ ಪಾಲಿಶನ್ನಾದರೂ ಪರಮೇಶ್ವರ್ ತ್ಯಾಗ ಮಾಡಿದ್ದರೆ ತನ್ನ ತವರಲ್ಲಿ ಸೋಲಬೇಕಾದ ದುರ್ಗತಿಯಿರುತ್ತಿರಲಿಲ್ಲ.

10<<< ರಿಯಲ್..... ಕಂಟಕ

ಕಾಂಗ್ರೆಸ್ ಕಾರ್ಯಕರ್ತರು ತಿರುಗಿಬಿದ್ದರು. ಬೆಂಗಳೂರು ದಕ್ಷಿಣದಲ್ಲಿ ಕಾಂಗ್ರೆಸ್ ಸ್ಥಳೀಯ ನಾಯಕರೆಲ್ಲ ಸಾರಾಸಗಟಾಗಿ ಜೆಡಿಎಸ್‌ನ ಪ್ರಭಾಕರ್‌ರೆಡ್ಡಿ ಪರ ದುಡಿದು ತೇಜಸ್ವಿನಿಗೆ ಕೈಕೊಟ್ಟರು. ಹೆಬ್ಬಾಳದಲ್ಲಿ ರೇವಣ್ಣನಿಗೆ ಟಿಕೆಟ್ ತಪ್ಪಿದ್ದು, ರಾಜಾಜಿನಗರದಲ್ಲಿ ಪದ್ಮಾವತಿಯನ್ನು ತುಳಿದು ಮಂಜುಳಾನಾಯ್ಡು ಎಂಬ ಸೋಗಲಾಡಿಯನ್ನು ತಂದಿದ್ದು, ಲಿಂಬಾವಳಿ ವಿರುದ್ಧ ಮಹಾದೇವಪುರದಲ್ಲಿ ಶ್ರೀನಿವಾಸ್ ಎಂಬ 'ರೊಕ್ಕಸ್ಥ'ನಿಗೆ ಟಿಕೆಟ್ ನೀಡಿದ್ದು; ಇತ್ಯಾದಿ ಯಡವಟ್ಟುಗಳಿಂದಾಗಿ ಕಾಂಗ್ರೆಸ್‌ಗೆ ದಕ್ಕಲಿದ್ದ ಇನ್ನೂ ಐದು ಸ್ಥಾನಗಳು ಕೈತಪ್ಪಿ ಹೋದವು.

ಇಷ್ಟೆಲ್ಲದರ ಮಧ್ಯೆ ಸದ್ದಿಲ್ಲದೆ ಜೆಡಿಎಸ್ ತನ್ನ ಪ್ರಾಬಲ್ಯವನ್ನು ಹೆಚ್ಚಿಸಿಕೊಂಡಿದೆ. ಚಾಮರಾಜಪೇಟೆಯಲ್ಲಿ ನಿವೃತ್ತ ಎಸಿಪಿ ಬಾವಾ ವಿರುದ್ಧ ಜಮೀರ್ ನಿರಾಯಾಸವಾಗಿ ಗೆದ್ದಿದ್ದು ಜೆಡಿಎಸ್‌ನ ಅಸಲೀ ಬಂಡವಾಳವಾದರೆ ಮಹಾಲಕ್ಷ್ಮೀ ಲೇಔಟ್‌ನಲ್ಲಿ ಕಳೆದ ಬಾರಿ ಮೂರನೇ ಸ್ಥಾನದಲ್ಲಿದ್ದ ಗೋಪಾಲಯ್ಯ ಈ ಬಾರಿ ಶಾಸಕ ನರೇಂದ್ರಬಾಬುವನ್ನು ಮಣಿಸಿ ಭಾರೀ ಅಂತರದಿಂದ ಗೆದ್ದಿದ್ದು ಜೆಡಿಎಸ್ ಪಾಲಿಗೆ ಬೋನಸ್ ಸಿಕ್ಕಂತಾಗಿದೆ.

ಇದಕ್ಕಿಂತಲೂ ಜೆಡಿಎಸ್ ಪಾಲಿಗೆ ಬಹುಮಾನದಂತೆ ಬಂದದ್ದು ಪುಲಿಕೇಶಿನಗರ. ಕಾಂಗ್ರೆಸ್ ಶಾಸಕರ ಪೈಕಿ ಅತ್ಯಂತ ಸಜ್ಜನ ಮತ್ತು ನಿಷ್ಕಳಂಕಿತರೆಂದೇ ಚಾಲ್ತಿಯಲ್ಲಿದ್ದ ದಿ. ಬಸವಲಿಂಗಪ್ಪನವರ ಮಗ ಪ್ರಸನ್ನಕುಮಾರ್‌ರನ್ನು ಜೆಡಿಎಸ್‌ನ ಅಖಂಡ ಶ್ರೀನಿವಾಸ್ ಸೋಲಿಸಿದ್ದು ದುರಂತವೂ ಹೌದು ವಿಕಟ ಕೂಡ. ಇದಲ್ಲದೆ ಜೆಡಿಎಸ್ ಅನೇಕ ಕ್ಷೇತ್ರಗಳಲ್ಲಿ ತನ್ನ ಬಲವನ್ನು ವೃದ್ಧಿಸಿಕೊಂಡಿದೆ. ಕಳೆದ ಬಾರಿ ಯಶವಂತಪುರದಲ್ಲಿ ಮೂರನೇ ಸ್ಥಾನದಲ್ಲಿದ್ದ ಜೆಡಿಎಸ್ ಈ ಬಾರಿ ಎರಡನೇ ಸ್ಥಾನಕ್ಕೇರಿದೆ. ಯಲಹಂಕ, ಬೆಂಗಳೂರು ದಕ್ಷಿಣಗಳಲ್ಲೂ ಎರಡನೇ ಸ್ಥಾನಕ್ಕೇರಿದ ಜೆಡಿಎಸ್ ಪಕ್ಷದ ನೆಲಮಂಗಲ, ದೊಡ್ಡಬಳ್ಳಾಪುರ, ದೇವನಹಳ್ಳಿ, ಮಾಗಡಿ ಮತ್ತು ಕನಕಪುರಗಳಲ್ಲಿ ಬಿಜೆಪಿಯನ್ನು ಹೇಳಹೆಸರಿಲ್ಲದಂತೆ ಮಾಡಿ ಕಾಂಗ್ರೆಸ್ಸಿಗೆ ಸರಿಸಮ ಪೈಪೋಟಿ ನೀಡಿರುವುದು ಅದರ ಪಾಲಿಗೆ ಭವಿಷ್ಯದ ಆಶಾಕಿರಣದಂತಿದೆ.

ಬಿಜೆಪಿಯ ದುಃಸ್ವಪ್ನವೇನೋ ಅಂತ್ಯಗೊಂಡಿದೆ. ಆದರೆ ಅದರ ಒಬ್ಬೊಬ್ಬ ನೆಲಗಳ್ಳ ಶಾಸಕನೂ ಎಸಗಿದ ಅನ್ಯಾಯ ಅಕ್ರಮ ಮತ್ತು ಭೂಕಬಳಿಕೆಯನ್ನು ತನಿಖೆ ಮಾಡುವವರ್‍ಯಾರು? ಶಿಕ್ಷೆ ವಿಧಿಸುವವರ್‍ಯಾರು?

● ರಾ.ಸೋಮನಾಥ್

ವಿಜಯನಗರದ ನಿರ್ಣಾಯಕ ಕಾಳಗದಲ್ಲಿ...

ವಿಜಯನಗರದ 'ನಿರ್ಣಾಯಕ ಕಾಳಗ' ಮುಗಿದಿದೆ. ಇಬ್ಬರಲ್ಲಿ ಯಾರೇ ಸೋತರೂ ಸೋತವನು ಸತ್ತಂತೆಯೇ ಎಂಬಂತಿದ್ದ ಹಣಾಹಣಿಯಲ್ಲಿ ಕೊನೆಗೂ ಕೃಷ್ಣಪ್ಪ ಗೆದ್ದು ಸೋಮಣ್ಣ ಎಡವಿದ್ದಾರೆ. ಬಹುಶಃ ವಿಜಯನಗರದ ಮಟ್ಟಿಗೆ



ಸೋಮಣ್ಣನ ಶೈಲಿಯ ರಾಜಕಾರಣದ ಆಯಸ್ಸು ಮುಗಿದಿರಬೇಕು ಅಥವಾ ಲೇಔಟ್ ಕೃಷ್ಣಪ್ಪನವರ ಟೈಮಿನ್ನೂ ಚೆನ್ನಾಗಿರಬೇಕು!

ಇದೆಲ್ಲ ಲೆಕ್ಕ ಹಾಕಿಯೇ ಇರಬೇಕು ಕೊನೇಗಳಿಗೆಯಲ್ಲಿ ಆತುರಕ್ಕೆ ಬಿದ್ದು ಸೋಮಣ್ಣ ಆಯ್ಕೆ ಮಾಡಿಕೊಂಡದ್ದು ವಿಜಯನಗರವನ್ನೆ. ಕಳೆದ ಬಾರಿ ಮಗ ಪ್ರಿಯಾಕೃಷ್ಣನನ್ನು ಮುಂದೆ ಬಿಟ್ಟು ತನ್ನನ್ನು ಮಣ್ಣುಮುಕ್ಕಿಸಿದ್ದ ಅಪ್ಪ ಕೃಷ್ಣಪ್ಪರನ್ನು ಈ ಸಾರಿ ಅವರದ್ದೇ ಕ್ಷೇತ್ರದಲ್ಲಿ ಸೋಲಿಸಿ ಎದುರೇಟು ನೀಡುವುದು ಸೋಮಣ್ಣನ ಲೆಕ್ಕಾಚಾರವಾಗಿತ್ತು, ಅದೊಂದು ಹತಾಶ ನಿರ್ಧಾರವಾಗಿತ್ತೆಂಬುದು ಅರ್ಥವಾಗುವ ಹೊತ್ತಿಗೆ ಕಾಲ ಮಿಂಚಿಹೋಗಿತ್ತು.


ಏಕೆಂದರೆ ವಿಜಯನಗರ ಆ ಹೊತ್ತಿಗಾಗಲೇ ಕೃಷ್ಣಪ್ಪನವರ ಭದ್ರಕೋಟೆಯಾಗಿತ್ತು. ಕಳೆದ ಬಾರಿ ಪಕ್ಕದ ಗೋವಿಂದರಾಜನಗರಕ್ಕೆ ನಿಂತು ಮಗ ಪ್ರಿಯಾಕೃಷ್ಣನ ವಿರುದ್ಧ ಸೋತಿದ್ದ ಸೋಮಣ್ಣ ಕಳೆದ ಐದು ವರ್ಷದಿಂದ ಹೆಚ್ಚು ಕಮ್ಮಿ ವಿಜಯನಗರವನ್ನು ಮರೆತೇ ಬಿಟ್ಟಿದ್ದರು. ಹಿಂದಿನ ಹಿಡಿತವಿರಲಿಲ್ಲ. ಹಾಗಿದ್ದೂ ಅಧಿಕ ಸಂಖ್ಯೆಯಲ್ಲಿ ಬಿಜೆಪಿ ಕೌನ್ಸಿಲರ್‌ಗಳಿರುವುದರಿಂದಾಗಿ ಕೃಷ್ಣಪ್ಪ ವಿರುದ್ಧ ತಾನು ಸುಲಭವಾಗಿ ಗೆದ್ದು ಬಿಡಬಹುದೆಂಬ ಸೋಮಣ್ಣನ ಲೆಕ್ಕಾಚಾರಕ್ಕೆ ಕಾಲ ತಾಳೆಯಾಗುತ್ತಿರಲಿಲ್ಲ.

ಆರ್‌ಪಿಸಿ ಲೇಔಟ್ ಕೌನ್ಸಿಲರ್ ಚಂದ್ರಶೇಖರ್, ಹೊಸಹಳ್ಳಿಯ ಡಾ. ರಾಜು, ವಿಜಯನಗರದ ರವೀಂದ್ರ, ದೀಪಾಂಜಲಿನಗರದ ಮಾಲತಿ, ಬಾಪೂಜಿನಗರದ ಕೃಷ್ಣ ಮತ್ತು ಗಾಳಿ ಆಂಜನೇಯ ವಾರ್ಡಿನ ಆನಂದ್ ಹೆಸರಿಗೆ ಬಿಜೆಪಿ ಕೌನ್ಸಿಲರ್‌ಗಳಾದರೂ ಸೋಮಣ್ಣನ ಪರ ಬೀದಿಗಿಳಿಯುವಷ್ಟು ಮುಖ ಉಳಿಸಿಕೊಂಡಿರಲಿಲ್ಲ. ಸೋಮಣ್ಣನ ಪರವಿದ್ದ ಆರು ಮಂದಿ ಕೌನ್ಸಿಲರ್‌ಗಳ ಮಧ್ಯೆ ಕಾಂಗ್ರೆಸ್ಸಿನ ಇಬ್ಬರು ಕೌನ್ಸಿಲರ್‌ಗಳು ಲೇಔಟ್ ಕೃಷ್ಣಪ್ಪನವರ ಪಾಲಿಗೆ ದೊಡ್ಡ




ಅನುಕೂಲವೇನಲ್ಲ. ಹಾಗಿದ್ದೂ ಕೃಷ್ಣಪ್ಪ ಸರಿಸುಮಾರು ಮೂವತ್ತು ಸಾವಿರ ಮತಗಳ ಭಾರೀ ಅಂತರದಿಂದ ಸೋಮಣ್ಣನನ್ನು ಮಣಿಸುವುದಕ್ಕೂ ಕಾರಣಗಳಿದ್ದವು.

ಅದು ಕಾಂಗ್ರೆಸ್ ಅಲೆ. ಹೇಗೂ ಕಾಂಗ್ರೆಸ್ ಅಧಿಕಾರಕ್ಕೆ ಬಂದೇಬರುತ್ತದೆ. ಮಗ ಪ್ರಿಯಾಕೃಷ್ಣ ಗೆದ್ದೇ ಗೆಲ್ಲುತ್ತಾನೆ. ಕೃಷ್ಣಪ್ಪ ಸೋತರೂ ಕೂಡ ನಾಳೆ ಕಾಂಗ್ರೆಸ್ ಅಧಿಕಾರಕ್ಕೆ ಬರುವುದರಿಂದ ಸರ್ಕಾರದ ಮಟ್ಟದಲ್ಲಿ ಸೋಮಣ್ಣನಿಗಿಂತಲೂ ಕೃಷ್ಣಪ್ಪನವರ ಮಾತೇ ನಡೆಯುತ್ತದೆ. ಸೋಮಣ್ಣ ಗೆದ್ದರೂ ಕಾಂಗ್ರೆಸ್ ಸರ್ಕಾರವಿದ್ದಾಗ ಯಾವುದೇ ಪ್ರಯೋಜನವಾಗುವುದಿಲ್ಲ ಎಂಬ ನಿರ್ಧಾರಕ್ಕೆ ವಿಜಯನಗರದ ಮತದಾರ ಬಂದಾಗಿತ್ತು, ಇಂಥಾ ವಿಷಮ ಸ್ಥಿತಿಯಲ್ಲಿ ವಿಜಯನಗರ ವಾರ್ಡಿನ ಕೌನ್ಸಿಲರ್ ರವೀಂದ್ರ ತಾನೇ ನಿಂತು ಗುರುವನ್ನು ಗೆಲ್ಲಿಸಿ ಕೊಡುತ್ತೇನೆಂಬ ಹೊಣೆ ಹೊರಬೇಕಿತ್ತು, ಬದಲಿಗೆ ತಾನೂ ನಿಮ್ಮಂತೆ ಎಮ್ಮೆಲ್ಲೆಯಾಗ್ತೀನಿ ಎಂದು ಪಕ್ಕದ ಗೋವಿಂದರಾಜನಗರಕ್ಕೆ ನಿಂತುಬಿಟ್ಟ. ಒಂದೆಡೆ ವಿಜಯನಗರ ವಾರ್ಡಿನ ಹೊಣೆ ಜೊತೆಗೆ ಶಿಷ್ಯ ರವೀಂದ್ರನಿಗೂ ದುಡ್ಡೂ ಕಾಸು ಹೊಂಚಬೇಕಾದ ಹೊರೆಯಿಂದ ಸೋಮಣ್ಣ ಬಳಲಿದ.



ಬಹುಶಃ ಇದೆಲ್ಲ ಲೆಕ್ಕ ಹಾಕಿಯೇ ಸೋಮಣ್ಣ ಮೊದಮೊದಲು ಹನೂ... ಸ್ಪರ್ಧಿಸಲು ಯತ್ನಿಸಿದ್ದು. ಆನಂತರ ಚಾಮರಾಜನಗರದಿಂದ ಕಣಕ್ಕಿಳಿಯಲೂ ... ಹಾಕಿದ್ದ. ಇವೆರಡರ ಪೈಕಿ ಎಲ್ಲಿಂದ ನಿಂತಿದ್ದರೂ ಸೋಮಣ್ಣ ಗೆಲ್ಲುತ್ತಿದ್ದನೇನೋ... ಆದರೆ ಬಿಜೆಪಿಯೇ ಮೂರಾಬಟ್ಟೆಯಾಗಿತ್ತು, ಅತ್ತ ಕೆಜೆಪಿಗೂ ಹೋಗುವಂತಿ... ಬಿಜೆಪಿಗೆ ಉಳಿಗಾಲವಿಲ್ಲ. ಕೊನೆಗಳಿಗೆಯಲ್ಲಿ ಕಾಂಗ್ರೆಸ್ ಕದ ತಟ್ಟಿದರೂ ಅದ... ಎದುರಾಳಿ ಕೃಷ್ಣಪ್ಪ ಅಡ್ಡಗಾಲಿಟ್ಟಿದ್ದರಿಂದ ಅದೂ ಬರಕತ್ತಾಗಲಿಲ್ಲ.



ಈ ಎಲ್ಲ ಅಪಶಕುನ, ಅವ್ಯವಸ್ಥೆಗಳಿಂದಾಗಿ ಕಂಗಾಲಾದ ಸೋಮಣ್ಣ ಮಾಡಿದ ದೊಡ್ಡ ಪ್ರಮಾದವೆಂದರೆ ತನ್ನ ಎದುರಾಳಿ ಕೃಷ್ಣಪ್ಪರನ್ನು ಅವರದ್ದೇ ವಿಜಯನಗರದಲ್ಲಿ ಎದುರಿಸುವ ನಿರ್ಧಾರಕ್ಕಿಳಿದದ್ದು. ಹಾಗೊಮ್ಮೆ ತನ್ನ ಮತ್ತೊಬ್ಬ ಬಲಗೈ ಬಂಟ ಮಾಜಿ ಉಪಮೇಯರ್ ಲಕ್ಷ್ಮಿ ನಾರಾಯಣರನ್ನು ವಿಜಯನಗರದಿಂದ ಕೃಷ್ಣಪ್ಪ ವಿರುದ್ಧ ಛೂಬಿಟ್ಟಿದ್ದರೆ ಈ ಪಾಟಿ ಅವಮಾನವಾಗುತ್ತಿರಲಿಲ್ಲ. ಜಾತಿಯಲ್ಲಿ ಲಕ್ಷ್ಮಿನಾರಾಯಣ ಕೂಡ ಒಕ್ಕಲಿಗರಾದ್ದರಿಂದ ಪೈಪೋಟಿಯಾದರೂ ಇರುತ್ತಿತ್ತು. ಆದರೆ ಹತಾಶೆಗೆ ವ್ಯವಧಾನವಿರುವುದಿಲ್ಲವಲ್ಲ!

ಬಿಜೆಪಿ ವಿರೋಧಿ ಅಲೆ ಮತ್ತು ಶಿಷ್ಯ ರವೀಂದ್ರ ಹಾಕಿದ ಭಾರಕ್ಕೆ ಸೋಮಣ್ಣನ ತಲೆದಂಡವಾಗಿದೆ. ವಿಜಯನಗರದ ವೀರಪುತ್ರನ ಪಾಲಿಗೆ ಸೋ... ಶೈಲಿಯ ರಾಜಕಾರಣದ ಆಯುಷ್ಯ ಮುಗಿದಿದೆ. ರಾಜಕೀಯದಲ್ಲಿ ಪ್ರತಿಯೊಂ... 'ವರಸೆ'ಗೂ ಒಂದೊಂದು ಕಾಲ ಇರುವಂತೆ ಸೋಮಣ್ಣನ 'ವರಸೆ'ಗಳ ಕಾಲ ಮುಗಿದಿದೆ.

ಕೋಟಿ ಸುರಿದ ಶೋಭಕ್ಕನಿಗೆ ಠೇವಣಿಯೊಂದೇ ಗಟ್ಟಿ



ಸುರೇಶ್ ಕುಮಾರ್



ಮಂಜುಳಾ ನಾಯ್ಡು


ಸುರೇಶ್‌ಕುಮಾರ್ ವಿರುದ್ಧ ಅವರದ್ದೇ ಅನುಯಾಯಿಗಳಿಗಿದ್ದ ಆಕ್ರೋಶ ಮತ್ತು ದುಡ್ಡು; ಇವೆರಡೂ ಸೇರಿಬಿಟ್ಟರೆ ತಾನು ರಾಜಾಜಿನಗರದಿಂದ ಗೆದ್ದು ಬಿಡಬಹುದೆಂಬ ಶೋಭಕ್ಕನ ನಿರೀಕ್ಷೆ ಉಲ್ಟಾ ಹೊಡೆದಿದೆ. ಸುರೇಶ್‌ಕುಮಾರ್ ಸೋಲಿಸಲು ಜನಕ್ಕೆ ಅಂಥಾ ಕಾರಣಗಳೇನೂ ಇರಲಿಲ್ಲ, ಯಾರಿಗೇನು 'ಲಾಭ' ಮಾಡಿಕೊಡದೇ ಹೋದರೂ ಸುರೇಶ್ ಯಾರಿಗೂ ಕೆಡುಕು ಬಗೆದಿರಲಿಲ್ಲ, ಹೇಳಿಕೇಳಿ ಅನುಕೂಲಸ್ಥರಿಂದಲೇ ತುಂಬಿರುವ ರಾಜಾಜಿನಗರಕ್ಕೆ ಶಾಸಕನೋರ್ವನಿಂದ ಇದಕ್ಕಿಂತ ಹೆಚ್ಚಿಗೆ ಬೇಕಿರಲಿಲ್ಲ.

ಹಾಗಂತ ಕರಂದ್ಲಾಜೆ ರಾಜಾಜಿನಗರಕ್ಕೆ ಆಶೆ ಪಟ್ಟೇನೂ ಬಂದದ್ದಲ್ಲ, ಆ ಕಾಲದಿಂದಲೂ ಸುರೇಶ್‌ಕುಮಾರ್ ಪರಮಾಪ್ತರಂತಿದ್ದ ಹಿರಿಯ ಆರೆಸ್ಸೆಸ್ ಕಾರ್ಯಕರ್ತ ರಘುನಾಥ್, ಕ್ಷೇತ್ರ ಬಿಜೆಪಿ ಅಧ್ಯಕ್ಷ ಮಲ್ಲಿಕಾರ್ಜುನ, ನಗರ ಬಿಜೆಪಿ ಕಾರ್ಯಕಾರಿಣಿ ಸದಸ್ಯ ಮತ್ತು ಮಾರ್ವಾಡಿಗಳ ಮುಖಂಡ ಹರ್ಷದ್ ಷಾ, ರಾಮಮಂದಿರದ ಬಿಜೆಪಿ ಕೌನ್ಸಿಲರ್ ಜಯರತ್ನಳ ತಮ್ಮ ಬಾಲಕೃಷ್ಣ ಶಿವನಹಳ್ಳಿ, ವಾರ್ಡ್ ಬಿಜೆಪಿ ಅಧ್ಯಕ್ಷ ನಾಗಣ್ಣ, ಕ್ಷೇತ್ರ ಬಿಜೆಪಿ ಉಪಾಧ್ಯಕ್ಷ ಮಲರ್, ಅನೇಕ ವರ್ಷಗಳಿಂದ ಸುರೇಶ್‌ಕುಮಾರ್‌ರ ಭಟ್ಟಂಗಿಯಂತಿದ್ದ ಬಸವೇಶ್ವರನಗರದ ಮರಿಸ್ವಾಮಿ; ಇತ್ಯಾದಿ ಅನೇಕ ಬಿಜೆಪಿ ನಾಯಕರಿಗೆ ಸುರೇಶ್‌ಕುಮಾರ್ ವಿರುದ್ಧ ಒಂದಲ್ಲ ಒಂದು ಕಾರಣಕ್ಕೆ ಅಸಹನೆಯಿತ್ತು.

ತಮ್ಮೆಲ್ಲರ ಶ್ರಮದಿಂದ ಗೆದ್ದು ಮಂತ್ರಿಯೂ ಆದ ಸುರೇಶ್‌ಕುಮಾರ್‌ರನ್ನು ಈ ಬಾರಿ ಸೋಲಿಸಲೇಬೇಕೆಂದು ಹಠಕ್ಕೆ ಬಿದ್ದ ಇವರೆಲ್ಲರಿಗೂ ದುಡ್ಡೂ ಕಾಸು ಬಿಚ್ಚಬಲ್ಲ 'ಮಿಕ'ವೊಂದು ಬೇಕಿತ್ತು, ಅದಕ್ಕೆ ಸಿಕ್ಕಿದ್ದು ಶೋಭಕ್ಕ!

ಅಕ್ಕಾ ನೀವೇ ಗೆಲ್ಲೋದು. ಎಷ್ಟೆಂದರೂ ಯಶವಂತಪುರದ ಗೌಡರಿಗೆ ನೀವು ಯಡಿಯೂರಪ್ಪನವರ ಶಿಷ್ಯೆ ಎಂಬ ಕಾರಣಕ್ಕಾದರೂ ಸಿಟ್ಟಿರುತ್ತದೆ. ಕಳೆದ ಬಾರಿ ಕೇವಲ ಸಾವಿರ ಮತಗಳಿಂದ ಗೆದ್ದ ನಿಮಗೆ ಈ ಬಾರಿ ಅಲ್ಲಿ ವಿಪರೀತ ತಾಪತ್ರಯಗಳಿವೆ. ಆದರೆ ರಾಜಾಜಿನಗರ ಹಾಗಲ್ಲ, ಲಿಂಗಾಯತರು ಗಣನೀಯವಾಗಿದ್ದಾರೆ ಮತ್ತು ಒಕ್ಕಲಿಗರೂ ಓಟು ಕೊಡ್ತಾರೆ. ಒಂದಿಷ್ಟು ಖರ್ಚು ಅಂತ ಮಾಡಿಬಿಟ್ಟರೆ ಸುರೇಶ್‌ಕುಮಾರ್ ನಿಮಗೆ ಯಾವ ಲೆಕ್ಕ? ಎಂದು ಪೂಸಿ ಹೊಡೆದ ಮಾಜಿ ಸುರೇಶ್... ತೋಡಿದ ಹಳ್ಳಕ್ಕೆ ಶೋಭಾ ಬಿದ್ದುಬಿಟ್ಟರು.

ಆದರೆ ರಾಜಾಜಿನಗರ ಪರಿಸ್ಥಿತಿಯೇ ಬೇರೆಯಾಗಿತ್ತು. ಕಾಂಗ್ರೆಸ್ಸಿ... ನಿಂತಿದ್ದ ಮಂಜುಳಾನಾಯ್ಡು ರಾಜಾಜಿನಗರದ ಮಟ್ಟಿಗೆ ಎಲ್ಲಿಂದಲೋ ಬಂದವಳಾದರೆ ಜೆಡಿಎಸ್ ಅಭ್ಯರ್ಥಿ ಆನಂದ್ ಒಕ್ಕಲಿಗರ ಮತ ಕ... ಪರೋಕ್ಷವಾಗಿ ಸುರೇಶ್‌ಕುಮಾರ್ ಗೆಲ್ಲಲು ಸಹಕರಿಸುವುದಕ್ಕಷ್ಟೇ ಸೀಮಿತವಾದಂತಿತ್ತು. ಮೊದಮೊದಲು ಪ್ರತಿಯೊಬ್ಬರೂ ಶೋಭಾ ಗೆಲ್ಲುತ್ತಾರೆ ಮತ್ತು ಸುರೇಶ್‌ಕುಮಾರ್ ಸೋಲುತ್ತಾರೆಂದೇ ಭಾವಿಸಿ... ದಿನಕಳೆದಂತೆ ಹುಸಿಯಾಗತೊಡಗಿತ್ತು. ಶೋಭಕ್ಕನನ್ನು ಗೆಲ್ಲಿಸಿ ಕೊಡ್ತೀ... ಎಂದು ಕೋಟಿ ಲೆಕ್ಕದಲ್ಲಿ ಕಾಸು ತಿಂದ ಬಿಜೆಪಿ ಕೌನ್ಸಿಲರ್‌ಗಳು ಕಾಲಕ್ರಮೇಣ ಉಲ್ಟಾ ಹೊಡೆದರು. ಯಾರನ್ನೆಲ್ಲ ಗಲ್ಲೀ ಲೀಡರುಗಳ...



ಶೋಭಾ


ಶೋಭಕ್ಕ ಲಕ್ಷಗಟ್ಟಲೆ ಕಂತೆ ಎಣಿಸಿಕೊಟ್ಟರೋ... ಅವರೆಲ್ಲ ಕೆಲಸಕ್ಕೆ ಬಾರದ ಪೇಪರ್ ಟೈಗರ್... ಹೊರತು ತಮ್ಮ ಲೀಡರ್‌ಗಿರಿಗೆ ತಕ್ಕಂತೆ ಓ... ಹಾಕಿಸುವಷ್ಟು ತಾಕತ್ತಿನವರಲ್ಲ, ಇನ್ನು ಮನೆ... ರೊಕ್ಕ ಗಿಫ್ಟು ಹಂಚಿದ್ದು ಅಂತಿಮವಾಗಿ ಶೋಭಕ್ಕನಿಗೇ ಮುಳುವಾಗಿತು.


ಪಾಪ, ಸುರೇಶ್‌ಕುಮಾರ್ ಭ್ರಷ್ಟಾಚಾರ ಮಾಡಿದ್ದರೆ ಅವರೂ ದುಡ್ಡು ಹಂಚುತ್ತಿರಲಿಲ್ಲ... ಎಂಥಾ ಪಾಪದ ಮನುಷ್ಯ ನೋಡಿ, ಮಂತ್ರಿಯಾಗಿದ್ದೂ ನೆಟ್ಟಗೊಂದು ಜೊತೆ ಬ... ಗತಿಯಿಲ್ಲ(!) ಎಂದು ಮರುಕ ಪಟ್ಟೇ ಜನ ಬಿಜೆಪಿಗೆ ಓಟು ಕೊಟ್ಟರು.

ಕೊನೆಗೂ ಶೋಭಕ್ಕನಿಗಾದ ಲಾಭವೆಂದ... ಕಟ್ಟಿದ ಠೇವಣಿ ಮತ್ತು ಮೂರನೇ ಸ್ಥಾನದ ಆತ್ಮತೃಪ್ತಿ?


ಶಿವಮೊಗ್ಗ

ಸೇಡು ಸಾಧಿಸಿದ ಯಡ್ಡಿ, ವಾಶ್ ಔಟ್ ಆದ ಬಿಜೆಪಿ





ಕಾಂಗ್ರೆಸ್ ಅಭ್ಯರ್ಥಿಯ ವಿಜಯ ಯಾತ್ರೆ



ಶಿವಮೊಗ್ಗ ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳ ಫಲಿತಾಂಶ ಈ ಹಿಂದೆಯೇ ನಿರೀಕ್ಷಿತ ಹಾದಿಯಲ್ಲಿ ಬಂದಿದೆ. ಈ ಫಲಿತಾಂಶ ಜಿಲ್ಲೆಯಲ್ಲಿ ವಾಲ್‌ರೈಟಿಂಗ್ ಕೂಡ ಆಗಿತ್ತು. ಭದ್ರಾವತಿಯಲ್ಲಿ ತೋಳ್ಬಲ, ಉಳಿದಂತೆ ಎಲ್ಲಾ ಕಡೆ ಜಾತಿ ಬಲ, ಹಣ ಬಲ ತೋರಿದ ಎಲ್ಲಾ ಅಭ್ಯರ್ಥಿಗಳು ಮಣ್ಣು ಮುಕ್ಕಿದ್ದಾರೆ. ಬಿಜೆಪಿ ನಾಯಕರ ಉರವಣಿಗೆ, ದುರಾಡಳಿತ, ಭ್ರಷ್ಟಾಚಾರ, ಸ್ವಜನಪಕ್ಷಪಾತ ಒಂದೆಡೆಯಾದರೆ, ಇನ್ನೊಂದೆಡೆ ಕೆಜೆಪಿಯ ಕೊಳಕು ಜಾತಿರಾಜಕಾರಣ ಮತ್ತು ಅದರ ಅಧಿಪತಿ ಭ್ರಷ್ಟ ಬಿ.ಎಸ್.ಯಡಿಯೂರಪ್ಪ ಅಧಿಕಾರದಲ್ಲಿದ್ದಾಗ ನಡೆಸಿದ ಸ್ವಜನಪಕ್ಷಪಾತಗಳನ್ನು ಕಂಡ ಜಿಲ್ಲೆಯ ಮತದಾರರು ಸಾರಾಸಗಟಾಗಿ ಅವರ ಅಭ್ಯರ್ಥಿಗಳನ್ನೆಲ್ಲ ಮಣ್ಣು ಮುಕ್ಕಿಸಿದ್ದಾರೆ.

ಕಳೆದ ಸಂಚಿಕೆಯಲ್ಲಿ ಪತ್ರಿಕೆ ಬಹಿರಂಗಪಡಿಸಿದಂತೆ ಈಶ್ವರಪ್ಪನೆಂಬ ನಶ್ವರ ಮನುಷ್ಯ ಶಿವಮೊಗ್ಗದಲ್ಲಿ ಮೂರನೇ ಸ್ಥಾನಕ್ಕೆ ತಳ್ಳಲ್ಪಟ್ಟಿದ್ದಾರೆ. ಕಾಂಗ್ರೆಸ್ಸಿನ ಶುದ್ಧ ಹಸ್ತದ ಯುವಕ ಕೆ.ಬಿ.ಪ್ರಸನ್ನ ಕುಮಾರ್ ತಮ್ಮ ನಿಸ್ಪೃಹ, ನೇರ ಮತ್ತು ಸರಳ ಸ್ವಭಾವದಿಂದಾಗಿ ಮತದಾರರನ್ನು ಆಕರ್ಷಿಸಿ ಯಶಸ್ಸು ಸಾಧಿಸಿದ್ದಾರೆ.

ಪ್ರಸನ್ನರನ್ನು ಸೋಲಿಸಲು ಹಣಬಲ-ಜಾತಿಬಲವನ್ನು ಯಡ್ಡಿ-ಈಶ್ವರಿ ಇಬ್ಬರೂ ಪ್ರಯೋಗಿಸಿದ್ದರು. ಇದರ ಜೊತೆಗೆ ಕಾಂಗ್ರೆಸ್ಸಿನ ಹಿರಿಯ ನಾಯಕರಾರೂ ಜಿಲ್ಲೆಗೆ ಬರಲಿಲ್ಲ; ಯೋಜಿತ ರಾಹುಲ್ ಗಾಂಧಿ ಸಭೆ ರದ್ದಾಯಿತು; ಜಿಲ್ಲಾ ಕಾಂಗ್ರೆಸ್ಸಿನ ಹಿರಿ-ಕಿರಿಯ ನಾಯಕರಾರೂ ಸಕ್ರಿಯವಾಗಿ ಪ್ರಸನ್ನನ ಪರವಾಗಿ ನಿಲ್ಲಲಿಲ್ಲ. ಅಷ್ಟೇ ಅಲ್ಲದೆ ಈ ಹಿಂದಿನ ಚುನಾವಣೆಗಳಲ್ಲಿ ಟಿಕೆಟ್ ಪಡೆದು ಪರಾಭವಗೊಂಡವರು, ಈ ಬಾರಿ ಟಿಕೆಟ್‌ಗೆ ಯತ್ನಿಸಿ ವಿಫಲರಾದವರು ಪ್ರಚಾರದ ಹೆಸರಿನಲ್ಲಿ ಪ್ರಸನ್ನರಿಗೆ ಅನೇಕ ತೊಡರುಗಳನ್ನು ನಿರ್ಮಿಸಿದ್ದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಆರ್.ಪ್ರಸನ್ನಕುಮಾರ್, ಈಗ ಕಾಂಗ್ರೆಸ್ ವಕ್ತಾರನಾಗಿರುವ ಕೆ. ದಿವಾಕರ್, ಇಸ್ಮಾಯಿಲ್ ಖಾನ್, ದಿನೇಶ್ ಮತ್ತು ಅನೇಕ ಕುರುಬ-ಲಿಂಗಾಯತ ನಾಯಕರುಗಳು ಪರೋಕ್ಷವಾಗಿ ಬಿಜೆಪಿ-ಕೆಜೆಪಿಗೆ ಸಹಾಯವಾಗುವಂತೆ ಗುಟ್ಟುಗುಟ್ಟಾಗಿ ಯತ್ನಿಸುತ್ತಿದ್ದರು. ಇದಕ್ಕೆ ಕಾರಣ ಪ್ರಸನ್ನಕುಮಾರ್ ಇಲ್ಲಿಂದ ಒಮ್ಮೆ ಗೆದ್ದರೆ ಶಿವಮೊಗ್ಗ ನಗರ ಶಾಶ್ವತವಾಗಿ ಬ್ರಾಹ್ಮಣರ ಸ್ಥಾನವೆಂದು ಮೀಸಲಾಗಿ ಬಿಡುತ್ತದೆ ಎಂಬ ಆತಂಕ. ಅದಲ್ಲದೆ ಅವರವರ ಲಾಭ-ನಷ್ಟ ಲೆಕ್ಕಾಚಾರ. ಇಷ್ಟಾದರೂ ಈಶ್ವರಪ್ಪನವರನ್ನು ಮೂರನೆ ಸ್ಥಾನಕ್ಕೆ ತಳ್ಳಿ, ಕೆಜೆಪಿಯ ರುದ್ರೇಗೌಡರನ್ನು ಎರಡನೆ ಸ್ಥಾನಕ್ಕೆ ಸೀಮಿತಗೊಳಿಸಿದ ಪ್ರಸನ್ನರ ಗೆಲುವು ನಿಜಕ್ಕೂ ಜನತೆಯ ಗೆಲುವು ಎನ್ನಬಹುದು.

ಯಡ್ಡಿ ಮಾತ್ರ ತನ್ನ ಸೇಡು ತೀರಿಸಿಕೊಂಡು ಈಶ್ವರಪ್ಪನನ್ನು ಹರಕೆಯ ಕುರಿಯನ್ನಾಗಿ ಕಡಿದು ಹಾಕುವುದರಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ಈ ಕುರಿ ಕಡಿಯಲು ರುದ್ರೇಗೌಡನೆಂಬ ಸಾಧು ಲಿಂಗಾಯತನನ್ನು ಬಲಿ ಕೊಟ್ಟಿದ್ದಾರೆಂಬ ವಿಚಾರ ಅರ್ಥಮಾಡಿಕೊಳ್ಳಲು ಸಾಧು ಸಮಾಜದ ಬಾಂಧವರಿಗೆ ಸ್ವಲ್ಪ ಸಮಯ ಹಿಡಿಯಬಹುದು. ಯಡ್ಡಿ ಶಿವಮೊಗ್ಗದಲ್ಲಿ ತಾನು ಸಾಧು ಲಿಂಗಾಯತನಿಗೆ ಟಿಕೆಟ್ ನೀಡಿದ್ದೇನೆ ಎಂದು ಹೇಳುತ್ತಾ ಶಿಕಾರಿಪುರದಲ್ಲಿರುವ ಸಾಧು ಲಿಂಗಾಯತರು ಮತಗಳನ್ನು ಸೆಳೆದು ಗೆಲುವು ಸಾಧಿಸಿದ್ದು ಅವರ ಚಾಣಾಕ್ಷತನವನ್ನು ತೋರುತ್ತದೆ.

ತನ್ನ ಪಕ್ಷದಿಂದ ಕಮಂಗಿಗಳನ್ನು-ಕಾಮುಕರನ್ನು ಗೆಲ್ಲಿಸಬೇಕೆಂಬ ಯಡ್ಡಿಯ ಹುಂಬತನಕ್ಕೆ ಜಿಲ್ಲೆಯಲ್ಲಿ ಫುಲ್‌ಸ್ಟಾಪ್ ಬಿದ್ದಿದೆ. ಕೋತಿಯಂತೆ ಕುಣಿದು; ಯಡ್ಡಿಯನ್ನೇ ಬ್ಲಾಕ್‌ಮೇಲ್ ಮಾಡಿ ಅಬಕಾರಿ ಸಚಿವನಾಗಿದ್ದ ರೇಣುಕಾಚಾರ್ಯನೆಂಬ ಎಡಬಿಡಂಗಿ ಶಿಕಾರಿಪುರದ ಪಕ್ಕದ ಹೊನ್ನಾಳಿಯಿಂದ ಸ್ಪರ್ಧಿಸಿ ಹೀನಾಯವಾಗಿ ಸೋತಿದ್ದಾನೆ. ಆ ಕ್ಷೇತ್ರದಲ್ಲಿ ಕಾಂಗ್ರೆಸ್ಸಿನ ಡಿ.ಜಿ. ಶಾಂತನಗೌಡ ಗೆದ್ದಿದ್ದಾರೆ. ಹಾಗೆಯೇ ಸೊರಬದಿಂದ ಕೆಜೆಪಿಯಿಂದ ಸ್ಪರ್ಧಿಸಿದ್ದ ಹರತಾಳು ಹಾಲಪ್ಪನೆಂಬ ಕಾಮುಕನನ್ನು ಗೆಲ್ಲಿಸಲೂ ಯಡ್ಡಿಗೆ ಸಾಧ್ಯವಾಗಿಲ್ಲ.

ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಮಧು ಬಂಗಾರಪ್ಪ ತಾನು ರಂಗಿನ ಮಾ.ಮು. ಬಂಗಾರಪ್ಪನ ನೈಜ ವಾರಸುದಾರನೆಂದು ಮನೆಮಂದಿಯನ್ನೆಲ್ಲ ಪ್ರಚಾರಕ್ಕಿಳಿಸಿ ಗೆಲುವು ಸಾಧಿಸಿದ್ದಾರಲ್ಲದೆ, ತನ್ನ ಸ್ವಂತ ಅಣ್ಣ ಕುಮಾರ ಬಂಗಾರಪ್ಪನನ್ನು ಸೋಲಿಸಿ ತಂದೆಯ ಋಣ ತೀರಿಸಿದ್ದಾರೆ.

ಬಂಗಾರಪ್ಪನವರ ಶಕ್ತಿಯಿಂದ ಆಕಸ್ಮಾತ್ತಾಗಿ ಶಾಸಕನಾಗಿದ್ದ ಬೇಳೂರು ಗೋಪಾಲಕೃಷ್ಣನೆಂಬ ಕೋಡಂಗಿ, ರಾಜಕೀಯ ಮರದಿಂದ ಮರಕ್ಕೆ ಹಾರಿ, ಬಿಜೆಪಿಯಿಂದ ಒದೆ ತಿಂದು, ಅಂತಿಮವಾಗಿ ಜೆಡಿಎಸ್‌ನಿಂದ ಸಾಗರದಲ್ಲಿ ಸ್ಪರ್ಧಿಸಿ ಹಿರಿಯ ಮುತ್ಸದ್ದಿ ಕಾಗೋಡು ತಿಮ್ಮಪ್ಪನವರ ಕೈಲಿ 41 ಸಾವಿರ ಮತಗಳಿಂದ ಸೋತಿದ್ದಾನೆ. ಮಾಜಿ ಶಾಸಕ ಎಲ್. ತಿಮ್ಮಪ್ಪ ಹೆಗ್ಡೆ ಜೊತೆಗೆ ಎಲ್ಲಾ ಪಕ್ಷಗಳ ನಾಯಕರು - ಅದರಲ್ಲೂ ವಿಶೇಷವಾಗಿ ಹವ್ಯಕ ಬ್ರಾಹ್ಮಣ ಸಮಾಜದ ಮುಖಂಡರು - ಸಾಗರ ಕ್ಷೇತ್ರದ ಗೌರವ ಉಳಿಸಲು ಕಾಗೋಡರನ್ನು ಬೆಂಬಲಿಸಲು ಸರ್ವಾನುಮತದ ಪ್ರಯತ್ನ ನಡೆಸಿದ್ದರು. ಕೆಜೆಪಿಯಿಂದ ಸ್ಪರ್ಧಿಸಿದ್ದ ಬಿ.ಆರ್. ಜಯಂತ್ ಮತ್ತು ಬಿಜೆಪಿಯ ಶರಾವತಿ ರಾವ್ ಕಾಗೋಡು ಅವರ ಅಂಡರ್ ಕರೆಂಟ್ ಮತ್ತು ಬೇಳೂರಿನ ಅಬ್ಬರದಲ್ಲಿ ಹುದುಗಿಹೋದರು.

ತೀರ್ಥಹಳ್ಳಿ ಕ್ಷೇತ್ರದಿಂದ ಕಿಮ್ಮನೆ ರತ್ನಾಕರ ಎಂಬ ಸಜ್ಜನ, ಗಂಭೀರ ವ್ಯಕ್ತಿತ್ವದ ವಕೀಲ ಶಾಸಕರಾಗಿ ಪುನರಾಯ್ಕೆಯಾಗಿದ್ದಾರೆ. ಅಪೆಕ್ಸ್ ಬ್ಯಾಂಕ್ ಅಧ್ಯಕ್ಷರಾಗಿರುವ ಮತ್ತು ಎಲ್ಲಾ ಕಾಲಕ್ಕೂ ಆಡಳಿತ ಪಕ್ಷದೊಂದಿಗೆ ಇರುವ ಆರ್.ಎಂ.ಮಂಜುನಾಥ ಗೌಡರು ಕಿಮ್ಮನೆ ಅವರಿಗೆ ತೀವ್ರವಾದ ಪೈಪೋಟಿ ನೀಡಿದರೂ ಅಂತಿಮವಾಗಿ 1,343 ಮತಗಳ ಅಂತರದಿಂದ ಸೋತಿದ್ದಾರೆ.

ಈ ಹಿಂದೆ ಶಾಸಕನಾಗಿ ಹ್ಯಾಟ್ರಿಕ್ ಸಾಧನೆಗೈದಿದ್ದ ಬಿಜೆಪಿಯ ಆರಗ ಜ್ಞಾನೇಂದ್ರ ಎಂಪಿಎಂ ಅಧ್ಯಕ್ಷರಾಗಿ ಅನೇಕ ಆರೋಪಗಳನ್ನು ಹೊತ್ತು ತಮ್ಮ ನಾಯಕ ಈಶ್ವರಪ್ಪನಂತೆ ಮೂರನೆ ಸ್ಥಾನಕ್ಕೆ ಕುಸಿದು ಸೋಲೊಪ್ಪಿದ್ದಾರೆ.

ಮಾತಿನ ಮಲ್ಲರು ನಾಯಕರಲ್ಲ ಎಂಬುದನ್ನು ಭದ್ರಾವತಿ ಫಲಿತಾಂಶ ಸಾಬೀತುಪಡಿಸುತ್ತದೆ. ಇಲ್ಲಿ ಕಾಂಗ್ರೆಸ್ ತನ್ನ ನಿಯಮವನ್ನೇ ಉಲ್ಲಂಘಿಸಿ ತನ್ನ ಶಾಸಕ ಬಿ.ಕೆ.ಸಂಗಮೇಶ್‌ಗೆ ಟಿಕೆಟ್ ನಿರಾಕರಿಸಿತ್ತು, ಮಾತ್ರವಲ್ಲ ಸಿ.ಎಂ. ಇಬ್ರಾಹಿಂ ಎಂಬ ಮಾತಿನಮಲ್ಲನಿಗೆ ಟಿಕೆಟ್ ನೀಡಿತ್ತು. ಆ ಮೂಲಕ ಚುನಾವಣೆಯ ಮುನ್ನವೇ ಕಾಂಗ್ರೆಸ್ ಒಂದು ಸ್ಥಾನವನ್ನು ಕಳೆದುಕೊಂಡಿತ್ತು.

ಇಲ್ಲಿ ಗೆಲುವು ಸಾಧಿಸಿದ ಜೆಡಿಎಸ್‌ನ ಅಪ್ಪಾಜಿಗೌಡ ಕ್ಷೇತ್ರದಲ್ಲಿ ನಿರಂತರವಾಗಿ ಕಾರ್ಯಕರ್ತರನ್ನು ಉಳಿಸಿ ಬೆಳೆಸಿದವರು. ಇವರ ಗೆಲುವಿನ ಅಂತರ 44 ಸಾವಿರ. ಇದು ಖಂಡಿತವಾಗಿಯೂ ಒನ್‌ವೇ ಗೆಲುವು.

ಯಡ್ಡಿ ತನ್ನ ಸ್ವಾರ್ಥಸಾಧನೆಗೆ ನೀಡಿದ ಎರಡನೆ ಬಲಿ ಜಿ. ಬಸವಣ್ಯಪ್ಪನೆಂಬ ಸಜ್ಜನ ವೃದ್ಧನದ್ದು. ಶಿವಮೊಗ್ಗ ಗ್ರಾಮಾಂತರದಲ್ಲಿ ಜೆಡಿಎಸ್‌ನ ಶಾರದಾ ಪೂರ್ಯಾನಾಯ್ಕ 10 ಸಾವಿರದ ಅಂತರದಲ್ಲಿ ಬಸವಣ್ಯಪ್ಪನವರನ್ನು ಸೋಲಿಸಿದ್ದಾರೆ. ಶಿಕಾರಿಪುರದಲ್ಲಿ ಶಾರದಾ ಪೂರ್ಯಾ ನಾಯ್ಕರ ಲಂಬಾಣಿ ಜನಾಂಗಕ್ಕೆ ಸೇರಿದ 40 ಸಾವಿರ ಮತಗಳನ್ನು ಯಡ್ಡಿಗೆ ಹಾಕಿಸಿದರೆ, Quid-pro-quo ಆಗಿ ಶಿವಮೊಗ್ಗ ಗ್ರಾಮಾಂತರದಲ್ಲಿರುವ ಲಿಂಗಾಯತ ಓಟುಗಳನ್ನು ಪೂರ್ಯಾನಾಯ್ಕರಿಗೆ ಧಾರೆಯೆರೆಯಬೇಕೆಂಬ ಮಾತುಕತೆ ನಡೆದಿತ್ತೆಂದು, ಅದು ಅಂತಿಮವಾಗಿ ಫಲಶ್ರುತಿಯಾಗಿ ಬಸವಣ್ಯಪ್ಪನವರಿಗೆ ಲಿಂಗಾಯತ ಮತ ಸಿಗದೆ, ಆ ಓಟುಗಳು ಶಾರದಾಪೂರ್ಯಾನಾಯ್ಕರಿಗೆ Barter ಆಗಿ ಟ್ರಾನ್ಸ್‌ಫರ್ ಆಗಿವೆ ಎನ್ನಲಾಗಿದೆ. [illegible] ಕರಿಯಣ್ಣ ಮತ್ತು ಬಿಜೆಪಿಯ ಕುಮಾರಸ್ವಾಮಿ [illegible] ಮುಕ್ಕಿದ್ದಾರೆ.

[illegible]

3 [illegible]

• [illegible]



ಕಿಮ್ಮನೆ ರತ್ನಾಕರ್



ಮಧು ಬಂಗಾರಪ್ಪ



ಶಾರದಾ ಪಿ.ನಾಯ್ಕ್



ಅಪ್ಪಾಜಿಗೌಡ

5<<< ಮೈಸೂರು: ಫಲಿತಾಂಶ....

[illegible]ವಳಿಯಲ್ಲಿ ಗುರುತಿಸಿಕೊಂಡಿದ್ದವರು. ವೈದ್ಯರಾಗಿರುವ [illegible]ವರಿಗೆ ಒಳ್ಳೆಯ ವ್ಯಕ್ತಿ ಎಂಬ ಹೆಸರಿದೆ. ಹೀಗಿದ್ದರೂ [illegible] ತಮ್ಮ ಮಗನ ಕೆಲವಾರು ದಾಂಧಲೆಗಳಿಗೆ ಕಡಿವಾಣ [illegible] ಆರೋಪ ಇವರ ಮೇಲಿದೆ. ಮೇಲಾಗಿ [illegible] ಅಭಿವೃದ್ಧಿ ಕೆಲಸ ಕಾರ್ಯ ಕೂಡ ಅಷ್ಟಕ್ಕಷ್ಟೆ. [illegible], ಕಾರ್ಯಕರ್ತರ, ಜನರ ಸಂಪರ್ಕ ಆದಷ್ಟೂ [illegible] ಇರಬೇಕೆಂಬ ಮನೋಭಾವದವರು. ಹೀಗಾಗಿ [illegible] ಬೆಂಗಳೂರು ಕಡೆ ನಡೆಯುವ ವ್ಯಕ್ತಿ, ಸಂದರ್ಭದ [illegible] ಇವರು ಗೆದ್ದಿದ್ದಾರೆಯೇ ಹೊರತು ತಮ್ಮ [illegible] ಸಾಮರ್ಥ್ಯದಿಂದ ಅಲ್ಲ ಎಂಬುದು ಮೇಲುನೋಟಕ್ಕೆ [illegible] ಬರುವ ಅಂಶ.

[illegible] 53,219 ಮತಗಳನ್ನು [illegible] ಗೆಲುವಿನ ಅಂತರ [illegible]

ಗೆಲುವು ಎನ್ನಬಹುದು. ಜೆಡಿಎಸ್ ಅಭ್ಯರ್ಥಿ ಸಿಕ್ಕಾಪಟ್ಟೆ ದುಡ್ಡು ಚೆಲ್ಲಿದ್ದರಿಂದಾಗಿ ತನಗೆ ಇಂಥಾ ಸ್ಥಿತಿ ಬಂತೆಂಬ ಸರಳ ವಾದವನ್ನು ಮುಂದಿಟ್ಟು ಕಾಂಗ್ರೆಸ್ಸಿಗರು ಈ ಬಾರಿ ಬಚಾವಾಗಬಹುದು. ಆದರೆ ಇಂದಿನ ರಾಜಕಾರಣದಲ್ಲಿ ಜನರ ಮಧ್ಯೆ ಸಕ್ರಿಯವಾಗಿ ತೊಡಗಿಸಿಕೊಳ್ಳದ, ಗೆದ್ದ ಕೂಡಲೇ ಕ್ಷೇತ್ರವನ್ನು ಕಡೆಗಣಿಸುವ ಕ್ಯಾಂಡಿಡೇಟುಗಳು ಬರಕತ್ತಾಗುವುದು ತುಂಬಾ ಕಷ್ಟ.

ಕೆ.ಆರ್.ನಗರ ಕ್ಷೇತ್ರದ್ದು ಮತ್ತೊಂದು ರೀತಿಯ ವಿಭಿನ್ನ ಕತೆ. ಇಲ್ಲಿ ಕಳೆದ ಬಾರಿ ಎಂಎಲ್‌ಎ ಆಗಿದ್ದ ಜೆಡಿಎಸ್‌ನ ಸಾ.ರಾ.ಮಹೇಶ್ ಮತ್ತೊಮ್ಮೆ ಆರಿಸಿ ಬಂದಿದ್ದಾರೆ. 81,457 ಮತಗಳನ್ನು ಗಳಿಸಿ ಕಾಂಗ್ರೆಸ್‌ನ ದೊಡ್ಡಸ್ವಾಮೀಗೌಡರಿಗಿಂತ 15,052 ಮತಗಳ ಅಂತರದಿಂದ ಗೆದ್ದು ಬಂದಿದ್ದಾರೆ. ಇಲ್ಲಿ ಜೆಡಿಎಸ್ ಅಭ್ಯರ್ಥಿ ಒಕ್ಕಲಿಗರಾದರೆ, ಕಾಂಗ್ರೆಸ್ ಅಭ್ಯರ್ಥಿ ಕುರುಬರು.

ಈ ಕಾಂಗ್ರೆಸ್ ಅಭ್ಯರ್ಥಿ ದೊಡ್ಡಸ್ವಾಮಿ ಗೌಡ ಬೆಂಗಳೂರಿನ ಬಿಎಂಎಲ್ ನೌಕರ ಸಂಘದ ಅಧ್ಯಕ್ಷರಾಗಿದ್ದವರು. ಗೃಹ ನಿರ್ಮಾಣ ಸಂಘ ಅಂತಾ ಮಾಡಿಕೊಂಡು ಕೋಟ್ಯಾಂತರ ಹಣ ಬಾಚಿದ್ದಾನೆ. ಕಳೆದ ಕೆಲವು ವರ್ಷಗಳ ಹಿಂದೆ ಉತ್ತಮ ಅವಕಾಶ ಹುಡುಕಿಕೊಂಡು ಬಿಜೆಪಿಗೆ ವಲಸೆ ಹೋಗಿದ್ದ ವ್ಯಕ್ತಿ ಇವರು. ಸಾ.ರಾ.ಮಹೇಶ್‌ಗೆ ಸಿಕ್ಕು ಹೊಡೆದು ಹಣ ಚೆಲ್ಲಬಲ್ಲ ಅಭ್ಯರ್ಥಿಯೆಂಬ ಕಾರಣಕ್ಕಾಗಿ ಈತನನ್ನು ಸಂಸದ ವಿಶ್ವನಾಥ್ ಮತ್ತೆ ಕಾಂಗ್ರೆಸ್‌ಗೆ ಕರೆತಂದು ಟಿಕೆಟ್ ಕೊಡಿಸಿದರು. ಆದರೆ ಅಷ್ಟರಲ್ಲಿ ಮಹೇಶ್ ತನ್ನ ಗೆಲುವಿಗೆ ಭದ್ರಬುನಾದಿ ಹಾಕಿಕೊಂಡಿದ್ದರು.

ಇನ್ನೇನು ಚುನಾವಣೆ ಹತ್ತಿರ ಬರುತ್ತಿದ್ದಂತೆ ಕ್ಷೇತ್ರದ ಬಡಬಗ್ಗರನ್ನು ಅತಿಯಾಗಿ ಪ್ರೇಮಿಸತೊಡಗಿದ ಮಹೇಶ್ ಒಂದು ಒಳ್ಳೆಯ ಸ್ಕೀಮ್ ಪರಿಚಯಿಸಿದ್ದ. ಪಕ್ಷದ ಪ್ರಣಾಳಿಕೆಗಳಲ್ಲಿ ಒಂದು ರೂಪಾಯಿಗೆ, ಎರಡು ರೂಪಾಯಿಗೆ ಒಂದು ಕೆಜಿ ಅಕ್ಕಿ ಅಂತಾ ಬೊಗಳೆ ಬಿಟ್ಟು ಓಟು ಕಸಿಯುವ ತಂತ್ರ ಹೂಡಿದ್ದರೆ, ಈ ಶಾಸಕ ಉಚಿತ ರೇಷನ್ ಸ್ಕೀಮ್ ಜಾರಿಗೆ ತಂದಿದ್ದ. ಡಿಪೋಗಳಿಗೆ ಬರುವ ಅಕ್ಕಿ ಸೀಮೆಎಣ್ಣೆ ಮುಂತಾದ ವಸ್ತುಗಳ ಬಜೆಟ್ ಲೆಕ್ಕ ಹಾಕಿ ಆ ಹಣವನ್ನು ತಾನೇ ಕಟ್ಟಿ ಮತದಾರರಿಗೆ ಉಚಿತವಾಗಿ ದವಸಧಾನ್ಯ ಸರಬರಾಜು ಮಾಡಿಸಿದ್ದಾರೆ. ಬಿಜೆಪಿಯ ರಾಮದಾಸ್‌ಗೆ ಪರಮಾಪ್ತನಾಗಿರುವ ಮಹೇಶ್ ಹಾಕಿದ ಸ್ಕೀಮ್ ಇಲ್ಲಿ ವರ್ಕ್‌ಔಟ್ ಆಗಿದೆ. ಕೊನೆ ಘಳಿಗೆಯಲ್ಲಿ ಹಣ ಹಿಡಿದುಕೊಂಡು ಎಂಎಲ್‌ಎ ಆಗಲು ಬಂದ ಕಾಂಗ್ರೆಸ್ ಅಭ್ಯರ್ಥಿಗೆ ಇಲ್ಲಿ ಮುಖಭಂಗವಾಗಿದೆ.

ಒಟ್ಟಾರೆ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತದೆಂಬ ಹಾಗು ಸಿದ್ದರಾಮಯ್ಯ ಮುಖ್ಯಮಂತ್ರಿಯಾಗುತ್ತಾರೆಂಬ ಅಲೆ ಈ [illegible]


• [illegible]

ಮೂಲ: ಕೆನೆತ್ ಆಂಡರ್ಸನ್

ಚಿರುಗಾಳಿ ಮಳೆಯ ಅವಾಂತರ

ಹೊಸ ಸರಮಾಲೆ-2

1





ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್

ಹುಲಿಯ ಛಾಯಾಗ್ರಹಣ

ನನ್ನ ಮಗ ಡೋನಾಲ್ಡ್ (ಡಾನ್) ಮೈಸೂರಿನ ರೈಫಲ್ ಅಸೋಸಿಯೇಷನ್‌ನವರು ನಡೆಸಿದ ಜೇಡಿಮಣ್ಣಿನ ಹಾರಿವಾಳಗಳಿಗೆ ಗುಂಡುಹೊಡೆಯುವ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಹಂಚಿಕೊಂಡು ಬಹುಮಾನ ಗಳಿಸಿದ್ದ. ನಾನು ರೈಫಲ್‌ನಲ್ಲಿ ಮಾತ್ರ ಗುಂಡುಹೊಡೆಯಬಲ್ಲವನು. ಆದರೆ ಡೋನಾಲ್ಡ್ ರೈಫಲ್ ಮತ್ತು ಗನ್ ಎರಡರಲ್ಲೂ ಸಕ್ಷಮನಿದ್ದ ಅವನಿಗೆ ಈ ಸ್ಪರ್ಧೆ ಅಪರಿಚಿತವಾಗಿದ್ದರೂ ಪ್ರಥಮ ಸ್ಥಾನ ಗಳಿಸಿದ್ದ. ಇದರ ಖುಷಿಯನ್ನು ಆಚರಿಸಲು ಕಾಡಿಗೆ ಹೋಗೋಣ ಎಂದು ಅವನು ಸೂಚಿಸಿದ. ಕಾಡಿನಲ್ಲಿ ಆಚರಣೆ ಮಾಡುವುದು ನಿಮಗೆಲ್ಲಾ ವಿಚಿತ್ರ ಅನ್ನಿಸಿದರೂ ಕಾಡೇ ಮನೆ ಎಂದುಕೊಂಡಿದ್ದ ನಮಗಿಬ್ಬರಿಗೂ ಅದೇ ಪ್ರಶಸ್ತವಾದ ಸ್ಥಳವಾಗಿತ್ತು.

ಈ ಬಾರಿ ನಾವು ಕಾಡಿನ ರಾತ್ರಿಯಲ್ಲಿ ಹುಲಿಯನ್ನು ಬೇಟೆಯಾಡುವ ಬದಲು ಅವುಗಳ ಛಾಯಾಚಿತ್ರ ತೆಗೆಯಲು ನಿರ್ಧರಿಸಿದ್ದೆವು. ಬಹಳ ದಿನಗಳಿಂದ ಡೋನಾಲ್ಡ್ ಈ ಕಷ್ಟದ ಮತ್ತು ಕೌಶಲ್ಯದ ಕೆಲಸದಲ್ಲಿ ಕೈಹಾಕಬೇಕೆಂದು ಬಯಸಿದ್ದ. ಇದಕ್ಕಾಗಿ ಆತ ತನ್ನ ಸ್ನೇಹಿತ ದೂದ್‌ವಾಲಾನಿಂದ ಫ್ಲ್ಯಾಷ್‌ಲೈಟ್‌ಗಳುಳ್ಳ ಒಂದು ಅತ್ಯುತ್ತಮ ಕ್ಯಾಮರಾವನ್ನು ಕೇಳಿಪಡೆದಿದ್ದ.

ನಾವು ಯಾವ ಕಾಡಿಗೆ ಹೋಗಿದ್ದೆವು ಎಂದು ಇಲ್ಲಿ ದಾಖಲಿಸುವುದಿಲ್ಲ, ಇದಕ್ಕೆ ಪ್ರಮುಖ ಕಾರಣವಿದೆ. ನನ್ನ ಪುಸ್ತಕಗಳನ್ನು ಓದಿದ ಕೆಲವು ಕುತೂಹಲಿಗಳು ನಾನು ಹೇಳಿದ ಜಾಗಗಳಿಗೆಲ್ಲಾ ಹುಲಿಗಳನ್ನು ಬೇಟೆಯಾಡಲು ಹೋಗತೊಡಗಿದ್ದರು. ಇದರಿಂದ ಈಗಾಗಲೆ ವಿದೇಶಿಯರಿಂದ ಬೇಟೆಯಾಡುವುದರ ಮೂಲಕ ಮತ್ತು ಸರ್ಕಾರ ಬೆಳೆಗಳಿಗಾಗಿ ಒದಗಿಸಿದ ಕ್ರಿಮಿನಾಶಕಗಳಿಂದ ಕಾಡುಪ್ರಾಣಿಗಳನ್ನು ಕೊಲ್ಲುವುದರ ಮೂಲಕ ಕಡಿಮೆಯಾಗಿರುವ ಹುಲಿ ಸಂತತಿಗೆ ಹೆಚ್ಚಿನ ಅಪಾಯಗಳು ಆಗತೊಡಗಿದ್ದವು. ಹಾಗಾಗಿ ಆ ಸ್ಥಳವನ್ನು ಹುಲಿಪ್ರದೇಶ ಎಂದು ಮಾತ್ರ ಕರೆಯುತ್ತೇನೆ.

ಕಾಡಿನಲ್ಲೊಂದು ಗೂಡು

ನಾವು ಈ ಬಾರಿ ಹೋಗಿದ್ದ ಹುಲಿ ಪ್ರದೇಶದಲ್ಲಿ ಕೆಲವು ವರ್ಷಗಳ ಹಿಂದೆ ನಾನು ಸ್ವಲ್ಪ ಜಾಗವನ್ನು ಕೊಂಡಿದ್ದೆ. ಅಲ್ಲಿ ಬಿದಿರು ಮತ್ತು ಹುಲ್ಲಿನಿಂದ ಮಾಡಿದ ಸಣ್ಣ ಗುಡಿಸಲನ್ನು ನಿರ್ಮಿಸಿ ನಾನು ಹೋದಾಗ ಉಳಿದುಕೊಳ್ಳುವುದಕ್ಕಾಗಿ ಇಟ್ಟುಕೊಂಡಿದ್ದೆ. ನನ್ನ ಗುಡಿಸಲಿನಿಂದ ಸುಮಾರು ಇನ್ನೂರು ಗಜ ದೂರದಲ್ಲಿ ಝರಿಯೊಂದು ಹರಿಯುತ್ತಿತ್ತು. ಇದರ ಇಕ್ಕೆಲಗಳಲ್ಲಿ ವಿವಿಧ ಜಾತಿಯ ದೈತ್ಯಾಕಾರದ ಮರಗಳಿದ್ದವು. ಅಲ್ಲಲ್ಲಿ ಕೆಲವು ಕಡೆ ಒತ್ತೊತ್ತಾಗಿ ಬೆಳೆದಿದ್ದ ಬಿದಿರಿನ ಮೆಳೆಗಳು ಇತರ ಸಸ್ಯಗಳಿಗೆ ಅವಕಾಶ ನೀಡದೆ ತಮ್ಮ ಪ್ರಭುತ್ವವನ್ನು ಸ್ಥಾಪಿಸಿದ್ದವು. ಅವುಗಳಿಂದ ಉದುರಿದ ಎಲೆಗಳು ಉತ್ತಮ ನೆಲಹಾಸನ್ನು ನಿರ್ಮಿಸಿದ್ದವು.

ಆ ನದಿ ಮೊಸಳೆಗಳಿಗೆ ಪ್ರಿಯವಾದ ಸ್ಥಳವಾಗಿತ್ತು. ಜಿಂಕೆಗಳು, ಸಾಂಬಾರ್‌ಗಳು, ನೀಲಗೈ ಮುಂತಾದ ಪ್ರಾಣಿಗಳಿಗೂ ಸದ್ದಾಗದಂತೆ ಬಂದು ನೀರು ಕುಡಿದು ಹೋಗಲೂ ಇದು ಪ್ರಶಸ್ತವಾದ ಜಾಗವಾಗಿತ್ತು. ನೀರು ಕುಡಿಯಲು ಬರುವ ಈ ಪ್ರಾಣಿಗಳಿಗೆ ಇತರ ಮಾಂಸಾಹಾರಿಗಳದ್ದೇ ಚಿಂತೆಯಿರುತ್ತಿದ್ದುದರಿಂದ ತಮ್ಮ ಕಣ್ಣು ಕಿವಿ, ಮೂಗುಗಳನ್ನೆಲ್ಲ ಮರಗಳ ಕಡೆಗೇ ಕೇಂದ್ರೀಕರಿಸಿ, ನೀರಿನಲ್ಲಿರುವ ಮೊಸಳೆಗಳನ್ನು ಗಮನಿಸುತ್ತಲೇ ಇರಲಿಲ್ಲ. ಸಾಂಬಾರ್‌ಗಳೂ ಕೂಡ ಹುಲಿ ಚಿರತೆಗಳ ಧ್ಯಾನದಲ್ಲಿ ಕಾಡಿನ ಕಡೆಗೆ ಮಾತ್ರ ಗಮನ ಹರಿಸಿ, ನೀರಿಗೆ ಬಾಯಿಹಾಕುತ್ತಿದ್ದವು. ತಕ್ಷಣ ನೀರಿನಿಂದ ಮೇಲೇಳುವ ಮೊಸಳೆ ಅದರ ಕುತ್ತಿಗೆಗೆ ತನ್ನ ಗರಗಸದಂತಹ ಹಲ್ಲುಗಳನ್ನು ನೆಟ್ಟುಬಿಡುತ್ತಿತ್ತು. ಅದೇ ಕ್ಷಣದಲ್ಲಿ ತನ್ನ ಬಾಲವನ್ನು ಬಲವಾಗಿ ಬೀಸಿ ಸಾಂಬಾರ್‌ಗಳ ಕಾಲಿಗೆ ಹೊಡೆದು ಅವು ನೀರಿನಲ್ಲಿ ಆಯತಪ್ಪಿ ಬೀಳುವಂತೆ ಮಾಡುತ್ತಿದ್ದವು. ನಂತರ ಕುತ್ತಿಗೆಯ ಮೇಲಿನ ಹಿಡಿತವನ್ನು ಸಡಿಲಿಸದೆ ಒದ್ದಾಡುತ್ತಿದ್ದ ಪ್ರಾಣಿಯನ್ನು ನೀರಿನಾಳಕ್ಕೆ ಎಳೆದೊಯ್ಯುತ್ತಿತ್ತು. ತನಗೆ ಪೂರ್ಣ ಹಿಡಿತ ಸಿಕ್ಕಿದೆ ಅನ್ನಿಸಿದ ಮೇಲೆ ತನ್ನ ಇಡೀ ದೇಹವನ್ನು ತೀವ್ರ ವೇಗದಲ್ಲಿ ಸುತ್ತಿಸಿ ಬಲಿಯ ಕುತ್ತಿಗೆಯನ್ನು ಮುರಿಯುತ್ತಿತ್ತು ಅಥವಾ ಅದನ್ನು ಎಚ್ಚರ ತಪ್ಪಿಸುತ್ತಿತ್ತು. ಆಮೇಲಿನ ಕೆಲವೇ ಕ್ಷಣದಲ್ಲಿ ಎರಡೂ ಪ್ರಾಣಿಗಳು ನೀರಿನಾಳವನ್ನು ಸೇರುತ್ತಿದ್ದವು. ಆಗ ಈ ದುರಂತ ನಡೆದ ನೀರಿನ ಮೇಲ್ಮೈಯಲ್ಲಿ ಗುಳ್ಳೆಗಳೆದ್ದು ಶಾಂತವಾಗುತ್ತಿತ್ತು. ನೀರಿನಾಳದಲ್ಲಿ ನಡೆಯುವ ಸಾವುಬದುಕಿನ ದುರಂತ ಹೋರಾಟ ನಮಗೆ ಕಾಣುತ್ತಿರಲಿಲ್ಲ.

ಬೋರನ ದೇವಿಮಹಾತ್ಮೆ!

ನಾನು ನನ್ನ ಗುಡಿಸಲಿನ ಜಗಲಿಯಲ್ಲಿ ಆರಾಮವಾಗಿ ಕುಳಿತು ಕಾಡಿನ ಸದ್ದುಗಳನ್ನು ಆಲಿಸುತ್ತಿದ್ದೆ. ಕಿರ್..... ಎಂದು ಬಿದಿರಿನ ಮೆಳೆಗಳನ್ನು ಮುರಿಯುತ್ತಿದ್ದ ಆನೆಗಳು, ಅವುಗಳ ಹೊಟ್ಟೆಯಲ್ಲಿ ಆಹಾರ ಜೀರ್ಣವಾಗುವಾಗ ಮೆಲುವಾದ ಗುಡುಗಿನಂತಹ ಸದ್ದು, ತಾಯಿಯ ಮೊಲೆ ಹೀರುತ್ತಿರುವ ಮರಿಯಾನೆಗಳ ಕೀರಲು ಧ್ವನಿ, ಹಾಲನ್ನು ಕುಡಿಸಿ ತೃಪ್ತರಾದ ಹೆಣ್ಣಾನೆಗಳ ಹುಸಿವಿನ ಕೂಗಿನಂತಹ ಶಬ್ದ, ಆಹಾರವನ್ನು ಅರಸುತ್ತಾ ಎತ್ತರದ ಆಕಾಶದಲ್ಲಿ ಚುಕ್ಕಿನಂತೆ ಕೂಗುತ್ತಿರುವ ಹದ್ದುಗಳು–ಈ ಎಲ್ಲ ಶಬ್ದಗಳ ನಡುವೆಯೂ ಇಡೀ ಕಾಡು ಪ್ರಶಾಂತವಾಗಿತ್ತು.

ಆದರೆ ಇದೇ ಶಾಂತಿ ನನ್ನ ಗುಡಿಸಲಿನಲ್ಲಿರಲಿಲ್ಲ. ನಾನು ಇಲ್ಲದಾಗ ಗುಡಿಸಲನ್ನು ಕಾಯುತ್ತಿದ್ದ ಬೋರ ಮತ್ತು ಅವನ ಹೆಂಡತಿಯ ನಡುವೆ ಬೆಳಗಿನಿಂದ ಜಗಳ ನಡೆಯುತ್ತಿತ್ತು. ನನ್ನ ಮಗ ಡೋನಾಲ್ಡ್ ಸ್ನಾನಕ್ಕಾಗಿ ನೀರು ತರುವಂತೆ ಬೋರನ ಹೆಂಡತಿಗೆ ಎರಡು ಬಾರಿ ಹೇಳಿದ್ದರೂ ಅವಳು ಅದಕ್ಕೆ ಕಿವಿಗೊಟ್ಟಿರಲಿಲ್ಲ. ಹಾಗಾಗಿ ವಿಷಯ ಏನೆಂದು ತಿಳಿಯಲು ನಾನು ಹಿಂದೆಯೇ ಇದ್ದ ಅವರ ಗುಡಿಸಲಿಗೆ ಹೋದೆ. ಬೋರ ಒಲೆಯ ಕೊಳ್ಳಿಯನ್ನು ಅನಗತ್ಯವಾಗಿ ಕೆದಕುತ್ತಾ ಕುಳಿತಿದ್ದ. ಅವನ ಎದುರಿಗೆ ಜಗಿಯುತ್ತಿದ್ದ ವೀಳ್ಯದ ಎಲೆಯಿಂದ ಕೆಂಪಾದ ರಸವನ್ನು ಸುತ್ತಲೂ ಉಗಿಯುತ್ತಾ ಅವನ ಹೆಂಡತಿ ದೇವಿ ಕುಳಿತಿದ್ದಳು. ಜೊತೆಗೆ ನನ್ನ ಮಗನ ತಿರುಗಾಟದ ನಂಬಿಕಸ್ಥ ಸ್ನೇಹಿತ ಶಿಕಾರಿಯ ತಂಗವೇಲುವೂ ಇದ್ದ.

ವಿಷಯವೇನೆಂದು ತಿಳಿಯಲು ನಾನು ಇಬ್ಬರಿಗೂ ದಬಾಯಿಸಿ ಕೇಳಿದೆ. ಸ್ವಲ್ಪ ಹಿಂಜರಿಕೆಯಿಂದ ಬೋರ ಹೇಳತೊಡಗಿದ, "ನಾನು ಈ ಜಗಳಗಂಟಿಯನ್ನು ಮೂರು ವರ್ಷದ ಹಿಂದೆ ಹತ್ತು ರೂಪಾಯಿ ತೆರ ಕೊಟ್ಟು ಮದುವೆಯಾದೆ. ಇವಳು ಮೂರು ವರ್ಷದಲ್ಲಿ ಮೂರು ಮಕ್ಕಳನ್ನು ಹೆತ್ತಮೇಲೆ, ಈಗ ಸೋಮಾರಿಯಾಗಿ ಸಮಯ ಕಳೆಯುತ್ತಾ ನನ್ನ ಬಗೆಗೆ ಗಮನ ಹರಿಸುತ್ತಿಲ್ಲ. ಜೊತೆಗೆ ಯಾವಾಗಲೂ ಎಲೆ ಅಡಿಕೆಗಾಗಿ ಹಣಕ್ಕೆ ಪೀಡಿಸುತ್ತಾಳೆ. ಎಷ್ಟು ಕೊಟ್ಟರೂ ಸಾಕಾಗುವುದಿಲ್ಲ. ಈಗ ಇವಳ ಅಪ್ಪ ಜಾವಣ್ಣ ನನಗೆ ಇವಳ ತಂಗಿಯನ್ನು ಹದಿನೈದು ರೂಪಾಯಿಯ ತೆರಕ್ಕೆ ಕೊಡಲು ಸಿದ್ಧನಿದ್ದಾನೆ. ಇವಳ ತಂಗಿ ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಾಳೆ. ಅದೂಅಲ್ಲದೆ ಈ ಮೂಳೆ ಚಕ್ಕಳವಾಗಿರುವ ಹೆಂಗಸನ್ನು ಐದು ರೂಪಾಯಿಗೆ ಹಿಂದೆ ಪಡೆಯಲೂ ಒಪ್ಪಿದ್ದಾನೆ. ಅಂದರೆ ನಾನು ಇವಳ ತಂಗಿಗಾಗಿ ಹತ್ತೇ ರೂಪಾಯಿ ಹೆಚ್ಚಿನ ತೆರ ಕೊಟ್ಟರೆ ಸಾಕು! ಇವಳು ಹಡೆದ ಮೂರು ಮಕ್ಕಳಲ್ಲಿ ನನಗೆ ಒಂದೂ ಬೇಡ. ಎಲ್ಲವನ್ನೂ ಅವಳಿಗೆ ಬಿಡಲು ಸಿದ್ಧನಿದ್ದೇನೆ!"

ಬೋರನ ಮಾತನ್ನು ತುಂಡರಿಸುತ್ತಾ ದೇವಿ ಚೀರಿದಳು, "ಏ ಮುದಿಗೂಬೆ, ಹದಿನೈದು ವರ್ಷದ ಚಿಕ್ಕ ಹುಡುಗಿಯಾಗಿದ್ದರೂ ದೊಡ್ಡ ಚನಾಲಿಯಾಗಿರುವ ನನ್ನ ತಂಗಿ ಲಕ್ಷ್ಮಿಯನ್ನು ನೀನೆಲ್ಲಿ ಸಂಭಾಳಿಸುತ್ತೀಯಾ. ಈಗಲೇ ನೀ... ಅರ್ಧ ಹೆಣವಾಗಿದ್ದೀಯಾ. ಇನ್ನು ಅವಳನ್ನು ಮದುವೆಯಾದರೆ ಒಂ... ವಾರದಲ್ಲಿ ನಿನ್ನ ಬಸವಳಿದ ಮೂಳೆಗಳನ್ನು ಹೂಳಬೇಕು ನಾನು! ... ಆ ನನ್ನಪ್ಪ ಆ ಮುದಿಯ ಜಾವಣ್ಣ ಬಾಯಲ್ಲಿ ಒಂದೂ ಹಲ್ಲು ಇಲ್ಲದಿದ್ದ... ಸಣ್ಣ ಹುಡುಗರನ್ನು ಹುಡುಕಿಕೊಂಡು ಹೋಗುತ್ತಾನೆ. ಅದೂಅಲ್ಲ... ನೀನು ಲಕ್ಷ್ಮಿಯನ್ನು ಮದುವೆಯಾದರೆ ಇಲ್ಲಿ ನನ್ನ ಗತಿ ಏನು? ನಾವಿ... ಚಿಕ್ಕವಳು, ನನ್ನನ್ನು ಯಾರು ತೃಪ್ತಿಪಡಿಸುತ್ತಾರೆ!"

ಇವರಿಬ್ಬರದ್ದೂ ನಿಜವಾಗಿ ಗಹನವಾದ ಸಮಸ್ಯೆಯಾಗಿತ್ತು. ... ಹೆಣ್ಣುಗಂಡಿನ ವ್ಯವಹಾರ ಇಷ್ಟು ಸೋವಿಯಾಗಿರುವುದನ್ನು ನೋಡಿ ಶಿಕಾ... ತಂಗವೇಲು ಬಾಯಿ ಚಪ್ಪರಿಸುತ್ತಾ ತನ್ನ ಬಟ್ಲರ್ ಇಂಗ್ಲಿಷಿನಲ್ಲಿ ಹೇಳಿ... "ಸಾರ್ ಇದು ಬಹಳ ಒಳ್ಳೆಯ ಜಾಗ. ಬೇಕಾದಷ್ಟು ಶಿಕಾರಿ ಇ... ಜೊತೆಗೆ ದಂಡಿಯಾಗಿ ಹೆಂಡತಿಯರು ಸಿಕ್ಕಾಪಟ್ಟೆ ಕಡಿಮೆ ಬೆಲೆಗೆ ಸಿಗುತ್ತಾ... ಒಬ್ಬ ಹೆಂಡತಿ ಬೇಡ ಅಂದ್ರೆ ಹತ್ತು ರೂಪಾಯಿ ತೆರ ಕೊಟ್ಟು ಹೊ... ಹೆಂಡತಿಗೆ ಬದಲಾಯಿಸಿಕೊಳ್ಳಬಹುದು! ನಮ್ಮ ಕಡೆ ಹಾಗಿಲ್ಲ ಸಾ... ದರಿದ್ರದ ಹೆಂಗಸರು ಮದುವೆಯಾದ ಮೇಲೆ ಹೋಗೋದೇ ಇ... ಬರೀ ಹಣ ಕೇಳುತ್ತಾಳೆ. ಬೇರೆ ಹೆಂಡ್ತಿ ಬೇಕಾದ್ರೆ ನೂರು ರೂಪಾಯಿಯಾದ... ಕೊಡಲೇಬೇಕು. ಇದು ಬಹಳ ಒಳ್ಳೆ ಜಾಗ ಸಾರ್!"

ಅರ್ಥಗರ್ಭಿತವಾಗಿ ಹಲ್ಲು ಕಿರಿಯುತ್ತಿದ್ದ ತಂಗವೇಲುವಿಗೆ ಡೋನಾ... ದಬಾಯಿಸಿದ, "ಏ... ಆ ಹೆಂಗಸಿಗೆ ನನಗೆ ಸ್ನಾನದ ನೀರನ್ನು ತರ... ಹೇಳು!"

ಹುಲಿಯ ಜಾಡು ಹಿಡಿದು

ಅಷ್ಟರಲ್ಲಿ ಕುನ್ಮರೈ ಎನ್ನುವ ಹೆಸರಿನ ನಾವು ನಿಯಮಿಸಿದ್ದ ಬೇಟೆಗಾ... ನಮಗೆ ಬೇಕಾದ ಮಾಹಿತಿ ತಂದಿದ್ದ. ಆತ ಬೆಳಗಿನಿಂದ ಕಾಡಿನಲ್ಲಿ ತಿರುಗಾಡುವಾ... ಒಂದು ಚಿರತೆ ಮತ್ತು ಹುಲಿಯ ಹೆಜ್ಜೆ ಗುರುತುಗಳನ್ನು ಅರ್ಧ ಮೈ... ದೂರದ ಒಣಗಿದ ಹಳ್ಳದವರೆಗೆ ನೋಡಿದ್ದ. ಚಿರತೆಯ ಹೆಜ್ಜೆ ಗುರುತ... ಅವನು ಆಗಾಗ ನೋಡುತ್ತಿದ್ದುದರಿಂದ ಅದು ಅಲ್ಲಿನ ಹಳೆಯ... ನಿವಾಸಿಯಾಗಿರಬೇಕು ಎಂದು ಹೇಳಿದ. ಆದರೆ ಹುಲಿಯ ಹೆಜ್ಜೆ ಗುರುತ... ಆ ಜಾಗದಲ್ಲಿ ಪ್ರಥಮ ಬಾರಿಗೆ ಕುನ್ಮರೈ ನೋಡಿದ್ದ. ಹಾಗಾಗಿ ಅದು ಅಲ್ಲಿ... ಸುಮ್ಮನೆ ತಿರುಗಾಟಕ್ಕೆ ಬಂದಿರಬೇಕು. ಮತ್ತು ಇನ್ನೂ ಕೆಲವು ದಿನಗಳವರೆ... ಪುನಃ ಅಲ್ಲಿಗೆ ಬರಲಾರದು. ಆದ್ದರಿಂದ ನಾವು ನಮ್ಮ ಬಲಿಯನ್ನು ಅ... ಕಟ್ಟಿಹಾಕಿದ್ದರೆ ಅದು ಹುಲಿಯ ಬದಲಾಗಿ ಚಿರತೆಗೆ ಆಹಾರವಾಗುವ ಸಾಧ್ಯತೆಗ... ಹೆಚ್ಚಿದ್ದವು. ನಾವು ಹುಲಿಯ ತಲಾಶಿನಲ್ಲಿದ್ದುದರಿಂದ ಕುನ್ಮರೈನನ್ನು ಹು... ಆಗಾಗ ಭೇಟಿ ನೀಡುವ ತಾಣವನ್ನು ಅರಸಲು ಮತ್ತೆ ಕಳಿಸಿದೆವು.

ಅದೇ ಮಧ್ಯಾಹ್ನ ಮತ್ತೆ ಅವನು ಶುಭಸಮಾಚಾರದೊಂದಿಗೆ ಹಿಂದಿರುಗಿ... ಹಳ್ಳದ ಆಚೆ ಅವನು ಹುಲಿಗಳು ಆಗಾಗ ಓಡಾಡುವ ಹೆಜ್ಜೆಗುರುತ... ಕಂಡಿದ್ದ. ಅವುಗಳಲ್ಲಿ ಕೆಲವು ತೀರಾ ಇತ್ತೀಚಿನ ಹೆಜ್ಜೆ ಗುರುತುಗಳಾಗಿದ್ದ... ಹಾಗಾಗಿ ಹುಲಿ ಅವತ್ತು ಅಥವಾ ಮರುದಿನ ರಾತ್ರಿ ಮತ್ತೆ ಬರುವುದ... ಖಚಿತವಾಗಿತ್ತು. ಹತ್ತಿರದಲ್ಲೇ ಆನೆಗಳ ಉಪಟಳದಿಂದ ಮರೆಯಾಗಿರ... ಒಂದು ಮರವೂ ಇದ್ದುದರಿಂದ, ಛಾಯಾಗ್ರಹಣಕ್ಕೆ ಪ್ರಶಸ್ತವಾದ ಸ್ಥಳವಾಗಿತ್ತು.

ನಾವು ಬಲಿಗಾಗಿ ತಂದಿದ್ದ ನಾಲ್ಕು ಕೋಣಗಳಲ್ಲಿ ದೊಡ್ಡದನ್ನು ಹುಲಿಯ... ಓಡಾಡುವ ಜಾಗದಲ್ಲಿ ಮತ್ತು ಇನ್ನೊಂದನ್ನು ಚಿರತೆಗಾಗಿ, ಒಣಗಿದ ಹಳ್ಳ... ಬಳಿ ಕಟ್ಟಲು ನಿರ್ಧರಿಸಿದೆವು. ಇದರಿಂದ ಚಿರತೆ ಆಹಾರವನ್ನು ಅರ... ಹೊರಟಾಗ ಹುಲಿಗಾಗಿ ಕಟ್ಟಿದ್ದ ಕೋಣವನ್ನು ತಿನ್ನುವುದನ್ನು ತಪ್ಪಿಸಬಹುದಿತ್ತು... ತಂಗವೇಲು ಮತ್ತು ಕುನ್ಮರೈಗೆ ಕೋಣಗಳನ್ನು ಕಟ್ಟಲು ಹೇಳಿ ನಾವು ಕಾಡಿನ... ತಿರುಗಾಡಲು ಹೊರಟೆವು.

ಆ ಕಾಡು ಸಾಂಬಾರ್, ಚುಕ್ಕಿಜಿಂಕೆ, ನೀಲಗೈ (ನೀಲಿ ಚುಕ್ಕಿಯ ಜಿಂ... ಮುಂತಾದ ವಿವಿಧ ಜಿಂಕೆಯ ಜಾತಿಗಳಿಗೆ ಸ್ವರ್ಗವಾಗಿತ್ತು. ಹಳ್ಳ... ತಿರುವಿನಲ್ಲೊಂದು ಕಡೆ ಸಲಗವೊಂದು ನೀರನ್ನು ಕುಡಿಯುತ್ತಿತ್ತು. ನಮ... ಆಗಮನದಿಂದ ಕಿರಿಕಿರಿಗೊಂಡ ಅದು ದುರುಗುಟ್ಟಿ ನೋಡಿತು. ನಂತ... ನಿಧಾನವಾಗಿ ದಟ್ಟವಾದ ಮರಗಳ ನಡುವೆ ಮರೆಯಾಯಿತು. ಇಂತ... ದೈತ್ಯದೇಹವನ್ನು ಹೊತ್ತು ನಿಶಬ್ದವಾಗಿ ಅದು ಹೇಗೆ ನಡೆಯಬಲ್ಲದು ಎನ್ನುವುದ... ದೊಡ್ಡ ಕೌತುಕ.

ಮುಂದುವರೆಯುವುದು

ದೇವರುಗಳ ಕಾಡಿನಲ್ಲಿ
ಮೂಕಬಾಲೆಯ ಬಿಕ್ಕು
ಅರಣ್ಯರೋದನವಾಗಿರುವ ಹೊತ್ತು
ಈ ಕವಿತೆಗೆ ಶೀರ್ಷಿಕೆ ಇರುವುದಿಲ್ಲ

ಉಟ್ಟಬಟ್ಟೆ ಹರಿದರೆ ತೇಪೆ ಹಾಕುತ್ತೇನೆ
ಮಲಿನವಾದರೆ ಮತ್ತೆ ತೊಳೆಯುತ್ತೇನೆ
ತೊಡಲು ಸಿಗದಿದ್ದರೆ ನಿನ್ನಂತೆ
ಬೆತ್ತಲಾದೇನು ಅಕ್ಕಾ
ತೊಡದ ಬಟ್ಟೆಯ ಕೊಳೆಯ ಹೇಗೆ ತೊಳೆಯಲಿ?

ಉಂಗುಷ್ಠ ಹರಿದರೆ ಹೊಲಿಯುತ್ತೇನೆ
ಒಂಟಿ ಜೋಡಾದರೆ ಅತ್ತ ಎತ್ತಿಡುತ್ತೇನೆ
ಗಿಡಮುಳ್ಳುಗಳ ಬರಿಗಾಲಲೂ ದಾಟಬಹುದು
... ಹಾದಿಯೇ ಪಾದ ನುಂಗಿದರೆ
... ಕಾಲುಗಳನೆತ್ತ ಇಡಲಿ?
****

ಅನಂಗನು ಅಂಗಾಂಗದೊಳಗೆ ಹರಿದಾಡಿ
ಮೊಲೆಮುದಿಕಿಬೊಟ್ಟೆಗಳು ಕುದಿಯೊಡೆದ ಕ್ಷಣ
ಜೀವ ತತ್ತರ
ಮೈಮೇಲೆದ್ದವು ಹುತ್ತ
ಹುತ್ತದ ಬಾಯಿಗಳೆಲ್ಲ ಯೋನಿಗಳಾದವು


ಒಳಹೊರಗೂ ಸದ್ದಿಲ್ಲದೆ ಸರಿದಾಡಿತು ನಾಗರ
ಸಹಸ್ರ ಯೋನಿಗಳ ದೇಹ
ಸರ್ಪಾಯಿತು ಸ್ರಾವ

ಯುದ್ಧ ಅಲ್ಲೆಲ್ಲೋ ನಡೆಯುತ್ತಿಲ್ಲ
ಹಿಂಸೆ ಉಗ್ರಗಾಮಿಗಳ ಸ್ವತ್ತಲ್ಲ
ಗುಂಡಿನ ಸದ್ದಷ್ಟೆ ಎದೆ ನಡುಗಿಸುವುದಿಲ್ಲ
ಬೂದಿ ಮಣ್ಣಾಗುವ
ಬಿಟ್ಟರೆ ಕೊಳೆಯುವ ಈ ದೇಹ
ಗುಪ್ತಾಂಗಗಳ ಗುಟ್ಟಿನ ಸಂಕಟಗಳು
ಕೈದು ಹಿಡಿದು ಕಾದುವ ಯುದ್ಧಭೂಮಿ

ಹೊರುವ ಹೆರುವ ತಣಿಸುವ ನೆಪದಲ್ಲಿ
ಹಿಂಸೆ ನೋವುಗಳ ಆಡುಂಬೊಲ

ಓ ದೇವರೇ
ಹೀಗೊಂದು ವರ ನೀಡು
ಮಾನವ ಸಂತತಿ ಅಯೋನಿಜವಾಗಲಿ..
*****

ಹಸಿವು ನಿದ್ರೆ ಮೈಥುನಗಳು ಅತ್ತವನ್ನು
ಕಣಿವೆಯಲ್ಲಿ ತಣ್ಣಗೆ ಹರಿವ ನದಿ ಕಾಲವನ್ನು
ಸುತ್ತಿ ಸುಳಿವ ದಾರಿ ಕನಸುಗಳನ್ನು ನುಂಗಿ
ಬೆಟ್ಟಗಳ ನಡುವಿನ ಈ ಊರು
ಮುಗಿಯದ ಮುಸ್ಸಂಜೆಯ ಊರಾಗಿದೆ



ಸುತ್ತ ಹಬ್ಬಿರುವ ಕಡು ಹಸಿರು ಬೆಟ್ಟಗಳು
ಎಲ್ಲ ಗದ್ದಲ ನುಂಗಿ
ಮೌನ ಹರಡುತ್ತಲಿರುವಾಗ
ಯಾವ ಕಿರಿಚಾಟವೂ
ಘೋಷಣೆಯೂ
ಕೇಕೆ ಕಲರವವೂ
ಇಲ್ಲಿ ಸದ್ದಾಗುವುದಿಲ್ಲ

ಸದ್ದಿಲ್ಲದೆ ಉರುಳುವ ಕಣ್ಣ ಹನಿಯ ಜೊತೆಗೆ
ಬೆಟ್ಟದಂಥಾ ಮೌನ ಬೆಟ್ಟವನೇ ನುಂಗಿ ಬೆಳೆಯುತ್ತಿದೆ
*****

ಕಣ್ಣ ಹನಿಗಳಲ್ಲಿ
ತಗ್ಗಿಸಿದ ತಲೆಯಲ್ಲಿ
ಪುಟ್ಟ ಬಾಲೆಯ ಭಯದ ಬಿಕ್ಕುಗಳಲ್ಲಿ
ಐಸಿಯುನ ನಿಟ್ಟುಸಿರುಗಳಲ್ಲಿ
ಅಡಗಿ ಕುಳಿತ ಹೇಡಿ ಶಬ್ದಗಳೇ
ಬಾಯಿಮುಚ್ಚಿ

ಕಾಗೆ ಕಾವ್‌ಗುಡುವ
ಸರ್ಪ ಬುಸುಗುಡುವ
ಹಂದಿ ಹೂಂಕರಿಸುವ ಸದ್ದಿಗೂ
ಒಂದು ಅರ್ಥವಿದೆ

ಒಡಲುರಿಯ ಹಾಡಾಗಿಸದ
ಭೀಭತ್ಸ ಚಿತ್ರಿಸಲಾಗದ ಪದಗಳೇ
ನಿಮಗಿಲ್ಲ ತಾಕತ್ತು ಸೋಲೊಪ್ಪಿಕೊಳ್ಳಿ
ಏರು ಗಂಟಲ ದನಿಯಲ್ಲಿ
ಕಟ್ಟಿದ ಮುಷ್ಟಿಯಲ್ಲಿ
ದಿಟ್ಟ ನಡುಗೆಯಲ್ಲಿ
ಮತ್ತೆ ಹುಟ್ಟಿಬನ್ನಿ..


● ಡಾ.ಎಚ್.ಎಸ್.ಅನುಪಮಾ

ಝುಳಕಿ-ಬಾಲು ಸಂಶೋಧನೆ: ವಚನಗಳು ಜಾತಿ ವಿರೋಧಿಯಲ್ಲ

ಈ ಸಂಶೋಧನೆಯ ರಾಜಕೀಯವೇನು?

...ಟಿನ್ ಝುಳಕಿ ಮತ್ತು ಎಸ್.ಎನ್.ಬಾಲಗಂಗಾಧರ "ವಚನ ಸಾಹಿತ್ಯವು ಜಾತಿವ್ಯವಸ್ಥೆಯ ವಿರುದ್ಧ ...ನಾಡುತ್ತದೆಯೇ?" ಎಂಬ ಪ್ರಬಂಧದ (ಚಿಂತನ ...ಬು- ಸಂಚಿಕೆ 3, ಅಕ್ಟೋಬರ್ 2012, ಪುಟ ...) ಬಗ್ಗೆ ಪ್ರಜಾವಾಣಿಯಲ್ಲಿ ಕಳೆದ ಹಲವು ...ಂದ ನಡೆದಿರುವ ಚರ್ಚೆಯಲ್ಲಿ ವಚನಗಳ ಮುಖ್ಯ ...ವನ್ನೇ ಯಾರೂ ಗಮನಿಸಿದ ಹಾಗಿಲ್ಲ. ವಚನಕಾರರು ...ಯುವುದು ಕಾವ್ಯವೇ ಹೊರತು, ಸಮಾಜ ಶಾಸ್ತ್ರದ ...ಲ್ಲ. ಸ್ವತಃ ವಚನಕಾರರಿಗೇ ಅದರ ಅರಿವು ಇದ್ದಿತು ...ನ್ನುದಕ್ಕೆ ವಚನಗಳಲ್ಲಿ ಸಾಕಷ್ಟು ಉದಾಹರಣೆಗಳು ...ಯುತ್ತವೆ. ಬಸವ, ಅಲ್ಲಮ ಮತ್ತು ಅಕ್ಕರಂತೂ ... ಮಾತ್ರವಲ್ಲ ಭಾಷೆಯಲ್ಲಿ ಅರ್ಥ ಪ್ರಕಟವಾಗುವ ...ಬು ಕುರಿತು ಕೂಡ ಚಿಂತಿಸಿದವರು. ವಚನಕಾರರನ್ನು ...ಗರು ಕಳೆದ 800 ವರ್ಷಗಳಿಂದ ಓದುತ್ತ ...ರುವುದು ಕೂಡ ಅವರು ಕವಿಗಳು ಎಂಬ ...ಯುಲ್ಲೇ. ವಚನಕಾರರ ನಂತರ ಅವರ ...ಪರೆಯನ್ನು ಮುಂದುವರೆಸಿಕೊಂಡು ...ರುವವರು ಸಹ ಕವಿಗಳೇ. ಬಸವಾದಿ ...ಥರಿಂದ ಮೊದಲುಗೊಂಡು 19ನೆಯ ...ಮಾನದ ತತ್ವಪದಕಾರರವರೆಗೆ ಇದು ಸಂದು ...ಬದ ಭಾಷಿಕ ಪರಂಪರೆ. ಆದರೆ ಝುಳಕಿ ಮತ್ತು ...ು ಅವರ ಮಟ್ಟಿಗೆ ವಚನಕಾರರು ತಮ್ಮ ...ಗಳನ್ನು ರಚಿಸಿ ನಿರ್ಗಮಿಸಿದ ನಂತರ ಕನ್ನಡನಾಡಿಗೆ ... ಮಿಷನರಿಗಳು ಬಂದು ವಚನಗಳು ...ವ್ಯವಸ್ಥೆಯನ್ನು ವಿರೋಧಿಸುವ ರಚನೆಗಳು ಎಂದು ...ರ್ಥೈಸುವವರೆಗೆ ವಚನಗಳನ್ನು ಯಾರೂ ಓದಲಿಲ್ಲ; ...ರರೂ ಹಾಗೆ ಅರ್ಥೈಸಲಿಲ್ಲ. ಅಂದರೆ ಹತ್ತಿರ ... 600 ವರ್ಷಗಳವರೆಗೆ ವಚನಗಳಿಗೆ ಅಜ್ಞಾತವಾಸ. ...ಕಿ-ಬಾಲು ಅವರನ್ನು ನಂಬುವುದಾದರೆ ಹರಿಹರ, ...ಾಂಕರಿಂದ ಹಿಡಿದು ತತ್ವಪದಕಾರರವರೆಗೆ, ಯಾವ ...ೂ ವಚನಗಳ ಪರಿವೆ ಇರಲಿಲ್ಲ; ಶೂನ್ಯ ಸಂಪಾದನೆ ... ಮಂಟೇಸ್ವಾಮಿ ಕಾವ್ಯಕ್ಕೆ ಸಹ ವಚನಸಾಹಿತ್ಯದ ... ಕೊಳು ಕೊಡುಗೆಯ ಸಂಬಂಧ ಇರಲಿಲ್ಲ. ಕ್ರೈಸ್ತ ...ನರಿಗಳು ಬಂದವರೆ, ವಚನಗಳನ್ನು ಕೈಗೆತ್ತಿಕೊಂಡು ... ಜಾತಿವ್ಯವಸ್ಥೆ ವಿರೋಧಿ ಎಂಬ ಅರ್ಥ ಹಚ್ಚಿದರು. ...ಕಿ-ಬಾಲು ಅವರ ಈ ವಾದ ಕನ್ನಡದ 700 ವರ್ಷಗಳ ...ಸ್ಕೃತಿಕ ಚರಿತ್ರೆಯನ್ನೇ ಅಲ್ಲಗಳೆಯುತ್ತದೆ. ವಚನಗಳು ...ವ್ಯವಸ್ಥೆಯನ್ನು ವಿರೋಧಿಸುವುದು ಹಾಗಿರಲಿ, ಆ ಕುರಿತು ...ನ್ನೂ ಹೇಳುವುದಿಲ್ಲ ಎಂಬ ತಮ್ಮ ವಾದಕ್ಕೆ ...ರ್ಥನೆಯಾಗಿ ಝುಳಕಿ-ಬಾಲು ಒಂದು ವಿಚಿತ್ರ ...ವನ್ನು ನಮ್ಮ ಮುಂದೆ ಇಡುತ್ತಾರೆ. 1993ರಲ್ಲಿ ...ಟಕ ಸರಕಾರ ಪ್ರಕಟಿಸಿದ ಸಮಗ್ರ ವಚನಸಾಹಿತ್ಯದ ...ಸಂಪುಟಗಳ ಸಂಪಾದಕ ಡಾ|| ಎಂ.ಎಂ.ಕಲಬುರ್ಗಿ, ...ಪ್ರಸ್ತಾವನೆಯಲ್ಲಿ ವಚನಗಳು ಭಾರತದ ವರ್ಣ, ವರ್ಗ ... ಲಿಂಗಗಳ ಭೇದ ಸಂಸ್ಕೃತಿಯ ವಿರುದ್ಧ ನಡೆದ ...ಮ ಆಂದೋಲನ ಎಂದು ಹೇಳುತ್ತಾರೆ. ಈ ...ಪ್ರಾಯವನ್ನೇ, ಝುಳಕಿ ಮತ್ತು ಬಾಲು ಪ್ರಸ್ತಾಪಿಸುವ ... ವಿದ್ವಾಂಸರೂ- ಡಿ.ಆರ್.ನಾಗರಾಜ್, ಚಿದಾನಂದ ...ರ್ತಿ, ಹಿರೇಮಲ್ಲೂರು ಈಶ್ವರನ್, ಒ.ಎಲ್.ನಾಗ ...ಷಣಸ್ವಾಮಿ, ಎಚ್.ತಿಪ್ಪೇರುದ್ರಸ್ವಾಮಿ ಮತ್ತು ...ರಾಮಾನುಜನ್ - ಗಿಳಿಪಾಠದ ಹಾಗೆ ಒಪ್ಪಿಸಿರುವರು ...ಬುದು ಕೂಡ ಝುಳಕಿ-ಬಾಲು ಅವರ ಫಿರ್ಯಾದು. ...ರ ಈ ಸಮಗ್ರ ಸಂಪುಟ ಪ್ರಕಟಿಸುವವರೆಗೆ ಎಲ್ಲ ...ನಗಳೂ (ಒಟ್ಟು 21,788) ಒಂದೆಡೆ ಸಿಗುತ್ತಲೇ ...ಲಿಲ್ಲ. ಹಾಗಿದ್ದೂ ಎಂ.ಎಂ.ಕಲಬುರ್ಗಿಯವರನ್ನೂ ...ಗೊಂಡು 19 ಮತ್ತು 20ನೆಯ ಶತಮಾನದ ಕನ್ನಡ ...ಸರು ವಚನಸಾಹಿತ್ಯ ಜಾತಿವಿರೋಧಿ ಎಂದು ಹೇಗೆ ...ರ್ಮಾನಿಸಿದರು? ಇದು ಝುಳಕಿ-ಬಾಲು ಅವರ ಪಾಟೀ... ...ಲು. ನೂರಾರು ವರ್ಷಗಳಿಂದ, ಕನ್ನಡಿಗರು ಸಮೃದ್ಧವಾದ ... ಭಾಷಿಕ ಪರಂಪರೆಯಲ್ಲಿ ತಮಗೆ ಬೇಕಾದದ್ದನ್ನು ...ಕೊಂಡು, ಬೇಡವಾದದ್ದನ್ನು ಬದಿಗೆ ಸರಿಸುತ್ತ ...ದ್ದಾರೆ. ವಚನಗಳ ಬಗ್ಗೆಯೂ ಅವರ ಧೋರಣೆ ... - ಹಂಸಕ್ಷೀರ ನ್ಯಾಯದ್ದು, ಸಮಾಜಶಾಸ್ತ್ರಜ್ಞನಿಗಾದರೆ, ...ಆಕರಗಳಲ್ಲಿ ಆಯ್ಕೆಯೇ ಇಲ್ಲ, ಎಲ್ಲವನ್ನೂ ಅತ ...ಧಾರ' ಎಂಬ ನೆಲೆಯಲ್ಲಿ ಕೂಲಂಕಷವಾಗಿ ಅಭ್ಯಾಸ ...ಡಬೇಕು. ಆದರೆ ಕಾವ್ಯದ ಓದುಗನಿಗಾಗಲೀ, ...ಕನಿಗಾಗಲೀ ಆ ಜರೂರು ಇಲ್ಲ. ಆದಕ್ಕೆ ಸರಿಯಾಗಿ ...ಕಿ-ಬಾಲು, ತಮ್ಮ ಪ್ರಬಂಧದಲ್ಲಿ ಉಲ್ಲೇಖಿಸುವ ಎಲ್ಲ ... ವಿದ್ವಾಂಸರೂ ಮೂಲತಃ ಕನ್ನಡ ಸಾಹಿತ್ಯ ಸಂಸ್ಕೃತಿಗಳ ...ಗಳು; ಹಿರೇಮಲ್ಲೂರು ಈಶ್ವರನ್ ಒಬ್ಬರು ಮಾತ್ರ ಸಮಾಜ ಶಾಸ್ತ್ರಜ್ಞರು. ಆದರೆ ಝುಳಕಿ-ಬಾಲು ದುರಾದೃಷ್ಟಕ್ಕೆ ಅವರು ಕೂಡ ವಚನಗಳು ಜಾತಿವ್ಯವಸ್ಥೆಯನ್ನು ವಿರೋಧಿಸುತ್ತವೆ ಎಂದೇ ಪ್ರತಿಪಾದಿಸುತ್ತಾರೆ.

ಝುಳಕಿ-ಬಾಲು ವಾದವನ್ನು ಸಮರ್ಥಿಸುತ್ತ ರಾಜರಾಮ ಹೆಗಡೆ, ವಚನಕಾರರು ಹೇಳಿರುವುದು ಎಲ್ಲವೂ ಅವರಿಗಿಂತ ಮೊದಲು ಸಂಸ್ಕೃತ ಆಗಮಗಳಲ್ಲಿ ಬಂದಿರುವಂತಹದ್ದೆ. ಅದರಲ್ಲಿ ಹೊಸತು ಏನಿಲ್ಲ ಎಂದು ಹೇಳುತ್ತಾರೆ. ಝುಳಕಿ ಪ್ರಕಾರ ಆದಿಶಂಕರರ ಕೃತಿಯಲ್ಲೇ ಜಾತಿಭೇದ ಮತ್ತು ವೇದಗಳನ್ನು ಅಲ್ಲಗಳೆಯುವ ಮಾತುಗಳಿವೆ. ಶಂಕರ ತನ್ನ ತತ್ವಚಿಂತನೆ ನಡೆಸಿದ್ದು ಸಂಸ್ಕೃತದಲ್ಲಿ; ವಚನಕಾರರು, ವಚನ ರಚಿಸಿದ್ದು ತಮ್ಮ ತಾಯ್ನುಡಿಯಲ್ಲಿ. ಸಂಸ್ಕೃತ ಮತ್ತು ದೇಶಭಾಷೆಗಳ ನಡುವೆ ಇರುವ ವ್ಯತ್ಯಾಸವೇ ಬ್ರಾಹ್ಮಣ ಶೂದ್ರ ಭೇದದಲ್ಲಿ ಪ್ರತಿಬಿಂಬಿತವಾಗಿದೆ ಎಂಬ ಸತ್ಯ ಝುಳಕಿ



ಮತ್ತು ರಾಜಾರಾಮ ಹೆಗಡೆಯವರಿಗೆ ಗೊತ್ತಿಲ್ಲವೆ? ಅಥವಾ ಅವರು ಅದನ್ನೂ ನಿರಾಕರಿಸುತ್ತಾರೆಯೆ? ಶಂಕರ ಮತ್ತು ವಚನಕಾರರ ನಡುವೆ ಇನ್ನೂ ಒಂದು ವ್ಯತ್ಯಾಸವಿದೆ. ಶಂಕರ, ಭಾರತದ ಬಹುಜನರ ಸಾಂಸ್ಕೃತಿಕ ಪರಂಪರೆಯ ಭಾಗವಲ್ಲ; ಆದರೆ ವಚನಕಾರರು ಇಂದಿಗೂ ಕನ್ನಡದ ಬಹುಜನರ ನೆನಪಿನಲ್ಲಿ ಜಾಗೃತರಾಗಿರುವಂತಹವರು. ಅವರು ನಮ್ಮ ಜೀವಂತ ಸಾಂಸ್ಕೃತಿಕ ಪರಂಪರೆ- ಲಿವಿಂಗ್ ಟ್ರೆಡಿಷನ್. ಝುಳಕಿ-ಬಾಲು ಮತ್ತು ಅವರ ಸಹವರ್ತಿಗಳಿಗೆ ಈ ಪರಂಪರೆಯನ್ನು ಅದರ ನೈಜ ನೆಲೆಗಳಲ್ಲಿ ಅರ್ಥಮಾಡಿಕೊಳ್ಳುವ ವ್ಯವಧಾನವೂ ಇಲ್ಲ; ಅದರ ಬಗ್ಗೆ ಗೌರವವೂ ಇಲ್ಲ. ವಚನಗಳು ಅವರಿಗೆ ಕೇವಲ ಸಮಾಜಶಾಸ್ತ್ರದ ಒಂದಿಷ್ಟು ಮಾಹಿತಿಗಳ ಆಕರ. ಅವರ ಸಮಾಜ ಶಾಸ್ತ್ರೀಯ ತೀರ್ಮಾನಗಳು ಸಹ ಎಷ್ಟು ಅಪಾಯಕಾರಿ ಎಂಬುದನ್ನು ಈಗಾಗಲೇ ದೇವನೂರ ಮಹದೇವ ನಮ್ಮ ಮನಗಾಣಿಸಿದ್ದಾರೆ (ಪ್ರಜಾವಾಣಿ, ಪುಟ 8, 29-4-2013).

ವಚನಕಾರರು ಇಂದಿಗೂ ಕನ್ನಡ ಸಂಸ್ಕೃತಿಯ ಭಾಗವಾಗಿರುವುದರಿಂದಲೇ ಕನ್ನಡದ ನಾಲ್ವರು ಪ್ರಮುಖ ಲೇಖಕರು- ಲಂಕೇಶ್, ಗಿರೀಶ್ ಕಾರ್ನಾಡ್, ಎಚ್.ಎಸ್.ಶಿವಪ್ರಕಾಶ್ ಮತ್ತು ಚಂದ್ರಶೇಖರ ಕಂಬಾರ - ವಚನಕಾರರ ಸಾಮಾಜಿಕ ಆಂದೋಲನದ ಬಗ್ಗೆ ನಾಟಕಗಳನ್ನು ರಚಿಸಿದ್ದಾರೆ (ಅನುಕ್ರಮವಾಗಿ ಸಂಕ್ರಾಂತಿ, ತಲೆದಂಡ, ಮಹಾಚೈತ್ರ ಮತ್ತು ಶಿವರಾತ್ರಿ). ಈ ನಾಲ್ಕು ನಾಟಕಗಳೂ ಕನ್ನಡದಲ್ಲಿ ಬಹುಚರ್ಚಿತ ಕೃತಿಗಳು ಮತ್ತು ರಂಗದ ಮೇಲೂ ಯಶಸ್ವಿಯಾಗಿರುವಂತಹವು. ಈ ಪಟ್ಟಿಯಲ್ಲಿ ಬಿ.ಪುಟ್ಟಸ್ವಾಮಯ್ಯನವರ ಅತ್ಯಂತ ಜನಪ್ರಿಯ ನಾಟಕ 'ಕ್ರಾಂತಿಕಲ್ಯಾಣ'ವನ್ನೂ ಸೇರಿಸಿಕೊಳ್ಳಬೇಕು. ಈ ಎಲ್ಲ ನಾಟಕಗಳು ಕ್ರೈಸ್ತ ಮಿಷನರಿಗಳು ವಚನಗಳನ್ನು ಅರ್ಥೈಸಿರುವ ಬಗೆಯಿಂದ ಪ್ರೇರಿತವಾಗಿವೆಯೇ? ಝುಳಕಿ-ಬಾಲು ಅವರ ಅಭಿಪ್ರಾಯ ಅದೇ ಆಗಿದ್ದರೆ, ಅವರು ಹಾಗೆಂದು ಸ್ಪಷ್ಟಪಡಿಸಬೇಕು. ಆಧುನಿಕ ಕನ್ನಡದ ಅತ್ಯಂತ ಸತ್ವಪೂರ್ಣ ಲೇಖಕರನ್ನು ಇವರು ಹೇಗೆ ಪರಿಭಾವಿಸುತ್ತಾರೆ ಎಂಬುದು ಎಲ್ಲರಿಗೂ ಗೊತ್ತಾಗಬೇಕು. ಝುಳಕಿ-ಬಾಲು ಅವರಿಗೆ ವಚನಗಳು ಮಾತ್ರವಲ್ಲ ಸಮಕಾಲೀನ ಗದ್ಯದ ಶ್ರೇಷ್ಠ ಕೃತಿಗಳನ್ನು ಓದಲು ಸಹ ಅಭಿರುಚಿಯಾಗಲಿ, ಸಿದ್ಧತೆಯಾಗಲಿ ಇಲ್ಲ ಎನ್ನುವುದು ನನ್ನ ಗುಮಾನಿ.

ವಚನಗಳು ಜಾತಿವಿರೋಧಿ ಎಂಬುದು 19-20ನೆಯ ಶತಮಾನಗಳಲ್ಲಿ ಕ್ರೈಸ್ತ ಮಿಷನರಿಗಳ ಪ್ರೇರಣೆಯಿಂದ ನಾವು ಅವಸ್ಥೆ ಹಚ್ಚಿದ ಅರ್ಥವಲ್ಲ ಅಥವಾ ಅದು, ಶೇಕ್ಸ್‌ಪಿಯರನಲ್ಲೋ, ಕಾಳಿದಾಸನಲ್ಲೊ, 21ನೆಯ ಶತಮಾನಕ್ಕೆ ಸಲ್ಲುವಂತಹ ತಾತ್ವಿಕ ಹೊಳಹುಗಳನ್ನು ಕಂಡುಕೊಳ್ಳುವ ಬಗೆಯದ್ದೂ ಅಲ್ಲ. ಕಾಲ ದೇಶ -ಎರಡು ದೃಷ್ಟಿಗಳಿಂದಲೂ, ವಚನಕಾರರು ಕನ್ನಡಿಗರಿಗೆ ಯಾವತ್ತೂ ದೂರವಾದವರೇ ಅಲ್ಲ. ಅದೂಅಲ್ಲದೆ, ಜಾತ್ಯತೀತತೆ ಮತ್ತು ಜಾತಿ ವಿರೋಧ ಆಧುನಿಕ ವಿಚಾರಗಳಾಗಿದ್ದು 19ನೆಯ ಶತಮಾನಕ್ಕಿಂತ ಮೊದಲು ಅವು ಇರಲೇ ಇಲ್ಲ ಎಂದು ಭಾವಿಸುವುದು ವಿಚಾರಗಳ ವಿಕಾಸದ ಚರಿತ್ರೆಯನ್ನು ಅಲ್ಲಗಳೆಯುತ್ತದೆ. ಯಾವ ಆಧುನಿಕ ವಿಚಾರವೂ ದಿಢೀರ್ ಎಂದು ಒಮ್ಮಿಂದೊಮ್ಮೆಗೆ ಹುಟ್ಟಿಕೊಳ್ಳುವುದಿಲ್ಲ. ಆದರೆ ಝುಳಕಿ ಮತ್ತು ಬಾಲು ಅವರಿಗೆ ಚರಿತ್ರೆ ಪ್ರಾರಂಭವಾಗುವುದೇ ಕ್ರೈಸ್ತ ಮಿಷನರಿಗಳ ಆಗಮನದೊಂದಿಗೆ. ಕ್ರೈಸ್ತ ಮಿಷನರಿಗಳು ಮತ್ತು ಬ್ರಿಟಿಷ್ ವಸಾಹತುಶಾಹಿ, ಒಂದು ಇನ್ನೊಂದರ ಮುಂದುವರಿಕೆ ಎಂಬಂತೆ ಝುಳಕಿ-ಬಾಲು ಕನ್ನಡನಾಡಿಗೆ ಅವುಗಳ ಪ್ರವೇಶವಾದದ್ದನ್ನು ನಿರೂಪಿಸುತ್ತಾರೆ. ಆದರೆ ಕರ್ನಾಟಕದಲ್ಲೇ ಆಗಲಿ, ಭಾರತದಲ್ಲೇ ಆಗಲಿ ಮಿಷನರಿಗಳು ಮತ್ತು ಬ್ರಿಟಿಷ್ ವಸಹಾತುಶಾಹಿ ಎಲ್ಲಿಯೂ ಒಟ್ಟಾಗಿ ಕೆಲಸ ಮಾಡಿದ್ದೇ ಇಲ್ಲ. ಬ್ರಿಟಿಷ್ ಸರಕಾರಕ್ಕೆ ಭಾರತದಲ್ಲಿ ಈ ಬ್ರಿಟಿಷೇತರ ಐರೋಪ್ಯ ಮಿಷನರಿಗಳಿಂದ ಆಗಬೇಕಾದದ್ದು ಏನೂ ಇರಲಿಲ್ಲ. ವಸಾಹತುಶಾಹಿ ಸರಕಾರ ಈ ಮಿಷನರಿಗಳನ್ನು ಹತ್ತಿರ ಕೂಡ ಸೇರಿಸಿಕೊಳ್ಳಲಿಲ್ಲ. ಹಾಗಾಗಿ ಆಫ್ರಿಕಾ ಮತ್ತು ದಕ್ಷಿಣ ಅಮೆರಿಕದ ವಸಾಹತುಗಳಲ್ಲಿ ವ್ಯಾಪಕವಾಗಿ ಬಲಾತ್ಕಾರದ ಮತಾಂತರಗಳು ನಡೆದಂತೆ ಭಾರತದಲ್ಲಿ ನಡೆಯಲಿಲ್ಲ. ಆದರೆ ಝುಳಕಿ-ಬಾಲು ಅವರ ಸಂಶೋಧನೆಯ ತೀರ್ಮಾನಗಳನ್ನು ಒಪ್ಪಿಕೊಂಡರೆ ವಚನಗಳನ್ನು ಜಾತಿವ್ಯವಸ್ಥೆಯ ವಿರೋಧಿ ಎಂಬಂತೆ ಓದುತ್ತ ಬಂದಿರುವ ನಾವೆಲ್ಲರೂ ಮತಾಂತರಗೊಂಡವರೇ ಆಗಿಬಿಡುತ್ತೇವೆ.


ಝುಳಕಿ-ಬಾಲು ತಮ್ಮ ಈ ಬರಹವನ್ನು ನಿರ್ವಸತೀಕರಣದ ಒಂದು ಭಾಗವೆಂದೇ ಸಾರಿಕೊಂಡಿದ್ದಾರೆ. ಉದಾಹರಣೆಗೆ ಅದರ ಅಡಿಟಿಪ್ಪಣಿ 7ರಲ್ಲಿ ಬಾಲಗಂಗಾಧರ ಮತ್ತು ಎಡ್ವರ್ಡ್ ಸಯೀದ್ "ನಮ್ಮ ಗತ ಮತ್ತು ಪ್ರಸ್ತುತವನ್ನು ಅರ್ಥಮಾಡಿಕೊಳ್ಳಲು ಹೊಸ ಚೌಕಟ್ಟು ಹಾಕಿಕೊಟ್ಟವರು" ಎಂದು ಹೇಳಲಾಗಿದೆ. ಲೋಕ ಖ್ಯಾತ ಚಿಂತಕ- ಹೋರಾಟಗಾರ ಎಡ್ವರ್ಡ್ ಸಯೀದ್ (1936-2003) ಮತ್ತು ತಾವು ಸರಿಸಮಾನರು ಎಂಬಂತೆ ಸ್ವತಃ ಬಾಲು ಅವರೇ ತಮ್ಮ ಪ್ರಬಂಧದಲ್ಲಿ ಹೇಳಿಕೊಳ್ಳುವುದರ ಔಚಿತ್ಯ ಏನೇ ಇರಲಿ, ಸಯೀದ್ ಮತ್ತು ಬಾಲು ನಡುವೆ ಸಮಾನವಾಗಿರುವಂತಹದ್ದು ಏನೂ ಇಲ್ಲ. ಜಗತ್ತಿನಾದ್ಯಂತ ರಾಜಕೀಯ ಚಿಂತನೆ ಮತ್ತು ಸಾಹಿತ್ಯ ವಿಮರ್ಶೆಗಳಿಗೆ ಹೊಸ ಹಾದಿ ಹಾಕಿಕೊಟ್ಟ ಸಯೀದ್‌ನ ಕೃತಿ 'ಓರಿಯೆಂಟಲಿಸಂ' (1978). ವಸಾಹತುಶಾಹಿ ರಾಷ್ಟ್ರಗಳ ಬುದ್ಧಿಜೀವಿಗಳು ವಸಾಹತುಗಳ 'ನೇಟಿವ್' ಜನರ ಬದುಕನ್ನು ಹೇಗೆ ಪ್ರತಿನಿಧೀಕರಿಸುತ್ತಾರೆ ಮತ್ತು ಹೇಗೆ ಆ ಬಗೆಯ ಚಿತ್ರಣ ಮತ್ತು ನಿರೂಪಣೆಗಳಿಂದ ಈ ನೇಟಿವ್ ಜನರ "ಸ್ವ"ವನ್ನು ಸಹ ತಾವೇ ಸಂರಚಿಸುತ್ತಾರೆ ಎಂಬುದನ್ನು ಈ ಕೃತಿ ವಿಶ್ಲೇಷಿಸುತ್ತದೆ. ಎಡ್ವರ್ಡ್ ಸಯೀದ್ ಪೆಲೆಸ್ತೀನ್‌ನಲ್ಲಿ ಹುಟ್ಟಿ, ಈಜಿಪ್ಟ್‌ನಲ್ಲಿ ಬೆಳೆದು ಅಮೆರಿಕದ ಪ್ರತಿಷ್ಠಿತ ವಿಶ್ವವಿದ್ಯಾಲಯ ಒಂದರಲ್ಲಿ ಆಂಗ್ಲ ಭಾಷಾ ಪ್ರಾಧ್ಯಾಪಕರಾಗಿದ್ದವರು. ಹಾಗಾಗಿ ಅವರು ಪರೋಕ್ಷ ವಸಾಹತುಶಾಹಿಯನ್ನು ಅನುಭವಿಸಿ ಬಲ್ಲವರು ಮತ್ತು ಅಮೆರಿಕದ ಸಾಮ್ರಾಜ್ಯಶಾಹಿಯ ಮಿಲಿಟರಿ, ರಾಜಕೀಯ ಮತ್ತು ಸಾಂಸ್ಕೃತಿಕ ಮಸಲತ್ತುಗಳನ್ನು ಹತ್ತಿರದಿಂದ ಕಂಡುಬಲ್ಲವರು. ಅವರು ಯಾವತ್ತೂ ಪ್ರಾಧ್ಯಾಪಕರ ಕುರ್ಚಿಗೆ ಅಂಟಿಕೊಂಡ ನಿರ್ಲಿಪ್ತ ಬುದ್ಧಿಜೀವಿಯಾಗಿರಲಿಲ್ಲ. ತನ್ನ ಗೆಳೆಯ ನೋಮ್ ಚೋಮ್ಸ್ಕಿಯಂತೆ ಸಯೀದ್ ಕೂಡ ಒಬ್ಬ ಚಿಂತಕ-ಹೋರಾಟಗಾರ. ತನ್ನ ತಾಯಿನೆಲ ಪೆಲೆಸ್ತೀನ್, ಇಸ್ರೇಲ್ ಆಕ್ರಮಣಕ್ಕೆ ಒಳಗಾಗಿರುವುದು ಮತ್ತು ಅದನ್ನು ಅಮೆರಿಕ, ಬ್ರಿಟನ್, ಫ್ರಾನ್ಸ್ ಮುಂತಾದ ಸಾಮ್ರಾಜ್ಯಶಾಹಿಗಳು ಬೆಂಬಲಿಸುತ್ತಿರುವುದನ್ನು ಸಯೀದ್ ತೀವ್ರವಾಗಿ ಪ್ರತಿಭಟಿಸಿದವರು. ಪೆಲೆಸ್ತೀನ್ ಕುರಿತ ಅವರ ಸ್ವಗತದಂತಹ ಬರವಣಿಗೆಯಂತೂ ಅದರ ತೀವ್ರತೆ ಮತ್ತು ಮಾನವೀಯ ತುಡಿತಗಳಿಂದ ಹೃದಯಸ್ಪರ್ಶಿಯಾಗಿದೆ. ಇಸ್ರೇಲ್‌ನ ಆಕ್ರಮಣ ಮತ್ತು ದುಂಡಾವರ್ತಿಗಳ ವಿರುದ್ಧ ಪೆಲೆಸ್ತೀನ್ ಜನತೆಯ ಹೋರಾಟದಲ್ಲಿ ನೇರವಾಗಿ ಭಾಗಿಯಾಗಿದ್ದ ಸಯೀದ್, ಆ ಹೋರಾಟದ ಮುಂಚೂಣಿಯಲ್ಲಿದ್ದ ಯಾಸೇರ್ ಆರಾಫತ್ ನಾಯಕತ್ವದ ಪೆಲೆಸ್ತೀನ್ ರಾಷ್ಟ್ರೀಯ ಸಮಿತಿಯ ಸದಸ್ಯರೂ ಆಗಿದ್ದರು ಮತ್ತು ಆ ಕಾರಣಕ್ಕೇನೆ, ಥೇಟು ನಮ್ಮ ಆರ್.ಎಸ್.ಎಸ್ ತರಹದ ಅಮೆರಿಕದ ಬಲಪಂಥೀಯ ಯಹೂದಿ ಸಂಘಟನೆಗಳು ಸಯೀದ್ ಮೇಲೆ ಅನೇಕ ಬಾರಿ ಹಲ್ಲೆ ನಡೆಸಿದ್ದವು. ಸಯೀದ್‌ರಿಗೆ ಅವರ ಸಿದ್ಧಾಂತ ಮತ್ತು ಸಾಹಿತ್ಯ ವಿಮರ್ಶೆ ಸಾಮ್ರಾಜ್ಯಶಾಹಿಯ ವಿರುದ್ಧ ಅವರ ರಾಜಕೀಯ ಹೋರಾಟದ ಮುಂದುವರಿಕೆಯೇ ಆಗಿತ್ತು. ಸಯೀದ್ ಜೊತೆ ಗುರುತಿಸಿಕೊಳ್ಳಲು ಬಾಲು ಅವರಿಗೆ ಏನು ಅರ್ಹತೆ ಇದೆ? ನನಗೆ ಗೊತ್ತಿರುವ ಮಟ್ಟಿಗೆ ಬಾಲು, ಯಾವ ವಿಮೋಚನಾವಾದೀ ಅಥವಾ ಎಡಪಂಥೀಯ ಚಳವಳಿಯಲ್ಲಿಯೂ ಎಂದೂ ತೊಡಗಿಕೊಂಡವರಲ್ಲ. ಕುವೆಂಪು ವಿಶ್ವವಿದ್ಯಾಲಯದ ಅವರ ಅನುಯಾಯಿಗಳಿಗಂತೂ ಈ ಚಳವಳಿಗಳ ಬಗ್ಗೆ ಅತೀವ ತಿರಸ್ಕಾರವಿದೆ. ಅವರಲ್ಲಿ ಒಬ್ಬರಾದ ಜೆ.ಸದಾನಂದ ಇತ್ತೀಚೆಗೆ, ಮಾರ್ಕ್ಸ್‌ವಾದ "ನಿರ್ಜೀವಗೊಂಡಿದೆ" ಎಂಬ ಮರಣೋತ್ತರ ವರದಿ ಸಲ್ಲಿಸಿದ್ದಾರೆ. ಹಾಗಿದ್ದೂ ತಮ್ಮ ಸಂಶೋಧನೆ ಮತ್ತು ಬರಹಗಳು ಬೌದ್ಧಿಕತೆಯ ನಿರ್ವಸತೀಕರಣದ ತಮ್ಮ ಪ್ರಯತ್ನದ ಒಂದು ಭಾಗವೆಂದು ಇವರು ಹೇಳಿಕೊಳ್ಳುತ್ತಾರೆ. ಆದರೆ ಅವರ ಈ ಪ್ರಯತ್ನ, ಭಾರತವೂ ಸೇರಿ ಜಗತ್ತಿನ ವಿವಿಧ ಭಾಗದಲ್ಲಿ ನಡೆದ ಯಾವ ವಿಮೋಚನಾ ಹೋರಾಟದಿಂದಲೂ ಏನನ್ನೂ ಪಡೆದಿರುವ ಹಾಗೆ ಕಾಣುವುದಿಲ್ಲ. ಇವರ ಸಂಸ್ಥೆಗೆ ಸಂಘಪರಿವಾರದ ಬೆಂಬಲವಿದೆ ಎಂಬ ವದಂತಿಗಳಿವೆ. ನಿರ್ವಸತೀಕರಣ ಸಂಘಪರಿವಾರದ ಧ್ಯೇಯವಂತೂ ಅಲ್ಲ. ಈ ಹಿನ್ನೆಲೆಯಲ್ಲಿ ಝುಳಕಿ-ಬಾಲು ಮತ್ತು ಅವರ ಸಹವರ್ತಿಗಳ ಸಂಶೋಧನೆಯ ಉದ್ದೇಶದ ಬಗ್ಗೆ ಯಾರಿಗಾದರೂ ಸಂದೇಹ ತಲೆದೋರುವುದು ಸಹಜ.

ಈ ಸಂದರ್ಭದಲ್ಲಿ ನಾನು ಹೇಳಲೇಬೇಕಾದ ಮಾತೊಂದಿದೆ. ಪತ್ರಿಕೆಯ ಕಳೆದ ವಾರದ ಸಂಚಿಕೆಯಲ್ಲಿ ಝುಳಕಿ-ಬಾಲು ಅವರ ಕುರಿತು ಪ್ರಕಟವಾಗಿರುವ "ಸ್ವದೇಶಿ ಮತ್ತು ವಿದೇಶಿ ಸುಲಿಗೆಕೋರರ ಕೂಡಿಕೆಗೆ ಸಂಶೋಧನೆಯೆಂಬ ಕಿರೀಟ" ಎಂಬ ಲೇಖನದ ಕೊನೆಯ ಸಾಲುಗಳು ಹೀಗಿವೆ. "ತಮ್ಮ ಬುಡಕ್ಕೆ ಕೊಡಲಿ ಪೆಟ್ಟು ಬೀಳುತ್ತಿರುವಾಗಲೂ, 'ಮಹಾಚೈತ್ರ'ಕ್ಕಾಗಿ 'ಅನುದೇವಾ ಹೊರಗಣವನು' ಹಾಗು 'ಮಾರ್ಗ'ಕ್ಕಾಗಿ ಬೀದಿಗಿಳಿದ ಲಿಂಗಾಯತರು ಮೂರ್ತಿ ಸ್ಥಳಾಂತರಿಸಲು ಕೂಡ ಬಿಡದ ದಲಿತರು ಈಗ ಏನು ಮಾಡುತ್ತಿದ್ದಾರೆ?."

ಈ ಮಾತಿನ ಅರ್ಥವೇನು? ಇಲ್ಲಿ ಹೆಸರಿಸಲಾಗಿರುವ ಪುಸ್ತಕಗಳ ವಿರುದ್ಧ ದಲಿತರು ಬೀದಿಗೆ ಇಳಿದದ್ದು ಸರಿ ಎಂದು ಲೇಖಕರು ಹೇಳುತ್ತಿದ್ದಾರೆಯೇ? ಲೇಖಕರು ಯಾವ ಅರ್ಥದಲ್ಲಿಯೇ ಹಾಗೆ ಹೇಳಿರಲಿ, ಪುಸ್ತಕದ ವಿರುದ್ಧ ಯಾವುದೇ ಪುಸ್ತಕದ ವಿರುದ್ಧ ಜನ ಬೀದಿಗೆ ಇಳಿದು ಪ್ರತಿಭಟಿಸಕೂಡದು. ಬೆಂಗಳೂರಿನಲ್ಲಿ ಮೆಟ್ರೋ ಕಾಮಗಾರಿಗೆಂದು ಅಂಬೇಡ್ಕರ್ ಮೂರ್ತಿಯನ್ನು ಸ್ಥಳಾಂತರಿಸುವುದರ ವಿರುದ್ಧ ನಡೆದ ಪ್ರತಿಭಟನೆ ಒಂದು ಮನೆಹಾಳು ಕೆಲಸ. ಈಗ ಲೇಖಕರು ಝುಳಕಿ-ಬಾಲು ಅವರ 'ಸಂಶೋಧನೆ' ವಿರುದ್ಧ ಇದೇ ಸಮುದಾಯಗಳು ಬೀದಿಗಿಳಿದು ಪ್ರತಿಭಟಿಸಬೇಕು ಎಂದು ಕರೆಕೊಡುತ್ತಿದ್ದಾರೆ. ಇವರ ಮಾತಿನಲ್ಲಿ ಹೊಗೆಯಾಡುತ್ತಿರುವ ಅಸಹನೆ ನನ್ನನ್ನು ಅಸ್ವಸ್ಥನನ್ನಾಗಿ ಮಾಡಿದೆ.


● ಜೆ.ರಾಜಶೇಖರ್

ಬಡ ಜಾಸೂಸ್‌ಗಳು, ದಗಲ್ಬಾಜಿ ದೇಶಪ್ರೇಮ



ಗುಮಾಸ್ತನ ಬ್ಲಾಗ್—19
• ಕೆ.ಫಣಿರಾಜ್

'ಜಾಸೂಸಿ' ಯಾನೆ 'ಪತ್ತೇದಾರಿಕೆ' ಮಾಮೂಲಿ ಮಂದಿ ಅರಿಯದಂಥ ವಿದ್ಯೆ ಏನಲ್ಲ. ಬೇರೆಯವರ ಮಾತುಗಳನ್ನು ಕದ್ದು ಕೇಳುವುದು, ನಯವಾದ ಮಾತಿನ ಬಲೆ ಹೆಣೆದು ಒಳಗಿನ ವಿಷಯಗಳನ್ನು ಹೊರಗೆಳೆದುಕೊಳ್ಳುವುದು ಮುಂತಾದ ನಿತ್ಯ ಸಂಸಾರಸ್ಥರ ವಿಲಕ್ಷಣ ಕುತೂಹಲಗಳನ್ನು ಕನ್ನಡದಲ್ಲಿ 'ಪತ್ತೇದಾರಿಕೆ ಮಾಡೋದು' ಅಂತಾನೇ ಹೇಳ್ತಾರೆ. ಚಿಕ್ಕಂದಿನಲ್ಲಿ, ನೆಂಟರು ಯಾವುದೋ ಸಮಾರಂಭಕ್ಕೆ ಒಟ್ಟಾದಾಗ, ಅಮ್ಮ, ಚಿಕ್ಕಮ್ಮ, ಅತ್ತೆಯಂದಿರು ಯಾವುದೋ ಒಟ್ಟಾಗಿ ಕೂತ ಗುಂಪನ್ನು ತೋರಿಸಿ, 'ಅವ್ರೇನು ಮಾತಾಡ್ತಿದ್ದಾರೆ ಅಂತ ಅವ್ರಿಗೆ ಗೊತ್ತಾಗದ ಹಾಗೆ ಕೇಳಿಸ್ಕೊಂಡು ಬಂದು ಹೇಳು..' ಅಂತ ನಮ್ಮಂಥ ಚಿಲ್ಟುಗಳನ್ನು ಅಟ್ಟುತ್ತಿದ್ದರು. ನಾವು ಅದನ್ನು ನಮ್ಮ ಪ್ರತಿಭೆಯನ್ನು ಗುರುತಿಸಿ, ನಮಗೆ ವಹಿಸಿದ ಕೆಲಸ ಎಂಬ ಹೆಮ್ಮೆಯಲ್ಲಿ ಗುಂಪಿನ ಮಾತುಗಳನ್ನು ಸಂದೇಹಬಾರದ ಹಾಗೆ ಕೇಳಿಸಿಕೊಳ್ಳಲು ಹೋಗುತ್ತಿದ್ದೆವು. ಎಷ್ಟು ಹೊತ್ತು ಈ ಮಹತ್ಕಾರ್ಯ ಜರುಗಿಸಬೇಕು ಅನ್ನೋದನ್ನು ನಮಗೆ ತಿಳಿಸಿರುತ್ತಿರಲಿಲ್ಲವಾಗಿ, ಆಗಾಗ ನಮ್ಮ ಲೇಡಿ ಬಾಸ್‌ಗಳತ್ತ ಕಣ್ಣು ಹಾಯಿಸುತ್ತ ಸನ್ನೆಗಾಗಿ ಕಾಯುತ್ತಿದ್ದೆವು. ಅವ್ರು ಒಂದು ಹೊತ್ತಿಗೆ ಸಾಕು ಬಾ ಎಂದು ಸನ್ನೆ ಮಾಡಿದ್ರೆ, ಮಹತ್ಕಾರ್ಯ ಪೂರೈಸಿದವರ ಉತ್ಸಾಹದಲ್ಲಿ ಬಾಸ್‌ಗಳ ಬಳಿ ಹೋಗಿ, ದೊಡ್ಡ ಗಂಟಲಲ್ಲಿ ವರದಿ ಶುರುವಿಟ್ಟುಕೊಂಡರೆ, ಅವ್ರು 'ಶೂ..ಶೂ! ವದರಬೇಡ, ಮೆತ್ತಗೆ ಮಾತಾಡು..' ಅಂತ ಮೂಲೆಗೆ ಎಳೆದುಕೊಂಡು ಹೋಗಿ ಪಿಸುದನಿಯಲ್ಲಿ ವರಧಿ ಕೇಳುತ್ತಿದ್ದರು. ಉಪಯುಕ್ತವಾಗಿದ್ದರೆ. ತಲೆ ನೇವರಿಸಿ,ಲಟಿಗೆ ಮುರಿದು 'ಜಾಣಾ...ಮರಿ...' ಅಂತ ಮುದ್ದು ಮಾಡಿ ತಿಂಡಿಗಿಂಡಿ ಕೊಡೋರು. ವರದಿಯಲ್ಲಿ ಅವರ ಅನುಮಾನಗಳನ್ನು ಗಟ್ಟಿ ಮಾಡೋ ಯಾವುದೇ ಪುರಾವೆಗಳು ಸಿಗದೇ ಇದ್ರೆ, ತಾತ್ಸಾರದಲ್ಲಿ 'ಅಷ್ಟೇನಾ!....ಭಾಳ ಶ್ಯಾಣ್ಯಾ ಆದಿ ಹೋಗು...' ಅಂತ ದೂಡಿಬಿಡೋರು. ಆಗೆಲ್ಲ ನಮಗೆ ಅಪಮಾನವಾಗಿ, 'ಮುಂದಿನ್ಸಾರಿ ಹೇಳಿದ್ರೇ ಹೋಗಲ್ ಹೋಗ್ರಿ...' ಅಂತ ಸಣ್ಣ ಮುಖಮಾಡಿ ಮುನಿಸಿಕೊಂಡ್ರೆ 'ಛೀ! ಛೀ! ಹಂಗೆಲ್ಲ ಸಿಟ್ ಮಾಡ್ಬಾರ್ದಾ...' ಅಂತ ರಮಿಸೋರು... ಪತ್ತೇದಾರಿಕೆ ಮತ್ತು ಅದರ ಫಲಗಳನ್ನು ಹೀಗೆ ಬಾಲ್ಯ ವಿದ್ಯೆಯಾಗಿ ನಾವು ಕಲಿತಿರ್ತೀವೆ. ಮುಂದೆ, ಹೈಸ್ಕೂಲ್ ಹೊತ್ತಿಗೆ ನರಸಿಂಹಯ್ಯನವರ ಕಾದಂಬರಿಗಳನ್ನ ಓದಿಕೊಂಡು, ಪತ್ತೇದಾರ ಪುರುಷೋತ್ತಮನ ವರಸೆಗಳನ್ನು ಕಲಿಯಲು ಹವಣಿಸುತ್ತೇವೆ. ಇನ್ನು ಅಕ್ಕಂದಿರು, ತಮ್ಮ ಪ್ರಿಯತಮನೋ, ಮದುವೆಯಾಗಲು ಒಪ್ಪಿಗೆ ಇತ್ತ ವರನೋ, 'ಎಂಥ ಮನುಷ್ಯ ಅಂತ ಪತ್ತೆ ಮಾಡ್ಕೊಂಡು ಬರ್ತೀಯಾ! ಪ್ಲೀಸ್...ನಿಂಗೆ ಅಕ್ಕ ಅಂದ್ರೆ ತುಂಬಾ ಪ್ರೀತಿ ಅಲ್ವೇನೋ.. ಅಕ್ಕ ಚೆನ್ನಾಗಿರ್ಬೇಕೋ ಬೇಡ್ವೋ ಹೇಳು...' ಅಂತ ಬೊಗಸೆಯಲ್ಲಿ ಎಳೆ ಮೀಸೆ ಮೂಡಿ ಬರುತ್ತಿರುವ ಮುಖಹಿಡಿದು ಕೇಳುವಾಗ, ನಾವು ಜಗದೇಕವೀರರೇ ಆಗಿ, 'ಡೋಂಟ್ ವರಿ ಮಾಡ್ಕೋಬೇಡ್ವೇ! ನಿನ್ನ ತಮ್ಮ ಇರೋವರ್ಗೂ ನೀನು ಹೆದ್ರಬೇಕಾದ್ದೇ ಇಲ್ಲ..' ಅನ್ನೋ ಅಣ್ಣಾವ್ರ ಡೈಲಾಗ್ ಹೊಡೆದು, ಸ್ವಲ್ಪ ಅಪಾಯಕಾರಿಯಾದ ಪತ್ತೇದಾರಿಕೆಗೆ ತುಂಬ ಧೈರ್ಯದಲ್ಲಿ ಕೈ ಹಾಕ್ತೀವೆ. ಆ ಸಾಹಸ ಮಾಡುವಷ್ಟು ಗಟ್ಟಿಗ ಅಂತ ನಂಬಿಸ್ಕೋಳೋಕೆ ಬೀಡಿ, ಸಿಗರೇಟು ಚಟ ಕಲಿತಿರ್ತೀವೆ. ಸಂಸಾರ, ಪರಿಚಿತ ಸಮುದಾಯ ಬದುಕಿನಲ್ಲಿ ಜಾಸೂಸಿ, ಒಂದು ಬಗೆಯ ಜೀವನ ಪಾಠವಾಗಿಯೇ ಬಂದಿರುತ್ತದೆ. ನನಗಿನ್ನೂ ನೆನಪಿದೆ. ಹದಿನಾಲ್ಕೋ-ಹದಿನೈದೋ ವಯಸ್ಸಿನಲ್ಲಿ ನನ್ನ ಒಬ್ಬ ಅಕ್ಕನಿಗೆ ಮದುವೆ ಗುರ್ತು ಮಾಡಿದ ಹುಡುಗನ ನಡವಳಿಕೆ ಬಗ್ಗೆ ಅವಳು ಅಂಗಲಾಚಿದಳು ಅಂತ ಜಾಸೂಸಿ ಮಾಡುವಾಗ ಸಿಕ್ಕಿಬಿದ್ದಿದ್ದೆ. ಮನೆಯ ಹಿರಿಯರು ದಪ್ಪ ಕೋಲು ತಗೊಂಡು ರಪರಪ ಬಾರಿಸುತ್ತಿದ್ದಾಗ, ಆ ನನ್ನ ಅಕ್ಕ ಮಧ್ಯೆ ಎರಗಿ ಬಂದು ನನ್ನನ್ನು ಅವಳ ಎದೆಗೆ ಅವುಚಿ ಹಿಡಿದು 'ನಾನೇ ಹೇಳಿದ್ದು! ಅವನ್ಯಾಕೆ ದಂಡಿಸ್ತೀರಿ! ನಂಗೇ ಈ ಮದುವೆ ಬೇಡ' ಅಂತ ಮೈಮೇಲೆ ಬಂದವಳ ಹಾಗೆ ಚೀರಿದಳು.




ಹೊಡೆಯುತ್ತಿದ್ದೋರು ಹೌಹಾರಿದರು. ತಲೆಮೇಲೆ ಕೈಹೊತ್ತು ಕೂತರು. ಮದುವೆ ಮುರಿಯಿತು. ಅವಳಿಗೆ ಮತ್ತೊಂದು ಕಡೆ ಸಂಬಂಧ ನೋಡಿ ಮದುವೆ ಮಾಡಿದರು. ಎಲ್ಲರ ಸಂಸಾರದ ಹಾಗೆ ಸರಸ-ವಿರಸದ ಅವಳ ಸಂಸಾರವೂ ನಡೀತಿದೆ. ಅದಲ್ಲ, ಆದ್ರೆ ಆ ಜಾಸೂಸಿ ಇಂದಿಗೂ ನನಗೂ, ಅವಳಿಗೂ ಪಾಪ ಅನಿಸಿದ್ದಿಲ್ಲ, ಕದ್ದುಮುಚ್ಚಿ ಮಾಡೋ ಕೆಲಸವಾದ್ರೂ, ಆಪ್ತ ಜನರ ಮುಖ ಸಂಬಂಧದಲ್ಲಿ, ಜೀವಂತ ನೆಂಟಿನಲ್ಲಿ, ಅದಕ್ಕೊಂದು ವಕ್ರ ನೈತಿಕ ಸಹಜತೆ ಬಂದುಬಿಟ್ಟಿರ್ತದೆ.

ಆದರೆ, ಪ್ರಭುತ್ವ ಹಾಗು ಅದು ತನ್ನ ಶತ್ರುಗಳ ಒಳಹುನ್ನಾರಗಳ ರಹಸ್ಯ ತಿಳಿಯಲು ಅಟ್ಟುವ ಗೂಢಚಾರಿ ಯಾನೆ ಜಾಸೂಸ್‌ಗಳ ನಡುವಿನ ಸಂಬಂಧ, ಮುಖಹೀನವಾದ, ಯಾವ ಭಾವನೆಗಳಿಗೂ ಆಸ್ಪದವಿಲ್ಲದ, ವಿಕಾರ ತಂತ್ರಗಾರಿಕೆಯ ಕಟುವಿಕಟಸಂಬಂಧ. ಪ್ರಭುತ್ವಕ್ಕೆ ತನ್ನ ಜಾಸೂಸ್‌ಗಳು, ಉಪಯುಕ್ತವಾಗಿರೋವಷ್ಟು ಕಾಲ ಉಪಯೋಗಿಸಿ, ಅಪಾಯ ಬಂದಾಗ ಯಾವ ಉತ್ತರದಾಯಿತ್ವವೂ ಇಲ್ಲದೆ ಆಚೆಗೆ ಎಸೆದುಬಿಡುವ ನಿರ್ಜೀವ ವಸ್ತುಗಳು. ಯಾವಾಗಲೂ ನೈತಿಕ ದೊಡ್ಡಸ್ತಿಕೆ, ಗೆಲುವು ಪ್ರಭುತ್ವದ್ದು; ಸೋತು ಸುಣ್ಣವಾಗಿ, ನೊಂದು ಮಣ್ಣಾಗೋರು ಸಿಕ್ಕಿಬಿದ್ದ ಜಾಸೂಸ್‌ಗಳು. ಇದು ಪ್ರಪಂಚದಾದ್ಯಂತ ಲಾಗಾಯ್ತಿನಿಂದ ನಡೆದುಕೊಂಡುಬಂದಿರೋ ಕಣ್ಣಿಗೆ ಕಾಣದ ಹಿಂಸೆ ಅನ್ನೋದು ಸರಿ. ಆದರೆ, ಪ್ರಭುತ್ವಗಳು ಕ್ರೂರವಾದಷ್ಟೂ ಈ ಜಾಸೂಸಿ ಸಂಬಂಧದಲ್ಲಿ ಅವುಗಳ ನಡವಳಿಕೆ ಅಸಹ್ಯಕರವಾಗುತ್ತಿವೆ; ಪ್ರಭುತ್ವದ ಸಾರ್ವಜನಿಕ ಸೋಗಲಾಡಿತನ ವಾಕರಿಕೆ ಹುಟ್ಟಿಸುತ್ತಿವೆ. ಮೊನ್ನೆ ಪಾಕಿಸ್ತಾನದ ಲಾಹೋರಿನ ಸೆರೆಮನೆಯಲ್ಲಿ ಮಾರಣಾಂತಿಕ ಹಲ್ಲೆಗೀಡಾಗಿ ತೀರಿಕೊಂಡ ಸರಬ್ಜಿತ್ ಪ್ರಕರಣವನ್ನೇ ನೋಡಿ. ಆತ ಭಾರತ ಪ್ರಭುತ್ವ ಹೊರದೇಶಗಳಲ್ಲಿ ಗೂಢಚರ್ಯೆಯನ್ನು ನಡೆಸುವುದಕ್ಕಾಗಿಯೇ ರಚಿಸಿರುವ ಸಂಸ್ಥೆ RAW (ರಿಸರ್ಚ್ ಅಂಡ್ ಅನಾಲಿಸಿಸ್ ವಿಂಗ್) ದ ಗೂಢಚರನಾಗಿ ಪಾಕಿಸ್ತಾನಕ್ಕೆ ಹೋಗಿದ್ದ; 1990ರಲ್ಲಿ ಕಾರ್ಯಾಚರಣೆ ಸಂದರ್ಭದಲ್ಲಿ ಸಿಕ್ಕಿಬಿದ್ದ, ಲಾಹೋರಿನಲ್ಲಿ ನಡೆದ ಬಾಂಬ್ ಸ್ಫೋಟದ ರೂವಾರಿ ಎಂಬ ಆಪಾದನೆಯ ವಿಚಾರಣೆ ನಡೆದು, 1991ರಲ್ಲಿ ಪಾಕಿಸ್ತಾನದ ಸರ್ವೋಚ್ಚ ನ್ಯಾಯಾಲಯ ಆತನಿಗೆ ಗಲ್ಲು ಶಿಕ್ಷೆ ವಿಧಿಸಿತು. ಆ ನಂತರ ಆತನ ಶಿಕ್ಷೆಯನ್ನು ಕಡಿಮೆಗೊಳಿಸಬೇಕೆಂಬ ಐದಾರು ಅಹವಾಲುಗಳನ್ನು ಆತನ ತಂಗಿ ದಲ್ಬೀರ್ ಕೌರ್ ಪಾಕಿಸ್ತಾನದ ಮಾನವ ಹಕ್ಕು ವಕೀಲರ ಮೂಲಕ ಸಲ್ಲಿಸಿ ಆತನನ್ನು ಉಳಿಸಿಕೊಳ್ಳಲು ಹೋರಾಡಿದಳು. ಆತನ ಫಾಶಿಯ ದಿನ ಮುಂದುಮುಂದಕ್ಕೆ ಹೋಯಿತು. ಭಾರತದಲ್ಲಿ ಅಫ್ಜಲ್ ಗುರು ಗಲ್ಲಿಗೆ ಚೆಡ್ಡಿಗಳ ಪ್ರಚಾರ ಒತ್ತಾಯ ಹೆಚ್ಚಾದಂತೆ, ಪಾಕಿಸ್ತಾನದ ಚೆಡ್ಡಿಗಳು ಸರಬ್ಜಿತ್‌ನ ಗಲ್ಲಿಗೆ ಒತ್ತಾಯವನ್ನು ತೀವ್ರಗೊಳಿಸಿದರು. ಅಫ್ಜಲ್ ಗುರು ನೇಣಿನ ನಂತರ ಅದು ತಾರಕಕ್ಕೇರಿ, ಮೊನ್ನಿನ ಹಲ್ಲೆ ಸಾವಿನಲ್ಲಿ ಪರ್ಯವಸಾನಗೊಂಡಿತು. ಆತನ ಸಾವಿನನಂತರ ನಮ್ಮ ಪ್ರಭುತ್ವದ ದೇಶಪ್ರೇಮ ಉಕ್ಕಿಹರಿಯತೊಡಗಿದೆ. ಆತನ ಕುಟುಂಬಕ್ಕೆ ಧನಸಹಾಯ, ಉದ್ಯೋಗ ನೆರವುಗಳನ್ನು ಕೇಂದ್ರ ಸರಕಾರವೂ, ಪಂಜಾಬಿನ ರಾಜ್ಯ ಸರಕಾರವೂ–ಇವೆರಡೂ ಲೆಕ್ಕಾಚಾರದಲ್ಲಿ ವಿರೋಧಿ ಬಣಗಳು ಎನ್ನುವುದನ್ನು ನೆನಪಿಡಿ–ಘೋಷಿಸತೊಡಗಿವೆ. ಆದರೆ ಈಗಲೂ ನಮ್ಮ ಪ್ರಭುತ್ವವು 'ಸರಬ್ಜಿತ್ ನಾವೇ ಬೇಹುಗಾರಿಕೆ ದೂಡಿದ ಮನುಷ್ಯ; ಆತ ಸಿಕ್ಕಿಹಾಕಿಕೊಂಡಿದ್ದೆ ಅವನ ಕೈಬಿಟ್ಟೆವು' ಅಂತ ಒಪ್ಪಿಕೊಳ್ಳುತ್ತಿಲ್ಲ. ಸರಬ್ಜಿತ್ ತೀರಿಕೊಂಡ ದಿವಸವೇ ನರೇಂದ್ರ ಮೋದಿ, ಕರ್ನಾಟಕ ವಿಧಾನಸಭಾ ಚುನಾವಣೆಯ ಪ್ರಚಾರಕ್ಕಾಗಿ ಮಂಗಳೂರು ಮತ್ತು ಬೆಳಗಾವಿಯಲ್ಲಿ ಭಾಷಣ ಮಾಡುವಾಗ, ಆ ಸಾವನ್ನೂ ಫಾಯ್ದೆಯ ವಿಷಯ ಮಾಡಿಕೊಳ್ಳಲು ಹೇಸಲಿಲ್ಲ. ದೇಶದ ಭದ್ರತೆ ದುರ್ಬಲವಾಗಿದೆ ಎಂದು ಕತೆ ಹೊಸೆದು ಜನಸಾಮಾನ್ಯರಲ್ಲಿ ಆತಂಕ ಮತ್ತು ದ್ವೇಷಭಾವಗಳನ್ನು ಎಗ್ಗಿಲ್ಲದೆ ಹುಟ್ಟುಹಾಕುವ ಈತನಿಗೆ ಈ ದುಷ್ಟ ಕಾರಣಗಳಿಗಾಗಿಯೇ ಸರಬ್ಜಿತ್‌ನಂಥವರು ಜಾಸೂಸಿ ದಾಳಕ್ಕೆ ಕಾಯಿಯಾಗಿ ಸಾವನ್ನಪ್ಪುತ್ತಿದ್ದಾರೆ ಎನ್ನುವುದು ತಿಳಿಯದ್ದೇನೂ ಅಲ್ಲ. ಆದ
ಎಷ್ಟು ಸಲೀಸಾಗಿ ಪರಕೀಯ ಕುರಿಯನ್ನು 'ದೇಶಪ್ರೇಮ
ಲಾಂಛನ ಮಾಡುತ್ತಾನೆ ನೋಡಿ!

ಈ ದೇಶಪ್ರೇಮದ ವರಸೆಯೂ ಎಂಥ ದಗ
ಎಂದು ತೋರಿಸುವ 'ದಿ ಸ್ಪೈಸ್ ಆಫ್ ಪಂಜಾಬ್, ಶೋ
ಸ್ಟೈಪ್ಸ್ ಆಫ್ ಗೋಲ್ಡ್' ಎಂಬ ಉತ್ತಮ ವರದಿಯ
ದಿ. 7.5.2013ರ 'ದಿ ಹಿಂದು' ಪತ್ರಿಕೆಯಲ್ಲಿ ಚಂ
ಸುತ ದೋಗ್ರ ಬರೆದಿದ್ದಾರೆ. ಪಂಜಾಬಿನ ಧರಿವಾ
ದಡುವಾನ್, ಖೈರಕಲಾನ್, ಕಂಗ್ ಮುಂತಾದ ಹಳ್ಳಿ
ವಸ್ತುಶಃ ಜಾಸೂಸಿಗರ ಹಳ್ಳಿಗಳಾಗಿವೆ. ನಿರುದ್ಯೋ
ಬಡತನಗಳಿಂದ ಬಳಲಿರುವ ಈ ಹಳ್ಳಿಗಳ ಗಂಡಸ
RAW, ಸೇನಾ ಬೇಹುಗಾರಿಕೆ ದಳ, ಗಡಿಭದ್ರತಾ ದ
ಬೇಹುಗಾರಿಕೆ ವಿಭಾಗಗಳು, ಗೂಢಚರ್ಯೆ ಕೆಲಸ
ತೊಡಗುವಂತೆ ಪುಸಲಾಯಿಸುತ್ತವೆ. ಬಡತನದ
ಪಾರಾಗಲು ಈ ಹಳ್ಳಿಯ ಗಂಡಸರು, ತಿಂಗಳಿಗೆ ಹೆಚ್ಚೆ
1500 ರೂಪಾಯಿ ಕೂಲಿಗೆ ಪಾಕಿಸ್ತಾನಕ್ಕೆ ಜಾಸೂಸ್‌ಗ
ಹೋಗುತ್ತಾರೆ. ಒಂದು ವೇಳೆ ಸಿಕ್ಕಿಬಿದ್ದರೆ
ಉತ್ತರದಾಯಿಯಾಗಿರುವುದಿಲ್ಲ ಎನ್ನುವ ನಿಯಮ
ಎನ್ನುವುದನ್ನೂ ಪ್ರಭುತ್ವದ ಈ ಸಂಸ್ಥೆಗಳು ಅವ
ತಿಳಿಸುವುದಿಲ್ಲ. ಈ ಬಡಪಾಯಿಗಳು ಸಂಸಾರದ ಹೊ
ತುಂಬಲು ಅಪಾಯಕ್ಕೆ ತಮ್ಮನ್ನೇ ತಾವು ಒಡ್ಡಿಕೊಳ್ಳು
ಸಿಕ್ಕಿಬಿದ್ದು ವರ್ಷಾಂತರಗಳ ಕಾಲ ಪಾಕಿಸ್ತಾನದ ಜೈಲುಗ
ಕೊಳೆಯುತ್ತಾರೆ. ಸಿಕ್ಕಿಬಿದ್ದಾಕ್ಷಣದಿಂದ ಆ ಜುಜ
ಕೂಲಿಯೂ ನಿಂತುಹೋಗುತ್ತದೆ. ಬಿಡುಗಡೆಗೊ
ಬಂದವರನ್ನು ಅವರನ್ನು ಕಳುಹಿಸಿದ ಸಂಸ್ಥೆಗಳು
ಉದ್ಯೋಗಿಗಳು ಎಂದು ಒಪ್ಪಿಕೊಂಡು ಪರಿ
ನೀಡುವುದಿಲ್ಲವಾದ್ದರಿಂದ ಮತ್ತೆ ಅವರು ಬಡತನದ ಬ
ಹೋಗಿಬೀಳಬೇಕಾಗುತ್ತದೆ. ರಂಜನ್ ಲಖನ್‌ಪಾಲ್
ವಕೀಲರು ಇಂತಹ 40 ಕೇಸುಗಳನ್ನು ತೆಗೆದುಕೊಂ
ಪಂಜಾಬ್ ಮತ್ತು ಹರ್ಯಾಣ ಹೈಕೋರ್ಟಿನಲ್ಲಿ ದ
ದಾಖಲಿಸಿದ್ದಾರೆ. "ಕೋರ್ಟುಗಳು, ಇವರ ಅಹವಾ
ಪರಿಶೀಲಿಸಿ ಎಂದು ಸರಕಾರಕ್ಕೆ, ಕಾಟಾಚಾರಕ್ಕೆಂಬ
ತಿಳಿಸುತ್ತವೆ. ಸರಕಾರ ಇವರಿಗೂ ನಮಗೂ ಸಂಬಂಧ
ಎನ್ನುವಂತೆ ವರ್ತಿಸುತ್ತವೆ" ಎನ್ನುತ್ತಾರೆ ಲಖನ್‌ಪಾ
ಅವರು ಮುಫ್ತಾಗಿ ಈ ಕೇಸುಗಳನ್ನು ನಡೆಸುತ್ತಾರಾದ್ದ
ಸರಬ್ಜಿತ್ ಪ್ರಕರಣದ ನಂತರ ಹೆಚ್ಚೆಚ್ಚು ಮೋಸ ಹೋ
ನಿರ್ಗತಿಕ ಜಾಸೂಸ್‌ಗಳು ತಮ್ಮ ಅಹವಾಲು ತೆಗೆದುಕೊ
ಅವರ ಬಳಿ ಬರತೊಡಗಿದ್ದಾರೆ. ಏನೂ ಆಗದೆ ಇರಬಹು
ಆದರೆ, 'ದೇಶಪ್ರೇಮದ ಧಿರಿಸು ಧರಿಸಿದ್ದೇವೆ' ಎ
ವಯ್ಯಾರ ಮಾಡುವ ಪ್ರಭುಗಳು, ವಾಸ್ತವಿಕ
'ಬೆತ್ತಲಾಗಿದ್ದಾರೆ' ಅನ್ನುವ ನಿಜವನ್ನು ಲಖನ್‌ಪಾಲ
ವಕೀಲರೂ, ಚಂದರ್ ಸುತ ದೋಗ್ರರಂಥ ಪತ್ರಕರ್ತ
ತೋರುತ್ತಿದ್ದಾರೆ. ಅವರಿಗೆ ಸಲಾಂ. ನನ್ನ ಅಕ್ಕನ ಹಾಗೆ
ನಿರ್ಗತಿಕ ಜಾಸೂಸುಗಳನ್ನು ಎದೆಗವಚಿಕೊಂಡು 'ಅವರು
ತಪ್ಪಿಲ್ಲ' ಎನ್ನದ ಪ್ರಭುತ್ವಕ್ಕೆ, ನಾವು ಧಿಕ್ಕಾರ ಹೇ
ಇರುವುದರಿಂದಲೇ, ಈ ಪ್ರಭುತ್ವವು ಸಾವಿರಾರು
ಆದಿವಾಸಿಗಳನ್ನು 'ನಕ್ಸಲೈಟ'ರೆಂದು ಬಂಧಿಸಿ ಅಪ
ದಾಖಲೆ, ಸಾಕ್ಷ್ಯ ಪುರಾವೆ ವಿಚಾರಣೆ ಯಾವುದನ್ನೂ ನಡ
ವರ್ಷಾಂತರಗಳ ಕಾಲ ಜೈಲುಗಳಲ್ಲಿ ಕೂಡಿಹಾಕು
ತನ್ನ ಜನರನ್ನೇ ಪರರನ್ನಾಗಿ ಕಂಡು 'ದೇಶಪ್ರೇಮ' ಎ
ಚೀರಾಡುತ್ತಿದೆ. ಜೊತೆಗೇ, ಸರಬ್ಜಿತ್ ಹತ್ಯೆಯ ಬೆನ್ನಿ
ಜಮ್ಮು ಜೈಲಿನಲ್ಲಿ ಪಾಕಿಸ್ತಾನದ ಸನಾವುಲ್ಲನ ಮೇ
ಮಾರಣಾಂತಿಕ ಹಲ್ಲೆ ನಡೆದಿರುವುದೂ ನಮ್ಮಲ್ಲಿ ಆ
ಹುಟ್ಟಿಸಬೇಕು. ಪ್ರಭುತ್ವದ ದಗಲ್ಬಾಜಿ ದೇಶಪ್ರೇಮ
ಜನ ಬುದ್ಧಿಭಾವಗಳಲ್ಲಿ ಇಳಿಸಿಕೊಳ್ಳುವುದು ಫ್ಯಾಸಿಸ
ಲಕ್ಷಣ. ರಾಜಕೀಯ ಪಕ್ಷ ಯಾವುದೇ ಇರಲಿ,
ಫ್ಯಾಸಿಸಮ್ಮನ್ನು ಪೊರೆಯೋದೇ ಹೀಗೆ ಕಣ್ರಿ.

ಫಿಜೂಲ್ ಕಾರ್ನರ್-ಬೈ ತರ್ಲೇಕರ್

ಮಾಲೂರು ಮೂರು ನಾಮದೋನಿಗೆ ಮೂರು ನಾಮ



ಮಾಲೂರಿನ ಕೃಷ್ಣಯ್ಯ ಶೆಟ್ರು ವೋಟಿಗೆ ಮುಂಚೇನೇ ಬಿಜೆಪಿಗೆ ಬಿ-ಫಾರ್ಮ್ ನಾಮ ಹಾಕಿ, ಅರ್ಧ ಗೆದ್ದೆ ಅಂತ ಭೋ ಖುಷಿಯಲ್ಲಿದ್ರು. ಇನ್ನರ್ಧ ಗೆದ್ದುಬಿಟ್ರೆ ಮಸಲ ಅತಂತ್ರ ವಿಧಾನಸಭೆಯಾದ್ರೆ, ಚೌಕಾಶಿ ಮಾಡಿ ಮಿನಿಷ್ಟ್ರು ಆದ್ರೆ ಏಡುಕುಂಡಲವಾಡ! ಒಂದು ಟಿನ್ ತಿರುಪತಿ ಲಾಡು ಮಾಲೂರು ಕ್ಷೇತ್ರದ ತುಂಬ ಹಂಚಮಾ ಅಂತ ತಿಮ್ಮಪ್ಪನ ಜೊತೆ ಕಾಂಟ್ರಾಕ್ಟು ಮಾಡ್ಕಂಡ್ರು. ನೀಟಾಗಿ ಮೂರು ನಾಮ ಹಾಕ್ಕ ಬಿಟ್ಟಿ ದಾಸಯ್ಯನ ವೇಷ ಹಾಕಂಬಿಟ್ಟ್ರ, ಮನೆ ಮನೆ ಪ್ರಚಾರಕ್ಕೆ ಹೊಂಟೇಬುಟ್ರು. ಪ್ರತಿ ಮನೆಗೂ ಹೋಗಿ 'ಹಿ.. ಹ್ಹಿ.. ಹೀ... ಮೂರುನಾಮ ನೆಪ್ಪಿರ್ಲಿ...ವೋಟಾಕ್ಬೇಕು...' ಅನ್ನೋರು. ಜನ್ರುನುವೇ ಭೋ ಪ್ರೀತೀಲಿ 'ಹೇ.. ಹ್ಹೇ.. ಹೆ... ಮೂರ್ನಾಮ ನೆಪ್ಪಿರ್ತದೆ...' ಅನ್ನೋವ್ರು. ಶೆಟ್ರು ಮೇ 3ನೇ ತಾರೀಖು ಒತ್ತಿಗೆ ಫುಲ್ ಕಾನ್ಫಿಡೆನ್ಸ್ ಆಗ್ಬುಟ್ಟಿ ಓಲ್ಡ್ ಪೊಂಡು ರಾಮುಲಿಗೆ ಫೋನು ಹಚ್ಬುಟ್ಟಿ 'ಏಡುಕುಂಡಲವಾಡ! ಮರ್ಚಿಪೋಯಾವ ರಾಮು, ನೇನು ಕ್ರಿಷ್ಣಯ್ಯರಾ ಬಿಡ್ಡ! ನಿಂದು ಏರ್‌ಕಂಡಿಷನ್ ರಥ ಕೊಂಚ ಕಾವಲಯ್ಯ! ತಿರುಪತಿಕು ಪೋವಲಾ' ಅಂತೇಳ್ಬುಟ್ಟಿ ಬುಕ್ಕೂ ಮಾಡ್ಕಂಡ್ರು. ಇವನಯ್ಯನ್ 8ನೇ ತಾರೀಖು ವೋಟು ಮಷಿನ್ನು ಓಪನ್ ಮಾಡಿದ್ರೆ ಶೆಟ್ರಿಗೆ ಜನ ನಾಮದ್‌ಮೇಲೆ ಮೂರ್ನಾಮ ಹಾಕ್ಬುಡಾದೆ ಏಡುಕುಂಡಲವಾಡ! ಶೆಟ್ರುನುವೇ ಸಬಿತ್ ಶಾಕ್ ಆಗ್ಬುಟ್ಟಿ 'ವರೇ! ಯಾವಾರುನ್ನರಯ್ಯ... ಶಿವರಾತ್ರಿಗೆ ಕಾಶಿಯಿಂದ ತರ್ಸಿ ಹಂಚಿದ ಗಂಗಾಜಲದ ಗಿಂಡಿ ಸ್ಟಾಕಿದ್ರೆ ತಕ್ಕಬರಲಾ...' ಅಂತ ತಲೆಮೇಲೆ ಒದ್ದೆಬಟ್ಟೆ ಅಕ್ಕಂಡಿ ಕುಂತುಬುಟ್ರಂತೆ ಶಿವ.

...ಾಹ್ಮಣರಿಗೆ ಬೋದ್ರೆ ವಳ್ಳೆದಾಗಲ್ಲ ಸಾರ್!

ಕರ್ನಾಟಕದಲ್ಲಿ ನಡೆದ ಚುನಾವಣೆಯ ಫಲಿತಾಂಶದ ...ಟಿ.ವಿ.ಯೊಳಗಿನ ಮಾತಿನ ಮಲ್ಲರು, ಕೆಲ ...ರಾಷ್ಟ್ರೋಲು ಪತ್ರಕರ್ತರು, ಅರೆಬೆಂದ ಬುದ್ಧಿಜೀವಿಗಳು, ...ೀಯವಾದಿಗಳು ಮತ್ತು ಮಂದಮತಿಯರನ್ನೆಲ್ಲಾ ಕರೆದು ...ರಿಸಿಕೊಂಡು, ವಾರಗಟ್ಟಲೆ ಅಳೆದು ಸುರಿದು ಕೊಟ್ಟ ...ಅಂಶಗಳೆಲ್ಲಾ ತಲೆಕೆಳಗಾಗಿವೆಯಲ್ಲ. ಕರ್ನಾಟಕದ ...ದ್ಧಿಜೀವಿ ಮತದಾರ ಯಾರ ಹಂಗೂ ಇಲ್ಲದೆ ಸರ್ಕಾರ ...ಸುವಂತಹ ಬಹುಮತವನ್ನು ಕೊಟ್ಟೇಬಿಟ್ಟನಲ್ಲಾ. ಸದರಿ ...ತಾಂಶವನ್ನು ಮೆಚ್ಚಿಕೊಂಡ ಮಾತಿನಮಲ್ಲರು "ನಾವು ...ಳಿದ ಅಂದಾಜು ನಿಜವಾಗಿದೆ ನೋಡಿ. ಕೆಜೆಪಿಗೆ ...ಶ್ನರಡು ಸೀಟು ಬರುತ್ತದೆ ಎಂದಿದ್ದೆವು. ಆರು ಸೀಟು ...ದಿದೆ. ರಾಮುಲು ಎಂಟು ಮಂದಿ ನೆಂಟರ ಜೊತೆ ...ುತ್ತಾನೆ ಎಂದಿದ್ದೆವು. ಆದರೆ ನಾಲ್ಕು ಜನರ ಮೇಲೆ ...ದಿದ್ದಾನೆ. ಬಿಜೆಪಿ ಎಂಭತ್ತು ಎಂದು ಹೇಳಿದ್ದೆವು. ನಲವತ್ತು ...ಟು ಬಂದಿದೆ. ಇನ್ನು ಜೆಡಿಎಸ್‌ಗೆ ಸುಮಾರು ಐವತ್ತು ...ಟು ಬರಬಹುದೆಂದಿದ್ದೆವು. ಹತ್ತು ಸೀಟು ಕಡಿಮೆಯಾಗಿದೆ ...ಷ್ಟೆ" ಎಂದು ಹೇಳಿಕೊಂಡು ಬೀಗುತ್ತಿವೆಯಂತಲ್ಲಾ, ...ತ್ತೇರಿ!

****

"ಜೆಡಿಎಸ್‌ಗೆ ಮೂವತ್ತೆಂಟು ಸೀಟು ಬರಬೇಕಿತ್ತು, ...ರೆ ಐವತ್ತು ಸೀಟು ಎಂದು ಅಂದಾಜಿಸಿದ್ದೇಕೆ?" ಎಂದರೆ, ...ನ್ಯ ಮಾಜಿ ಪ್ರಧಾನಿಗಳಾದ ದೇವೇಗೌಡರು "ನಮಗೆ ...ತ್ತೆರಡು ಸೀಟು ಸಾಕು. ಆದರ ಮೇಲೆ ಅರ್ಧ ಸೀಟೂ ...ಡ. ಯಾರಾದರೂ ನಮ್ಮ ಮನೆಬಾಗಿಲಿಗೆ ಬಂದು ...ಖ್ಯಮಂತ್ರಿ ಸೀಟಲ್ಲದೆ ಇಂಧನ, ಲೋಕೋಪ ಯೋಗಿ ...ತ್ತು ಕೆ.ಎಂ.ಎಫ್. ಕೊಡುತ್ತಾರೆ. ಆದ್ದರಿಂದ ನಮಗೆ ...ಮ್ಮವರ ಜಿಲ್ಲೆಗಳಿಂದ ಅಷ್ಟೇ ಸಾಕು" ಎಂದು ...ಳುತ್ತಾ ಅಷ್ಟು ಸೀಟಿಗೆ ಸೀಮಿತವಾದ ...ದೇಶದಲ್ಲೇ ತಿರುಗಾಡಿದರಂತಲ್ಲಾ, "ನನ್ನ ...ಗ ಮತ್ತೆ ಮುಖ್ಯಮಂತ್ರಿಯಾಗಿ ...ಮಾಣವಚನ ತೆಗೆದುಕೊಳ್ಳುವ ದೃಶ್ಯವನ್ನು ...ರಡೂ ಕಣ್ಣುಗಳಿಂದ ನೋಡಬೇಕಿದೆ. ... ಕೊನೆಯ ಆಸೆಯನ್ನು ಈಡೇರಿಸಿ" ...ದು ಪಾರ್ಟಿ ಕೂಲಿಕಾರರಿಗಲ್ಲದೆ ...ರ್ವಜನಿಕರಿಗೂ ಕರೆಕೊಟ್ಟಿದ್ದರಂತಲ್ಲಾ. ...ನ್ನು ಕೇಳಿದ ಜೆಡಿಎಸ್ ಮೀಡಿಯಾದವರು ...ರಡು ಸೀಟು ಕಡಿಮೆ ಐವತ್ತು ಬರುತ್ತದೆ" ...ದು ಹೇಳಿಕೊಂಡು ತಿರುಗಿದ್ದವಂತಲ್ಲಾ.

... ಗೌಡರು ಮಗನನ್ನು ಮುಖ್ಯಮಂತ್ರಿಯಾಗಿ ...ೀಡಬೇಕೆಂದು ವ್ಯಕ್ತಪಡಿಸಿದ ಕೊನೆಯ ...ಯನ್ನು ಗಂಭೀರವಾಗೇ ಪರಿಗಣಿಸಿದ ಭವಾನಿ ...ಾವ ಮಗ? ಹಿರಿಮಗನೊ, ಮೂರನೇ ...ಗನೋ?" ಎಂದು ಯೋಚಿಸುತ್ತಿರಬೇಕಾದರೆ ಅನಿತಕ್ಕ ...ಬಿಸಿಲಲ್ಲಿ ಗರಗರನೆ ತಿರುಗಿ ಬರಬರನೆ ಬಂದರಂತಲ್ಲಾ. ...ದ್ಯಾವ ಸುಖಕ್ಕಾಗಿ ನಾನಿಂಗೆ ತಿರುಗಬೇಕು" ಎಂದು ...ತಕ್ಕ ಯೋಚಿಸಿದ ಕೂಡಲೇ, ಬರಬಾರದ ಅಳುಬಂದು, ...ಅಳುವನ್ನು ಮಾವನ ಮೇಲೆ ಹಾಕಿ "ಈ ವಯಸ್ಸಿನಲ್ಲಿ ...ತ್ರಿ ಆಹಾರ ತೊರೆದು ಸುತ್ತುತ್ತಿರುವ ಮಾವನವರನ್ನು ...ೀಡಿದರೆ ನನಗೆ ಅಳುಬರುತ್ತದೆ" ಎಂದು ...ೀಬಿಟ್ಟರಂತಲ್ಲಾ, ಇದನ್ನು ನೋಡಿದ ಚನ್ನಪಟ್ಟಣದ ...ತದಾರರು ಈ ಹಿಂದೆ ದೇವೇಗೌಡರು ಕುಮಾರಸ್ವಾಮಿ ...ತ್ತದ್ದನ್ನು ನೆನೆಸಿಕೊಂಡು "ಅಂತೂ ಮಾವನಿಗೆ ತಕ್ಕ ಸೊಸೆ, ...ಡನಿಗೆ ಹೇಳಿಮಾಡಿಸಿದ ಹೆಂಡತಿ. ಆದ್ದರಿಂದ ನೀನು ...ನೆಯಲ್ಲಿರಲು ಸೂಕ್ತವಾದ ಗೃಹಿಣಿ" ಎಂದು ಅನಿತಕ್ಕನ ...ಗೆ ಆಟಿಕೆ ಕೊಟ್ಟು ಕಳಿಸಿದರಂತಲ್ಲಾ, ಥೂತ್ತೇರಿ!!

****

... ಇತ್ತ ಕರ್ನಾಟಕಕ್ಕೆ ಒಕ್ಕರಿಸಿರುವ ಇನ್ನೊಂದು ...ಟುಂಬದ ಕ್ಯಾಪ್ಟನ್ ಯಡಿಯೂರಪ್ಪ ತನ್ನ ಭವಿಷ್ಯವನ್ನು ...ದಲೇ ನಿರ್ಧರಿಸಿ, ಎಲ್ಲಾ ಮಠಗಳಿಗೂ ಕೈತುಂಬ ಭಿಕ್ಷೆ ಕೊಟ್ಟು, ಎಲ್ಲಾ ಮಠಾಧೀಶರನ್ನು ಯಾಚಕರನ್ನಾಗಿ ಮಾಡಿದ್ದೂ ಅಲ್ಲದೆ, ಅವರೆಲ್ಲ ಒಟ್ಟು ಸೇರಿ ತೀರ್ಮಾನ ತೆಗೆದುಕೊಳ್ಳದಿದ್ದರೂ ಕುಳಿತ ಪೀಠದ ಮೇಲಿಂದಲೇ ಶರಣ ಸಮೂಹವೆಲ್ಲಾ ಎಡೂರಪ್ಪನ ಕೈಗೆ ಕಾಯಿಕೊಡಬೇಕೆಂದು ಕರೆಕೊಟ್ಟಿದ್ದನ್ನು ಜನ ಹೇಗೆ ಗ್ರಹಿಸಿದರೊ ಏನೊ. ಅಂತೂ ಅವರೆಲ್ಲಾ ಯುದ್ಧಿಗೆ ಕೈಕೊಟ್ಟಂತೆ ಕಾಣುತ್ತಿದ್ದಾರಲ್ಲಾ, ಇತ್ತ ಸಿರಿಗೆರೆಯ ಜಗದ್ಗುರು ತನ್ನ ಸಾದ ಜನಾಂಗಕ್ಕೆ "ಸೀದಾ ಹೋಗಿ ಎಡೂರಪ್ಪನಿಗೆ ಶರಣು ಮಾಡಿಬನ್ನಿ" ಎಂಬ ಆಜ್ಞೆ ನೀಡಿದ್ದು ಶಿಕಾರಿಪುರ ಮತ್ತು ಶಿವಮೊಗ್ಗದಲ್ಲಿ ಮಾತ್ರ ಕೆಲಸ ಮಾಡಿದಂತೆ ಕಾಣುತ್ತಿದೆಯಲ್ಲಾ, ಆದರೂ ಸಾದರು ಓಟಾಕಿದ ವ್ಯಕ್ತಿಗೆ ಉಳಿದವರು ಓಟಾಕಲಾರರು ಎಂಬ ನೊಣಬರ ನಾಣ್ಣುಡಿ ನಿಜವಾಗುವಂತೆ ಯುದ್ಧಿ ಕ್ಯಾಂಡಿಡೇಟ್‌ಗಳು ಮಗ್ಗಾಮಲಗಿದರಂತಲ್ಲಾ,

ಇದೆಲ್ಲಕ್ಕಿಂತ ಸ್ವಾರಸ್ಯಕರವಾದ ಸುದ್ದಿಯೆಂದರೆ, ಸಿರಿಗೆರೆ ಶ್ರೀಗಳು "ರಾಜಕಾರಣಿಗಳು ಶುದ್ಧ ಪ್ರಾಮಾಣಿಕ ಚುನಾವಣೆ ನಡೆಸಿ ಠೇವಣಿ ಕಳೆದುಕೊಂಡು ಮನೆಗೆ ಬನ್ನಿ" ಎಂದು ಹೇಳುತ್ತಲೇ ಮಠಕ್ಕೆ ಅವರಿಂದ ದೇಣಿಗೆಯನ್ನು ಕೇಳುವುದು ಯಾವ ನ್ಯಾಯ ಎಂದು ಜನ ತರ್ಕಿಸಿದರಂತಲ್ಲಾ, ಇಂತ ಉಪದೇಶಕ್ಕಿಂತ ಈಗಾಗಲೇ ಮಠದ ಸಂವಿಧಾನದಂತೆ ನಿವೃತ್ತರಾಗಿರುವ ಶ್ರೀಗಳು ದಾವಣಗೆರೆ, ಹೊನ್ನಾಳಿ ಅಥವಾ ಚೆನ್ನಗಿರಿಗೆ ನಿಂತು, ತಮ್ಮದೇ ಸಿದ್ಧಾಂತ ಪ್ರಯೋಗಿಸಿ ಗೆದ್ದು ತೋರಿಸಲಿ ಎಂದು ಸೀದಾ ಸಾದಾ ಸಾದು ಜನಾಂಗದವರೇ ಸವಾಲು ಹಾಕಿದರಂತಲ್ಲಾ, ಥೂತ್ತೇರಿ!!

****



ಸಮಾನ ಅಪರಾಧಿಗಳಿಗೆ ಸಮಾನ ಶಿಕ್ಷೆ ಎನ್ನುವಂತೆ ಕಳೆದ ಐದಾರು ವರ್ಷಗಳಲ್ಲಿ ಕರ್ನಾಟಕದ ಚರಿತ್ರೆ ಕಂಡರಿಯದ ರಾಜಕಾರಣ ಮಾಡಿದ ಚಡ್ಡಿಗಳು ಮತ್ತು ಅವರು ಪವರಿಗೆ ಬರಲು ಕಾರಣರಾದ ದಳದವರಿಗೆ ಕರ್ನಾಟಕದ ಮತದಾರ ತಲಾ ನಲವತ್ತು ಸೀಟು ಕೊಟ್ಟಿರುವುದನ್ನು ನೋಡಿದ ಸಂಖ್ಯಾಶಾಸ್ತ್ರಜ್ಞರು ದಂಗುಬಡಿದು ಹೋಗಿದ್ದಾರಂತಲ್ಲಾ, ಆದರೆ "ಬಿಜೆಪಿಯನ್ನು ಬಗ್ಗುಬಡಿದು ಮಲಗಿಸಿದ ಎಡೂರಪ್ಪನಿಗೆ ಕೇವಲ ಆರು ಸೀಟು ಬರುವುದು ಯಾವ ನ್ಯಾಯ? ಆದರೂ ಆರರ ಸಂಖ್ಯೆಯನ್ನು ವಿಶ್ಲೇಷಣೆ ಮಾಡಿದರೆ ಎಡೂರಪ್ಪ ಮೇಲಕ್ಕೇರಿ ಹೋಗುವುದು ಕಷ್ಟ, ಇನ್ನೇನಿದ್ದರೂ ಕೆಳಕ್ಕೇ ಹೋಗಬಹುದು" ಎಂದು ಸಂಖ್ಯಾಶಾಸ್ತ್ರಿಗಳು ತರ್ಕಿಸುತ್ತಿದ್ದಾರಂತಲ್ಲಾ, ಇದಾವುದಕ್ಕೂ ತಲೆ ಕೆಡಿಸಿಕೊಳ್ಳದ ಎಡೂರಪ್ಪನವರು "ನನ್ನ ತೀವ್ರತರವಾದ ಅಜೆಂಡಾದಂತೆ ಬಿಜೆಪಿಗಳನ್ನು ಮುಗಿಸಿಯಾಗಿದೆ. ಅದಕ್ಕಿಂತಲೂ ಪರಮವೈರಿ, ವಿಶ್ವಾಸಘಾತುಕ, ಕಿರುಬನನ್ನು ನಂಬಿದರೂ ಕುರುಬನನ್ನು ನಂಬಬೇಡ ಎಂಬ ನಮ್ಮವರ ಗಾದೆಯಂತೆ, ಈಶ್ವರಪ್ಪ ಮೂರನೇ ಸ್ಥಾನಕ್ಕೆ ಮಗಚಿಕೊಂಡು ಮಣ್ಣುಮುಕ್ಕಿದ್ದಾನೆ. ಇನ್ನೇನಿದ್ದರೂ ಅಡ್ವಾಣಿಯ ಪಕ್ಕದಲ್ಲಿರುವ ಹಲ್ಲುಗಿಸುಬಿ ಅಮಾನಗೊಂಡರೆ ಮತ್ತೆ ನಾನು ಬಿಜೆಪಿ ಸಾಮ್ರಾಜ್ಯ ಕಟ್ಟುತ್ತೇನೆ. ಶೋಭನನ್ನು ಉಪಮುಖ್ಯಮಂತ್ರಿ ಮಾಡುತ್ತೇನೆ. ಅಲ್ಲಿಯವರೆಗೂ ಮಲಗುವುದಿಲ್ಲ" ಎಂದು ಶಪಥಗೈದರಂತಲ್ಲಾ, ಸದರಿ ಶಪಥವನ್ನು ಅಪಾರ್ಥ ಮಾಡಿಕೊಂಡ ಶೋಭ ಹೊರಟೇಹೋದರಂತಲ್ಲಾ ಥೂತ್ತೇರಿ!!!

****

ಸದರಿ ಚುನಾವಣೆಯ ಫಲಿತಾಂಶದ ಕಾರಣವಾಗಿ ಗಣ್ಯಾತಿಗಣ್ಯರ ಅಭಿಪ್ರಾಯ ಕೇಳಿದರೆ ಹೇಗೆ ಅನ್ನಿಸಿದಾಗ ಮೊದಲು ಹೊಳೆದ ಹೆಸರೇ ಮಾನ್ಯ ದೇವೇಗೌಡರದು. ಆ ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು...

ರಿಂಗ್‌ಟೋನ್: 'ಬಂದದ್ದೆಲ್ಲಾ ಬರಲೀ, ಗೋವಿಂದನ ದಯೆ ಇರಲಿ...'

"ಹಲೋ ಯಾರು?"

"ನಾನು ಸಾರ್ ಯಾಹೂ."

"ಹೇಳಿ ಗುರುಗಳೆ ಏನ್ಸಮಾಚಾರ?"

"ಕಳೆದ ಸಾರ್ತಿಗಿಂತ 12 ಸೀಟು ಜಾಸ್ತಿ ಬಂದಿದೆ ಸಾರ್. ಕಂಗ್ರಾಟ್ಸ್."

"ಆ ಸಂಖ್ಯೆ ತಗೊಂಡು ಏನು ಮಾಡ್ಲಿ. ನನ್ನ ಟಾರ್ಗೆಟ್ ಇದ್ದದ್ದು 54."

"ಮುಂದಿನ ಐದು ವರ್ಷಕ್ಕೆ ಬರೊ ಚುನಾವಣೆಲಿ ಅಷ್ಟು ಸೀಟು ಬರ್ತದೆ ಬಿಡಿ ಸಾರ್."

"ಅಲ್ಲಿವರಿಗೂ ಇರೊರ್‍ಯಾರು?"

"ನೀವಿಲ್ದೆಯಿದ್ರು ನಿಮ್ಮ ಮಕ್ಕಳು, ಮೊಮ್ಮಕ್ಕಳು ಇರತರೆ ಸಾರ್."

"ಇರತರೆ ಸರಿ. ನಮ್ಮ ಹುಡುಗರು ವಿಧಾನಸೌಧದ ಮುಂದೆ ಮಂತ್ರಿ, ಮುಖ್ಯಮಂತ್ರಿಗಳಾಗಿ, ಪ್ರಮಾಣವಚನ ತಗೊಳೋದನ್ನು ನೋಡೋದಿಕ್ಕೆ ದೇವರು ನನಗೆ ಆಯಸ್ಸು ಕೊಡಬೇಕಲ್ಲಾ."

"ಇರತಿರಿ ಸಾರ್. ಸೊಪ್ಪು ಸಾರು ಮುದ್ದೆಗೆ ಶತಾಯುಷ್ಯ ನೀಡೋ ಶಕ್ತಿ ಇದೆ. ಒಂದಿಷ್ಟು ದುರಾಲೋಚನೆ ಕಡಮೆ ಮಾಡಿ ಅಷ್ಟೆ."

"ನಾನೇನು ದುರಾಲೋಚನೆ ಮಾಡಿದೆ ಗುರುವೇ?"

"ಏನಿಲ್ಲ ಸಾರ್, ಚುನಾವಣೆ ಹಿಂದಿನ ದಿನ ನೀವೊಂದು ಪತ್ರಿಕಾ ಜಾಹೀರಾತು ಕೊಟ್ಟಿದ್ದೀರಿ. ಅದರಲ್ಲಿ ದುರಾಡಳಿತ ನಡೆಸಿದ ಬಿಜೆಪಿ ಬಿಟ್ಟು, ಆ ಸೋಮಾರಿ ಕಾಂಗ್ರೆ ಪಾರ್ಟಿ ತಪ್ಪನ್ನ ಪಟ್ಟಿ ಮಾಡಿ ಜಾಹೀರಾತು ಕೊಟ್ಟಿದ್ದೀರಿ. ಇದು ಶುದ್ಧ ಕುತಂತ್ರಿ ಕೆಲಸ. ಮತ್ತೆ ಲೋಬಿ ಮಾತ್ರ ಈ ತರದ ಆಲೋಚನೆ ಮಾಡ್ತನೆ ಅಂತ ಕರ್ನಾಟಕದ ಪ್ರಜ್ಞಾವಂತ ಜನ ಮಾತಾಡಿಕೊಂಡ್ರು. ಇದು ಸರಿನಾ ಸಾರ್..."


"ಹಲೋ ಮಾತಾಡಿ ಸಾರ್."

"ಹಲೋ ಹಲೋ??"

"ಥೂತ್ತೇರಿ!!!"

****

"ಇನ್ನ ಇಪ್ಪತ್ತು ವರ್ಷ ಬಿಜೆಪಿ ಅಧಿಕಾರದಲ್ಲಿರುತ್ತೆ, ಇಲ್ಲ ಅಂದ್ರೆ ಹದಿನೈದು ವರ್ಷ ಗ್ಯಾರಂಟಿ. ಕಾಂಗ್ರೆಸ್ಸಿನವರು ಸರ್ವನಾಶವಾಗ್ತರೆ. ಗೋಮಾಂಸ ಭಕ್ಷಣೆ ಮಾಡೋರ ಗಂಟಲು ಸೀಳಬೇಕು. ಮಾರೋರ ಕೈಕಡಿಬೇಕು. ಮುಸ್ಲಿಮರ ಉಪಟಳ ಸೈಸಕ್ಕಾಗಲ್ಲ, ಸುಮಾರು ಅರವತ್ತು ಮೂರು ಜನ ವಿಪ್ರ ಕನ್ಯೆಯರನ್ನು ಜೆಹಾದಿಗಳು ಹಾರಿಸಿಕೊಂಡು ಹೋಗಿದ್ದಾರೆ. ಇದನ್ನಂತೂ ಸಹಿಸಲು ಸಾಧ್ಯವೇ ಇಲ್ಲ..." ಇಂತ ಹೇಳಿಕೆ ಕೊಡುತ್ತಿದ್ದ ಈಶ್ವರಪ್ಪನ ದನಿ ಮುಳುಗಿಹೋದದಕ್ಕೆ ಶಾನೆ ಬೇಸರವಾಗಿ ಫೋನ್ ಮಾಡಬೇಕೆನಿಸಿತಲ್ಲಾ, ಫೋನ್ ಮಾಡಿದರೆ ರಿಂಗಾಯ್ತು,



ರಿಂಗ್ ಟೋನ್: "ಯಥಾಯಥಾಹಿ ಧರ್ಮಸ್ಯ..."

"ಹಲೋ ಯಾರ್‍ರಿ?"

"ನಾನು ಸಾರ್ ಯಾಹೂ."

"ಆಮೇಲೆ ಮಾಡ್ರಿ. ನಾನು ಮನಗಿದ್ದಿನಿ."

"ಮನಿಕಂಡೆ ಮಾತಾಡಿ ಸಾರ್."

"ನಿಮ್ಮ ಚಾಳಿ ಬಿಡ್ಲೆಯಿಲ್ಲ ಕಂಡ್ರಿ ನೀವು. ಮಲಗಿದ್ದಿನಿ ಅಂತಿನಿ ಮಾತಾಡಿ ಅಂತಿರಿ."

"ಸಾರಿ ಸಾರ್. ಈ ಸೋಲ ನಿರೀಕ್ಷೆ ಮಾಡಿದ್ರ ಸಾರ್?"

"ನಾನು ಯಾವುದ್ನು ನಿರೀಕ್ಷೆ ಮಾಡಿರಲಿಲ್ಲ ಕಂಡ್ರಿ. ಬರೀ ಶಾಸಕನಾಗಿದ್ದೇ ರಾಜಕಾರಣ ಮುಗುಸ್ತಿನಿ ಅನ್ಕೊಂಡಿದ್ದೆ. ಮಂತ್ರಿಯಾದೆ. ಉಪಮುಖ್ಯಮಂತ್ರಿಯಾದೆ. ಇನ್ನೇನಾಗಬೇಕ್ರಿ ಇದರ ಮುಂದೆ. ಜುಜುಬಿ ಸೋಲು ನನ್ನನ್ನ ಏನು ಮಾಡಕ್ಕಾಗಲ್ಲ."

"ನಿಜ ಸಾರ್. ಅಧಿಕಾರನೆ ಇಲ್ದೆ ಮನೆಗೋಗತಿದ್ದೋರಿಗೆ ಇಂತ ಸ್ಥಾನಮಾನ ಸಿಕ್ಕಿದ್ದು ಆಶ್ಚರ್ಯ. ಅದಕ್ಕೆ ಕಾರಣ ಅಪ್ಪ ಮಕ್ಕಳು. ಈಗ್ಲು ಅವುರ ಜೊತೆ ಸೇರಿ ಸರಕಾರ ಮಾಡಕ್ಕೆ ತಯಾರಿ ನಡೆಸಿದ್ರಂತಲ್ಲಾ ಸಾರ್."

"ತಯಾರಿ ನಡೆಸಿರಲಿಲ್ಲ ಆದ್ರು ಶೆಟ್ಟರ್ ಮುಖ್ಯಮಂತ್ರಿ, ರೇವಣ್ಣ ಉಪಮುಖ್ಯಮಂತ್ರಿ ಅಂತ ಚರ್ಚೆ ಆಗ್ತಾಯಿತ್ತು."

"ರೇವಣ್ಣ ಉಪಮುಖ್ಯಮಂತ್ರಿಯಾಗಿದ್ರೆ ನಿಮ್ಮ ಕತೆ?"

"ಶೆಟ್ಟರ್ ಇಳಿಸಿ ನಾನಾಗ್ತಿದ್ದೆ. ಆನಂತರ ಅಶೋಕ. ಹಿಂಗೆ ಲೆಕ್ಕಾಚಾರ ಇತ್ತು ಕಂಡ್ರಿ. ಈ ಹಾಳು ಯಡೂರಪ್ಪ ಎಲ್ಲಾನು ಹಾಳು ಮಾಡಿಬುಟ್ಟ. ನನಗೆ ಈ ಕಡೆ ಲಿಂಗಾಯತ್ರ ಓಟೂ ಇಲ್ಲ, ಆ ಕಡೆ ಬ್ರಾಹ್ಮಣರ ಓಟೂ ಇಲ್ಲ ಅಂಗಾಯ್ತು."

"ಬ್ರಾಹ್ಮಣರ ಬೋದೋರು ಉದ್ಧಾರ ಆಗಿಲ್ಲ ಸಾರ್. ನೋಡಿ ಆ ಕೆ.ಹೆಚ್. ಶ್ರೀನಿವಾಸನ ವನವಾಸ ಇನ್ನೂ ತಪ್ಪಿಲ್ಲ."

"ಶ್ರೀನಿವಾಸ ಏನು ಬೈದಿದ್ರೂ?"

"ಅವನು ನಿಮ್ಮೆದುರಿಗೆ ಚುನಾವಣೆಗೆ ನಿಂತಾಗ 'ಬ್ರಾಹ್ಮಣರು ಬಿಡಿ ಊಟ ಹಾಕಿ, ದಕ್ಷಿಣೆ ಕೊಟ್ರೆ ಓಟು ಮಾಡ್ತರೆ' ಅಂದಿದ್ದ. ಇದು ವಿಪ್ರೋತ್ತಮರಿಗೆ ತಲುಪಿ ಉರಿಯುತ್ತಿಗತ್ತು. ಸರಿಯಾಗಿ ಬರೆಯಳದ್ರು. ಈಗ್ಲು ನೀವು ಬ್ರಾಹ್ಮಣರ ಹೆಣ್ಣುಮಕ್ಕಳನ್ನು ಮುಸ್ಲಿಂ ಯುವಕರು ಹಾರಿಸಿಗಂಡೊಗಿದಾರೆ ಅಂದ್ರಿ. ಇದು ಸ್ವಲ್ಪ ನಿಜ ಇದ್ರೂ ಬ್ರಾಹ್ಮಣರು ಸಿಟ್ಟಾದ್ರು. ನಾವು ನಮ್ಮ ಹೆಣ್ಣು ಮಕ್ಕಳನ್ನು ಕಾಪಾಡಿಕಳಕ್ಕಾಗದ ದುರ್ಬಲ ಜನಗಳೆ? ಈ ಕುರುಬರ ಈಶ್ವರಪ್ಪ ಸಾರ್ವಜನಿಕ ಸಭೇಲಿ ನಮ್ಮ ಮಾನ ಕಳದಿದಾನೆ. ಅವನಿಗೆ ಒಂದು ಓಟನೂ ಕೊಡಬೇಡಿ ಅಂದ್ರು. ಅದೇ ರೀತಿ ನಡಕೊಂಡ್ರು. ಅಲ್ಲದೆ ಅವರ ಜಾತಿ ಕ್ಯಾಂಡೇಟಿದ್ದ. ನೀವು ಕಿಸಗೊಂಡು ಬಿದ್ರಿ. ಯಾವಾಗ್ಲು ಬ್ರಾಹ್ಮಣರನ್ನ ಬೈಬೇಡಿ ಸಾರ್. ಅವುರಿಗೇ ಹುಟ್ಟಿದೋರಂಗೆ ನಡಕೊಂಡ್ರೆ ಚೆನ್ನಾಗಿರಬವುದು."

"ನಾನಂಗೆ ಅಲವೇನ್ರಿ ಇದ್ದಿದ್ದು. ಅವುರೀತರ ಮಾಡ್ತರೆ ಅಂತ ನಾನು ನಂಬಿರಲಿಲ್ಲ."

"ಥೂತ್ತೇರಿ!!!"


ಪ್ರಶಾಂತ ಕೊಳದ ಅಲೆಗಳು

... ಒಬ್ಬ ತೀರಿಕೊಂಡಕೂಡಲೆ 'ಅವನು ಇನ್ನು ಇಲ್ಲ' ಎನ್ನಲಾಗುವುದಿಲ್ಲ, ...ಮೇಲೆ ಆತ ಭೂತವಾಗಿದ್ದಾನೆ ಎಂದು ನಾನು ಸೂಚಿಸುತ್ತಿಲ್ಲ, 'ಅವನ ... ನಮ್ಮನ್ನು ನೋಡುತ್ತಿದ್ದ' ಎಂದು ಕೂಡ ಹೇಳಲು ಇಷ್ಟಪಡುವುದಿಲ್ಲ ...ಹೇಳಿದರೆ ಅಂಥ ಮಾತುಗಳೆಲ್ಲ ಮೌಢ್ಯ ಅನ್ನಿಸಿಕೊಳ್ಳುತ್ತವೆ. ...ಲ್ಲಿ ಸುಳ್ಳು ಕೂಡ. ಆದರೆ ಒಬ್ಬನ ಕೊಲೆ ಮಾಡಿದವನು ... ಬಲೆಗೆ ಬೀಳುತ್ತಾನೆ ಎನ್ನುವುದನ್ನು ನೋಡಿದರೆ ...ನು ಹೇಗೆ ಸೂಕ್ಷ್ಮ ರೀತಿಯಲ್ಲಿ ನಮ್ಮಲ್ಲಿ ಉಳಿಯುತ್ತಾನೆ ...ದು ತಿಳಿಯುತ್ತದೆ. ಕೊಲೆಗಳಲ್ಲಿ ಕೂಡ ನಾನಾ ಬಗೆ ...ವುದು ಈ ಸಮಸ್ಯೆಯ ಕಷ್ಟಗಳನ್ನು ಹೆಚ್ಚಿಸುತ್ತದೆ. ಈ ...ಲೆಗಳಲ್ಲಿ ನನಗೆ ನಿಜಕ್ಕೂ ವಿಚಿತ್ರವಾಗಿ ಕಾಣಿಸುವುದು ...ವನು ಸಾವು. ನೀವು ಕೋಮಲ ಮನಸ್ಸಿನವರಾಗಿದ್ದರೆ ...ನು ಕಾಯಿಲೆಯನ್ನು ನೀವು ಎಷ್ಟೇ ಜತನದಿಂದ



ನೋಡಿಕೊಂಡರೂ ಆಕೆಯ ಸಾವು ನಿಮ್ಮಲ್ಲಿ ಅಳುಕು ಬಿಡುತ್ತದೆ. ಆಕೆ ನಿಮಗೆ ಕೊಟ್ಟಷ್ಟನ್ನು ನೀವು ಆಕೆಗೆ ಕೊಡಲಾಗಲಿಲ್ಲ ಎಂಬ ನೋವು ನಿಮ್ಮಲ್ಲಿ ಉಳಿಯುತ್ತದೆ. ಇದರಿಂದಾಗಿಯೇ ಕೋಟ್ಯಂತರ ಸ್ಮಾರಕಗಳೂ ಗೋರಿಗಳೂ ಹೂಳುವ ಸುಡುವ ಬೂದಿಯನ್ನು ಎಲ್ಲೆಲ್ಲೂ ಚೆಲ್ಲುವ ಕ್ರಿಯೆಗಳೂ ಕಂಡುಬರುತ್ತವೆ; ಹಾಗೆಯೇ ಶ್ರಾದ್ಧ, ದಿನಕರ್ಮ, ಹಿರಿಯರ ಪೂಜೆ ಇತ್ಯಾದಿಯೆಲ್ಲಾ ಆಚರಣೆಯಲ್ಲಿವೆ.

ಆದರೆ ಮನುಷ್ಯ ಮಹಾ ವಿಚಾರವಾದಿಯೂ ತರ್ಕಜೀವಿಯೂ ಆಗಿದ್ದರೆ ಸಾವನ್ನು ಕುರಿತು ಜನಸಾಮಾನ್ಯರ ಆಚರಣೆಗಳೆಲ್ಲ ಹಾಸ್ಯಾಸ್ಪದವಾಗಿ ಕಾಣುತ್ತವೆ. ಅದು ಕೂಡ ಕೇವಲ ಸಿನಿಕತನ. 'ಅಳಿದ ಮೇಲೆ' ಕಾದಂಬರಿಯಲ್ಲಿ ಕಾರಂತರು ಚಿಂತಿಸುವಂತೆ 'ಉಳಿದಿದ್ದೇನು' ಎಂದು ನೋಡುತ್ತಾ ಹೋಗುವುದು ಪೋಲಿತನ; ಮತ್ತು ಆ ಪೋಲಿತನಕ್ಕೆ ವಿರುದ್ಧವಾದ ನಿರ್ಲಿಪ್ತತೆ ಕೂಡ ಜೀವವಿರೋಧಿ ಕ್ರಿಯೆ. ಈ



ಬಗ್ಗೆ ಸಂಪ್ರದಾಯದ ಸರಳ ವಿಶ್ವಾಸ, ಸತ್ತವರ ಬಗ್ಗೆ ನಿಟ್ಟುಸಿರು, ಸತ್ತವರ ಬಗ್ಗೆ ಬದುಕಿರುವವರು ಅನುಭವಿಸುವ ಸಣ್ಣ ದೈಹಿಕ ಶ್ರಮ, ತ್ಯಾಗ ಒಂದು ರೀತಿಯಲ್ಲಿ ಮನುಷ್ಯನ ಸಂಪತ್ತನ್ನು ಹೆಚ್ಚಿಸುತ್ತವೆ. ಮನುಷ್ಯ ಗಿಡಮರ ಪ್ರಾಣಿಪಶುಗಳ ಬಗ್ಗೆ ಎಷ್ಟೇ ಒಲವು ತೋರಿದರೂ ಆತನಂತೆಯೇ ಆಸೆ, ನಿರಾಶೆ, ಕನಸು, ಕ್ರಿಯೆಗಳಲ್ಲಿ ಮುಳುಗಿದ ಮನುಷ್ಯನೊಂದಿಗೆ ಸೇತುವೆಗಳನ್ನು ನಿರ್ಮಿಸಿಕೊಂಡಿರುತ್ತಾನೆ. ಮಾತುಗಳನ್ನು ಮೀರಿ ಜೊತೆಯವರನ್ನು ಸಂಪರ್ಕಿಸುವುದು, ಪ್ರೀತಿಯಿಂದಲೇ ಪ್ರೀತಿ ಗಳಿಸುವುದು ಇದರಿಂದಾಗಿಯೇ; ಉಗ್ರ ಏಕಾಂಗಿತನ ಬರಡುತನದಲ್ಲಿ ಪರ್ಯವಸಾನಗೊಳ್ಳುತ್ತದೆ; ವಾಲ್ಮೀಕಿ ಕೂಡ ಧ್ಯಾನದಿಂದ ಮಾನವ ಕೋಟಿಯೊಂದಿಗೆ ಸಂಬಂಧ ನಿರ್ಮಿಸಿಕೊಂಡಿರುತ್ತಾನೆ.


ಮನುಷ್ಯನ ನಾಟಕದಲ್ಲಿಯೇ ದುರಂತ ಕೂಡ ಅಡಗಿರುತ್ತದೆ; ವಿನೋದ ನಮಗೆ ತಕ್ಕ ಸಂಪರ್ಕ ಒದಗಿಸದೆ ಹೋದಾಗ ದುರಂತವನ್ನು ನೆಟ್ಟುಕ್ಕೇವೆ.


• ಮಾರ್ಚ್ 25, 1998

ಸ್ಥಳ ಮಹಾತ್ಮೆ!

ಹಿಂದೂ ಸಂಸ್ಕೃತಿಯ ಸರ್ವನಾಶವೇ ಚುನಾವಣಾ ಆಯೋಗದ ಹಿಡನ್ ಅಜೆಂಡಾ ಇರುವಂತಿದೆ. ಯಾವುದೇ ಕೆಲಸ ಇರಲಿ. ಅದನ್ನು ಪ್ರಾರಂಭಿಸುವುದಕ್ಕೆ ಮೊದಲು ಪೂಜೆ ಮಾಡಬೇಕು. ಇದು ಸಂಪ್ರದಾಯ. ಭಗವಂತನ ಕೃಪಾಶೀರ್ವಾದದಿಂದ ಎಲ್ಲವೂ ನಿರ್ವಿಘ್ನವಾಗಿ ನೆರವೇರಲಿ ಎಂಬುದು ಇದರ ಸದುದ್ದೇಶ. ಚುನಾವಣೆ ಅಂತ ಪವಿತ್ರ ಕಾರ್ಯ. ಇದನ್ನು ಪ್ರಜಾಪ್ರಭುತ್ವದ ಹಬ್ಬ ಎಂದೂ ಕರೆಯಲಾಗುತ್ತದೆ. ಈ ಹಬ್ಬದಲ್ಲಿ ಮತ ಪೆಟ್ಟಿಗೆಯದ್ದು ಪ್ರಮುಖ ಪಾತ್ರ. ಯಾವುದೇ ಅಡೆತಡೆಗಳಿಲ್ಲದೆ ಹಬ್ಬ ಸುಸೂತ್ರವಾಗಿ ನಡೆಯಲಿ ಎಂದು ಮತಪೆಟ್ಟಿಗೆಗೆ ಪೂಜೆ ಸಲ್ಲಿಸುವುದು ನಡೆದುಬಂದಿರುವ ಸಂಪ್ರದಾಯ. ಇದನ್ನು ಮುರಿಯಲು ಆಯೋಗ ಟೊಂಕಕಟ್ಟಿ ನಿಂತಿರುವಂತಿದೆ. ಹೀಗೆ ಪೂಜೆ ಮಾಡುವುದು ನೀತಿಸಂಹಿತೆಯ ಉಲ್ಲಂಘನೆ ಎಂದು ಚುನಾವಣಾ ಆಯೋಗ ಸಾರಿದೆ! ಆಯೋಗದ ಆಜ್ಞೆಯನ್ನು ಮೀರಲಾಗದ ಆಸ್ತಿಕ ಅಭ್ಯರ್ಥಿಗಳು ತಮ್ಮ ಬಲಗೈ ಅನ್ನು ಎದೆಯ ಮೇಲಿಟ್ಟು ಮತಯಂತ್ರದ ಸಮೀಪ ನಿಂತು ತಲೆಬಾಗಿಸಿ ಪ್ರಾರ್ಥಿಸುವುದಕ್ಕೇ ತಮ್ಮ ಭಕ್ತಿಯನ್ನು ಸೀಮಿತಗೊಳಿಸಿಕೊಳ್ಳಬೇಕಾಗಿದೆ!

ಇದು ಒಂದು ಆಯಿತು. ಚುನಾವಣಾ ಆಯೋಗ ಹಿಂದೂ ಸಂಸ್ಕೃತಿಯ ಅರಿವೇ ಇಲ್ಲದವರನ್ನೇ ಆಯ್ಕೆ ಮಾಡಿ ಚುನಾವಣಾ ಪ್ರಕ್ರಿಯೆಗೆ ನೇಮಿಸಿರುವಂತಿದೆ. ಮತಕೇಂದ್ರ ಊರಿನ ಉತ್ತರ ಭಾಗದಲ್ಲಿರಬಾರದು. ಅದು ಅಶುಭ ಎನ್ನುತ್ತದೆ ವಾಸ್ತು. ಈ ಅನಿಷ್ಟ! ಮುದ್ದು ಮಗನತ್ತ ನೋಡಿದರು. ಇದನ್ನು ಅರಿಯದ ಪಾಷಂಡಿಗಳು ದಿಕ್ಕುಗಳನ್ನು ಪರಿಗಣಿಸುತ್ತಿಲ್ಲ, ಎಲ್ಲೆಂದರಲ್ಲಿ ಕೇಂದ್ರಗಳನ್ನು ಸ್ಥಾಪಿಸುತ್ತವೆ. ಇದನ್ನು ಹೇಗಾದರೂ ಸಹಿಸಿಕೊಳ್ಳೋಣ. ಅಂದರೆ ಮತಯಂತ್ರಗಳನ್ನಾದರೂ ವಾಸ್ತು ರೀತಿ ಇಡಬೇಕಾಗಿತ್ತು. ಆದರೆ ಹೀಗೆ ಮಾಡಲಾಗುತ್ತಿಲ್ಲ. ಪಡುವಲಹಿಪ್ಪೆಯ ಮತಕೇಂದ್ರವೇ ಇದಕ್ಕೆ ಜ್ವಲಂತ ಸಾಕ್ಷಿ. ಈಶಾನ್ಯ ದಿಕ್ಕಿನಲ್ಲಿ ಮತಯಂತ್ರವನ್ನು ಯಾವುದೇ ಕಾರಣಕ್ಕೂ ಇಡಬಾರದು. ಅದು ಅಶುಭ ಸೂಚಕ- ಆದರೆ ಅಲ್ಲಿ ಹಾಗೆ ಇಡಲಾಗಿತ್ತು! ಮತ ಚಲಾಯಿಸಲು ಹರದನಹಳ್ಳಿ ದೇವೇಗೌಡರ ಕುಟುಂಬ ಬಂದಿತು. ಮತಯಂತ್ರ ಇಟ್ಟಿರುವ ಸ್ಥಳ ನೋಡಿತು. ಹೌಹಾರಿತು. ಮತ ಹಾಕುವುದಕ್ಕೆ ಮೊದಲೇ ಅಪಶಕುನ! ಹೀಗೆ ಆತಂಕಗೊಳ್ಳಲು ಕಾರಣವೂ ಇತ್ತು. ಪ್ರಖ್ಯಾತ ಜ್ಯೋತಿಷಿ, ರೇವಣ್ಣನವರಿಗೆ 'ಮಹಿಳೆಯಿಂದ ಸೋಲು' ಎಂದು ಭವಿಷ್ಯ ಹೇಳಿದ್ದರು! ದುರಾದೃಷ್ಟಕ್ಕೆ ರೇವಣ್ಣನವರ ಎದುರಾಳಿ ಅನುಪಮಾ ಎಂಬ ಮಹಿಳೆ! ಈ ಮಹಿಳಾ ದೋಷದಿಂದ ಮುಕ್ತರಾಗಲು ದೇವೇಗೌಡರು ಮತಗಟ್ಟೆಯ ಮುಂದೆ ಕಾರಿನಲ್ಲಿ ಸುಮಾರು ಹದಿನೈದು ನಿಮಿಷ ಕುಳಿತು





ವಿಷ್ಣು ಸಹಸ್ರನಾಮ ಜಪಿಸುತ್ತಿದ್ದರು. ನಂತರ ಒಳಕ್ಕೆ ಬಂದರೆ ಚುರುಕಾದರು ವಾಸ್ತು, ಜ್ಯೋತಿಷ್ಯ ಪ್ರೇಮಿ ರೇವಣ್ಣ ಕ್ಷಣಮಾತ್ರದಲ್ಲಿ ಮತಯಂತ್ರದ ಬಳಿ ತೆರಳಿದರು. ಅದರ ದಿಕ್ಕನ್ನು ಒಂದು ಸಲ ಅಲ್ಲ. ಮೂರು ಸಲ ಬದಲಾಯಿಸಿದರು! ಈಶಾನ್ಯ ದಿಕ್ಕಿಗಿಟ್ಟು ಆಗಬಹುದಾದ ಅನಾಹುತ ತಪ್ಪಿಸಿದರು! ಚುನಾವಣಾ. ಆಯೋಗದಲ್ಲಿ ಮನವಿ: ಮತಗಟ್ಟೆಗಳ, ಮತಯಂತ್ರಗಳ ಸ್ಥಳಗಳ ಆಯ್ಕೆ ವಾಸ್ತು ಪಂಡಿತರ ಸೂಚನೆಯಂತಿರಲಿ!

* * * *

ಅಣಕ



• ಎಚ್.ಎಲ್.ಕೇಶವಮೂ...

ಜ್ಯೋತಿಷ್ಯ ಅಂದಾಗ ನೆನಪಾಯಿತು. ದಕ್ಷಿಣ ಭಾರತದ ಮಠಗಳು ದೇಶದಲ್ಲಿ ಬಹಳ ಖ್ಯಾತಿ ಪಡೆದಿವೆಯಂತೆ. ಅಧ್ಯಾತ್ಮ ಪಾಲನೆ ಮಾಡುತ್ತವೆ ಎಂದು ಅಲ್ಲವಂತೆ. ಭ್ರಷ್ಟರ ಕಪ್ಪು ಹಣ ಜೋಪಾನ ಮಾಡುವುದರಲ್ಲಿ ಜಾಣರು ಎಂದಂತೆ. ಉತ್ತರ ಭಾರತದಲ್ಲಿ ಮಠಗಳೇ ಇಲ್ಲವೆ ಅಂದರೆ ಬೇಜಾನಾಗಿ ಇವೆಯಂತೆ. ಕಳ್ಳ ವ್ಯವಹಾರಕ್ಕೆ ಕೈ ಹಾಕುವುದಿಲ್ಲವಾ ಎಂದರೆ ಅದೂಅಲ್ಲವಂತೆ. ಗುಟ್ಟಾಗಿ ಕೊಟ್ಟರೋ ಹಣವನ್ನು ಗುಟ್ಟಾಗೇ ಕರಗಿಸಿ ಮೇಲುಕೋಟೆ ನಾಮ, ನಂಜನಗೂಡಿನ ಮೇರ್ತಗೆ ಹಚ್ಚುವವರೇ ಹೆಚ್ಚಂತೆ. ಹಿಂಗಾಗಿ ಭ್ರಷ್ಟರೆಲ್ಲ ಹಣದ ಮೂಟೆ ಸಹಿತವಾಗಿ ದಕ್ಷಿಣ ಭಾರತದ ಮಠಗಳಿಗೆ ಬಂದು ಸ್ವಾಮಿಗಳಿಂದ ಆಶೀರ್ವಾದ ಪಡೆಯುತ್ತಾರಂತೆ!

ಈ ಮಠಗಳು ಇದಾವಲ್ಲಾ, ಅವುಗಳ ಆದಾಯ ವೆಚ್ಚ ಸರ್ಕಾರದ ನಿಯಂತ್ರಣದಲ್ಲಿ ಇಲ್ಲವಂತೆ. ಹಿಂಗಾಗಿ ಕಾಂಜಿಪಿಂಜಿಗಳೆಲ್ಲ ಒಂದಿಷ್ಟು ನೆಲ, ಒಂದು ದೇವರು ಹಿಡಿದುಕೊಂಡು ಸ್ವಾಮಿಗಳಾಗುತ್ತಾ ಇದಾರಂತೆ. ಕಾವಿ ತೊಟ್ಟೋರೆಲ್ಲ ಅಧ್ಯಾತ್ಮ ಚಿಂತಕರು, ಸರ್ವಸಂಗ ಪರಿತ್ಯಾಗಿಗಳು ಅನ್ನೋ ನಂಬಿಕೆ. ಜೊತೆಗೆ ಒಂದಿಷ್ಟು ಸಂಸ್ಕೃತ, ಚೂರುಪಾರು ಇಂಗ್ಲಿಷು, ಒಂದಿಷ್ಟು ಜ್ಯೋತಿಷ್ಯ ಇದ್ದರೆ ಭೂಮಿಗಿಳಿದ ಭಗವಂತನೇ ಆಗ್ತಾನಂತೆ!

ಈ ಜಾತಿಗೆ ಸೇರಿದೋನು ಚಂದ್ರಶೇಖರ ಸ... ಅಂತ ಕಾಣುತ್ತೆ. ಅವನ ಮನೆ ಮೇಲೆ ದಾಳಿ ನಡಿ... ಹಾಗೆ ಮಾಡಿದವರು ಕಳ್ಳಕಾಕರಲ್ಲ. ಕಳ್ಳಕಾಕರನ್ನ ಹಿಡಿಯೊ... ಚುನಾವಣಾ ಅಧಿಕಾರಿಗಳು, ಆದಾಯ ತೆ... ಇಲಾಖೆಯವರು. ದಾಳಿ ನಡೆದಾಗ 15 ಕೆಜಿ ... ಅರವತ್ತು ಕೆಜಿ ಬೆಳ್ಳಿ ಅಲ್ಲದೆ 1.10 ಕೋಟಿ ರೂಪಾ... ಹಣ ಸಿಕ್ಕಿತಂತೆ.

ಅಲ್ಲಾ ಅವನು ಜ್ಯೋತಿಷಿಯಂತೆ. ದೇಶದ ಪ್ರ... ವ್ಯಕ್ತಿಗಳಿಗೆಲ್ಲ ಭವಿಷ್ಯ ಹೇಳಿದ್ದಾನಂತೆ. ಅವನ ಮನೆ ಮೇ... ದಾಳಿ ನಡೆಯುತ್ತೆ ಅಂತ ಅವನಿಗೇ ತಿಳಿದಿರಲಿಲ್ಲ!

ಏನು ಜ್ಯೋತಿಷಿ! ಎಂತಹ ಜ್ಯೋತಿಷ್ಯ!

ಇದು ಹಾಗಿರಲಿ. ಈ ಸುದ್ದಿ ಕೇಳಿ ಮಠಾಧೀಶರು... ಬೆಚ್ಚಿಬಿದ್ದಿದ್ದಾರಂತೆ! 'ಚುನಾವಣೆ' ನೆಪದಲ್ಲಿ ಹಿಂಗೆಲ್ಲ ಮ... ಇದಾರಲ್ಲ, ಮಠಗಳಿಗೂ ಇದನ್ನು ವಿಸ್ತರಿಸಿದರೆ ... ಮಾಡೋದು, ಹೆಂಗಪ್ಪ ಬದುಕೋದು ... ಕಾವಿಧಾರಿಗಳಿಗೆ ಕಾವಿ ಒಳಗಿನ ಕಚ್ಚೆ ಪಾ... ಕಿತ್ತಾಕಿದಂಗಾಯ್ತು ಅದಂತೆ!

ಕ್ಷುದ್ರ ದೇವತೆಗೆ ಸುಪಾರಿ

ಡಿ.ಕೆ. ಶಿವಕುಮಾರ್‌ಗೆ ಪ್ರಾಣ ಭಯ ಅಂತೆ!

ಇವರನ್ನು ಕಂಡರೆ ಇತರರು ಭಯ ಬೀಳಬ... ಅಂತಹ ವ್ಯಕ್ತಿತ್ವ ಇವರದ್ದು!

ಇವರಿಗೇ ಭಯವೆ?

ಇದೊಂದು ಸುಪಾರಿ ಕೇಸು. ಮನುಷ್ಯರಿಗೆ ಕೊ... ಅವರಪ್ಪನಂತಹ ಜನರಿದ್ದಾರೆ ಇವರ ಹತ್ತಿರ.

ಆದರೆ....

ಸುಪಾರಿ ಕೊಟ್ಟಿರೋದು ಕ್ಷುದ್ರದೇವತೆಗಳಿಗೆ!

ಯಾರು ಕೊಟ್ಟವರು? ಯಾಕೆ ಕೊಟ್ಟರು?

ಪಿ.ಜಿ.ಆರ್. ಸಿಂಧ್ಯ! ಸೋಲುವ ಭಯಕ್ಕೆ!

ಇವರು ಸತ್ತರೆ ಅವರಿಗೆ ಜಯ!

ಒಂದು ಕಡೆ ಅಲ್ಲ, ಎರಡು ಕಡೆ ಅಲ್ಲ, ಒಂ...

ಸಂಘ ಪರಿವಾರದಿಂದ ಸ್ವಾಮಿ ವಿವೇಕಾನಂದರ ಕೇಸರೀಕರಣ

"ಹಸಿದವನಿಗೆ ಅನ್ನವ ಕೊಡದ, ವಿಧವೆಯ ಕಣ್ಣೀರನ್ನು ಒರೆಸದ, ದುರ್ಬಲ ಜನರನ್ನು ಗುಲಾಮಗಿರಿಗೆ ಒಳಪಡಿಸುವ ಯಾವುದೇ ಧರ್ಮದಲ್ಲಿ ನನಗೆ ನಂಬಿಕೆ ಇಲ್ಲ" - ಸ್ವಾಮಿ ವಿವೇಕಾನಂದರ ಈ ಮಾತು ಎಷ್ಟು ಅರ್ಥಪೂರ್ಣವಾಗಿದೆ. ಸಮಾಜದ ಮೇಲೆ ಇರತಕ್ಕಂತಹ ಅವರ ಸಾಮಾಜಿಕ ಕಳಕಳಿ ಮತ್ತು ನೋವನ್ನು ಇದು ಪ್ರತಿಪಾದಿಸುತ್ತದೆ. ಇಂದಿನ ಆಧುನಿಕ ಯುಗದಲ್ಲಿಯೂ ಯಾವುದೇ ಮಠಾಧೀಶರ ಬಾಯಿಯಿಂದ ಇಂತಹ ಮಾತು ಬರಲು ಸಾಧ್ಯವೇ? ಇಂತಹ ಶ್ರೇಷ್ಠ ಸಮಾಜ ಸುಧಾರಕ ಮಹಾನ್ ಮಾನವತಾವಾದಿ, ಸರ್ವಧರ್ಮ ಸಹಿಷ್ಣು ಮಾನವ ಧರ್ಮ ಪ್ರತಿಪಾದಕ ಸ್ವಾಮಿ ವಿವೇಕಾನಂದರನ್ನು ಇತ್ತೀಚಿನ ದಿನಗಳಲ್ಲಿ ಸಂಘ ಪರಿವಾರ ಹಿಂದೂತ್ವವೆಂಬ ಫ್ಯಾಸಿಸ್ಟ್ ಪ್ರತಿಪಾದಕರೆಂಬಂತೆ ಬಿಂಬಿಸುತ್ತಾ ಹಿಂದೂ ಕೋಮುವಾದಿಯಾಗಿ ಚಿತ್ರಿಸುತ್ತಿರುವುದು - ಅದರಲ್ಲೂ ಇತ್ತೀಚೆಗೆ ನಡೆದ ಆರ್.ಎಸ್.ಎಸ್‌ನ ಮಹಾ ಸಾಂಘಿಕ್‌ನಲ್ಲಿ - ಸಂಘ ಪರಿವಾರದ ಪ್ರಮುಖರೊಬ್ಬರು ವಿವೇಕಾನಂದರ ವಿಚಾರಗಳಲ್ಲಿ ಮುಂದುವರಿಯುತ್ತಾ "ಅವರ ಕನಸನ್ನು ಸಾಕಾರಗೊಳಿಸುವುದು ನಾವು ಮಾತ್ರವೇ. ನಾವೇ ವಿವೇಕಾನಂದರ ವಾರಸುದಾರರು" ಎಂಬಂತಹ ಮಾತುಗಳನ್ನಾಡಿದ್ದಾರೆ.



ಹಾಗೆಯೇ ಇತ್ತೀಚೆಗೆ ಒಂದು ಪತ್ರಿಕೆಯ ಲೇಖನದಲ್ಲಿ ಭರತ್ ಭಟ್ಟರೆಂಬ ಮನುವಾದಿಯೊಬ್ಬರು 150 ವರ್ಷಗಳ ಹಿಂದೆ ಮುಸ್ಲಿಂ ಮೂಲಭೂತವಾದದ ಬಗ್ಗೆ ವಿವೇಕಾನಂದರು ಹೇಳಿದ್ದರೆಂದು ಐತಿಹಾಸಿಕ ಮಹಾ ಸುಳ್ಳನ್ನು ಹೇಳುವ ಮೂಲಕ ಸ್ವಾಮಿಜಿಯವರ ಚಾರಿತ್ರ್ಯಕ್ಕೆ ಮಸಿ ಬಳಿಯುವಂತಹ ಕೆಲಸವನ್ನು ಮಾಡಿರುವುದು ನಾಚಿಕೆಗೇಡಿನ ವಿಷಯ. ಸ್ವಾಮಿ ವಿವೇಕಾನಂದರು ಸಂಘ ಪರಿವಾರ ಪ್ರತಿಪಾದಿಸುತ್ತಿರುವ ಹಿಂದೂತ್ವವಾದಿಯಾಗಲಿ, ಮಠಮಂದಿರಗಳಲ್ಲಿ ಇರುವ ವೈದಿಕಶಾಹಿ ಸ್ವಾಮಿಗಳಾಗಲಿ, ತಮ್ಮ ಕೈ ಚಳಕದಿಂದ ಬೂದಿ ಭಸ್ಮಗಳನ್ನು ಸೃಷ್ಟಿಸುತ್ತಾ ಪವಾಡವೆಂದು ಮುಗ್ಧ ಜನರನ್ನು ವಂಚಿಸುವ ಬಾಬಾಗಳಾಗಲಿ, ಮಠಗಳನ್ನು ಸ್ಥಾಪಿಸಿ ಶಿಕ್ಷಣದ ಹೆಸರಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುತ್ತಾ ವಿದ್ಯೆಯನ್ನು ಮಾರಾಟ ಮಾಡುವ ವ್ಯಾಪಾರಿ ಸ್ವಾಮಿಗಳಾಗಲಿ, ಅಧ್ಯಾತ್ಮದ ಹೆಸರಲ್ಲಿ ಬಡಜನರ ಭೂಮಿ ನುಂಗುವ, ಸಾವಿರಾರು ಕೋಟಿಯ ಆಸ್ತಿ ಅಂತಸ್ತುಗಳನ್ನು ಹೊಂದಿದ ಶ್ರೀಮಂತರಿಗಷ್ಟೇ ಮೋಕ್ಷವನ್ನು ಕರುಣಿಸುವ ಸ್ವರ್ಗದ ಏಜೆಂಟರಾಗಲಿ, ಕಾರ್ಪೊರೇಟ್ ಉದ್ಯಮಿಗಳಾಗಿರುವ ಗುರೂಜಿಗಳಾಗಲಿ ಅಲ್ಲ. ನಾವು ಇಂದು ಕಾಣುತ್ತಿರುವ ವೈದಿಕಶಾಹಿಗಳು ಪ್ರತಿಪಾದಿಸುತ್ತಿರುವ ಹಿಂದೂ ಧರ್ಮದ ಯಾವುದೇ ಗುಣಲಕ್ಷಣಗಳು ವಿವೇಕಾನಂದರಲ್ಲಿ ಕಾಣಲು ಸಾಧ್ಯವಿಲ್ಲ, ಯಾಕೆಂದರೆ ವಿವೇಕಾನಂದರು ಯಾವುದೇ ದೇವಸ್ಥಾನವನ್ನಾಗಲಿ, ಮಠಮಂದಿರಗಳನ್ನಾಗಲಿ ಕಟ್ಟಲಿಲ್ಲ, ಯಾವುದೇ ದೇವರಮೂರ್ತಿಯನ್ನು ಪ್ರತಿಷ್ಠಾಪಿಸಲಿಲ್ಲ, ಅಷ್ಟೇ ಯಾಕೆ, ಅವರು ತಮ್ಮ ಜೀವಿತಾವಧಿಯಲ್ಲಿ ಯಾವುದೇ ದೇವಸ್ಥಾನಕ್ಕಾಗಲಿ ಮಠ ಮಂದಿರಕ್ಕಾಗಲಿ ಭೇಟಿ ಕೊಟ್ಟ ಯಾವುದೇ ಉದಾಹರಣೆಗಳಿಲ್ಲ, ಅವರು ಯಾವುದೇ ಹಿಂದೂ ದೇವರನ್ನು ಪೂಜಿಸಲಿಲ್ಲ, ಯಜ್ಞ ಯಾಗ ಪೂಜೆ ಪುರಸ್ಕಾರ ಮಾಡಲಿಲ್ಲ, ಸ್ವಾಮಿ ವಿವೇಕಾನಂದರು ಗೌತಮಬುದ್ಧನ ದಾರಿಯಲ್ಲಿ ಸಾಗಿ ಬಂದ ಓರ್ವ ಶ್ರೇಷ್ಠ ತತ್ವಜ್ಞಾನಿ. ಗೌತಮ ಬುದ್ಧನಿಗೆ ಜ್ಞಾನೋದಯವಾದ ಬುದ್ಧಗಯಾದಲ್ಲಿ ಬುದ್ಧನ ಪ್ರತಿಮೆಗೆ ಮಂಡಿಯೂರಿ ನಮಸ್ಕರಿಸಿ ಸತ್ಯದ ಸಾಕ್ಷಾತ್ಕಾರಕ್ಕೆ ಧ್ಯಾನಾಸಕ್ತರಾಗುತ್ತಿದ್ದುದ್ದನ್ನು ಮಾತ್ರವೇ ಅವರ ಜೀವನಚರಿತ್ರೆಯಲ್ಲಿ ಕಾಣಲು ಸಾಧ್ಯ. ಧರ್ಮದ ಬಗ್ಗೆ ವಿವೇಕಾನಂದರು ಈ ರೀತಿಯಾಗಿ ಹೇಳಿರುತ್ತಾರೆ: "ಧರ್ಮವೆಂದರೆ ದೇವಸ್ಥಾನವನ್ನು ಕಟ್ಟುವುದಾಗಲಿ, ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡುವುದಾಗಲಿ, ಯಾಗಯಜ್ಞ ನಡೆಸುವುದಾಗಲಿ ಅಥವಾ ಸಾಮೂಹಿಕ ಪೂಜೆ ಪ್ರಾರ್ಥನೆಯಾಗಲಿ ಅಲ್ಲ. ಹಾಗಾದರೆ ಧರ್ಮವೆಂದರೇನು? ಧರ್ಮವೆಂದರೆ ಸಾಕ್ಷಾತ್ಕಾರ" (ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ ಸಂಪುಟ 5 ಪುಟ 446). ಸ್ವಾಮಿ ವಿವೇಕಾನಂದರು ಇಸ್ಲಾಂ ಅನ್ನು ವಿಶ್ವಸಮಾನತೆಯ, ಮಾನವ ಸೋದರತೆಯ ಧರ್ಮವೆಂದೂ, ಪ್ರವಾದಿ ಮಹಮ್ಮದ್ ಪೈಗಂಬರರನ್ನು ಸಮಾನತೆಯ ಭ್ರಾತೃತ್ವದ ವಿಶ್ವ ಮುಸಲ್ಮಾನರ ಸೋದರತೆಯ ಹರಿಕಾರ ಎಂದೂ ಬಣ್ಣಿಸಿದ್ದರು. ವಿವೇಕಾನಂದರು ಇಸ್ಲಾಂ ಕುರಿತು ಆಡಿದ ಮಾತುಗಳನ್ನು ಅವರ ಸಿಂಹವಾಣಿಯಲ್ಲಿ ಪ್ರಕಟವಾದ ಐತಿಹಾಸಿಕ ದಾಖಲೆಯನ್ನು ತಮ್ಮ ಮುಂದಿಡುತ್ತಿದ್ದೇನೆ.

1. ಭಾರತದ ಮೇಲೆ ಮಾಡಿದ ಮಹಮ್ಮದೀಯ ದಾಳಿ ದರಿದ್ರದ ಮತ್ತು ತುಳಿಯಲ್ಪಟ್ಟ ಶೋಷಿತ ದಮನಿತರ ಪಾಲಿಗೆ ಮೋಕ್ಷವಾಗಿ ಬಂತು. ಆದ್ದರಿಂದಲೇ ನಮ್ಮ ಜ... ಐದರಲ್ಲಿ ಒಂದು ಪಾಲು ಮಹಮ್ಮದೀಯರಾ... ಅದೆಲ್ಲವೂ ಖಡ್ಗದಿಂದಲೇ ಆಗಲಿಲ್ಲ. ಇದ... (ಮತಾಂತರವೆಲ್ಲ) ಖಡ್ಗ ಮತ್ತು ಅಗ್ನಿಯಿಂದಲೇ ಆಯಿತ... ಭಾವಿಸುವುದು ಅತ್ಯಂತ ಹುಚ್ಚುತನ. (c.w vol. ... P. 294)

2. ಭಾರತೀಯರಲ್ಲಿ ಅಷ್ಟೊಂದು ಜನ ಬಡ... ಯಾಕೆ ಇದ್ದಾರೆ? ಅವರನ್ನೆಲ್ಲಾ ಖಡ್ಗದಿ... ಮತಾಂತರಗೊಳಿಸಿದರೆಂಬುದು ಶುದ್ಧ ಅರ್ಥಹಿ... ಜಮೀನ್ದಾರರಿಂದ, ಅರ್ಚಕ ಪುರೋಹಿತರಿಂದ ಬಿಡು... ಪಡೆಯಲು ಅವರು ಮಹಮ್ಮದೀಯರಾದ... ತತ್ಪರಿಣಾಮವಾಗಿ ಬಂಗಾಳದ ಬೇಸಾಯಗಾ... ಹಿಂದೂಗಳಿಗಿಂತ ಮಹಮ್ಮದೀಯರೇ ಹೆಚ್ಚಾಗಿದ್ದರು ... vol. III, P. 330)

3. ಒಬ್ಬಾತ ಮಹಮ್ಮದೀಯನಾದ ಎಂದಾಕ್ಷ... ಇಡೀ ಇಸ್ಲಾಂ ಜಗತ್ತು ಅವನನ್ನು ತೆರೆದ ತೋಳುಗ... ತನ್ನ ಸಹೋದರನೆಂದು ಬಾಚಿ ತಬ್ಬಿಕೊಂಡು ಯಾವ... ಭೇದಭಾವ ಮಾಡದೆ ಸ್ವಾಗತಿಸಿ ಸ್ವೀಕರಿಸುತ್ತದೆ. ಹಾ... ಇನ್ನಾವ ಧರ್ಮವೂ ಮಾಡದು. ಒಬ... ಮಹಮ್ಮದೀಯನಾದ ಪಕ್ಷದಲ್ಲಿ ತುರ್ಕಿಯ ಸುಲ... ಅವನೊಡನೆ ಕೂತು ಸಹಭೋಜನ ಮಾ... ಹಿಂಜರಿಯುವುದಿಲ್ಲ, ಅವನಿಗೆ ಒಂದಿಷ್ಟು ಬುದ್ಧಿ ಇ... ಯಾವ ಸ್ಥಾನವನ್ನು ಆಕ್ರಮಿಸಲು ಅವನಿಗೆ ಯಾವ ಅಡ್ಡಿ... ಇಲ್ಲ. ಇಸ್ಲಾಂ ತನ್ನ ಅನುಯಾಯಿಗಳನ್ನೆಲ್ಲ ಸರಿಸಮಾನ... ಮಾಡುತ್ತದೆ. ಹಾಗೆಯೆ ಮಹಮ್ಮದೀಯ ಧರ್ಮದ ... ಶ್ರೇಷ್ಠತೆಯನ್ನು ಗಮನಿಸಿರಿ ಜಗತ್ತಿಗೆ ಮಹಮ್ಮದೀಯ ... ಬೋಧಿಸುವುದೆಂದರೆ, ತನ್ನ ಧರ್ಮಾವಲಂಬಿಗಳೆಲ್ಲ... ಈ ವ್ಯವಹಾರಿಕ ಸಹೋದರ ಭಾವವನ್ನು ಕಲಿಸುತ್ತದೆ ... vol. III, P. 369-70)

4. ಮಹಮ್ಮದೀಯರೆಲ್ಲರಲ್ಲೂ ಪರಿಪ... ಸರಿಸಮಾನತೆ, ಭ್ರಾತೃತ್ವ ಇರಬೇಕೆಂಬುದನ್ನು ... ಜೀವನದಿಂದ ಪೈಗಂಬರರು ತೋರಿಸಿದರು. ಜಾತಿ, ...

…ಮಾಟ ಮಾಡಿಸಿದ್ದಾರಂತೆ!
…ವನ್ನು ಖುದ್ದು ಡಿ.ಕೆ. ಶಿವಕುಮಾರ್ ಅವರೇ …ಯಲ್ಲಿ ಹೇಳಿದರು!
…ಅಲ್ಲಾ 'ಇವನು ನೆಗೆದು ಬೀಳಲಿ' ಅಂತ ಮನುಷ್ಯರಿಗೆ …ಪಾರಿ ಕೊಟ್ಟಿದ್ದರೆ ಪೊಲೀಸಿನವರಿಗೆ ದೂರು …ಬಹುದಿತ್ತು. ದೇವರಿಗೆ ಕೊಟ್ಟಿವ್ನೆ ಅಂದ್ರೆ, ದೂರು …ರಿಗೆ ಕೊಡೋದು? ಅದ್ಕೇ ಟಿವಿ ಹಿಡ್ಕೊಂಡವ್ರೆ ಡಿಕೆಶಿ!

ರಿಯಲ್ ಅಲ್ಲ ರೀಲು

…'ಬನ್ನಿ ಮತ ನೀಡಿ
…ನಿಮ್ಮ ಪವರ್ ತೋರಿಸಿ ನೋಡಿ'
…ಪವರ್ ಸ್ಟಾರ್ ಪುನೀತ್ ಹೇಳುತ್ತಿದ್ದ ಮಾತು.
…ಮತದಾನದ ದಿನ ಬಂತು.
…ಎಲ್ಲಿದ್ದರು ಪುನೀತ್?
…ವಿದೇಶದಲ್ಲಿದ್ದರು!
…ಮತ ಚಲಾಯಿಸಿದರೆ?
…ಭಾರತಕ್ಕೆ ಬರಲು ವಿಮಾನ ಸಿಗಲಿಲ್ಲವಂತೆ!

* * * *

…'ನಾನು ಚುನಾವಣೆವರೆಗೆ ಇಲ್ಲಿಯೇ ಇರ್ತೀನಿ.'
…ಚಾಲೆಂಜಿಂಗ್ ಸ್ಟಾರ್ ದರ್ಶನ್ ಮಾತು. ಚುನಾವಣೆ …ನ್ನು ಒಂದು ವಾರ ಇತ್ತು.
…ಹೇಳಿದಂತೆ ಇದ್ದರೆ ಅವರು?
…ಮಾರನೆಯ ದಿನ ಮಂಡ್ಯದಿಂದ ಪರಾರಿಯಾಗಿದ್ದರು!

* * * *

…'ನಾನು ಎಲ್ಲಿಗೂ ಓಡಿಹೋಗೋದಿಲ್ಲ. ಇಲ್ಲಿಯೇ …ನಿ'
…ಮಂಡ್ಯದ ಗಂಡು ಅಂಬರೀಷ್ ಮಾತು.
…ಮೂರು ಸಲ ಮಂಡ್ಯದಿಂದ ಸಂಸದರಾಗಿದ್ದರು.
…ಆಗ ಇಲ್ಲಿ ಇದ್ದರೆ?
…ಇರುತ್ತೇನೆ ಅಂದಿದ್ದರು, ಇರಲಿಲ್ಲ! ನೆಂಟರ ಮನೆ …ದೆ ಅವರ ನಾಮಫಲಕ ಹಾಕಿಸಿದರು.
…ಈಗ ವಾಪಸ್. ಬಾಡಿಗೆ ಮನೆ ಹಿಡಿದಿದ್ದಾರೆ.
…ಇಲ್ಲಿಯೇ ಇರುತ್ತಾರೆಯೇ?
…ಡಿಸಿಎಂ ಆಗ್ತಾರಂತೆ! ತಪ್ಪಿದಲ್ಲಿ ಮಂತ್ರಿ ಖಾತರಿ …!
…ಅಂದಮೇಲೆ ವಾಸವೂ ಅಲ್ಲೇ!
…ರೋಗಿಯ ಬಯಕೆಯಂತೆ ವೈದ್ಯನ ಚಿಕಿತ್ಸೆ!
…ಇಲ್ಲಿಯ ಮನೆ?
…ಚುನಾವಣೆ ಮನೆ!

'ಮದರಂಗಿ' ಕೃಷ್ಣನ ಲೆಕ್ಕಾಚಾರ

ಚುನಾವಣೆಯ ಬಿಸಿಯಲ್ಲಿ ಸಿಲುಕಿದ್ದ ಗಾಂಧಿನಗರ ಈಗ ನಿಧಾನವಾಗಿ ತನ್ನ ಸಹಜ ಸ್ಥಿತಿಗೆ ಮರಳುತ್ತಿದೆ.

ಉದಾಹರಣೆಗೆ ಕಳೆದ ಶುಕ್ರವಾರ ಯಾರೂ ಹೊಸ ಚಿತ್ರವನ್ನು ಬಿಡುಗಡೆ ಮಾಡುವ ಸಾಹಸಕ್ಕೆ ಕೈ ಹಾಕಿರಲಿಲ್ಲ. ಆದರೆ ಈ ಶುಕ್ರವಾರ ಎರಡು ಚಿತ್ರಗಳು ಬಿಡುಗಡೆಯಾಗುತ್ತಿವೆ. ಮೊದಲನೆಯದು ಚಾಲೆಂಜಿಂಗ್ ಸ್ಟಾರ್ ದರ್ಶನ್ ನಟಿಸಿರುವ 'ಬುಲ್‌ಬುಲ್.' ಎರಡನೆಯದು ಹೊಸ ನಾಯಕ ನಟ ಕೃಷ್ಣ ಎಂಬುವರ 'ಮದರಂಗಿ.'

ವಿಶೇಷವೆಂದರೆ ಹಳಬರ ಮತ್ತು "ಹೊಸಬರ ಈ ಚಿತ್ರಗಳು ಅಕ್ಕಪಕ್ಕ ಥಿಯೇಟರ್‌ಗಳಾದ ಸಂತೋಷ್ ಮತ್ತು ನರ್ತಕಿಯಲ್ಲಿ ಬಿಡುಗಡೆಯಾಗುತ್ತಿವೆ. ಅಂದಹಾಗೆ ಹೊಸಬ ಕೃಷ್ಣ ಕೂಡ ದರ್ಶನ್ ತರಹ ಆರು ಅಡಿ ಎತ್ತರದ ಮೈಕಟ್ಟು ಹೊಂದಿದ್ದಾರೆ. 'ಬುಲ್‌ಬುಲ್' ಚಿತ್ರವನ್ನು ದರ್ಶನ್ ತಮ್ಮ ಸ್ವಂತ ಬ್ಯಾನರ್ ಅಡಿ ನಿರ್ಮಿಸಿದ್ದರೆ, ಕೃಷ್ಣ ಕೂಡ ತನ್ನ ಚೊಚ್ಚಲ ಚಿತ್ರವನ್ನು ತನ್ನ ಸ್ವಂತ ನಿರ್ಮಾಣ ಸಂಸ್ಥೆಯಲ್ಲೇ ನಿರ್ಮಿಸಿದ್ದಾರೆ.

ಆದರೆ 'ಮದರಂಗಿ' ಚಿತ್ರ ಚಾಲೆಂಜಿಂಗ್ ಸ್ಟಾರ್‌ನ ಚಾಲೆಂಜ್ ಮುಂದೆ ನಿಲ್ಲುತ್ತದೆಯೇ ಎಂಬ ಪ್ರಶ್ನೆ ಎದ್ದಿದೆ. ಅದರ ಬಗ್ಗೆ ಕೇಳಿದರೆ 'ಮದರಂಗಿ' ಚಿತ್ರದ ನಾಯಕ ಕೃಷ್ಣ ""ಬುಲ್‌ಬುಲ್' ಚಿತ್ರದ ಪಕ್ಕದಲ್ಲೇ ನಮ್ಮ ಚಿತ್ರ ಬಿಡುಗಡೆ ಆಗುತ್ತಿರುವುದರಿಂದ ನಮಗೇನೂ ತೊಂದರೆ ಇಲ್ಲ. ಬದಲಾಗಿ ಅದನ್ನು ಆಶೀರ್ವಾದ ಎಂದು ಪರಿಗಣಿಸಿದ್ದೇವೆ" ಎನ್ನುತ್ತಾರೆ.

ಬಹುಶಃ 'ಬುಲ್‌ಬುಲ್' ಚಿತ್ರಕ್ಕೆ ಟಿಕೆಟ್ ಸಿಗದವರು ಮನೆಗೆ ವಾಪಸ್ ಹೋಗುವ ಬದಲು ತಮ್ಮ ಚಿತ್ರ ನೋಡುತ್ತಾರೆ ಎಂಬ ಲೆಕ್ಕಾಚಾರ ಕೃಷ್ಣ ಅವರದ್ದು. ಒಂದು ಮಾತಂತೂ ನಿಜ. ಅದೇನೆಂದರೆ 'ಮದರಂಗಿ' ಚಿತ್ರದ ಹಾಡುಗಳು 'ಬುಲ್‌ಬುಲ್' ಚಿತ್ರದ ಹಾಡುಗಳಿಗಿಂತ ಪಾಪ್ಯುಲರ್ ಆಗಿವೆ. ಯಾರಿಗೆ ಗೊತ್ತು, ಬಿಡುಗಡೆಯನಂತರ 'ಮದರಂಗಿ' ಬಾಕ್ಸ್ ಆಫೀಸಿನಲ್ಲೂ ತನ್ನ ನಿಜಬಣ್ಣವನ್ನು ತೋರಿಸುತ್ತದೆಯೋ ಏನೋ?!

ಸಿನಿಮಾದವರ ರಾಜಕೀಯ ಗೆಲುವು

ಈ ಬಾರಿಯ ಚುನಾವಣೆಯಲ್ಲಿ ಸಿನಿಮಾ ಲೋಕಕ್ಕೆ ಭಾರೀ ಲಾಭವಾಗಿದೆ.

ಕರ್ನಾಟಕ ಕಲಾವಿದರ ಸಂಘದ ಅಧ್ಯಕ್ಷ ಅಂಬರೀಷ್ ಮತ್ತು ಕರ್ನಾಟಕ ನಿರ್ಮಾಪಕರ ಸಂಘದ ಅಧ್ಯಕ್ಷ ಮುನಿರತ್ನಂ ನಾಯ್ಡು ಇವರಿಬ್ಬರೂ ಅಧಿಕಾರಾರೂಢ ಕಾಂಗ್ರೆಸ್ ಪಕ್ಷದಿಂದ ಗೆದ್ದುಬಂದಿರುವುದು ಉದ್ಯಮದವರ ಆತ್ಮಸ್ಥೈರ್ಯವನ್ನು ಹೆಚ್ಚಿಸಿದೆ. ಇವರ ಜೊತೆಗೆ ರಂಗಭೂಮಿ ಮತ್ತು ಸಿನಿಮಾ ಕಲಾವಿದೆ ಉಮಾಶ್ರೀಯವರೂ ಚುನಾವಣೆಯಲ್ಲಿ ಗೆದ್ದುಬಂದು ಕಲಾವಿದರ ಗೌರವವನ್ನು ಸಾಮಾನ್ಯರ ದೃಷ್ಟಿಯಲ್ಲಿ ಹೆಚ್ಚಿಸಿದ್ದಾರೆ.

ಈ ಮೂವರು ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾಗಿರುವುದು ವಿಶೇಷ. ಈಗ ಈ ಮೂವರಲ್ಲಿ ಅಂಬರೀಷ್ ಮತ್ತು ಉಮಾಶ್ರೀಯವರು ಸಚಿವ ಸ್ಥಾನ ಗಳಿಸುವ ಸಾಧ್ಯತೆ ಹೆಚ್ಚು ಕೇಳಿಬರುತ್ತಿದೆ. ಹಾಗೇನಾದರೂ ಆಗಿ ಇಬ್ಬರಿಗೂ ಸಚಿವ ಸ್ಥಾನ ದೊರಕಿದ್ದೇ ಆದಲ್ಲಿ ನಿಜಕ್ಕೂ ಇದು ಸಿನಿಮಾ ಉದ್ಯಮದ ಜನರಿಗೆ ಸಿಕ್ಕ ಅತ್ಯಂತ ದೊಡ್ಡ ಗೌರವ ಮತ್ತು ಮನ್ನಣೆ ಎಂದೇ ಹೇಳಬಹುದು.

ಇತ್ತ ಜೆಡಿಎಸ್‌ನಿಂದ ಬಂಗಾರಪ್ಪನವರ ಮಗ ಮಧು ಬಂಗಾರಪ್ಪ ಮತ್ತು ಚನ್ನಪಟ್ಟಣದಿಂದ ಮಾಜಿ ನಾಯಕ ನಟ ಯೋಗೇಶ್ವರ್ ಕೂಡ ಚುನಾವಣೆಯಲ್ಲಿ ಭರ್ಜರಿಯಾಗಿ ಜಯಗಳಿಸಿ ತಮ್ಮ 'ಬಣ್ಣದ ಶಕ್ತಿ'ಯನ್ನು ಪ್ರದರ್ಶಿಸಿದ್ದಾರೆಂದು ಹೇಳಬಹುದು. ಅದೇ ರೀತಿ ನಿರ್ಮಾಪಕರಾಗಿ ಮತ್ತು ಸಿನಿಮಾ ಥಿಯೇಟರ್ ಮಾಲಿಕರಾಗಿ ಜೀವನ ಆರಂಭಿಸಿದ ಕುಮಾರಸ್ವಾಮಿ ಈಗಾಗಲೇ ರಾಜ್ಯದ ಮುಖ್ಯಮಂತ್ರಿಯಾಗಿದ್ದುದು ನಿಮಗೆಲ್ಲ ಗೊತ್ತಿರುವ ವಿಚಾರ.



ಮದರಂಗಿ
ಕೃಷ್ಣ–ಸುಷ್ಮಾರಾಜ್

…, ವರ್ಣ, ಲಿಂಗ ಎಂಬ ಪ್ರಶ್ನೆಯೇ ಇರಲಿಲ್ಲ. ಆಫ್ರಿಕಾದ …ಪಾರಿಯಿಂದ ತುರ್ಕಿ ಸುಲ್ತಾನನು ಒಬ್ಬ ನೀಗ್ರೋನನ್ನು …ಡು ಸರಪಳಿ ಹಾಕಿ ಕಟ್ಟಿ ತಂದಿರಬಹುದು. ಅವನು …ಮ್ಮದೀಯನಾದ ಪಕ್ಷದಲ್ಲಿ ಅವನಿಗೆ ಸಾಕಷ್ಟು ಅರ್ಹತೆ …ದ್ಧಿಶಕ್ತಿ ಇದ್ದುದಾದರೆ ಅವನು ಸುಲ್ತಾನನ ಮಗಳನ್ನು …ದುವೆಯಾಗಬಹುದು ಹಾಗೂ ಹಿಂದೂಗಳು ಏನು …ಡುತ್ತಾರೆ? ನಿಮ್ಮಲ್ಲಿ ಯಾರಾದರೂ ನಮ್ಮ ಮಡಿವಂತ …ಯು ಉಣ್ಣಲಿರುವ ಆಹಾರವನ್ನು ಮುಟ್ಟಿದ್ದೇ ಆದರೆ …ನ್ನು ಅವನು ಎತ್ತಿ ಎಸೆದು ಬಿಡುತ್ತಾನೆ. ನಮ್ಮ ಧರ್ಮದ …ಾ ತತ್ವಶಾಸ್ತ್ರ ಏನೇ ಹೇಳಿದರೂ ವ್ಯವಹಾರಿಕ ಜೀವನದಲ್ಲಿ …ವ ದೋಷವನ್ನು ಗಮನಿಸಿರಿ. ಆದರೆ ಮಹಮ್ಮದೀಯ …ರ್ಮದಲ್ಲಾದರೂ ಅದರ ಮಹತ್ವ ಜನಾಂಗೀಯ …ಯನ್ನೂ ಮೀರಿದ ಸರಿಸಮಾನತೆಯಲ್ಲಿ ಅದರ ಮಹತ್ವ …ರುತ್ತದೆ. ಜಾತಿ, ಜನಾಂಗ, ವರ್ಣಗಳ ಗಣನೆಯಿಲ್ಲದ …ಪೂರ್ಣ ಸರಿಸಮಾನತೆ ಧರ್ಮವದು (c.w vol.IV, …29-130).

- ಬಿ. ದಾಮೋದರ್ ಭಟ್, ಬೆಳ್ತಂಗಡಿ

ಪೇಜಾವರರ ಅಸ್ಪೃಶ್ಯತೆ ಕುರಿತ …ವಿನೂತನ ಸಿದ್ಧಾಂತಕ್ಕೆ ಸಾಕ್ಷ್ಯಾಧಾರ ಎಲ್ಲಿದೆ?

…ಕಳೆದ ತಿಂಗಳ 21ರಂದು ಮಂಗಳೂರಿನಲ್ಲಿ …ಯೋಜಿಸಲಾಗಿದ್ದ ವಿಪ್ರ ಜಾಗೃತಿ ಸಮ್ಮೇಳನದಲ್ಲಿ …ವಹಿಸಿ ಮಾತನಾಡಿದ ಪೇಜಾವರ ವಿಶ್ವೇಶತೀರ್ಥ …ಮೀಜಿ ಒಂದು ಹೊಚ್ಚಹೊಸದಾದ ಸಿದ್ಧಾಂತವನ್ನು ತೇಲಿಬಿಟ್ಟಿದ್ದಾರೆ. ಇಲ್ಲಿ ಎಲ್ಲವನ್ನೂ ತೊರೆದು ಸನ್ಯಾಸಿ ಯಾದವನಿಗೆ ಜಾತಿ, ಕುಲ, ಧರ್ಮ, ರಾಜಕಾರಣಗಳಂತಹ ಲೌಕಿಕ ಸಂಬಂಧಗಳ ಬಂಧನ ಯಾಕೆಂಬ ಪ್ರಶ್ನೆ ಏಳುತ್ತಾದರೂ ಅದು ಬೇರೊಂದು ಗಹನವಾದ ಚರ್ಚೆಯ ವಸ್ತು. ಸದ್ಯ ಅದನ್ನು ಬದಿಗಿಡೋಣ. ಮೊನ್ನಿನ ಸಮಾವೇಶದಲ್ಲಿ ಸನ್ಮಾನ್ಯರು 'ಅಸ್ಪೃಶ್ಯತೆಯನ್ನು ಬ್ರಾಹ್ಮಣರು ಸೃಷ್ಟಿಸಿದ್ದಲ್ಲ, ಬ್ರಾಹ್ಮಣರಿಗಿಂತಲೂ ಮೊದಲೇ ಸಮಾಜದಲ್ಲಿ ಅಸ್ಪೃಶ್ಯತೆ ರೂಢಿಯಲ್ಲಿತ್ತು' ಎಂದು ಘೋಷಿಸಿದ್ದೇ ತಡ, ನೆರೆದ ಗಿಂಡಿಮಾಣಿಗಳು ಕಿವಿಗಡಚಿಕ್ಕುವಂತೆ ಚಪ್ಪಾಳೆ ಹೊಡೆದರು. ಬ್ರಾಹ್ಮಣ ಶ್ರೇಷ್ಠತೆಯನ್ನು ಮೆರೆಯುವಂತಹ ಜಾತಿವ್ಯವಸ್ಥೆ ಮತ್ತು ಅಸ್ಪೃಶ್ಯತೆಗಳ ಜನಕರು ಎಂಬ ಆರೋಪಕ್ಕೆ ಗುರಿಯಾಗಿರುವ ವಿಪ್ರರ ಪಾಲಿಗೆ ಪೇಜಾವರರ ಮಾತುಗಳು ಮರುಭೂಮಿಯಲ್ಲಿ ಒಯಸಿಸ್‌ನಂತೆ ಕಂಡುಬಂದಿರ ಬಹುದು. ಆದರೆ ಬಹುಮಟ್ಟಿಗೆ ಅದು ಮರೀಚಿಕೆಯೇ ಆಗಿರುವ ಸಾಧ್ಯತೆಗಳೇ ಹೆಚ್ಚು. ಯಾಕೆಂದರೆ 'ಗಂಭೀರ ಆರೋಪ ಮಾಡುವಾಗ ಸಾಕ್ಷ್ಯಾಧಾರ ಕೂಡ ಬಹಿರಂಗ ಗೊಳಿಸಬೇಕು' ಎಂದು ಸನ್ಮಾನ್ಯರೇ ಇತ್ತೀಚೆಗೆ ಅಪ್ಪಣೆ ಕೊಡಿಸಿದ್ದಾರೆ. ಹಾಗಾಗಿ ಪೇಜಾವರರದೇ ಆದೇಶದ ಅನುಸಾರ ಮತ್ತು ವೈಜ್ಞಾನಿಕ ನೆಲೆಗಟ್ಟಿನಲ್ಲಿ ಕೂಡ, ಸೂಕ್ತ ಆಧಾರಗಳನ್ನು ಒದಗಿಸದಿದ್ದಲ್ಲಿ ಸದರಿ ಮಹಾನ್ ಕ್ರಾಂತಿಕಾರಿ ಸಂಶೋಧನೆ/ಪ್ರತಿಪಾದನೆಯು ತಿರಸ್ಕಾರಯೋಗ್ಯವೆನಿಸುತ್ತದೆ. ಆದುದರಿಂದ ಕೆಳಗಿನ ಕೆಲವು ಸಂದೇಹಗಳಿಗೆ ಚಾರಿತ್ರಿಕ ಪುರಾವೆಗಳ ಸಮೇತ ಉತ್ತರಿಸುವ ಗುರುತರ ಜವಾಬ್ದಾರಿ ಈಗ ಪೇಜಾವರರ ಮೇಲೆ ಇದೆ:

- ಈ ದೇಶದಲ್ಲಿ ಬ್ರಾಹ್ಮಣರಿಗಿಂತಲೂ ಮೊದಲು ಇದ್ದ ಜನವರ್ಗ ಯಾವುದು?
- ಇವರು ಇಲ್ಲಿನವರೇ ಅಥವಾ ಹೊರಗಿನಿಂದ ಬಂದವರೇ?
- ಇವರಿದ್ದುದು ಯಾವ ಕಾಲದಲ್ಲಿ?
- ಇವರಲ್ಲಿ ಅಸ್ಪೃಶ್ಯತೆ ಎಲ್ಲಿ, ಯಾಕೆ, ಹೇಗೆ, ಎಂದಿನಿಂದ ಆರಂಭವಾಯಿತು?
- ಬ್ರಾಹ್ಮಣ ಮತ್ತಿತರ ಜಾತಿಗಳು ಯಾವ ಕಾಲಘಟ್ಟದಲ್ಲಿ ಸೃಷ್ಟಿಯಾದವು?
- ಸುಪ್ರಸಿದ್ಧ ಇತಿಹಾಸಕಾರರಾದ ಕಿರೀತ್ ಜೋಶಿ, ಕೆ.ಎನ್.ಪಣಿಕ್ಕರ್ ಮೊದಲಾದವರು ಹೇಳುವಂತೆ ವೇದಕಾಲೀನ ಜನ ಅನುಸರಿಸುತ್ತಿದ್ದ ಚಾತುರ್ವರ್ಣ್ಯ ವ್ಯವಸ್ಥೆ ಎಂಬುದು ಒಂದು ವೃತ್ತಿ ಆಧರಿತ ಶ್ರಮ ವಿಭಜನೆಯಾಗಿತ್ತು. ವ್ಯಕ್ತಿ ಒಂದು ವರ್ಣ (ವೃತ್ತಿ)ದಿಂದ ಮತ್ತೊಂದು ವರ್ಣಕ್ಕೆ ಬದಲಾಯಿಸಿಕೊಳ್ಳಬಹುದಾಗಿತ್ತು ಅಥವಾ ಒಂದೇ ಕುಟುಂಬದ ಸದಸ್ಯರು ಭಿನ್ನ ಭಿನ್ನ ವರ್ಣವನ್ನು ಹೊಂದಿರಬಹುದಾಗಿತ್ತು. ಆಗಿನವರ ಮನೋಧರ್ಮವೇ ಹಾಗಿತ್ತು. ಅವರಲ್ಲಿ ಜಾತಿಗಳೆಂಬ ಪ್ರತ್ಯೇಕ ಗುಂಪುಗಳು ಇರಲಿಲ್ಲ, ಅಸ್ಪೃಶ್ಯತೆಯೂ ಇರಲಿಲ್ಲ, ಅಂತಹ ಆಚರಣೆಗಳ ಬಗ್ಗೆ ಅವರಿಗೆ ಜುಗುಪ್ಸೆ ಇತ್ತು. ಹೀಗೆ ಖ್ಯಾತ ವಿದ್ವಾಂಸರ ಪ್ರಕಾರ ವೇದಗಳಲ್ಲಾಗಲಿ, ಪುರಾಣಗಳಲ್ಲಾಗಲಿ ಎಲ್ಲಿಯೂ ಅಸ್ಪೃಶ್ಯತೆಯ ವಿಚಾರವೇ ಉಲ್ಲೇಖವಾಗಿಲ್ಲ. ಹಾಗಾದರೆ ಜಾತಿಪದ್ಧತಿ ಮತ್ತು ಅಸ್ಪೃಶ್ಯತೆಗಳ ಉಗಮ ಎಲ್ಲಿ, ಹೇಗೆ, ಯಾಕೆ, ಯಾವಾಗ ಆಯಿತು?
- ಅವು ಬಹುಶಃ ರಾಜಾಡಳಿತದೊಂದಿಗೆ ಹುಟ್ಟಿಕೊಂಡಿರಬೇಕು ಎಂಬ ಪ್ರತಿಪಾದನೆ ಇದೆ. ಇದಕ್ಕೆ ಬ್ರಾಹ್ಮಣ ಶ್ರೇಷ್ಠತೆಯನ್ನು ಎತ್ತಿಹಿಡಿಯುವ ಮನುಸ್ಮೃತಿಯೇ ಆಧಾರ. ಉದಾಹರಣೆಗೆ ಮನುಸ್ಮೃತಿಯ ಅಧ್ಯಾಯ – 10:31, 10:32, 10:54, 10:56 ಮುಂತಾದೆಡೆಗಳಲ್ಲಿ ಚಂಡಾಲರು ಮತ್ತು ಕೊಳಕು ಜನರ ಪ್ರಸ್ತಾಪವಿದೆ. ಚಂಡಾಲರು ಅಂದರೆ ಶೂದ್ರ ಪುರುಷ ಮತ್ತು ಬ್ರಾಹ್ಮಣ ಸ್ತ್ರೀ ಸಮಾಗಮದಿಂದ ಹುಟ್ಟಿದವರು. ಚಂಡಾಲರು ಮತ್ತು ಕೊಳಕು ಜನರಿಗೆ ಮನುಸ್ಮೃತಿ ವಿಧಿಸಿದ್ದ ಕಟ್ಟುಪಾಡುಗಳು ಹೀಗಿವೆ: ಇವರು ಪ್ರತ್ಯೇಕ ಗುರುತುಗಳನ್ನು ಹೊಂದಿರಬೇಕು; ಊರ ಹೊರಗೆ ವಾಸಿಸಬೇಕು; ಹಗಲು ಮಾತ್ರ ಊರಿನೊಳಗೆ ಬರಬಹುದು; ಒಳ್ಳೆಯ ಪಾತ್ರೆಗಳಲ್ಲಿ ಅಡುಗೆ ಮಾಡಬಾರದು; ಒಡಕು ಮಣ್ಣಿನ ಪಾತ್ರೆಗಳಲ್ಲೇ ಉಣ್ಣಬೇಕು; ನಾಯಿ, ಕತ್ತೆ, ಇತ್ಯಾದಿಗಳನ್ನೇ ಸಾಕುತ್ತಿರಬೇಕು; ಅನಾಥಶವಗಳನ್ನು ಹೊರಬೇಕು ಇತ್ಯಾದಿ, ಇತ್ಯಾದಿ.



ಆದುದರಿಂದ ಪೇಜಾವರರು ಈಗ ತಮ್ಮೀ ವಿನೂತನ ಸಿದ್ಧಾಂತವನ್ನು ಸಾಬೀತುಪಡಿಸುವಂತಹ ಐತಿಹಾಸಿಕ ಪುರಾವೆಗಳನ್ನು ಬಹಿರಂಗಪಡಿಸುವ ಮೂಲಕ ನಮ್ಮ ಗೊಂದಲಗಳನ್ನು, ಸಂದೇಹಗಳನ್ನು ನಿವಾರಿಸುವರೇ?

- ಸುರೇಶ ಭಟ್ ಬಾಕ್ರಬೈಲು, ಮಂಗಳೂರು



ಗೌರಿ ಮೇಡಂ ಚುನಾವಣೆಯಲ್ಲಿ ಬ್ಯುಸಿ ಆಗಿರುವಂತಿದೆ. ಅದಕ್ಕೆ ಕಳೆದ ಎರಡು ವಾರಗಳಿಂದ ನಮಗೆ ಚಿಕ್ಕಪುಟ್ಟ 'ಕಂಡಹಾಗೆ'ಗಳನ್ನು ತೋರಿಸುತ್ತಿದ್ದಾರೆ.

ಅಂದಹಾಗೆ 'ಥೂತ್ತೇರಿ' ಪ್ರತಿ ವಾರವೂ ಇದ್ದರೆ ಸ್ವಾರಸ್ಯಕರವಾಗಿರುತ್ತದೆ.

- ರವಿಕುಮಾರ್, ಹಾಸನ

ಇತ್ತೀಚೆಗೆ ತೀರಿಕೊಂಡ ಸರಬ್ಜಿತ್ ಸಿಂಗ್ ವಾಸ್ತವವಾಗಿ ಅಮಾಯಕನಾಗಿದ್ದನೆ? ಹಾಗಿದ್ದರೆ ಕಳೆದ ಇಪ್ಪತ್ತು ವರ್ಷಗಳಿಂದ ಆಡಳಿತ ನಡೆಸಿದ ಕಾಂಗ್ರೆಸ್, ಬಿಜೆಪಿ ಸರ್ಕಾರಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಹೋರಾಟ ಮಾಡಬಹುದಾಗಿತ್ತು. ದೇಶಭಕ್ತಿ, ಭಯೋತ್ಪಾದನೆ ಬಗ್ಗೆ ಗುತ್ತಿಗೆ ಪಡೆದಿರುವಂತೆ ಮಾತನಾಡುವ ಬಿಜೆಪಿ, ಸುಷ್ಮಾ ಸ್ವರಾಜ್ ಆತನಿಗೆ ಭಗತ್ ಸಿಂಗ್ ಪಟ್ಟ ಕಟ್ಟುತ್ತಿರುವುದು ಸೋಜಿಗವಾಗಿದೆ.


ಮಾಧ್ಯಮಗಳು ಸರಬ್ಜಿತ್ ಸಿಂಗ್‌ನನ್ನು ವೈಭವೀಕರಿಸುತ್ತಿರುವುದು ವಿಷಾದದ ಸಂಗತಿಯಾಗಿದೆ.

- ಓದುಗ, ಗುಲ್ಬರ್ಗಾ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು lankesh70@rediffmail.com ಗೆ [illegible] ಅಥವಾ ಬರಹ ರೂಪದಲ್ಲಿ [illegible] 9980331427 [illegible] ಚಿಕ್ಕದಾಗಿ ಮತ್ತು ಚೊಕ್ಕವಾಗಿ [illegible]

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly

ಪವರ್ ಜೊತೆ ಸೂಪರ್



ರಾಜೇಂದ್ರ ಸಿಂಗ್ ಬಾಬು ಅವರ ನಿರ್ದೇಶನದ 'ಲವ್' ಚಿತ್ರದಲ್ಲಿ ನಟಿಸಿದ ನಂತರ ಸುಮಾರು ಹನ್ನೆರಡು ವರ್ಷಗಳಿಂದ ಮಲೆಯಾಳಂನ ಸೂಪರ್ ಸ್ಟಾರ್ ಮೋಹನ್ ಲಾಲ್ ಕನ್ನಡ ಚಿತ್ರರಂಗದ ಕಡೆ ತಿರುಗಿಯೂ ನೋಡಲಿಲ್ಲ. ಅದಕ್ಕೆ ಮುಖ್ಯ ಕಾರಣ 'ಲವ್' ಚಿತ್ರದಲ್ಲಿ ನಿರ್ದೇಶಕ ಬಾಬು ಅವರಿಗೆ ಸಣ್ಣ ಪಾತ್ರ ನೀಡಿ ಜ್ಯೂನಿಯರ್ ಆರ್ಟಿಸ್ಟ್ ತರಹ ಬಳಸಿಕೊಂಡಿದ್ದು. ಹೀಗೆ ಮಾಡುವ ಮುಖಾಂತರ ಪರೋಕ್ಷವಾಗಿ ಮೋಹನ್ ಲಾಲ್ ಅವರನ್ನು ಬಾಬು ಅವಮಾನಿಸಿದ್ದರು ಎಂದು ಸ್ವತಃ ಬಾಬು ಅಭಿಮಾನಿಗಳೇ ಆಕ್ಷೇಪ ವ್ಯಕ್ತಪಡಿಸಿದ್ದರು.

ಮಲೆಯಾಳಂನ ಮತ್ತೋರ್ವ ಹಿರಿಯ ನಟ ಮಮ್ಮುಟ್ಟಿ ಇತ್ತೀಚೆಗೆ ಕನ್ನಡ ಚಿತ್ರವೊಂದರಲ್ಲಿ ನಟಿಸಿದಾಗ ಮತ್ತೆ ಅನೇಕ ನಿರ್ಮಾಪಕರು ಮೋಹನ್ ಲಾಲ್ ಅವರ ಕಾಲ್‌ಶೀಟ್‌ಗಾಗಿ ಪ್ರಯತ್ನಿಸಿದ್ದರು. ಆದರೆ ಕನ್ನಡದ ಸಹವಾಸವೇ ಬೇಡವೆಂದು ಎಲ್ಲರ ಆಫರ್‌ಗಳನ್ನು ನಯವಾಗಿ ತಿರಸ್ಕರಿಸಿದ್ದ ಮೋಹನ್ ಲಾಲ್ ಈಗ ಮತ್ತೆ ತಮ್ಮ ನಿಲುವನ್ನು ಬದಲಾಯಿಸಿದ್ದಾರೆ.

ಈ ಬಾರಿ ಕನ್ನಡಕ್ಕೆ ಮೋಹನ್ ಲಾಲ್ ಅವರನ್ನು ಕರೆತಂದಿರುವವರು ನಿರ್ಮಾಪಕ ರಾಜ್‌ಕುಮಾರ್. ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ನಟಿಸುತ್ತಿರುವ ಸಿನಿಮಾದಲ್ಲಿ ಮೋಹಲ್ ಲಾಲ್ ನಟಿಸುತ್ತಿದ್ದಾರೆ.

ಅಂದಹಾಗೆ, ಮೊನ್ನೆ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್ ಅವರ ಗೈರುಹಾಜರಿಯಲ್ಲಿ ಈ ಚಿತ್ರದ ಮುಹೂರ್ತ ನಡೆಯಿತು. "ಪುನೀತ್ ವಿದೇಶದಲ್ಲಿರುವುದರಿಂದ ಅವರು ಬರುವತನಕ ಮೋಹನ್ ಲಾಲ್ ಅವರ ಭಾಗಗಳನ್ನು ಚಿತ್ರಿಕರಿಸುತ್ತೇವೆ. ಅದಾದನಂತರ ಅವರಿಬ್ಬರ ಭಾಗಗಳನ್ನು ಚಿತ್ರೀಕರಿಸಲಾಗುವುದು" ಎಂದು ನಿರ್ದೇಶಕ ಗಿರಿರಾಜ್ ಹೇಳಿದರು.

ವಿಶೇಷವೆಂದರೆ, ರಾಜ್‌ಕುಮಾರ್ ನಿರ್ಮಿಸಿದ್ದ 'ಮೈನಾ' ಚಿತ್ರದ ನಿರ್ದೇಶಕರು ಮತ್ತವರ ತಂಡ ಮುಹೂರ್ತದಲ್ಲಿ ಗೈರುಹಾಜರಾಗಿತ್ತು.

ಚಂದ್ರು ಕಲೆಗಾರ!





ಆರ್. ಚಂದ್ರು ಎಂಬ ಯುವ ನಿರ್ದೇಶಕ ರಿಯಲ್ ಸ್ಟಾರ್ ಉಪೇಂದ್ರ ಅವರನ್ನು ಹಾಕಿಕೊಂಡು 'ನಾನೇ ಬ್ರಹ್ಮ' ಎಂಬ ಹೊಸ ಚಿತ್ರವನ್ನು ಆರಂಭಿಸಿದ್ದಾರೆ.

ಆದರೆ ಕೆಲವೇ ವಾರಗಳ ಹಿಂದೆ ಇದೇ ಚಂದ್ರು ನಿರ್ದೇಶಿಸಿರುವ 'ಚಾರ್ ಮಿನಾರ್' ಚಿತ್ರ 50ನೇ ದಿನ ಪೂರೈಸಿದ ಸಂದರ್ಭದಲ್ಲಿ ಒಂದು ವಿಶೇಷ ಪತ್ರಿಕಾಗೋಷ್ಠಿ ಕರೆದು "ನನ್ನ ಚಿತ್ರವನ್ನು ತೆಲುಗಿನ ಖ್ಯಾತ ನಟ ನಾಗಚೈತನ್ಯ ನೋಡಿ ಇಷ್ಟಪಟ್ಟಿದ್ದಾರೆ. ಚಿತ್ರವನ್ನು ತೆಲುಗಿನಲ್ಲಿ ಮಾಡಲು ಅವರು ಆಫರ್ ಕೊಟ್ಟಿದ್ದಾ... ನಾನು ಈ ಚಿತ್ರದ ಮುಖಾಂತರ ತೆಲುಗಿಗೆ ಹೋಗುತ್ತಿದ್ದೇ... ಎಂದು ಬಡಾಯಿ ಕೊಚ್ಚಿಕೊಂಡಿದ್ದರು. ನಾಗಚೈತನ್ಯ ಜೊತೆ ಕು... ಸಿನಿಮಾ ನೋಡುವ ಫೋಟೋವ... ಪ್ರೂಫ್ ತರಹ ಎಲ್ಲರಿಗೂ ಹಂಚಿದ್ದ...

ಚಂದ್ರು ತೆಲುಗಿಗೆ ಹೋಗು... ವಿಷಯವನ್ನು ಪ್ರಪಂಚ... ಎಂಟನೇ ಅದ್ಭುತ ಎಂಬ... ಆತನ ಋಣದಲ್ಲಿರುವ ಹಲ... ಪತ್ರಕರ್ತರು ದೊಡ್ಡ ದೊಡ್ಡದಾಗಿ ಮ... ಮಾಡಿದ್ದರು. ಇಂದು ಅದೇ ಪತ್ರಕರ್ತ... ಉಪ್ಪಿ ಸಿನಿಮಾವನ್ನು ಚಂದ... ನಿರ್ದೇಶಿಸುತ್ತಿರುವುದನ್ನು ಮತ್ತೊಂ... ಅದ್ಭುತ ಎಂಬಂತೆ ವರದಿ ಮಾ... ಲಾರಂಭಿಸಿದ್ದಾರೆ. ತೆಲುಗಿನ ನಾಗಚೈ... ಜೊತೆಗಿನ ಚಿತ್ರದ ಕತೆ ಏನಾಯಿತು, ಯಾವ... ಅವರು ತೆಲುಗಿಗೆ ಹೋಗುವುದು ಎಂಬು... ಬಗ್ಗೆ ಪತ್ರಕರ್ತರೂ ಕೇಳುತ್ತಿಲ್ಲ, ಚಂದು ಕೂ... ತುಟಿಪಿಟಿಕ್ ಎನ್ನುತ್ತಿಲ್ಲ.


ಒಟ್ಟಾರೆ, ಚಂದ್ರು ಒಳ್ಳೆಯ ಸಿನಿಮಾ ಮಾಡುತ್ತಾರೋ ಇಲ್ಲವ... ಗೊತ್ತಿಲ್ಲ, ಆದರೆ ಸಿನಿಮಾಕ್ಕೆ ಪ್ರಚಾರ ಪಡೆಯುವ ಕಲೆಯ... ಮಾತ್ರ ಅವರು ಕರಗತ ಮಾಡಿಕೊಂಡಿದ್ದಾರೆ. ಇದರ ಜೊ... ಒಂದು ಒಳ್ಳೆಯ ಸಿನಿಮಾವನ್ನು ಮಾಡುವ ಕಲೆಯನ್ನೂ ಅವ... ಬೆಳೆಸಿಕೊಳ್ಳಲಿ ಎಂಬುದು ನಮ್ಮ ಕಿವಿಮಾತು.

ಮಂಡ್ಯದ ಹುಡುಗಿ ಎಂಟ್ರಿ



ಕನ್ನಡ ಚಿತ್ರರಂಗಕ್ಕೆ ಮತ್ತೊಂದು ಮಂಡ್ಯದ ಹುಡುಗಿ ಸದ್ದುಗದ್ದಲವಿಲ್ಲದೆ ಕಾಲಿಟ್ಟಿದ್ದಾಳೆ. ಅವಳ ಹೆಸರು ರಚಿತಾ ರಾಮ್.

'ಬುಲ್‌ಬುಲ್' ಚಿತ್ರದಲ್ಲಿ ದರ್ಶನ್ ಜೊತೆಗೆ ನಾಯಕಿಯಾಗಿ ನಟಿಸಿರುವ ರಚಿತಾಳ ಮೂಲ ಹೆಸರು ಬಿಂದಿಯಾ ರಾಮ್. ಆದರೆ ಬಿಂದಿಯಾ ಹೆಸರಿನ ನಾಯಕಿಯೊಬ್ಬಳು ಈಗಾಗಲೆ ದೊಡ್ಡ ವಿವಾದಕ್ಕೆ ಒಳಗಾಗಿರುವುದರಿಂದ ದಿನಕರ್ ತೂಗುದೀಪ್ ಆಕೆಯ ಹೆಸರನ್ನು ರಚಿತಾ ರಾಮ್ ಎಂದು ಬದಲಾಯಿಸಿದರಂತೆ.



ರಚಿತಾ ಪಾಲಿಗೆ ಇದು ಮೊತ್ತ ಮೊದಲ ಚಿತ್ರವಾದರೂ ಆಕೆ ಈಗಾಗಲೇ ಅರವಿಂದ್ ಕೌಶಿಕ್ ಅವರ 'ಅರಸಿ' ಧಾರಾವಾಹಿಯಲ್ಲಿ ನಟಿಸಿದ ಅನುಭವ ಹೊಂದಿದ್ದಾಳೆ.

ರಚಿತಾಳ ಕುಟುಂಬಕ್ಕೂ, ಬಣ್ಣದ ಬದುಕಿಗೂ ತುಂಬಾ ಹತ್ತಿರದ ನಂಟಿದೆ. ಆಕೆಯ ತಂದೆ ಮೂಲತಃ ಭರತನಾಟ್ಯ ನೃತ್ಯಗಾರರಾಗಿದ್ದರೂ ಅವರು ಈ ಹಿಂದೆ 'ಕೃಷ್ಣ ನೀ ಬೇಗನೇ ಬಾರೊ' ಎಂಬ ಟಿವಿ ಧಾರಾವಾಹಿಯಲ್ಲಿ ನಾಯಕನಾಗಿ ನಟಿಸಿದ್ದರಂತೆ. ಹಾಗೆಯೇ ರಚಿತಾಳ ಅಕ್ಕ ನಿತ್ಯಾ ರಾಮ್ ಕೂಡಾ ಭರತನಾಟ್ಯ ಪ್ರವೀಣೆ ಮತ್ತು ಟಿವಿ ಕಲಾವಿದೆಯಂತೆ. ಆದರೆ ಟಿವಿ ಧಾರಾವಾಹಿಯಲ್ಲಿ ನಟಿಸಿರುವ ರಚಿತಾ "ನಾನು ಸಿನಿಮಾದಲ್ಲೂ ನಟಿಸುತ್ತಿರುವುದು ತೀರಾ ಆಕಸ್ಮಿಕ" ಎಂದಳು.

'ಬುಲ್‌ಬುಲ್' ಚಿತ್ರದಲ್ಲಿ ರಚಿತಾಳ ನೃತ್ಯ ಮತ್ತು ದೃಶ್ಯಗಳನ್ನು ನೋಡಿದ ಈಕೆ ಬಿಂದಾಸ್ ಆಗಿ ನಟಿಸಿದ್ದಾಳೆ ಎಂದೇ ಹೇಳಬಹುದು. ತುಂಬು ಆತ್ಮವಿಶ್ವಾಸದ ಈ ಹುಡುಗಿ ನಕ್ಕಾಗ ಈಕೆಯ ಕೆನ್ನೆಯಲ್ಲಿ ಡಿಂಪಲ್ ಕಾಣಿಸಿಕೊಳ್ಳುವುದು ಆಕೆ... ಸೌಂದರ್ಯವನ್ನು ಹೆಚ್ಚಿಸಿದೆ ಎಂದರೂ ತಪ್ಪಾಗಲಾರದು. ಅದರ ಜೊತೆ ಕನಸಿನ ಮಾಲಾಶ್ರೀ ತರಹ ಈಕೆಗೂ ಕೋರೆಹಲ್ಲುಗಳಿವೆ. ಗಾಂಧಿನಗರದವರ ಪ್ರಕಾರ ಅ... ಅದೃಷ್ಟದ ಚಿಹ್ನೆಯಂತೆ. ಅಂತೂಇಂತೂ ಮಂಡ್ಯದ ಹುಡುಗಿ ಎಂದೇ ಈಗ ಖ... ಪಡೆದಿರುವ ರಮ್ಯಾ ರಾಜಕೀಯಕ್ಕೆ ಫುಲ್ ಟೈಂ ಇಳಿಯುತ್ತಿರುವ ಈ ಸಂದರ್ಭ... ಮಂಡ್ಯದ ಮತ್ತೊಬ್ಬ ಹುಡುಗಿ ಗಾಂಧಿನಗರಕ್ಕೆ ಬರುತ್ತಿರುವುದು ಕಾಕತಾಳೀಯ... ಕುತೂಹಲಕರವೂ ಆಗಿದೆ.



"ನಾನು ನನ್ನ ಮೊದಲ ಚಿತ್ರದಲ್ಲೇ ದರ್ಶನ್ ಜೊತೆ ನಾಯಕಿಯಾಗಿ ನಟಿಸುವ ಅವಕಾಶ ಪಡೆದೆ. ನಾನು ನಿಜಕ್ಕೂ ತುಂಬಾ ಅದೃಷ್ಟವಂತೆ. ನನಗೆ ಈ ರೀತಿಯ ಒಳ್ಳೆಯ ಅವಕಾಶ ಸಿಗುತ್ತದೆ ಎಂಧು ಕನಸುಮನಸ್ಸಿನಲ್ಲೂ ಅಂದುಕೊಂಡಿರಲಿಲ್ಲ, ದರ್ಶನ್ ಜೊತೆಜೊತೆಗೆ ಮಂಡ್ಯದ ಗಂಡು ಅಂಬರೀಷ್ ಅ... ಜೊತೆಗೂ ಮೊದಲ ಬಾರಿಗೆ ನಟಿಸಲು, ನರ್ತಿಸಲು ಅವಕಾ... ಸಿಕ್ಕಿದ್ದು ನನ್ನ ಪೂರ್ವ ಜನ್ಮದ ಪುಣ್ಯ" ಎಂದು ರಚಿತಾ ವಿನಮ್ರವಾಗಿ ಹೇಳಿದಳು.

ಚಿತ್ರರಂಗದಲ್ಲಿ ಈ ಅಪ್ಪಟ ಮಂಡ್ಯ ಹುಡುಗಿಯ ಭವಿಷ್ಯ ಈ ಶುಕ್ರವಾ... ನಂತರವೇ ಗೊತ್ತಾಗಲಿದೆ.

● ಶೇ...

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427,
Fax : 26604536, E-mail :lankesh70@rediffmail.com